
ಕಥೆಗಳ ಕಥೆ

ಕಥೆಗಳೆಂದರೆ ಸ್ವಾರಸ್ಯಕರವಾಗಿರುವವು. ಉತ್ಸಾಹಕರವಾಗಿರುವವು. ಕುತೂಹಲ ಹೆಚ್ಚಿಸುವವು. ಆಯಾಸ ದೂರ ಮಾಡುವವು. ಕಥೆಗಳನ್ನು ಹೇಳಲು, ಕೇಳಲು ಯಾರಿಗೆ ತಾನೇ ಇಷ್ಟ ಇರುವುದಿಲ್ಲ?

ನಾವು ಕೇಳಿರುವ ಕಥೆಗಳು ಲೆಕ್ಕವಿಲ್ಲದಷ್ಟು. ಅವುಗಳು ಮರಗಳು, ಹೂಗಳು, ಪ್ರಾಣಿಗಳು, ರಾಜ ರಾಣಿಯರ ಕಥೆಗಳು, ಪುರಾಣದ ಕಥೆಗಳು, ಮಾಯ ಮಂತ್ರದವು, ಹಾಸ್ಯದ ಕಥೆಗಳು, ಇತಿಹಾಸದ ಕಥೆಗಳು, ಅಜ್ಜಿ ತಾತಂದಿರ ಕಥೆಗಳು, ಬುದ್ಧಿವಂತಿಕೆಯ ಕಥೆ ಇತ್ಯಾದಿಗಳೆಂದು ಪಟ್ಟಿ ಉದ್ದ ಇದೆ.



ಈ ಕಥೆಗಳ ಬಗ್ಗೆ ಸ್ವಲ್ಪ ಕಥೆಗಳಿವೆ. ಒಂದು ಹಳ್ಳಿಯಲ್ಲಿ ಒಬ್ಬ ಕ್ಷೌರಿಕ ಇದ್ದನು. ಒಂದು ದಿನ ಆತ ಗುಟ್ಟೊಂದನ್ನು ಕೇಳಿಸಿಕೊಂಡನು. ಆ ಗುಟ್ಟನ್ನು ಯಾರಿಗು ಹೇಳದ ಕಾರಣ ಆತನ ದೇಹ ಉಬ್ಬತೊಡಗಿತು. ತಡೆಯಲಾರದೆ ಆತ ಆ ಗುಟ್ಟನ್ನು ತನ್ನ ಹೆಂಡತಿಗೆ ಹೇಳಿದನು. ಗುಟ್ಟು ಕೇಳಿದ ಹೆಂಡತಿಯ ದೇಹವು ಉಬ್ಬತೊಡಗಿತು. ತಡೆಯಲಾರದೆ ಆಕೆ ಅದನ್ನು ಒಂದು ಗುಂಡಿಯಲ್ಲಿ ಹಾಕಿ ಮುಚ್ಚಿಬಿಟ್ಟಳು. ಆ ಜಾಗದಲ್ಲಿ ಒಂದು ಮರ ಬೆಳೆಯಿತು. ಆ ಮರದಿಂದ ಮಾಡಿದ ಕೊಳಲು ಗುಟ್ಟನ್ನು ಊರಿಗೆಲ್ಲಾ ರಟ್ಟು ಮಾಡಿಬಿಟ್ಟಿತು.

ಒಂದಾನೊಂದು ಕಾಲದಲ್ಲಿ ಒಂದು ಚಿಕ್ಕ ಸುಂಡಿಲಿ ಇತ್ತು. ಅದು ಸಿರಿವಂತರ ಬಂಗಲೆ, ಬಡವರ ಗುಡಿಸಲು



ಎನ್ನದೆ ಎಲ್ಲ ಕಡೆ ಪುರುಪುರು ಓಡಾಡುತ್ತಿತ್ತು. ಗೋಡೆಗಳ ಸಂದಿಯಲ್ಲಿ ಬಚ್ಚಿಟ್ಟುಕೊಂಡು ಅಲ್ಲಿ ಕೇಳುವ, ನೋಡುವ ಕಥೆಗಳನ್ನೆಲ್ಲ ಒಂದು ಬಿಡದಂತೆ ತನ್ನಲ್ಲೇ ಸೇರಿಸಿ ಇಟ್ಟುಕೊಳ್ಳುತ್ತಿತ್ತು.

ಆ ಸುಂಡಿಲಿಗೆ ಈ ಕಥೆಗಳೆಂದರೆ ಬಹಳ ಪ್ರೀತಿ. ಕಥೆಗಳನ್ನೆಲ್ಲ ಭದ್ರವಾಗಿ ಮರದ ಕೆಳಗಿನ ಗುಂಡಿಯೊಂದರಲ್ಲಿ ಬಚ್ಚಿಡುತ್ತಿತ್ತು. ಒಂದು ದಿನ ನರಿಯೊಂದು ಕಥೆಗಳು ಇದ್ದ ಗುಂಡಿಯನ್ನು ತೆರೆಯಿತು.

ಅಯ್ಯೋ! ಕಥೆಗಳೆಲ್ಲ ಹೆದರಿಕೊಂಡವು. ಭಯದಿಂದ ನಡುಗಿದವು. ಅವು ಗುಂಡಿಯಿಂದ ಎಲ್ಲಾ ದಿಕ್ಕುಗಳಿಗು ಓಡತೊಡಗಿದವು.







ಆಗ ಆರಂಭವಾದ ಕಥೆಗಳ ಓಟ ಇನ್ನೂ ನಡೆಯುತ್ತಲೇ ಇದೆ. ಆ ಕಥೆಗಳು ನಮ್ಮ ಹತ್ತಿರ, ನಿಮ್ಮ ಹತ್ತಿರ ಕೂಡ ಓಡಿ ಬರುತ್ತಿವೆ. ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ನಮ್ಮಿಂದ ನಮ್ಮ ಗೆಳೆಯ/ಗೆಳತಿಯರ ಬಳಿಗೆ ಓಡುತ್ತಿವೆ. ಅವರಿಂದ ಅವರ ಬಂಧುಮಿತ್ರರ ಬಳಿಗೆ ಓಡುತ್ತಿವೆ.

ಈ ರೀತಿ ಕಥೆಗಳು ಕಾಲದಿಂದ ಕಾಲಕ್ಕೆ ನಿಲ್ಲದಂತೆ ಓಡುತ್ತಲೇ ಇವೆ.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಆನೆ ಮತ್ತು ನಾಯಿ

ಒಂದಾನೊಂದು ಕಾಲದಲ್ಲಿ ಬ್ರಹ್ಮದತ್ತನೆಂಬ ರಾಜನು ಕಾಶಿ ನಗರವನ್ನು ಆಳುತ್ತಿದ್ದನು. ಅವನ ಹತ್ತಿರ ಒಂದು ಆನೆ ಇತ್ತು. ಆ ಆನೆಯನ್ನು ಮಾವುತ ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದನು.

ಮಾವುತ ಪ್ರತಿದಿನ ಮಧ್ಯಾಹ್ನ ಆನೆಗೆ ಊಟ ಕೊಡುತ್ತಿದ್ದನು. ಆಗ ಅವನ ನಾಯಿಯು ಅಲ್ಲಿಗೆ ಬರುತ್ತಿತ್ತು. ಆನೆ ಜೊತೆಯಲ್ಲಿ ನಾಯಿಯು ಊಟ ಮಾಡುತ್ತಿತ್ತು. ಈ ರೀತಿ ಆನೆ ಮತ್ತು ನಾಯಿ ಇಬ್ಬರು ಬಹಳ ಬೇಗನೆ ಗೆಳೆಯರಾದರು.



ಆನೆ ನಾಯಿಗಾಗಿ ಪ್ರತಿದಿನ ಕಾಯುತ್ತಿತ್ತು. ನಾಯಿ ಬರದಿದ್ದರೆ ಆನೆ ಊಟವನ್ನೇ ಮಾಡುತ್ತಿರಲಿಲ್ಲ. ನಾಯಿ ಆನೆಯ ಜೊತೆ ಆಟವಾಡುತ್ತಿತ್ತು. ಆನೆಯ ಸೊಂಡಿಲ ಮೇಲೆ ಕುಳಿತು ಉಯ್ಯಾಲೆ ಆಡುತ್ತಿತ್ತು.



ಒಮ್ಮೆ ಮಾವುತನಿಗೆ ಹಣದ ಅವಶ್ಯಕತೆ ಉಂಟಾಯಿತು. ಆಗ ಆತ ತನ್ನ ನಾಯಿಯನ್ನು ಮಾರಿಬಿಟ್ಟನು. ನಾಯಿಗೆ ತುಂಬ ಬೇಸರವಾಯಿತು. ಅದು ಬೇರೆ ದಾರಿ ಕಾಣದೆ ದುಃಖದಿಂದ ಹೊಸ ಮನೆಗೆ ಹೋಯಿತು.

ಗೆಳೆಯನನ್ನು ಕಾಣದ ಆನೆ ಊಟ ಮಾಡುವುದನ್ನು ಬಿಟ್ಟಿತು. ಸ್ನಾನಕ್ಕೂ ಹೋಗುತ್ತಿರಲಿಲ್ಲ. ಯಾವಾಗಲು ದುಃಖದಿಂದ ಇರುತ್ತಿತ್ತು.

ಆನೆ ಊಟ ತಿನ್ನುತ್ತಿಲ್ಲ ಎಂಬ ವಿಷಯ ರಾಜನಿಗು ಗೊತ್ತಾಯಿತು. ಆನೆಯ ಬಗ್ಗೆ ವಿಚಾರಿಸಲು ಮಂತ್ರಿಯನ್ನು ಕಳುಹಿಸಿದನು. ಮಂತ್ರಿ ಆನೆಯನ್ನು ಪರೀಕ್ಷಿಸಿದನು. ಅದರ ಶರೀರದಲ್ಲಿ ಯಾವ ತೊಂದರೆಯು ಇರಲಿಲ್ಲ.

ಮನದಲ್ಲಿ ಏನೋ ಬೇಸರ ಇರಬೇಕೆಂದು ಯೋಚಿಸಿದನು. ಸುತ್ತ ಇದ್ದವರನ್ನು ವಿಚಾರಿಸಿದನು.




"ನಾಯಿ ಹೋದ ನಂತರ, ಅದು ದೂರವಾಗಿದ್ದಕ್ಕೆ ಆನೆಗೆ ದುಃಖವಾಗಿದೆ" ಎಂದು ಸುತ್ತ ಇದ್ದವರು ಹೇಳಿದರು. ಮಂತ್ರಿ ಈ ವಿಷಯವನ್ನು ರಾಜನಿಗೆ ಹೇಳಿದನು.

ತಕ್ಷಣ ರಾಜನು "ಮಾವುತನ ನಾಯಿ ಯಾರ ಬಳಿ ಇದೆ ಅವರು ಈ ಕ್ಷಣವೇ ಅದನ್ನು ಬಿಟ್ಟು ಬಿಡಬೇಕು. ಇದು ರಾಜನ ಆಜ್ಞೆ" ಎಂದು ಡಂಗೂರ ಹೊಡೆಸಿ ವಿಷಯ ತಿಳಿಸಿದನು.

ನಾಯಿಯನ್ನು ಕೊಂಡು ಕೊಂಡಿದ್ದವನು ಈ ಸುದ್ದಿಯನ್ನು ಕೇಳಿದನು. ಆ ಕ್ಷಣವೇ ದಾರವನ್ನು ಬಿಚ್ಚಿ ನಾಯಿಯನ್ನು ಬಿಟ್ಟನು. ನಾಯಿ ಒಂದೇ ವೇಗದಲ್ಲಿ ಓಡುತ್ತಾ ಆನೆಯ ಬಳಿಗೆ ಬಂದಿತು. ಗೆಳೆಯರಿಬ್ಬರು ಆನಂದಗೊಂಡರು. ಆನೆ ನಾಯಿಯನ್ನು ಸೊಂಡಿಲಿನಿಂದ ಎತ್ತಿ ತಲೆಯ ಮೇಲೆ ಕೂರಿಸಿಕೊಂಡಿತು.

ಸಂತೋಷದಿಂದ ಆನೆಯ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು. ಮಾವುತ ಆನೆಗೆ ಊಟ ತಂದನು. ಆನೆ ಮೊದಲು ನಾಯಿಗೆ ತಿನ್ನಲು ಕೊಟ್ಟಿತು. ಆಮೇಲೆ ಅದು ಖುಷಿಯಿಂದ ತಿಂದಿತು.

ಮೂಲ: ಜಾತಕದ ಕಥೆಗಳು




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

③ ಒಂಭತ್ತೋ? ಹತ್ತೋ?




ಒಂದು ಒಣ ಮರುಭೂಮಿಯಲ್ಲಿ ಒಬ್ಬ ವ್ಯಾಪಾರಿ ತನ್ನ ಒಂಟೆಗಳ ಜೊತೆ ಪ್ರಯಾಣ ಮಾಡುತ್ತಿದ್ದನು. ಒಂದು ಒಂಟೆಯ ಮೇಲೆ ಆತ ಕುಳಿತುಕೊಂಡು ಮುಂದೆ ಮುಂದೆ ಹೋಗುತ್ತಿದ್ದನು. ಉಳಿದ ಒಂಭತ್ತು ಒಂಟೆಗಳು ಆತನ ಹಿಂದೆ ಹಿಂದೆ ಸಾಗುತ್ತಿದ್ದವು.






ವ್ಯಾಪಾರಿಯು 'ಎಲ್ಲ ಒಂಟೆಗಳು ಬರುತ್ತಿವೆಯೇ?' ಎಂದು ಹಿಂದೆ ತಿರುಗಿ ಎಣಿಸಿದನು. 'ಒಂದು.. ಎರಡು.. ಮೂರು.. ನಾಲ್ಕು.. ಐದು.. ಆರು.. ಏಳು.. ಎಂಟು.. ಒಂಭತ್ತು.. ಅಯ್ಯೋ! ಇದೇನು? ಒಂದು ಒಂಟೆ ಕಡಿಮೆ ಆಗಿದೆಯಲ್ಲಾ!' ಎಂದು ಕೆಳಗೆ ಇಳಿದು ಅಲ್ಲಿ ಇಲ್ಲಿ ಹುಡುಕಿದನು.



'ಮತ್ತೆ ಎಣಿಸೋಣ' ಎಂದು ಒಂದು.. ಎರಡು.. ಏನಾಶ್ಚರ್ಯ! ಹತ್ತು ಒಂಟೆಗಳು ಭದ್ರವಾಗಿವೆ. ವ್ಯಾಪಾರಿ ಸಂತೋಷದಿಂದ ಒಂಟೆ ಹತ್ತಿದನು. ಪ್ರಯಾಣ ಮುಂದುವರೆಸಿದನು. ಸ್ವಲ್ಪ ದೂರ ಹೋದ ನಂತರ ಪುನಃ ಒಂಟೆಗಳನ್ನು ಎಣಿಸಿದನು. ಒಂಭತ್ತು ಮಾತ್ರ ಇದ್ದವು. ಗೊಂದಲಕ್ಕೆ ಬಿದ್ದು ಮತ್ತೆ ಕೆಳಗಿಳಿದನು. ಮತ್ತೆ ಎಲ್ಲ ಕಡೆ ಹುಡುಕಿದನು.
ಒಂಟೆ ಎಲ್ಲೂ ಕಾಣಲಿಲ್ಲ.





ಒಂಟೆಗಳಿದ್ದ ಜಾಗಕ್ಕೆ ಹಿಂತಿರುಗಿ ಬಂದು ಎಣಿಸಿದನು. 'ಇದೇನು ಮಾಯೆ! ಹತ್ತು ಒಂಟೆಗಳು ಸರಿಯಾಗಿವೆ. ಈ ಬಿಸಿಲು ಬೇರೆ ನನ್ನ ಪ್ರಾಣ ತಿನ್ನುತ್ತಿದೆ' ಎಂದು ಕಿರಿಕಿರಿಯಿಂದ ಒಂಟೆ ಹತ್ತಿ ಹೊರಟನು.

ನಾಲ್ಕನೆಯ ಬಾರಿ ಎಣಿಸಿದನು. ಒಂಭತ್ತು ಮಾತ್ರ ಇದ್ದವು. ಒಂದು ಒಂಟೆ ಕಡಿಮೆ ಆಗುತ್ತಿದೆ. ವ್ಯಾಪಾರಿಗೆ ಏಕೆಂದು ಗೊತ್ತಾಗಲಿಲ್ಲ. ಕೊನೆಗೆ ಆತ ಒಂದು ನಿರ್ಧಾರಕ್ಕೆ ಬಂದನು.

'ಒಂಟೆ ಮೇಲೆ ಕುಳಿತು ಹೋದರೆ ತಾನೇ ಒಂದು ಕಡಿಮೆ ಆಗುವುದು. ಆದ್ದರಿಂದ ಜೊತೆಯಲ್ಲಿ ನಡೆದುಕೊಂಡೇ ಹೋಗುವೆನು' ಎಂದು ಉರಿಯುವ ಬಿಸಿಲಿನಲ್ಲಿ ಒಂಟೆಗಳ ಜೊತೆ ನಡೆಯಲು ಆರಂಭಿಸಿದನು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ವ್ಯಾಜಿಕ್ ಪೆನ್ಸಿಲ್


ಚಿತ್ರ ಬರೆಯುವುದು ಎಂದರೆ ಖಾಸಿಂಗೆ ತುಂಬಾ ಇಷ್ಟ. ಚೂಪಾದ ಕಲ್ಲು ಮತ್ತು ಕಡ್ಡಿ ತೆಗೆದುಕೊಂಡು ಯಾವಾಗಲು ನೆಲದ ಮೇಲೆ ಚಿತ್ರ ಬರೆಯುವವನು. ಏಕೆಂದರೆ ಅವನ ಬಳಿ ಪೆನ್ಸಿಲ್ ಕೊಂಡುಕೊಳ್ಳಲು ಹಣ ಇರಲಿಲ್ಲ.

'ನನ್ನ ಬಳಿ ಒಂದು ಪೆನ್ಸಿಲ್ ಇದ್ದಿದ್ದರೆ ಎಲ್ಲ ಚಿತ್ರವನ್ನು ಅಂದವಾಗಿ ಬರೆಯ ಬಹುದಾಗಿತ್ತು' ಎಂದು ಖಾಸಿಂ ಅಂದುಕೊಳ್ಳುತ್ತಿರುವಾಗಲೇ ಹಿರಿಯರೊಬ್ಬರು ಅಲ್ಲಿಗೆ ಬಂದರು. ಖಾಸಿಂಗೆ ಒಂದು ಪೆನ್ಸಿಲ್ ಕೊಟ್ಟರು. “ಬಡವರಿಗೆ ಮಾತ್ರ ಚಿತ್ರ ಬರೆದು ಕೊಡು” ಎಂದು ಹೇಳಿ ಮಾಯವಾದರು. ಖಾಸಿಂಗೆ ಬಹಳ ಸಂತೋಷ ಆಯಿತು.



ಮೊದಲು ಕೋಳಿ ಚಿತ್ರ ಬರೆದನು. ಏನಾಶ್ಚರ್ಯ! ಅದು ನಿಜವಾದ ಕೋಳಿಯಾಗಿ ಬದಲಾಯಿತು. ಬೆಕ್ಕಿನ ಚಿತ್ರ ಬರೆದನು. ಅದೂ ನಿಜವಾದ ಬೆಕ್ಕಾಗಿ ಬದಲಾಯಿತು. 'ಹೌದು! ಇದು ಒಂದು ಮ್ಯಾಜಿಕ್ ಪೆನ್ಸಿಲ್!'

ಖಾಸಿಂ ಮಕ್ಕಳಿಗಾಗಿ ಚೆಂಡು ಬರೆದನು. ಅದು ನಿಜವಾದ ಚೆಂಡಾಯಿತು. ನೋಟ್‌ಬುಕ್ ಬರೆದನು, ಆಮೇಲೆ ಬುಗುರಿ ಬರೆದನು, ಶರ್ಟ್ ಚಿತ್ರ ಬರೆದನು, ಹಣ್ಣು ಬರೆದನು. ಎಲ್ಲವು ನಿಜವಾದ ವಸ್ತುಗಳಾದವು. ಬಡವರು ಕೇಳಿದ್ದನ್ನೆಲ್ಲಾ ಬರೆದುಕೊಟ್ಟನು.



ಈ ವಿಷಯ ರಾಜನ ಕಿವಿಗೆ ಬಿದ್ದಿತು. ರಾಜ ಖಾಸಿಂನನ್ನು ಕರೆದು "ನನಗೆ ಚಿನ್ನದ ನಾಣ್ಯಗಳಿಂದ ತುಂಬಿರುವ ದೊಡ್ಡ ಮರವನ್ನು ಬರೆದುಕೊಡು" ಎಂದು ಅಪ್ಪಣೆ ಮಾಡಿದನು.

ಖಾಸಿಂ "ರಾಜರೇ! ತಮ್ಮ ಬಳಿ ಬೇಕಾದಷ್ಟು ಆಸ್ತಿ, ಸಂಪತ್ತು ಇದೆ. ನಾನು ಬಡವರಿಗೆ ಮಾತ್ರ ಚಿತ್ರ ಬರೆಯುವುದು" ಎಂದು ಹೇಳಿದನು.

ರಾಜನಿಗೆ ಕೋಪ ಬಂದಿತು. "ಇವನನ್ನು ಸೆರೆಮನೆಗೆ ಹಾಕಿ" ಎಂದು ಅಪ್ಪಣೆ ಮಾಡಿದನು.



ಖಾಸಿಂ ಸೆರೆಮನೆಯಲ್ಲಿ ಸುಮ್ಮನೆ ಕುಳಿತಿರುವನೇ? ಅವನು ಬುದ್ಧಿವಂತ ಅಲ್ಲವೇ? ಪೆನ್ಸಿಲ್ ತೆಗೆದುಕೊಂಡನು. ಬೀಗದ ಕೈ ಚಿತ್ರ ಬರೆದನು. ಅದು ನಿಜವಾದ ಬೀಗದ ಕೈ ಆಯಿತು. ಅದರಿಂದ ಸೆರೆಮನೆ ಬೀಗ ತೆಗೆದನು. ಹೊರಗೆ ಬಂದನು.

ಮೂಲ: ಮಲೇಷಿಯಾ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು




ಕೋತಿ ಮತ್ತು ತೋಟಗಾರ 5

ಒಂದು ಕಾಲದಲ್ಲಿ ರಾಜನೊಬ್ಬ ತನ್ನ ರಾಜ್ಯದಲ್ಲಿರುವ ಎಲ್ಲರಿಗು ರಜೆ ಕೊಟ್ಟನು. ಎಲ್ಲರು ಆನಂದದಿಂದ ರಜೆಯನ್ನು ಕಳೆಯಲು ಹೋದರು. ಆದರೆ ಅರಮನೆಯ ತೋಟಗಾರ ರಜೆಗೆ ಹೋಗಲಿಲ್ಲ.

'ನಾನು ಹೋದರೆ ಈ ಮರ ಗಿಡ ಬಳ್ಳಿಗಳೆಲ್ಲ ಒಣಗುವವು ಏನು ಮಾಡಲಿ?' ಎಂದು ಯೋಚಿಸಿದನು. ನಂತರ ಒಂದು ತೀರ್ಮಾನ ಮಾಡಿ ಕೋತಿಗಳ ಬಳಿಗೆ ಬಂದನು.





ನಾಯಕ ಕೋತಿಯ ಹತ್ತಿರ ಹೋಗಿ "ನೀವು ಈ ತೋಟದಲ್ಲಿ ಸ್ವತಂತ್ರವಾಗಿ ಇರುವಿರಿ. ನಿಮಗೆ ಬೇಕಾದಷ್ಟು ಹಣ್ಣು ಬೀಜ ತಿನ್ನುವಿರಿ. ಕೊಂಬೆಯಿಂದ ಕೊಂಬೆಗೆ ನೆಗೆದು ಆಟ ಆಡುವಿರಿ. ನನಗೆ ಒಂದು ಸಹಾಯ ಮಾಡುವಿರಾ?" ಎಂದು ಕೇಳಿದನು.

"ಓ! ಧಾರಾಳವಾಗಿ. ನಾವು ಏನು ಮಾಡಬೇಕು?" ಎಂದು ನಾಯಕ ಕೋತಿ ಕೇಳಿತು.

ತೋಟಗಾರನು "ನೀವೆಲ್ಲರು ಸೇರಿ ಇಲ್ಲಿರುವ ಮರ ಗಿಡ ಬಳ್ಳಿಗಳಿಗೆ ನೀರು ಹಾಕಬೇಕು. ಸಂಜೆ ಬಿಸಿಲು ಕಡಿಮೆಯಾದ ಮೇಲೆ


ನೀರು ಹಾಕಿರಿ. ಹೆಚ್ಚು ನೀರು ಹಾಕಿ. ಆದರೆ ಅನಗತ್ಯ ಹಾಕಬೇಡಿ" ಎಂದು ಎಚ್ಚರಿಸಿದನು.

ನಂತರ ನೆಮ್ಮದಿಯಿಂದ ಆತ ಊರಿಗೆ ಹೋದನು. ಸಂಜೆ ಆಯಿತು. ಕೋತಿಗಳು ಲಗುಬಗೆಯಿಂದ ನೀರಿನ ಬಿಂದಿಗೆಗಳನ್ನು ಎತ್ತಿಕೊಂಡವು. ಕೆಲಸ ಮಾಡಲು ಆರಂಭಿಸಿದವು. ಒಂದೊಂದೇ ಗಿಡಕ್ಕೆ ನೀರು ಹಾಕತೊಡಗಿದವು.

ನಾಯಕ ಕೋತಿ "ಪ್ರತಿ ಗಿಡಕ್ಕು ಅದಕ್ಕೆ ಬೇಕಾದಷ್ಟು ನೀರನ್ನು ನೋಡಿ ಹಾಕಿ" ಎಂದು ಹೇಳಿತು.

"ಪ್ರತಿ ಗಿಡಕ್ಕು ಬೇಕಾದಷ್ಟು ನೀರು ಹಾಕಿದ್ದೇವೆ ಎಂದು ಹೇಗೆ ತಿಳಿದುಕೊಳ್ಳುವುದು?" ಎಂದು ಉಳಿದ ಕೋತಿಗಳು ಕೇಳಿದವು.





ನಾಯಕ ಕೋತಿ ಸ್ವಲ್ಪ ಹೊತ್ತು ಯೋಚಿಸಿತು. ನಂತರ "ಪ್ರತಿ ಗಿಡವನ್ನು ಕಿತ್ತು ದೊಡ್ಡ ಬೇರು ಇರುವ ಗಿಡಗಳಿಗೆ ಜಾಸ್ತಿ ನೀರನ್ನು, ಚಿಕ್ಕ ಬೇರು ಇರುವ ಗಿಡಗಳಿಗೆ ಕಡಿಮೆ ನೀರನ್ನು ಹಾಕಿರಿ" ಎಂದಿತು.

ಕೋತಿಗಳು ಒಂದೊಂದಾಗಿ ಗಿಡಗಳನ್ನು ಕಿತ್ತು ಬೇರುಗಳನ್ನು ನೋಡಿದವು. ಬೇಕಾದಷ್ಟು ನೀರು ಹಾಕಿದವು. ಮಾರನೆಯ ದಿನ ತೋಟಗಾರ ರಜೆ ಮುಗಿಸಿ ಕೆಲಸಕ್ಕೆ ಬಂದನು. ಅಯ್ಯೋ ಪಾಪ! ಎಲ್ಲ ಗಿಡಗಳು ಬಾಡಿ ಬಳಲಿ ನೆಲದ ಮೇಲೆ ಒರಗಿದ್ದವು!

ಮೂಲ: ಜಾತಕದ ಕಥೆಗಳು

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನಿನಗೆ ಅರ್ಧ! ನನಗೆ ಅರ್ಧ!

ರೈತನೊಬ್ಬನು ನೆಲಗಡಲೆಯನ್ನು ಬೆಳೆಯಲು ಇಷ್ಟಪಟ್ಟನು. ಅದಕ್ಕಾಗಿ ಕಾಡಿನ ಹತ್ತಿರ ಇರುವ ನೆಲವನ್ನು ಉಳುಮೆ ಮಾಡಿದನು. ಒಂದು ಕರಡಿ ಪ್ರತಿದಿನ ಆತನನ್ನು ನೋಡುತ್ತಿತ್ತು.

ಒಂದು ದಿನ ಅ ಕರಡಿ ರೈತನ ಹತ್ತಿರ ಬಂದು "ನಾನು ನಿನ್ನನ್ನು ತಿಂದು ಬಿಡುವೆ" ಎಂದು ಹೆದರಿಸಿತು.





ರೈತ ಹೆದರಿಕೆಯಿಂದ ನಡುಗಿದನು. ಆದರು ಧೈರ್ಯ ತಂದುಕೊಂಡು "ಕರಡಿ ಅಣ್ಣ! ನನ್ನನ್ನು ತಿನ್ನಬೇಡ. ಬೆಳೆ ಬಂದ ನಂತರ ಇಬ್ಬರು ಅರ್ಧ ಅರ್ಧ ಹಂಚಿಕೊಳ್ಳೋಣ. ಬೇರಿನ ಭಾಗ ನನಗಿರಲಿ, ಮೇಲಿನ ಭಾಗ ನೀನು ತೆಗೆದುಕೋ" ಎಂದು ಹೇಳಿದನು.

ಕರಡಿ ಒಪ್ಪಿಕೊಂಡಿತು. ರೈತ ಬಹಳ ಕಷ್ಟಪಟ್ಟು ಕೆಲಸ ಮಾಡಿದನು. ಇದರಿಂದ ನೆಲಗಡಲೆ ಬೆಳೆ ಚೆನ್ನಾಗಿ ಬಂದಿತು. ಕೊಯ್ಲಿಗೆ ಸಿದ್ಧವಾಯಿತು.

ಕರಡಿ ತನ್ನ ಭಾಗವನ್ನು ಕೇಳಿತು. ಕೊಟ್ಟ ಮಾತಿನಂತೆ ರೈತ ಚಿಗುರಿನ ಭಾಗ ಕರಡಿಗೆ ಕೊಟ್ಟು, ಬೇರಿನ ಭಾಗ ಗಾಡಿಗೆ ತುಂಬಿದನು. ಆ ಗಾಡಿ ರೈತನದು. ಗಾಡಿ ಹೊರಡಲು ಸಿದ್ಧವಾಯಿತು.

"ನಿಲ್ಲು" ಎಂದಿತು ಕರಡಿ. "ಬೇರಿನ ಭಾಗ ಕೊಡು. ನಾನು ರುಚಿ ನೋಡಬೇಕು" ಎಂದಿತು.

ಕರಡಿ ಬೇರಿನ ಭಾಗ ಕಚ್ಚಿ ನೋಡಿತು. "ನನಗೆ ನೀನು ಮೋಸ ಮಾಡಿದೆ. ಬೇರು ರುಚಿಯಾಗಿದೆ. ಚಿಗುರಿನಲ್ಲಿ ಏನೂ ರುಚಿ ಇಲ್ಲ. ಇನ್ನು ಮುಂದೆ ನೀನು ಈ ಕಡೆ ಬರಬೇಡ" ಎಂದು ಕೋಪದಿಂದ ಘರ್ಜಿಸಿತು.

ರೈತನು "ಕೋಪ ಮಾಡಿಕೊಳ್ಳಬೇಡ ಕರಡಿ ಅಣ್ಣ! ಮುಂದಿನ ಬಾರಿ ನಿನಗೆ ಬೇರು ಕೊಡುವೆ. ನಾನು ಚಿಗುರು ತೆಗೆದುಕೊಳ್ಳುವೆ" ಎಂದು ಸಮಾಧಾನ ಹೇಳಿದನು.

ಮುಂದಿನ ವರ್ಷ ರೈತ ಅದೇ ಜಾಗದಲ್ಲಿ ಮುಸುಕಿನ ಜೋಳ ಬೆಳೆದನು. ಬೆಳೆ ಚೆನ್ನಾಗಿ ಬಂದಿತು. ಕೊಯ್ಲಿಗೆ ಸಿದ್ಧವಾಯಿತು.

ಕರಡಿ ತನ್ನ ಭಾಗವನ್ನು ಕೇಳಿತು. ರೈತನು ಬೇರಿನ ಭಾಗ ಕರಡಿಗೆ ಕೊಟ್ಟನು. ಜೋಳದ ತೆನೆಯನ್ನು ತನ್ನ ಗಾಡಿಗೆ ತುಂಬಿಕೊಂಡು ವೇಗವಾಗಿ ಹೊರಟು ಹೋದನು.



ಕರಡಿ ಬೇರನ್ನು ತಿಂದು ನೋಡಿತು. “ಛೀ! ಛೀ! ರುಚಿಯೇ ಇಲ್ಲ. ರೈತ ಮತ್ತೆ ನನಗೆ ಮೋಸ ಮಾಡಿದ. ಅವನು ಮತ್ತೊಮ್ಮೆ ಬರಲಿ. ಒಂದು ಕೈ ನೋಡಿಕೊಳ್ಳುವೆ” ಎಂದು ಕೋಪದಿಂದ ಕಾಯುತ್ತಿತ್ತು.

ರೈತ ತಿರುಗಿ ಅಲ್ಲಿಗೆ ಬಂದರೆ ತಾನೇ...!!




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಮನೆ ಬದಲಾವಣೆ

ಒಂದು ಊರಿನಲ್ಲಿ ಒಬ್ಬರು ಸಾಹುಕಾರರು ಇದ್ದರು. ಅವರ ಮನೆಯ ಎಡಗಡೆ ಕಮ್ಮಾರನ ಒಂದು ಕುಲುಮೆ ಇತ್ತು. ಬಲಗಡೆಗೆ ಬಡಗಿಯ ಮನೆ ಇತ್ತು.



ದಿನ ಪೂರ್ತಿ ಕಮ್ಮಾರನ ಮನೆಯ ಚಮ್ಮಟಿಗೆಯ ಶಬ್ದದಿಂದ ಕಿವಿ ಕಿತ್ತು ಹೋಗುವಂತಾದರೆ, ಬಡಗಿಯ ಮರ ಕೊಯ್ಯುವ ಗರಗಸದ ಶಬ್ದದಿಂದ ಅವರಿಗೆ ತಲೆ ಚಿಟ್ಟು ಹಿಡಿದಂತೆ ಆಗುತ್ತಿತ್ತು.

ಸಾಹುಕಾರರಿಗೆ ನೆಮ್ಮದಿಯಿಂದ ವಿಶ್ರಾಂತಿ ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ನಿದ್ರೆ ಮಾಡುವುದು ಕಷ್ಟವಾಯಿತು. ಸಾಹುಕಾರರು 'ಏನು ಮಾಡುವುದು?' ಎಂದು ಬಹಳ ದಿನ ಯೋಚಿಸಿದರು. ಒಂದು ದಿನ ಅವರಿಬ್ಬರನ್ನು ಕರೆಸಿದರು.

"ಅಯ್ಯಾ, ನನಗೆ ನೆಮ್ಮದಿಯಿಂದ ನಿದ್ರಿಸಲು ಆಗುತ್ತಿಲ್ಲ. ದಯವಿಟ್ಟು ನೀವು ಮನೆ ಬದಲಾಯಿಸಿ. ಅದಕ್ಕೆ ಬೇಕಾದ ಹಣವನ್ನು ನಾನು ಕೊಡುವೆನು" ಎಂದರು.



"ಸರಿ ಅಯ್ಯಾ, ಹಾಗೆ ಮಾಡುವೆವು" ಎಂದು ಹೇಳಿ ಅವರಿಬ್ಬರು ಹೋದರು. ಸ್ವಲ್ಪ ಹೊತ್ತಿನಲ್ಲೇ ಅವರವರ ಸಾಮಾನುಗಳನ್ನು ಗಾಡಿಗೆ ತುಂಬಿದರು. ಇದನ್ನೆಲ್ಲ ನೋಡುತ್ತಿದ್ದ ಸಾಹುಕಾರರಿಗೆ ತುಂಬ ಸಂತೋಷ ಆಯಿತು.

'ಅಬ್ಬ! ಇಬ್ಬರು ಮನೆ ಖಾಲಿ ಮಾಡಿದರು. ಇನ್ನಾದರು ನಾನು ನೆಮ್ಮದಿಯಿಂದ ನಿದ್ರಿಸಬಹುದು' ಎಂದು ಮಲಗಲು ಹೋದರು. ಮರುದಿನ ಬೆಳಗ್ಗೆ ಪುನಃ ಅದೇ ಶಬ್ದ! ಕಿವಿ ಗಡಚಿಕ್ಕುವಂತೆ ಆಯಿತು. ಸಾಹುಕಾರರಿಗೆ 'ಶಾಕ್!' ಕೆಲಸದವನನ್ನು ಕಳುಹಿಸಿ ನೋಡಿಕೊಂಡು ಬರಲು ಹೇಳಿದರು.




ಮರಳಿ ಬಂದ ಕೆಲಸದವನು "ಸ್ವಾಮಿ! ಅವರಿಬ್ಬರು ಮನೆ ಬದಲಾಯಿಸಿ ಕೊಂಡಿದ್ದಾರೆ. ಕಮ್ಮಾರನ ಮನೆಗೆ ಬಡಗಿ, ಬಡಗಿಯ ಮನೆಗೆ ಕಮ್ಮಾರ ಹೋಗಿದ್ದಾರೆ" ಎಂದು ಹೇಳಿದನು.

ಮೂಲ: ಕೊರಿಯಾ ದೇಶದ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು




8

ಹಕ್ಕಿ ಯಾರಿಗೆ?



ಒಂದು ಮುಂಜಾನೆ ಸಮಯ. ತೋಟದಲ್ಲಿ ಬಣ್ಣಬಣ್ಣದ ಹೂಗಳು ತಂಗಾಳಿಗೆ ತೂಗುತ್ತಿದ್ದವು.

ಹಕ್ಕಿಗಳ ಚಿಲಿಪಿಲಿ ಕಲರವ ಎಲ್ಲಾ ಕಡೆ ಹರಡಿತ್ತು. ರಾಜಕುಮಾರ ಸಿದ್ಧಾರ್ಥ ಹೂವಿನ ತೋಟದಲ್ಲಿ ಅಡ್ಡಾಡುತ್ತಿದ್ದನು. 'ದಿಢೀರ್' ಎಂದು ಹಕ್ಕಿಗಳು ಭಯದಿಂದ ಕೂಗುವ ಶಬ್ದ ಕೇಳಿಸಿತು.



'ಈ ಹಕ್ಕಿಗಳಿಗೆ ಏನಾಯಿತು? ಹೀಗೇಕೆ ಭಯಭೀತವಾಗಿವೆ?' ಸಿದ್ಧಾರ್ಥ ಸುತ್ತಮುತ್ತ ನೋಡಿದನು. ಆಗ ಒಂದು ಹಂಸಪಕ್ಷಿ ಅವನ ಕಾಲ ಬುಡಕ್ಕೆ ಬಂದು ಬಿದ್ದಿತು. ಅದಕ್ಕೆ ಒಂದು ಬಾಣ ನಾಟಿತ್ತು. ಅದು ನೋವಿನಿಂದ ನರಳುತ್ತಿತ್ತು.



ಸಿದ್ಧಾರ್ಥ ಆ ಹಕ್ಕಿಯನ್ನು ಎತ್ತಿಕೊಂಡನು. ಅದರ ದೇಹಕ್ಕೆ ನಾಟಿಕೊಂಡಿದ್ದ ಬಾಣವನ್ನು ಮೆಲ್ಲಗೆ ಹೊರ ತೆಗೆದನು. ಗಾಯಕ್ಕೆ ಔಷಧಿ ಹಾಕಿದನು. ತನ್ನ ತೊಡೆಯ ಮೇಲೆ ಮಲಗಿಸಿಕೊಂಡನು. ಪ್ರೀತಿಯಿಂದ ಅದರ ಮೈ ತಡವಿದನು. ಹಕ್ಕಿ ಮೈ ನಡುಕ ಸ್ವಲ್ಪ ಕಡಿಮೆ ಆಯಿತು.

ಸ್ವಲ್ಪ ಹೊತ್ತಿನಲ್ಲೇ ಸಿದ್ಧಾರ್ಥನ ಸಹೋದರ ದೇವದತ್ತ ಆ ಕಡೆಗೆ ಓಡಿ ಬಂದನು. “ಆ ಹಕ್ಕಿ ಕೊಡು. ಅದು ನನ್ನದು” ಎಂದನು.



ಅದಕ್ಕೆ ಸಿದ್ಧಾರ್ಥನು "ಹಕ್ಕಿ ನನ್ನದು, ನಾನು ತಾನೇ ಇದನ್ನು ಕಾಪಾಡಿದ್ದು" ಎಂದು ಹೇಳಿ ಹಕ್ಕಿಯನ್ನು ಎತ್ತಿಕೊಂಡು ಅರಮನೆಯ ಕಡೆಗೆ ನಡೆದನು. ದೇವದತ್ತನು ಬಿಡಲಿಲ್ಲ. ಅವನು ಸಿದ್ಧಾರ್ಥನ ಹಿಂದೆ ಹೋದನು.

ಇಬ್ಬರು ರಾಜನ ಬಳಿಗೆ ಹೋದರು. ದೇವದತ್ತನು "ನನ್ನ ಹಕ್ಕಿಯನ್ನು ಸಿದ್ಧಾರ್ಥ ಕೊಡುತ್ತಿಲ್ಲ" ಎಂದು ದೂರು ಹೇಳಿದನು.

ಸಿದ್ಧಾರ್ಥನು "ತಂದೆಯೇ! ದೇವದತ್ತನು ಹಕ್ಕಿಗೆ ಬಾಣ ಬಿಟ್ಟು, ಅದಕ್ಕೆ ಗಾಯ ಮಾಡಿದ್ದಾನೆ. ಆದರೆ ನಾನು ಅದಕ್ಕೆ ಔಷಧಿ ಹಾಕಿದೆ. ಆದ್ದರಿಂದ ಹಕ್ಕಿ ನನಗೆ ಸೇರಬೇಕು" ಎಂದನು.



ದೇವದತ್ತನು "ಇಲ್ಲ ಅಪ್ಪ! ನಾನು ತಾನೇ ಮೊದಲು ಹಕ್ಕಿಯನ್ನು ನೋಡಿದ್ದು. ಅದಕ್ಕೆ ಹಕ್ಕಿ ನನಗೆ ಸೇರಬೇಕು" ಎಂದನು.

ರಾಜ ಸ್ವಲ್ಪ ಹೊತ್ತು ಆಲೋಚಿಸಿದನು.

"ದೇವದತ್ತ! ಈ ಹಕ್ಕಿಯನ್ನು ನೀನು ಸಾಯಿಸಲು ತೀರ್ಮಾನಿಸಿದೆ. ಆದರೆ ಸಿದ್ಧಾರ್ಥನು ಇದನ್ನು ಕಾಪಾಡಿದ. ಅದಕ್ಕೆ ಹಕ್ಕಿ ಸಿದ್ಧಾರ್ಥನಿಗೆ ಸೇರಬೇಕು" ಎಂದು ತೀರ್ಮಾನ ಮಾಡಿದನು.




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ: ಉಮ ಕೃಷ್ಣಸ್ವಾಮಿ

ಒಂಟೆ ಮತ್ತು ನರಿ

"ಒಂಟೆ ಅಣ್ಣ! ಅದೋ, ನದಿಯ ಆಚೆ ದಡದಲ್ಲಿ ಇರುವ ಆ ಜಾಗ ನೋಡು. ಅಲ್ಲಿ ಬೇಕಾದಷ್ಟು ಸೌತೆಕಾಯಿಗಳು ಸಿಗುತ್ತವೆ. ಈ ದಿನ ನಾವು ಅಲ್ಲಿಗೆ ಹೋಗೋಣವೇ?" ಎಂದು ನರಿ ಖುಷಿಯಿಂದ ಕೇಳಿತು.

"ಓ! ಹೋಗೋಣ!" ಎಂದು ಒಂಟೆ ನರಿಯನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡಿತು. ಎರಡು ನದಿಯನ್ನು ದಾಟಿದವು. ಸೌತೆಕಾಯಿ ಬೆಳೆದಿದ್ದ ಜಾಗಕ್ಕೆ ಬಂದವು. ಸೌತೆಕಾಯಿಗಳು ತಿನ್ನಲು ಬಹಳ ರುಚಿಯಾಗಿದ್ದವು.





ನರಿಯ ಹೊಟ್ಟೆ ಚಿಕ್ಕದಲ್ಲವೇ? ಎರಡು ಮೂರು ಸೌತೆಕಾಯಿ ತಿನ್ನುವಷ್ಟರಲ್ಲಿ ಅದರ ಹೊಟ್ಟೆ ತುಂಬಿ ಬಿಟ್ಟಿತು. ಖುಷಿಯಿಂದ ಅಲ್ಲಿ ಇಲ್ಲಿ ಓಡಾಡತೊಡಗಿತು. ಒಂಟೆ ಇನ್ನು ತಿನ್ನುತ್ತಲೇ ಇತ್ತು.

"ಅಣ್ಣ! ನಿನ್ನದು ಇನ್ನು ತಿಂದು ಆಗಲಿಲ್ಲವೇ?" ಕೇಳಿತು ನರಿ. "ನನ್ನ ಹೊಟ್ಟೆ ತುಂಬ ದೊಡ್ಡದು. ಅದಕ್ಕೆ ಇನ್ನು ಅರ್ಧಾನು ತುಂಬಿಲ್ಲ. ಸ್ವಲ್ಪ ಹೊತ್ತು ನೀನು ಸುಮ್ಮನಿರು" ಎಂದು ಹೇಳಿತು ಒಂಟೆ.

ಅದಕ್ಕೆ ನರಿ "ಹೊಟ್ಟೆ ತುಂಬ ತಿಂದ ತಕ್ಷಣ ನನಗೆ ಸುಮ್ಮನಿರಲು ಆಗುವುದಿಲ್ಲ. ಆಕಾಶ ನೋಡುತ್ತಾ ಊಳಿಡಬೇಕು. ಅದು ನನ್ನ ಅಭ್ಯಾಸ" ಎಂದು ಹೇಳಿ ಊಳಿಟ್ಟಿತು.



ಶಬ್ದ ಕೇಳಿ ಅಕ್ಕಪಕ್ಕ ಇದ್ದ ಜನರು ಕೈಯಲ್ಲಿ ಕೋಲುಗಳನ್ನು ಹಿಡಿದು ಓಡಿ ಬಂದರು. ನರಿ ತಪ್ಪಿಸಿಕೊಂಡು ನದಿಯ ಬಳಿಗೆ ಓಡಿ ಹೋಯಿತು. ಪಾಪ ಒಂಟೆ ಓಡಲಾಗದೆ ಜನರ ಕೈಗೆ ಸಿಕ್ಕಿಹಾಕಿಕೊಂಡಿತು. ಚೆನ್ನಾಗಿ ಏಟುಗಳನ್ನು ತಿಂದಿತು. ನೋವಿನಿಂದ ನರಳಾಡುತ್ತಾ ನದಿಯ ಕಡೆಗೆ ಬಂದಿತು.

"ಅಯ್ಯೋ ಅಣ್ಣ! ನಿನ್ನನ್ನು ಇಷ್ಟೊಂದು ಹೊಡೆದು ಬಿಟ್ಟರೆ? ನನಗೆ ತುಂಬಾ ದುಃಖವಾಗುತ್ತಿದೆ" ಎಂದು ಪರಿತಾಪ ಪಡುವಂತೆ ನರಿ ನಟಿಸಿತು.


"ಪರವಾಗಿಲ್ಲ ಬೆನ್ನ ಮೇಲೆ ಹತ್ತು. ಇಲ್ಲಿಂದ ಬೇಗ ಹೋಗಿ ಬಿಡೋಣ" ಎಂದಿತು ಒಂಟೆ.



ಎರಡು ನದಿಯ ಮಧ್ಯ ಭಾಗಕ್ಕೆ ಬಂದವು. ಒಂಟೆ 'ದಿಢೀರ್' ಎಂದು ನಿಂತಿತು. ಆ ಕಡೆ ಈ ಕಡೆ ಓಲಾಡತೊಡಗಿತು. ನರಿ ಬೆಚ್ಚಿ ಬಿದ್ದಿತು.

“ಅಯ್ಯೋ! ಅಣ್ಣಾ! ಏಕೆ ಹೀಗೆ ಓಲಾಡುತ್ತಿರುವೆ? ನಾನು ನೀರಲ್ಲಿ ಬಿದ್ದು ಹೋಗುವೆನು” ಎಂದಿತು.

“ಏನಿಲ್ಲ ತಮ್ಮ! ಹೊಟ್ಟೆ ತುಂಬ ತಿಂದ ಮೇಲೆ ಈ ರೀತಿ ನೀರಿನಲ್ಲಿ ಓಲಾಡುವುದು ನನ್ನ ಅಭ್ಯಾಸ” ಎಂದು ಹೇಳಿ ಇನ್ನೂ ಜೋರಾಗಿ ಓಲಾಡಿತು.



ಪಾಪ ನರಿ ನೀರಿಗೆ ಬಿದ್ದು ಬಿಟ್ಟಿತು!

ಮೂಲ: ಪಂಚತಂತ್ರದ ಕಥೆಗಳು



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ



ಮೂರು ದಿನ ಮಾತ್ರ

(ಹೆಲನ್ ಕೆಲರ್ ಅತಿಶಯವಾದ ದಿಟ್ಟ ಮನಸ್ಸಿನ ಹೆಣ್ಣು. ಹುಟ್ಟು ಕುರುಡಿಯಾದ ಹೆಲನ್ ಕೆಲರ್ ಕಿವುಡಿಯಾಗಿದ್ದರು. ಅವರು ಪ್ರಪಂಚವನ್ನು ಮುಟ್ಟಿ ನೋಡಿ ಅರಿತವರು. ತಮ್ಮ ಜೀವನ ಪೂರ್ತಿ ಪರರಿಗಾಗಿ ದುಡಿದವರು. ಅವರು ಬರೆದ ಲೇಖನಗಳಿವು. . .)

ಮಾನವರಿಗೆ ನೋಡುವ ಶಕ್ತಿ ಇದ್ದರು, ಅವರು ಅದರ ಬೆಲೆಯನ್ನು ತಿಳಿದುಕೊಂಡಿಲ್ಲ. ಕೆಲವೊಮ್ಮೆ ನನಗೆ ನಾನೇ 'ಮಾನವರಿಗೆ ಕೆಲವು ದಿನ ನೋಡುವ ಮತ್ತು ಕೇಳುವ ಶಕ್ತಿ ಇಲ್ಲದಂತಾದರೆ, ಆ ಅನುಭವದಿಂದ ಅವರು ಇನ್ನು ಹೆಚ್ಚು ಕಲಿಯಬಹುದು' ಎಂದು ಯೋಚಿಸುತ್ತಿದ್ದೆ.

ಕತ್ತಲಿನ ಜಗತ್ತು ಅವರಿಗೆ ದೃಷ್ಟಿಯ ಬೆಲೆಯನ್ನು ತಿಳಿಸುವುದು. ನಿಶಬ್ದದ ಜಗತ್ತು ಅವರಿಗೆ ಶಬ್ದದ ಮೌಲ್ಯವನ್ನು ಅರಿಯುವಂತೆ ಮಾಡುವುದು. ಎರಡು ಕಣ್ಣುಗಳಿದ್ದು, ಅವುಗಳಿಂದ ನೋಡುವ ಸಾಮರ್ಥ್ಯ ಇರುವ ನನ್ನ ಸ್ನೇಹಿತರು ಏನೇನು ನೋಡುತ್ತಿದ್ದಾರೆಂದು ಆಗಾಗ್ಗೆ ನಾನು ಶೋಧನೆ ಮಾಡುತ್ತಿದ್ದೆ.

ಇತ್ತೀಚೆಗೆ ನನ್ನ ಗೆಳತಿಯೊಬ್ಬಳು ಕಾಡಿನಲ್ಲಿ ಬಹಳ ದೂರ ಸಂಚಾರ ಮಾಡಿ ಹಿಂತಿರುಗಿ ಬಂದಳು. ನಾನು ಅವಳನ್ನು ಕಾಡಿನಲ್ಲಿ "ನೀನು ಏನೇನು ನೋಡಿದೆ?" ಎಂದು ವಿಚಾರಿಸಿದೆ. ಅದಕ್ಕೆ ಅವಳು "ಹೇಳಿಕೊಳ್ಳುವಂತದ್ದು ಏನಿಲ್ಲ" ಎಂದು ಉತ್ತರಿಸಿದಳು.

ಒಂದು ಗಂಟೆ ಕಾಡಿನಲ್ಲಿ ಸುತ್ತಾಡಿ ಬಂದರು 'ಏನೂ ನೋಡಿಲ್ಲ' ಎಂದರೆ ಅದು ಹೇಗೆ ಸಾಧ್ಯ? ದೃಷ್ಟಿ ಇಲ್ಲದ ನನಗೇ ನೂರಾರು ವಸ್ತುಗಳು ಕಾಣುತ್ತವೆ. ಅವುಗಳನ್ನು ಮುಟ್ಟಿ ನೋಡಿ ನಾನೇ ತಿಳಿದುಕೊಳ್ಳುತ್ತಿರುವೆ. ಎಲೆಗಳ ಮೃದುತ್ವ ಅನುಭವಿಸಿದ್ದೇನೆ. ನಯವಾದ ಮತ್ತು ಒರಟಾದ ಮರಗಳನ್ನು ಪ್ರೀತಿಯಿಂದ ಮುಟ್ಟಿ ಅನುಭವಿಸಿದ್ದೇನೆ. ವಸಂತ ಕಾಲದಲ್ಲಿ ಮೊಗ್ಗುಗಳಿರುತ್ತವೆ ಎಂಬ ನಂಬಿಕೆಯಿಂದ ಮರದ ಕೊಂಬೆಗಳನ್ನೆಲ್ಲ ಮುಟ್ಟಿದ್ದೇನೆ. ಆಗ ಅದೃಷ್ಟವಶಾತ್ ಹಕ್ಕಿಗಳ ಕಲರವದ ಆನಂದ ಅನುಭವಿಸಿದ್ದೇನೆ. ಇದೆಲ್ಲವನ್ನು ಕಣ್ತುಂಬ ನೋಡಬೇಕೆಂಬ ಬಯಕೆಯಿಂದ ಕೆಲವೊಮ್ಮೆ ನನ್ನ ಹೃದಯ ರೋಧಿಸುತ್ತದೆ.

ಮುಟ್ಟಿ ನೋಡುವುದರಿಂದಲೇ ನನಗೆ ಇಷ್ಟೊಂದು ಆನಂದವಾದರೆ, ಇನ್ನು ಅವುಗಳನ್ನು ಕಣ್ತುಂಬ ನೋಡುವಾಗ ಎಷ್ಟು ಆನಂದ ಆಗಬಹುದು. ಮೂರೇ ಮೂರು ದಿನ ನನಗೆ ದೃಷ್ಟಿ ಬಂದರೆ ಸಾಕು, ನಾನು ಏನೆಲ್ಲ ನೋಡಬೇಕೆಂದು ಮನದಲ್ಲೇ ಕಲ್ಪನೆ ಮಾಡಿಕೊಂಡಿರುವೆ.

ಮೊದಲನೆಯ ದಿನ, ನನ್ನನ್ನು ಪ್ರೀತಿಯ ಪಾಶದಿಂದ ಬಂಧಿಸಿ ಜೀವನಕ್ಕೆ ಅರ್ಥ ತುಂಬಿರುವ ಮಾನವರನ್ನು ನೋಡಲು ಬಯಸುವೆನು. ಕಣ್ಣುಗಳಿಂದ ಅವರ ಹೃದಯವನ್ನು ಹೇಗೆ ನೋಡಬೇಕೆಂದು ನನಗೆ ಗೊತ್ತಿಲ್ಲ. ಬೆರಳ ತುದಿಯಿಂದ ಮುಖದ ಆಕಾರವನ್ನು ಮುಟ್ಟಿ ನೋಡಿ ತಾನೇ ನಾನು ಅವರ ಬಗ್ಗೆ ತಿಳಿದುಕೊಂಡಿರುವುದು. ಅವರ ನಗು ಅಳುವಿನ ಭಾವನಾ ಪ್ರಪಂಚವನ್ನು ಅರ್ಥ ಮಾಡಿಕೊಳ್ಳಲು ನನ್ನಿಂದ ಆಗುತ್ತದೆಯೇ?

ಸಾಮಾನ್ಯವಾಗಿ ನಾವು ಮಾನವರ ಹೊರಗಿನ ವ್ಯಕ್ತಿತ್ವವನ್ನು ಮಾತ್ರ ಕಣ್ಣಿಂದ ನೋಡುತ್ತೇವೆ. ಆದರೆ ಸ್ನೇಹಿತರ ಅಂತರಂಗವನ್ನು ನೋಡಲು ಪ್ರಯತ್ನ ಪಡುತ್ತೇವೆಯೇ?

ಮುಂದುವರೆದಂತೆ ನನಗೆ ಓದಿ ಹೇಳಿದ ಪುಸ್ತಕಗಳನ್ನು ನೋಡಲು ಬಯಸುವೆನು. ಅವುಗಳೇ ನನಗೆ ಮಾನವ ಜೀವನದ ಆಳವನ್ನು ತಿಳಿಸಿದ್ದು. ಇದೆಲ್ಲದರ ಜೊತೆಗೆ ನನ್ನೊಂದಿಗೆ



ನಂಬಿಕೆ ವಿಶ್ವಾಸದಿಂದ ಇರುವ ನನ್ನ ನಾಯಿಯ ಕಣ್ಣುಗಳನ್ನು ನೋಡಲು ಇಷ್ಟಪಡುವೆನು.

ಆ ದಿನ ಸಂಜೆ ಕಾಡಿನಲ್ಲಿ ತುಂಬಾ ದೂರ ನಡೆದುಕೊಂಡು ಹೋಗಿ ನಿಸರ್ಗದ ಅಂದವನ್ನು ಆಸ್ವಾದಿಸಿ ಆನಂದಿಸುವೆನು. ವರ್ಣರಂಜಿತವಾದ ಸೂರ್ಯಾಸ್ತವನ್ನು ನೋಡಲು ಬಯಸುವೆನು.



ಎರಡನೆಯ ದಿನ ಬೆಳಗ್ಗೆ ಕತ್ತಲನ್ನು ಬೇಧಿಸಿ ನಿದ್ರಿಸುವ ಭೂಮಿಯನ್ನು ಎಚ್ಚರಿಸುವ ಸೂರ್ಯನ ಕಿರಣಗಳನ್ನು ನೋಡಿ ಆನಂದಿಸಲು ಇಷ್ಟ ಪಡುವೆನು. ವಿಶೇಷ ವಸ್ತು ಸಂಗ್ರಹಾಲಯಕ್ಕೆ ಹೋಗಿ ಮರೆಯಾಗುತ್ತಿರುವ ಪ್ರಾಣಿಗಳು, ಪ್ರಪಂಚದ ಉಗಮ, ಮಾನವರ ಹುಟ್ಟು ಬೆಳವಣಿಗೆಗಳ ಬಗ್ಗೆ ತಿಳಿಯುವೆನು. ಪ್ರಪಂಚದ ಇತಿಹಾಸ ಅರಿಯಲು ಪ್ರಯತ್ನಿಸುವೆನು.

ನಂತರ ಸಂಗ್ರಹಾಲಯದಲ್ಲಿ ಇರುವ ಶಿಲ್ಪಗಳನ್ನು ನೋಡ ಬಯಸುವೆನು. ಇದುವರೆಗೂ ಮುಟ್ಟಿ ನೋಡಿ ತಿಳಿದಿದ್ದ ಶಿಲ್ಪಗಳನ್ನು ಕಣ್ತುಂಬ ನೋಡಿ ಆನಂದಿಸುವೆನು. ಚಿತ್ರ ಕಲಾಕಾರರ ವಾದವನ್ನು ಕೇಳಿ ತಿಳಿದಿರುವ ನಾನು, ಈಗ ಅದನ್ನು ಕಣ್ತುಂಬ ನೋಡಿ ಅರ್ಥೈಸಿಕೊಳ್ಳಲು ಪ್ರಯತ್ನಿಸುವೆನು.



ಆ ದಿನ ಸಂಜೆ ನಾಟಕ ಮಂದಿರಕ್ಕೆ ಹೋಗಿ ನೃತ್ಯ ನಾಟಕದ ನಟನೆಯನ್ನು ನೋಡುವೆನು. ನೃತ್ಯದ ಸೊಬಗನ್ನು ಇದುವರೆಗು ವೇದಿಕೆ ಮೇಲಿನ ಗೆಜ್ಜೆ ಕಾಲ್ಗಳ ಹೆಜ್ಜೆ ತರಂಗಗಳಿಂದ ಮಾತ್ರ ಅನುಭವಿಸಿರುವ ನಾನು ಅದನ್ನೆಲ್ಲ ಕಣ್ಣಾರೆ ನೋಡಿ ಆನಂದಿಸುವೆನು.

ಮೂರನೆಯ ದಿನ ಜನರ ನಿತ್ಯ ಜೀವನ ಹೇಗೆ ಸಾಗುವುದು ಎಂದು ನೋಡಲು ಇಷ್ಟ ಪಡುವೆನು. ಜನ ಸಂದಣಿಯಿಂದ ಕೂಡಿದ ರಸ್ತೆಗಳಲ್ಲಿ ನಿಂತು ಮನುಷ್ಯರ ಮುಖಗಳನ್ನು ನೋಡುತ್ತಾ, ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವೆನು. ಅಲ್ಲಿಂದ ಮುಂದೆ ಗುಡಿಸಲುಗಳಿರುವ ಜಾಗ, ಕಾರ್ಖಾನೆಗಳಿರುವ ಜಾಗ, ಮಕ್ಕಳು ಆಡುವ ಉದ್ಯಾನವನ ಎಂದು ಎಲ್ಲಾ ಕಡೆ ಸುತ್ತಾಡುವೆನು.

ನೋವು ನಲಿವು ಎರಡನ್ನು ನೋಡಲು ನನ್ನ ಕಣ್ಣುಗಳನ್ನು ಸದಾ ತೆರೆದಿಟ್ಟು ಕೊಂಡಿರುವೆನು. ಇದರಿಂದ ಜನರು ಹೇಗೆ ಕಷ್ಟಪಟ್ಟು ಕೆಲಸ ಮಾಡಿ ಬದುಕುವರು ಎಂದು ಆಳವಾಗಿ ಅರ್ಥೈಸಿಕೊಳ್ಳಬಹುದು. ಮೂರೇ ದಿನದಲ್ಲಿ ನಾನು ಬಯಸಿದ್ದನ್ನೆಲ್ಲಾ ಈ ಪ್ರಪಂಚದಲ್ಲಿ ನೋಡಲು ಆಗುವುದಿಲ್ಲ. ಪುನಃ ನಾನು ನನ್ನ ಕತ್ತಲಿನ ಪ್ರಪಂಚಕ್ಕೆ ಹೋದ ಮೇಲೆ ನೋಡಲಾಗದೇ ಇರುವುದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವೆನು.

ನಿಮಗು ಒಂದೆರಡು ದಿನ ನೋಡಲು ದೃಷ್ಟಿ ಇಲ್ಲದಂತಾಗಿ, ಪುನಃ ನೋಡುವಂತೆ ಆದರೆ ಆಗ ಅದರ ಬೆಲೆಯ ಅರಿವಾಗುತ್ತದೆ. ನೀವು ನೋಡುವ ಎಲ್ಲವು ಆಗ ವಿಶೇಷವಾಗಿ ಕಾಣಿಸುತ್ತದೆ. ಆಗಲೇ ನಿಮ್ಮ ನಿಜವಾದ ನೋಡುವಿಕೆ ಸಾಗುವುದು. ಹೊಸ ಪ್ರಪಂಚ ನಿಮ್ಮ ಮುಂದೆ ತೆರೆದುಕೊಳ್ಳುವುದು.

ದೃಷ್ಟಿ ಇಲ್ಲದ ನಾನು ದೃಷ್ಟಿ ಇರುವ ನಿಮಗೆ ಹೇಳುವುದಿಷ್ಟೇ! ‘ಈ ದಿನ ಮಾತ್ರ ನಮಗೆ ನೋಡಲು ಸಾಧ್ಯ’ ಎಂಬ ಭಾವನೆಯಿಂದ ಎಲ್ಲವನ್ನು ನೋಡಿರಿ. ಇದೇ ರೀತಿ ಉಳಿದ ಇಂದ್ರಿಯಗಳನ್ನು ಉಪಯೋಗಿಸಿ. “ನಾಳೆ ಯಾವುದು ಇರುವುದಿಲ್ಲ ಎನ್ನುವಂತೆ ಪಕ್ಷಿಗಳ ಕೂಗನ್ನು ಕೇಳಿರಿ, ಹೂಗಳ ಪರಿಮಳ, ಊಟದ ರುಚಿಯನ್ನು ಆನಂದಿಸಿರಿ. ಎಲ್ಲ ಇಂದ್ರಿಯಗಳನ್ನು ಪೂರ್ತಿಯಾಗಿ ಬಳಸಿಕೊಳ್ಳಿ” ಎಂದು ನಾನು ಗಟ್ಟಿಯಾಗಿ ಹೇಳುವೆನು.

© ಕಥಾಝರಿ ತಂಡ 2017
ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

10 ಹೇಗೆ ಹೇಳಲಿ?



'ಪಟ್. .' ಮರದ ಕೊಂಬೆಯಿಂದ ಕಡ್ಡಿ ಮುರಿದು ಕೆಳಗೆ ಬಿದ್ದಿತು. ಬಿದ್ದ ಕಡ್ಡಿ ಸುಮ್ಮನಿರುವುದೇ? ಇಲ್ಲವೇ ಇಲ್ಲ.

ಊರನ್ನು ಸುತ್ತಿ ಬರಲು ಹೊರಟಿತು. ದಾರಿಯಲ್ಲಿ ಒಂದು ನದಿ ಸಿಕ್ಕಿತು. ನದಿ ನೀರಲ್ಲಿ ಕಡ್ಡಿ ಆಟವಾಡಿತು.



ಯಾರೋ ಹಾಡುತ್ತಿರುವ ಶಬ್ದ ಕೇಳಿತು. ತಲೆ ಎತ್ತಿ ಮೇಲೆ ನೋಡಿತು. ಅಲ್ಲಿ ಒಂದು ಕೋಗಿಲೆ ಇತ್ತು!

ಹಕ್ಕಿಯ ಗಾನ ಕೇಳಿ ಕಡ್ಡಿಗೆ ಖುಷಿ ಆಯಿತು. ಕಡ್ಡಿ ಹಕ್ಕಿಯ ಗಾನವನ್ನು ಹೊಗಳ ಬೇಕೆಂದು ಇಷ್ಟಪಟ್ಟಿತು. ಆದರೆ ಮಾತನಾಡಲು ಆಗಲಿಲ್ಲ!

ಅಲ್ಲೇ ಹತ್ತಿರದಲ್ಲಿ ಒಂದು ಅಂದದ ಗುಲಾಬಿ ಹೂವನ್ನು ನೋಡಿತು. 'ಎಷ್ಟು ಸುಂದರವಾಗಿದೆ!' ಎಂದು ಹೇಳಲು ಯೋಚಿಸಿತು. ಆದರೆ ಆಗಲಿಲ್ಲ.

ಮೌನವಾಗಿ ಮುಂದಕ್ಕೆ ಹೋಯಿತು.






ಹೋಗುವ ದಾರಿಯಲ್ಲಿ ಕಪ್ಪೆ ಪದ್ಯ ಬರೆಯುವುದನ್ನು ನೋಡಿತು. ಎರಡು ಸಾಲು ಪದ್ಯ ಬರೆದು, ಅದಕ್ಕೆ ಸಹಾಯ ಮಾಡಬೇಕೆಂದು ಯೋಚಿಸಿತು.


ಆದರೆ ಅಂದುಕೊಂಡಿದ್ದನ್ನು ಮಾಡಲು ಆಗಲಿಲ್ಲ. ಬೇಸರದಿಂದ ನಡೆಯುತ್ತಿದ್ದ ಕಡ್ಡಿ ಒಮ್ಮೆ ಹಿಂದೆ ತಿರುಗಿ ನೋಡಿತು.



'ಹಾ! ಇದೇನು? ನಾನು ನಡೆದು ಬಂದ ದಾರಿ ಉದ್ದಕ್ಕೂ ಗೆರೆ!' ಕಡ್ಡಿ ಆಶ್ಚರ್ಯಪಟ್ಟಿತು.





ಮತ್ತೆ ಮತ್ತೆ ಗೆರೆಗಳನ್ನು ಎಳೆಯುತ್ತಾ ರಂಗೋಲಿ ಹಾಕಿತು. ಆನಂದದಿಂದ ಕುಣಿದಾಡಿತು.



ಮರಗಳು, ಗಿಡಗಳು, ಬಳ್ಳಿಗಳು, ಪ್ರಾಣಿಗಳು, ಪಕ್ಷಿಗಳು ಎಂದು ಕಡ್ಡಿ ಉತ್ಸಾಹದಿಂದ ಬರೆಯಿತು. ಕಾಡಿನಲ್ಲಿ ಇದುವರೆಗು ಇಂತಹ ಅದ್ಭುತ ಚಿತ್ರಗಳನ್ನು ಯಾರು ಬರೆದಿರಲಿಲ್ಲ.

ಕಡ್ಡಿ ಬರೆಯುತ್ತಿರುವ ಚಿತ್ರಗಳನ್ನು ನೋಡಿದ ಇತರ ಪ್ರಾಣಿಗಳು ತಲೆದೂಗಿದವು. ಮರಗಳು ಕೊಂಬೆಗಳನ್ನು ಅಲ್ಲಾಡಿಸಿ ಒಪ್ಪಿಗೆ ತಿಳಿಸಿದವು. ಪಕ್ಷಿಗಳು ರೆಕ್ಕೆಗಳನ್ನು ಹರಡಿ ಆನಂದಿಸಿದವು. ಹೂಗಳು ಅರಳಿ ನಕ್ಕವು.





ಕೀಟಗಳು ಹಾರಾಡುತ್ತಾ 'ಗುಂಯ್' ಶಬ್ದ ಮಾಡಿದವು. ಆದರೆ ಕಡ್ಡಿ ಮೈ ಮರೆತು ಚಿತ್ರ ಬರೆಯುತ್ತಿತ್ತು. ಆಗ ಪಟಪಟ ಎಂದು ಮಳೆ ಬಂದಿತು.





ಅಯ್ಯೋ! ಕಡ್ಡಿ ಬರೆದಿದ್ದ ಚಿತ್ರಗಳೆಲ್ಲಾ ಮಳೆಯಿಂದ ಅಳಿಸಿ ಹೋದವು. ಆದರೆ ಕಡ್ಡಿಗೆ ಬೇಜಾರು ಆಗಲಿಲ್ಲ!

ಅದಕ್ಕೆ ಬೇಕಾದಾಗ ಅದರ ಮನಸ್ಸಿಗೆ ಬಂದಿದ್ದನ್ನು ಬರೆಯುವುದು ಹೇಗೆ ಎಂದು ಕಡ್ಡಿಗೆ ಗೊತ್ತಾಯಿತು. ಅದು ಓಡಿ ಹೋಗಿ ಎಲೆಗಳ ನಡುವೆ ನಿಂತಿತು. ಮಳೆ ನಿಲ್ಲುವವರೆಗು ಕಾಯುತ್ತಾ ಇತ್ತು.



ಮೂಲ: ಕ್ಲೆವರ್ ಸ್ಟಿಕ್ ಬೈ ಜಾನ್ ಲೇಕ್‌ನರ್

© ಕಥಾಝರಿ ತಂಡ 2017
ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಹಣ್ಣೇ ಬೇಡ!

ಒಂದು ಸುಂದರವಾದ ಕಲ್ಲಂಗಡಿ ಹಣ್ಣಿನ ತೋಟ. ಅದರ ಒಳಗೆ ಒಂದು ಪುಟ್ಟ ಮರಿಕೋತಿ ನುಗ್ಗಿತು. ಕಲ್ಲಂಗಡಿ ಹಣ್ಣಿನ ಸಿಪ್ಪೆಯನ್ನು ಕಚ್ಚಿತು."ಛೀ! ಕಹಿ" ಎಂದು ಹಣ್ಣನ್ನು ಎಸೆಯಿತು.

ಹತ್ತಿರದಲ್ಲೇ ಇದ್ದ ಆಡು "ಕಲ್ಲಂಗಡಿ ಹಣ್ಣಿನ ಒಳಗೆ ಇರುವುದನ್ನು ತಿನ್ನಬೇಕು. ಸಿಪ್ಪೆಯನ್ನಲ್ಲ!" ಎಂದು ಹೇಳಿತು.


"ಅದು ನನಗು ಗೊತ್ತು! ನೀನು ನನಗೇನು ಹೇಳಬೇಕಿಲ್ಲ" ಮರಿಕೋತಿ ತೋಟದಿಂದ ಓಡಿ ಹೋಯಿತು.



ಅಲ್ಲಿಂದ ಕರ್ಬೂಜದ ಹಣ್ಣಿನ ತೋಟಕ್ಕೆ ನುಗ್ಗಿತು. ಹಣ್ಣನ್ನು ಒಡೆದು ಒಳಗಿನ ಬೀಜಗಳನ್ನು ತಿಂದಿತು. ಹತ್ತಿರದಲ್ಲಿ ಇದ್ದ ಕತ್ತೆ "ಹಾಗಲ್ಲ. ಈ ಕರ್ಬೂಜದ ಬೀಜಗಳನ್ನು ತಿನ್ನಬಾರದು. ಸಿಪ್ಪೆ ಒಳಗಿನ ತಿರುಳನ್ನು ತಿನ್ನಬೇಕು" ಎಂದು ಹೇಳಿತು.

"ನನಗೆಲ್ಲಾ ಗೊತ್ತು!" ಎಂದು ಹೇಳಿಕೊಂಡೆ ಮರಿಕೋತಿ ಓಡಿ ಹೋಯಿತು.






ಬಾದಾಮಿ ಮರವನ್ನು ಹತ್ತಿ ಬಾದಾಮಿ ಕಾಯಿಯನ್ನು ಕಚ್ಚಿತು. ಅದನ್ನು ನೋಡಿದ ಮರಕುಟಿಕ ಹಕ್ಕಿ "ಬಾದಾಮಿ ಸಿಪ್ಪೆ ತೆಗೆದು ಒಳಗೆ ಇರುವುದನ್ನು ತಿನ್ನಬೇಕು" ಎಂದು ಹೇಳಿತು.

ಮರಕುಟಿಕ ಹಕ್ಕಿ ಹೇಳಿ ಮುಗಿಸುವ ಮೊದಲೇ ಮರಿಕೋತಿ ಬಾದಾಮಿಯನ್ನು ಕಚ್ಚಿತು. "ಅಯ್ಯೋ! ನನ್ನ ಹಲ್ಲು ಮುರಿಯಿತು" ಎಂದು ಕೂಗುತ್ತಾ ಲಾಗ ಹಾಕಿತು.

ಮುಂದೆ ಹೋದ ಕೋತಿ ಮರಸೇಬು ಮರವನ್ನು ಹತ್ತಿತು. ಒಂದು ಮರಸೇಬನ್ನು ಕಿತ್ತು ಕೊಂಬೆಗೆ ಕುಟ್ಟಿ ಹೋಳುಗಳಾಗಿ ಮಾಡಿ ಒಳಗಿನ ಬೀಜವನ್ನು ಕಚ್ಚಿತು. "ಛೀ! ಬರಿ ಕಹಿ" ಎಂದು ಹೇಳುತ್ತಾ ಬೀಜವನ್ನು ಉಗುಳಿತು.



ಆಗ ಅಲ್ಲಿಗೆ ಬಂದ ಮರಕುಟಿಕ ಹಕ್ಕಿ "ಹಣ್ಣು ಚೆನ್ನಾಗಿದೆಯಾ?" ಎಂದು ವಿಚಾರಿಸಿತು. ಮರಿಕೋತಿಗೆ ಬಂತು ನೋಡಿ ಕೋಪ! ಅದು ಕೈಯಲ್ಲಿದ್ದ ಕಾಯನ್ನು ಬೀಸಿ ಎಸೆಯಿತು. "ಇನ್ನು ಮುಂದೆ ಹಣ್ಣುಗಳನ್ನೇ ತಿನ್ನುವುದಿಲ್ಲ!" ಎಂದಿತು.

ಮೂಲ: ಚೀನಾ ಕಥೆ




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ಕಂಡು ಹಿಡಿಯೋಣ ಬಾ!



ಒಂದೇ ಸಮ ಓಡುವುದು
ಉರುಳಿ ಉರುಳಿ ಹೋಗುವುದು
ಹಳ್ಳ ಕಂಡರೆ ಜಾರುವುದು
ಅದು ಏನು?

ಬಡವರು ಮಲಗುವ ಹಾಸಿಗೆ
ಸುತ್ತಿಡುವವರು ಯಾರು ಇಲ್ಲ – **ಅದು ಏನು?**

ಆಕಾರ ಇಲ್ಲದಿದ್ದರು ಓಡಾಡುವುದು
ಕೈಗಳು ಇಲ್ಲದಿದ್ದರು ಮುಟ್ಟುವುದು
ಕಾಲುಗಳು ಇಲ್ಲದಿದ್ದರು ತಿರುಗುವುದು
ಜೀವವಿಲ್ಲದೆ ಊರೆಲ್ಲ ಅಲೆಯುವುದು
ಅದು ಏನು?



ಪೇಪರ್ ಕೊಟ್ಟರೆ ತಿನ್ನುವುದು
ನೀರು ಕಂಡರೆ ಸಾಯುವುದು – **ಅದು ಏನು?**

ನನ್ನ ಮೇಲೊಂದು ಸೂರು
ನಾ ಹತ್ತಿರ ಹೋದಂತೆ
ಅದು ದೂರ ಸರಿಯುವುದು – **ಅದು ಏನು?**



ಆಕಾಶ ನಗುವಂತೆ ಮಾಡುವುದು
ನೋಡಿದರೆ ಕಣ್ಣು ಕೋರೈಸುವುದು – **ಅದು ಏನು?**

ಪಟಪಟ ಎಂದು ಬೀಳುವುದು
ಕಿಲಕಿಲ ಭೂಮಿಯ ನಗಿಸುವುದು
ಅದು ಏನು?

ಬೆಳ್ಳಗೆ ಇರುವುದು
ಕಪ್ಪಾಗಿ ಬದಲಾಗುವುದು
ತನಗೆ ಗೊತ್ತಿಲ್ಲದಂತೆ
ನೀರಾಗಿ ಬೀಳುವುದು – **ಅದು ಏನು?**

ಎದ್ದು ಬಿದ್ದು ನೆಗೆಯುವುದು
ಹಗಲು ಇರುಳು ಶಬ್ದ ಮಾಡುವುದು
ಲೆಕ್ಕವಿಲ್ಲದಷ್ಟು ಮೀನುಗಳ
ಹೊಟ್ಟೆಯಲ್ಲಿ ಇಟ್ಟುಕೊಂಡಿರುವುದು
ಭಾರದ ವಸ್ತುಗಳ ನುಂಗುವುದು
ಹಗುರ ವಸ್ತುಗಳ ಆಚೆ ಉಗಿಯುವುದು
ಅದು ಏನು?

ಮಾನವ ಮಾಡಿದ ಚಪ್ಪರವಲ್ಲ
ಆದರು ಅರಳಿವೆ ಮಲ್ಲೆ ಹೂಗಳು – **ಅದು ಏನು?**



ಏಳು ಬಣ್ಣಗಳಿರುವ ಸೇತುವೆ
ಕೈಗೆ ಎಟುಕದೆ ದೂರದಿ ಇರುವುದು
ಅದು ಏನು?

ಅದಿಲ್ಲದೆ ಗಿಡಮರ ಬೆಳೆಯುವುದಿಲ್ಲ
ಅದಿಲ್ಲದೆ ಮಳೆ ಸುರಿಯುವುದಿಲ್ಲ
ಅದಿಲ್ಲದೆ ಜಗತ್ತು ನಿದ್ರೆಯಿಂದ ಏಳುವುದಿಲ್ಲ
ಅದು ಯಾರು?

ಬೆಳಗ್ಗೆ ಬಚ್ಚಿಟ್ಟುಕೊಳ್ಳುವುದು
ರಾತ್ರಿ ಹೊರಗೆ ಬರುವುದು
ಅದು ಯಾರು?

ಗಾಳಿ, ಬೆಂಕಿ, ಭೂಮಿ, ನೀರು, ಆಕಾಶ
ಸೂರ್ಯ, ಮಳೆ, ಮಿಂಚು, ಚಂದ್ರ, ನಕ್ಷತ್ರಗಳು
ಮೋಡ, ಕಡಲು, ಕಾಮನಬಿಲ್ಲು

ಅಕ್ಕ ತಂಗಿ ಸಂಬಂಧ
ಪಕ್ಕ ಪಕ್ಕ ಮನೆ ಇದ್ರು
ಹತ್ರ ಹತ್ರ ಬರಲ್ಲ – **ಅವರು ಯಾರು?**

ಹೇಳಿದ್ದನ್ನು ಕೇಳುವುದು
ಪದೇ ಪದೇ ಕೇಳುವುದು
ಕೇಳಿದ್ದನ್ನು ಮತ್ತೆ ಹೇಳಲಾರದು – **ಅದು ಏನು?**

ಅಕ್ಕ ಪಕ್ಕ ಹಳ್ಳ
ಮಧ್ಯೆ ಒಂದು ಸೇತುವೆ – **ಅದು ಏನು?**

ಮೈಗೆಲ್ಲ ಕವಚದಂತ ಹೊದಿಕೆ
ಏನೇ ಮುಟ್ಟಿದ್ರು ತಕ್ಷಣ ಗೊತ್ತಾಗುತ್ತೆ
ಬಿಸಿ ತಾಗಿದ್ರೆ ಬೆಚ್ಚುತ್ತೆ – **ಅದು ಏನು?**

ಮನೆ ಒಳಗೆ ಸುಮ್ಮನಿರಲ್ಲ
ಅಶ್ಚರ್ಯ ಹೇಳೋದು ಬಿಡಲ್ಲ
ಬಂದವರನ್ನು ಬಾ ಎನ್ನುವುದು
ಬಾಗಿಲು ತೆರೆದರು ಹೊರ ಬರಲ್ಲ – **ಅದು ಏನು?**

ಕಿವಿ, ಮೂಗು, ಕಣ್ಣು, ಚರ್ಮ, ನಾಲಿಗೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಇಲಿಗಳ ಸಾಲು

ಬೆಕ್ಕು ಇಲಿಗಳನ್ನು ಹಿಡಿಯಲು ಹೊಸದೊಂದು ಉಪಾಯವನ್ನು ಮಾಡಿತು.

ಒಂದು ದಿನ ಅದು ಇಲಿಗಳ ಹತ್ತಿರ "ನಾನು ನಿಮಗೆ ತುಂಬಾ ತೊಂದರೆ ಕೊಟ್ಟಿರುವೆನು. ಇನ್ನು ಮುಂದೆ ನೀವು ನೆಮ್ಮದಿಯಿಂದ ಬಾಳಲು ಬಿಡಬೇಕೆಂದು ಬಯಸಿರುವೆನು. ಅದಕ್ಕಾಗಿ ನೀವೆಲ್ಲರು ಬೆಳಗ್ಗೆ ಮತ್ತು ಸಾಯಂಕಾಲ ಸಾಲಾಗಿ ಒಬ್ಬರ ಹಿಂದೆ ಒಬ್ಬರು ಬಂದು ನನಗೆ ನಮಸ್ಕರಿಸಿ ಹೋಗಬೇಕು. ಅಷ್ಟು ಸಾಕು" ಎಂದು ಹೇಳಿತು. ಇಲಿಗಳೆಲ್ಲ ಬಹಳ ಸಂತೋಷದಿಂದ ಇದಕ್ಕೆ ಒಪ್ಪಿದವು.

ಬೆಕ್ಕು ಪ್ರತಿದಿನ ಬಂದು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿತ್ತು. ಇಲಿಗಳು ಒಂದರ ಹಿಂದೆ ಒಂದು ಸಾಲಾಗಿ ಬಂದು ನಮಸ್ಕರಿಸಿ ಹೋಗುತ್ತಿದ್ದವು. ಸಾಲಿನ ಕೊನೆಯಲ್ಲಿ ಬರುವ ಇಲಿಯನ್ನು ಬೆಕ್ಕು ಹಿಡಿದು ತಿನ್ನುತ್ತಿತ್ತು. ಇದು ಉಳಿದ ಬೇರೆ ಇಲಿಗಳಿಗೆ ಗೊತ್ತಾಗುತ್ತಲೇ ಇರಲಿಲ್ಲ.



ಈ ಇಲಿಗಳ ಗುಂಪಿನಲ್ಲಿ ಅಂಬು ಮತ್ತು ಶಂಬು ಎನ್ನುವ ಎರಡು ಬುದ್ಧಿವಂತ ಇಲಿಗಳು ಇದ್ದವು. ಅವುಗಳು ಇಲಿಗಳ ಸಂಖ್ಯೆ ಕಡಿಮೆ ಆಗುತ್ತಿರುವುದನ್ನು ಗಮನಿಸಿದವು. ಅವೆರಡು ಸೇರಿ ಒಂದು ಉಪಾಯ ಮಾಡಿದವು.


ಅಂಬು ಸಾಲಿನಲ್ಲಿ ಮೊದಲನೆಯದಾಗಿಯೂ, ಶಂಬು ಸಾಲಿನಲ್ಲಿ ಕೊನೆಯದಾಗಿಯೂ ನಿಂತುಕೊಳ್ಳುವ ವ್ಯವಸ್ಥೆ ಮಾಡಿದವು. ಅಂಬು ಸಾಲಿನ ಮುಂದಿನಿಂದ "ಶಂಬು! ನೀನು ಎಲ್ಲಿರುವೆ?" ಎಂದು ಕೂಗುವುದು.

ಅದಕ್ಕೆ ಉತ್ತರವಾಗಿ ಶಂಬು "ಅಂಬು! ನಾನು ಇಲ್ಲಿ ಇರುವೆ" ಎಂದು ಹಿಂದಿನಿಂದ ಕೂಗುತ್ತಿತ್ತು. ಸಾಲಿನಲ್ಲಿ ಹೋಗುತ್ತಿರುವಾಗ ಈ ರೀತಿ ಒಂದಕ್ಕೊಂದು ಮಾತನಾಡುತ್ತಾ ಸಾಗುತ್ತಿದ್ದವು.




ಬೆಕ್ಕಿನ ಕೈಲಿ ಏನನ್ನು ಮಾಡಲಾಗಲಿಲ್ಲ. ಕೊನೆಯಲ್ಲಿ ಬರುವ ಶಂಬುವನ್ನು ತಿಂದರೆ ಬೆಕ್ಕಿನ ಉಪಾಯ ಎಲ್ಲರಿಗು ಗೊತ್ತಾಗುತ್ತಿತ್ತು.

ಆ ದಿನ ಬೆಕ್ಕಿಗೆ ತಿನ್ನಲು ಏನೂ ಸಿಗದೆ ಉಪವಾಸ ಇರುವಂತೆ ಆಯಿತು. ನಿದ್ದೆಯೂ ಇಲ್ಲದಂತಾಯಿತು. 'ಈ ದಿನ ನಡೆದದ್ದು ಆಕಸ್ಮಿಕ ಇರಬೇಕು. ನಾಳೆ ಹೇಗು ಇಲಿಗಳು ಬರುತ್ತವೆ. ಕೊನೆಯ ಇಲಿಯನ್ನು ಹಿಡಿದು ತಿಂದರಾಯಿತು' ಎಂದು ಯೋಚಿಸಿತು.



ಮಾರನೆಯ ದಿನ ಶಂಬು ಸಾಲಿನಲ್ಲಿ ಮೊದಲನೆಯದಾಗಿಯೂ, ಅಂಬು ಸಾಲಿನಲ್ಲಿ ಕೊನೆಯದಾಗಿಯೂ ಬಂದವು. ಹಿಂದಿನ ದಿನದಂತೆ ಸಾಲಿನಲ್ಲಿ ಒಂದಕ್ಕೊಂದು ಮಾತನಾಡುತ್ತಾ ಹೋದವು. ಆ ದಿನವು ಬೆಕ್ಕಿಗೆ ಇಲಿಯನ್ನು ಹಿಡಿಯಲು ಆಗಲಿಲ್ಲ. 'ಮತ್ತೊಂದು ದಿನ ಕಾಯೋಣ' ಎಂದು ಬೆಕ್ಕು ತನ್ನ ಕೋಪವನ್ನು ಹತ್ತಿಕ್ಕಿಕೊಂಡಿತು. ಆ ದಿನ ರಾತ್ರಿ ಅಂಬು, ಶಂಬು ತಮ್ಮ ಗುಂಪಿನವರನ್ನು ಎಚ್ಚರಿಸಿದವು.

“ಬೆಕ್ಕಿನ ಮುಖದಲ್ಲಿ ಸ್ವಲ್ಪ ಕೋಪ ಕಂಡರು ತಕ್ಷಣ ಓಡಬೇಕು” ಎಂದು ಹೇಳಿದವು.



ಮಾರನೆಯ ದಿನ ಇಲಿಗಳ ಸಾಲು ಸಾಗತೊಡಗಿತು. ಮಾಮೂಲಿನಂತೆ "ಶಂಬು! ನೀನು ಎಲ್ಲಿ ಇರುವೆ?" ಎಂದು ಅಂಬು ಕೇಳಿತು.





ಅಷ್ಟೇ! ಬೆಕ್ಕಿಗೆ ಸಿಟ್ಟನ್ನು ತಡೆಯಲಾಗಲಿಲ್ಲ. ಇಲಿಗಳ ಸಾಲಿನ ಮಧ್ಯಕ್ಕೆ ನೆಗೆಯಿತು. ಇಲಿಗಳು ಇದನ್ನು ನಿರೀಕ್ಷಿಸಿದ್ದವು! ಅವು ಸಿಗುತ್ತವೆಯೇ? ಮಿಂಚಿನ ವೇಗದಲ್ಲಿ ಓಡಿ ಮರೆಯಾದವು.

ಮೂಲ: ಟಿಬೆಟಿಯನ್ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಖಾಲಿ ಹೂವಿನ ಕುಂಡ

ಚೀನಾ ದೇಶದಲ್ಲಿ ಪಿಂಗ್ ಎನ್ನುವ ಒಬ್ಬ ಹುಡುಗ ಇದ್ದನು. ಅವನಿಗೆ ಹೂವುಗಳೆಂದರೆ ತುಂಬಾ ಇಷ್ಟ. ಅವನು ಯಾವ ಗಿಡವನ್ನು ಹಾಕಿದರು ಅದು ಚೆನ್ನಾಗಿ ಬೆಳೆದು, ಹೂವುಗಳು ಸೊಂಪಾಗಿ ಅರಳಿ ನಗುತ್ತಿದ್ದವು. ಆ ದೇಶದ ರಾಜರಿಗು ಹೂವುಗಳೆಂದರೆ ಪ್ರಾಣ. ಅವರು ಸಹ ತೋಟದ ಕೆಲಸವನ್ನು ಮಾಡುತ್ತಿದ್ದರು. ದೇಶದಲ್ಲಿ ಎಲ್ಲಿ ನೋಡಿದರೂ ಹೂವುಗಳ ಸುವಾಸನೆ ತುಂಬಿತ್ತು.

ಒಂದು ದಿನ ರಾಜರು ಮಂತ್ರಿಯ ಬಳಿ “ನನಗು ವಯಸ್ಸಾಯಿತು. ಮುಂದಿನ ರಾಜರನ್ನು ಆಯ್ಕೆ ಮಾಡಬೇಕು. ನಮ್ಮ ದೇಶದಲ್ಲಿ ಇರುವ ಎಲ್ಲ ಚಿಕ್ಕ ಹುಡುಗ-ಹುಡುಗಿಯರನ್ನು ಅರಮನೆಗೆ ಬರುವಂತೆ ಹೇಳಿ” ಎಂದರು. ಅದರಂತೆ ಎಲ್ಲ ಮಕ್ಕಳು ಅರಮನೆಗೆ ಬಂದರು.

ರಾಜರು “ಮಕ್ಕಳೇ! ನಾನು ನಿಮಗೆ ಚೆನ್ನಾಗಿರುವ ಹೂವಿನ ಬೀಜಗಳನ್ನು ಕೊಡುವೆನು. ಆ ಬೀಜಗಳಲ್ಲಿ ಯಾರು ತುಂಬಾ ಚೆನ್ನಾಗಿರುವ ಹೂವಿನ ಗಿಡ ಬೆಳೆಸುವರೊ ಅವರೇ ಈ ದೇಶದ ಮುಂದಿನ ರಾಜ” ಎಂದು ಹೇಳಿ ಬೀಜಗಳನ್ನು ಕೊಟ್ಟರು.



ಹುಡುಗ ಪಿಂಗ್ ಆನಂದದಿಂದ ತನ್ನ ಪಾಲಿನ ಬೀಜಗಳನ್ನು ತೆಗೆದುಕೊಂಡು ಹೋದನು. ಖಾಲಿ ಹೂವಿನ ಕುಂಡಕ್ಕೆ ಮಣ್ಣು ತುಂಬಿ ಬೀಜಗಳನ್ನು ಹಾಕಿದನು. ಅ ಬೀಜಗಳಿಂದ ಬರುವ ಗಿಡದಲ್ಲಿ ಸುಂದರ ಹೂವುಗಳು ಅರಳುವವು ಎಂದು ನಂಬಿದ್ದನು.



ಪ್ರತಿದಿನ ನೀರನ್ನು ಹಾಕುತ್ತಿದ್ದನು. ಯಾವಾಗ ಚಿಗುರಿ ಮೊಳಕೆ ಬರುವುದೋ ಎಂದು ಕಾತುರದಿಂದ ನೋಡುತ್ತಿದ್ದನು. ದಿನಗಳು ಕಳೆದವು. ಆದರೆ ಹೂವಿನ ಕುಂಡದ ಬೀಜಗಳಿಂದ ಮೊಳಕೆಗಳು ಬರಲೇ ಇಲ್ಲ.



ಪಿಂಗ್‌ಗೆ ಬಹಳ ಬೇಸರವಾಯಿತು. ಮಣ್ಣನ್ನು ಬದಲಾಯಿಸಿ ಬೀಜಗಳನ್ನು ದೊಡ್ಡ ಹೂವಿನ ಕುಂಡಕ್ಕೆ ಹಾಕಿದನು. ಮತ್ತೆ ಎರಡು ತಿಂಗಳುಗಳು ಕಳೆದವು. ದೊಡ್ಡ ಹೂವಿನ ಕುಂಡದಲ್ಲಿ ಗಿಡ ಚಿಗುರಲಿಲ್ಲ. ಪಿಂಗ್ ಕಾಯುತ್ತಲೇ ಇದ್ದನು. ಒಂದು ವರ್ಷ ಆಯಿತು. ಅರಮನೆಗೆ ಹೋಗುವ ದಿನವೂ ಬಂದಿತು.



ಮಕ್ಕಳೆಲ್ಲ ಹೊಸ ಬಟ್ಟೆ ಹಾಕಿಕೊಂಡು, ಕೈಯಲ್ಲಿ ಬಣ್ಣ ಬಣ್ಣದ ಹೂವಿನ ಗಿಡಗಳ ಕುಂಡಗಳನ್ನು ಹಿಡಿದುಕೊಂಡು ಅರಮನೆಯತ್ತ ಹೋಗುತ್ತಿದ್ದರು.



ಪಿಂಗ್ ದುಃಖ ತುಂಬಿದ ಮನಸ್ಸಿನಿಂದ 'ನನಗೆ ಏಕೆ ಗಿಡ ಬೆಳೆಸಲು ಆಗಲಿಲ್ಲ? ನನ್ನ ಖಾಲಿ ಹೂವಿನ ಕುಂಡವನ್ನು ನೋಡಿ ಎಲ್ಲರು ಹಾಸ್ಯ ಮಾಡುವರು' ಎಂದು ಯೋಚಿಸುತ್ತಾ ಬೇಸರಗೊಂಡನು.


ಪಿಂಗ್ ತಂದೆ "ನೀನು ಯಾವಾಗಲು ತುಂಬ ಚೆನ್ನಾಗಿ ಹೂವಿನ ಗಿಡಗಳನ್ನು ಬೆಳೆಸುತ್ತಿದ್ದೆ. ಈ ಬಾರಿಯು ನೀನು ತುಂಬ ಪ್ರಯತ್ನ ಪಟ್ಟೆ. ಅಷ್ಟು ಸಾಕು. ರಾಜರ ಹತ್ತಿರ ಹೋಗಲು ಹಿಂಜರಿಯಬೇಡ" ಎಂದು ಹೇಳಿದರು.



ರಾಜರು ಮಕ್ಕಳು ತಂದಿದ್ದ ಹೂವಿನ ಗಿಡಗಳನ್ನು ಒಂದೊಂದಾಗಿ ನೋಡಿದರು. ಪಿಂಗ್ ಬಳಿಗು ಬಂದರು. "ನೀನು ಏಕೆ ಖಾಲಿ ಹೂವಿನ ಕುಂಡ ತಂದಿರುವೆ?" ಎಂದು ಕೇಳಿದರು.



ಪಿಂಗ್ ಅಳಲು ಆರಂಭಿಸಿದನು. “ನೀವು ಕೊಟ್ಟ ಬೀಜಗಳನ್ನು ಹಾಕಿ, ಪ್ರತಿದಿನ ನಾನು ನೀರು ಹಾಕುತ್ತಿದ್ದೆನು. ಆದರೆ ಅವು ಮೊಳಕೆ ಒಡೆದು ಚಿಗುರಲೇ ಇಲ್ಲ. ಮಣ್ಣನ್ನು ಬದಲಾಯಿಸಿದೆ. ಆದರು ಗಿಡ ಬೆಳೆಯಲಿಲ್ಲ” ಎಂದನು.



ರಾಜರ ಮುಖದಲ್ಲಿ ನಗು ಕಾಣಿಸಿತು. ಎಲ್ಲರನ್ನು ಒಮ್ಮೆ ನೋಡಿ “ಇವನೇ ನಮ್ಮ ದೇಶದ ಮುಂದಿನ ರಾಜನಾಗುವ ಸಾಮರ್ಥ್ಯ ಇರುವವನು!” ಎಂದರು. ಎಲ್ಲರಿಗು ಇದನ್ನು ಕೇಳಿ ಆಶ್ಚರ್ಯವಾಯಿತು

ಮುಂದುವರೆಸಿದ ರಾಜರು “ಬೇರೆಯವರಿಗೆ ಬೀಜಗಳು ಎಲ್ಲಿ ದೊರೆತವು ಎಂದು ನನಗೆ ಗೊತ್ತಿಲ್ಲ. ನಾನು ಕೊಟ್ಟಿದ್ದು ಬೇಯಿಸಿದ ಬೀಜಗಳು. ಅವುಗಳಿಂದ ಗಿಡಗಳು ಬೆಳೆಯಲು ಸಾಧ್ಯವಿಲ್ಲ. ಖಾಲಿ ಹೂವಿನ ಕುಂಡ ಹಿಡಿದು ಬಂದಿರುವ ಪಿಂಗ್ ಗುಣವನ್ನು ನಾನು ಮೆಚ್ಚುವೆನು” ಎಂದರು.



ಮೂಲ: ಚೀನಾ ದೇಶದ ಕಥೆ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

15


ಚಂದ್ರ ಮತ್ತು ದರ್ಜಿ



ಅದು ಚಳಿಗಾಲ. ಆ ದಿನ ದರ್ಜಿ ಬೇಗನೆ ಅಂಗಡಿ ಮುಚ್ಚಿದನು. ಏನನ್ನೋ ಯೋಚಿಸುತ್ತಾ ದಾರಿಯಲ್ಲಿ ಹೋಗುತ್ತಿದ್ದನು. ಆಗ "ನನಗೆ ತುಂಬ ಚಳಿ ಆಗುತ್ತಿದೆ. ಈ ರಾತ್ರಿಯಲ್ಲಿ ಒಂದು ಬೆಚ್ಚಗಿನ ಅಂಗಿ ಹೊಲಿದು ಕೊಡುವೆಯಾ?" ಎಂದು ಒಂದು ಮೆಲು ಧ್ವನಿ ಕೇಳಿತು.

ಶಬ್ದ ಎಲ್ಲಿಂದ ಬರುತ್ತಿದೆ ಎಂದು ದರ್ಜಿ ಸುತ್ತಮುತ್ತ ನೋಡಿದನು.

"ಇದೋ! ನಾನು ಇಲ್ಲಿ ಇದ್ದೇನೆ" ಎಂದು ಹೇಳಿದ್ದು ಬೇರೆ ಯಾರು ಅಲ್ಲ. ಚಂದ್ರ! ಅದು ದರ್ಜಿಯ ಕಣ್ಣಿಗೆ ಮುದುಡಿರುವಂತೆ ಕಂಡಿತು. 'ಚಳಿಗೆ ಮುದುಡಿಕೊಂಡಿದೆ' ಎಂದು ದರ್ಜಿ ಯೋಚಿಸಿದನು.



ಆತ ಚಂದ್ರನಿಗೆ "ಕೆಲವೇ ದಿನಗಳಲ್ಲಿ ಅಂಗಿ ಹೊಲಿದು ಕೊಡುವೆ" ಎಂದು ಭಾಷೆ ಕೊಟ್ಟನು. ಅಂಗಡಿಯಲ್ಲಿ ಉಳಿದಿದ್ದ ಬಟ್ಟೆಯ ಚೂರುಗಳನ್ನು ಸೇರಿಸಿ ಚಂದ್ರನ ಮುದುಡಿದ ಆಕಾರಕ್ಕೆ ಹೊಂದುವಂತೆ ಅಂಗಿ ಹೊಲಿದನು. ಅದನ್ನು ಚಂದ್ರನ ಬಳಿಗೆ ತೆಗೆದುಕೊಂಡು ಹೋದನು.

“ನೋಡಲು ತುಂಬಾ ಚೆನ್ನಾಗಿದೆ” ಎಂದು ಹೇಳಿದ ಚಂದ್ರ ಅದನ್ನು ಹಾಕಿಕೊಳ್ಳಲು ಹೋಯಿತು. ಉಹೂಂ! ಅಂಗಿಯ ಒಳಗೆ ಹೋಗಲು ಚಂದ್ರನಿಗೆ ಆಗಲೇ ಇಲ್ಲ.

“ನನಗೆ ಮೊದಲೆ ಗೊತ್ತಾಯಿತು! ನೀನು ನನ್ನ ಅಳತೆಯನ್ನೇ ತೆಗೆದುಕೊಳ್ಳಲಿಲ್ಲ. ಈ ಅಂಗಿ ನನಗೆ ಹೇಗೆ ಆಗುತ್ತದೆ?” ಎಂದು ಚಂದ್ರ ನಕ್ಕಿತು.
“ನಿನ್ನ ಅಳತೆಯನ್ನು ನಾನು ಹೇಗೆ ತೆಗೆದುಕೊಳ್ಳಲಿ?” ಎಂದನು ದರ್ಜಿ.

ಅವರಿಬ್ಬರನ್ನು ನೋಡುತ್ತಿದ್ದ ಒಂದು ಹದ್ದು “ದರ್ಜಿಯಣ್ಣ! ಆ ಅಳತೆ ಟೇಪನ್ನು ನನಗೆ ಕೊಡು. ನಾನು ಚಂದ್ರನನ್ನು ಅಳತೆ ಮಾಡಿ ಕೊಡುವೆನು” ಎಂದಿತು.

ಹದ್ದು ಚಂದ್ರನನ್ನು ಸುತ್ತಿ ಬಂದಿತು. ಎಚ್ಚರಿಕೆಯಿಂದ ಚಂದ್ರನನ್ನು ಅಳತೆ ಮಾಡಿ ದರ್ಜಿಗೆ ಕೊಟ್ಟಿತು.

ಅದು ಹಬ್ಬದ ಸಮಯ ಹೆಚ್ಚು ಬಟ್ಟೆಗಳು ಇದ್ದುದರಿಂದ ದರ್ಜಿ ಚಂದ್ರನ ಅಂಗಿಯನ್ನು ಒಂದು ವಾರದ ನಂತರ ಹೊಲಿದನು. ಅಂಗಿಗೆ ಮಾಡಿದ್ದ ಅಲಂಕಾರವನ್ನು ನೋಡಿ ಚಂದ್ರನಿಗೆ ಬಹಳ ಆನಂದವಾಯಿತು. ತಕ್ಷಣ ಅದು ಅಂಗಿ ಹಾಕಿಕೊಳ್ಳಲು ಹೋಯಿತು.

“ನೀನೇ ನೋಡು! ತಿಂದು ತಿಂದು ಎಷ್ಟು ದಪ್ಪ ಆಗಿರುವೆ. ಈ ಅಂಗಿಯೂ ನಿನಗೆ ಆಗುವುದಿಲ್ಲ” ಎಂದು ದರ್ಜಿ ಕೋಪದಿಂದ ಹೇಳಿದನು.



“ತಪ್ಪೆಲ್ಲಾ ನಿನ್ನದೇ! ನೀನೇಕೆ ನನ್ನ ಅಂಗಿಯನ್ನು ಹೊಲಿಯಲು ಇಷ್ಟು ದಿನ ತೆಗೆದುಕೊಂಡೆ? ದಯವಿಟ್ಟು ಮತ್ತೆ ನನಗೆ ಒಂದು ಅಂಗಿ ಹೊಲಿದು ಕೊಡು” ಎಂದು ಬೇಡಿಕೊಂಡಿತು.



“ನೀನು ಇದಕ್ಕಿಂತ ದಪ್ಪ ಆಗುವುದಿಲ್ಲವೇ?” ಎಂದು ಕೇಳುತ್ತಾ ದರ್ಜಿ ಹಿಂತಿರುಗಿ ಬಂದನು. ನೀಲಿ, ಕೆಂಪು, ಕಪ್ಪು, ಹಳದಿ ಎಂದು ಹಲವು ಬಣ್ಣದ ಬಟ್ಟೆ ಚೂರುಗಳನ್ನು ಸೇರಿಸಿ ಅಂಗಿ ಹೊಲಿಯಲು ಕೆಲವು ದಿನಗಳು ಬೇಕಾದವು. ಅಂಗಿ ನೋಡಲು ಅಂದವಾಗಿ ಕಾಣುತ್ತಿತ್ತು.



ದರ್ಜಿ ಅದನ್ನು ಚಂದ್ರನ ಬಳಿಗೆ ತೆಗೆದುಕೊಂಡು ಹೋದನು. ಆದರೆ ಆಗ ಚಂದ್ರ ದುಂಡಗೆ ಇರಲಿಲ್ಲ. ಅಂಗಿ ತುಂಬ ದೊಡ್ಡದಾಗಿ ಇತ್ತು.



"ಇಷ್ಟು ಸಡಿಲವಾದ ಅಂಗಿ ಚಳಿಯಿಂದ ನನ್ನನ್ನು ಹೇಗೆ ಬೆಚ್ಚಗಿಡುತ್ತದೆ?" ಎಂದು ಚಂದ್ರ ಗೊಣಗಿತು.

"ನನಗೆ ಇದು ಹೇಗೆ ಗೊತ್ತಾಗಬೇಕು?" ಎಂದು ದರ್ಜಿ ಕೋಪದಿಂದ ಹೇಳಿದನು. 'ಒಳ್ಳೆಯ ದರ್ಜಿ' ಎಂಬ ಅವನ ಹೆಸರು ಚಂದ್ರನಿಂದ ಹಾಳಾಗಿ ಹೋಯಿತು.

ಪಾಪ ದರ್ಜಿ! ಅಂದಿನಿಂದ ಆತ ಚಂದ್ರನನ್ನು ನೋಡುತ್ತಲೇ ತನ್ನ ಹಲ್ಲುಗಳನ್ನು ಕಟಕಟನೆ ಕಡಿಯುವನು.

ಮೂಲ: ರಷ್ಯಾದ ಕಥೆಗಳು
ಅನುವಾದ: ನಿರುಪಮ ರಾಘವನ್



Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮಂತ್ರದ ಮಾವಿನ ಹಣ್ಣು

ಬಹಳ ಹಿಂದಿನ ಕಾಲದ ಮಾತು. ಒಂದು ಕಾಡಿನಲ್ಲಿ ಒಂದು ದೊಡ್ಡ ಮಾವಿನ ಮರವಿತ್ತು. ಆ ಮರದ ಅತಿ ಎತ್ತರದ ಕೊಂಬೆಯಲ್ಲಿ ಒಂದು ಮಾಗಿರುವ ಮಾವಿನ ಹಣ್ಣು ಇತ್ತು. ಅದು ಸಾಧಾರಣ ಮಾವಿನ ಹಣ್ಣು ಆಗಿರಲಿಲ್ಲ. ಅದೊಂದು ಮಂತ್ರದ ಮಾವಿನ ಹಣ್ಣು ಆಗಿತ್ತು!

ಒಂದು ದಿನ ಗಾಳಿ ಜೋರಾಗಿ ಬೀಸ ತೊಡಗಿತು. ಜೋರಾಗಿ ಬೀಸುತ್ತಿದ್ದ ಗಾಳಿ ಮಾವಿನ ಮರವನ್ನು ಅಲ್ಲಾಡಿಸಿತು. ಆಗ ಮಂತ್ರದ ಮಾವಿನ ಹಣ್ಣು 'ಧೊಪ್' ಎಂದು ನೆಲದ ಮೇಲೆ ಬಿತ್ತು. ಅದರ ಅದೃಷ್ಟ ಚೆನ್ನಾಗಿತ್ತು. ಅದಕ್ಕೆ ಪೆಟ್ಟಾಗಲಿಲ್ಲ.


ಮಂತ್ರದ ಮಾವಿನ ಹಣ್ಣಿಗೆ ಬಹಳ ಆನಂದವಾಯಿತು. ಅದಕ್ಕೆ ಈಗ ಸುತ್ತಾಡಲು ಅವಕಾಶ ಸಿಕ್ಕಿತು. ಅದು ಉರುಳುತ್ತಾ ಉರುಳುತ್ತಾ ಹಳ್ಳಿಯತ್ತ ಹೊರಟಿತು. ಮೊದಲಿಗೆ ಅದು ಒಂದು ಮೇಕೆಯನ್ನು ಭೇಟಿ ಆಯಿತು.



ಮೇಕೆ "ಅರೇ ನಿಲ್ಲು! ನಿಲ್ಲು! ನಾನು ನಿನ್ನನ್ನು ತಿನ್ನಲು ಇಷ್ಟಪಡುವೆನು" ಎಂದು ಹೇಳಿತು.

ಮಂತ್ರದ ಮಾವಿನ ಹಣ್ಣು ಜೋರಾಗಿ ನಗುತ್ತಾ ಹಾಡೊಂದನ್ನು ಹಾಡಿತು.

ನಾನು ಮಂತ್ರದ ಮಾವಿನ ಹಣ್ಣು
ಬೆಳಗು ಬೈಗು ಪ್ರಪಂಚ ನೋಡುವೆ
ನಾನು ನಿನ್ನ ಕೈಗೆ ಸಿಗಲಾರೆ
ನೀನು ಈ ಮಾತನ್ನು ತಿಳಿದುಕೋ




ಮಾವಿನ ಹಣ್ಣು ಜೋರಾಗಿ ಉರುಳುತ್ತಾ ಮುಂದಕ್ಕೆ ಹೋಯಿತು. ಮೇಕೆ ಅದರ ಹಿಂದೆ ಹಿಂದೆ ಹೋಗುತ್ತಿತ್ತು. ದಾರಿಯಲ್ಲಿ ಒಬ್ಬ ಹುಡುಗ ಗಾಳಿಪಟವನ್ನು ಹಾರಿಸುತ್ತಿದ್ದ. ಅವನು ಮಾವಿನ ಹಣ್ಣಿಗೆ "ಅರೇ ನಿಲ್ಲು! ನಿಲ್ಲು! ನಾನು ನಿನ್ನನ್ನು ತಿನ್ನಲು ಇಷ್ಟ ಪಡುವೆನು" ಎಂದು ಹೇಳಿದನು.

ಮಾವಿನ ಹಣ್ಣು ಮತ್ತೆ ನಗುತ್ತಾ ಹಾಡನ್ನು ಹಾಡಿತು.


ನಾನು ಮಂತ್ರದ ಮಾವಿನ ಹಣ್ಣು
ಬೆಳಗು ಬೈಗು ಪ್ರಪಂಚ ನೋಡುವೆ
ನಾನು ನಿನ್ನ ಕೈಗೆ ಸಿಗಲಾರೆ
ನೀನು ಈ ಮಾತನ್ನು ತಿಳಿದುಕೋ

ಮಾವಿನ ಹಣ್ಣು ಇನ್ನು ಜೋರಾಗಿ ಉರುಳುತ್ತಾ ಒಂದು ತೋಟದ ಒಳಗೆ ನುಗ್ಗಿತು. ಮೇಕೆ ಮತ್ತು ಹುಡುಗ ಇಬ್ಬರು ಮಾವಿನ ಹಣ್ಣಿನ ಹಿಂದೆ ಓಡುತ್ತಿದ್ದರು. ಆ ಸಮಯದಲ್ಲಿ ತೋಟದಲ್ಲಿ ಕೆಲವು ಹುಡುಗಿಯರು ಆಟವಾಡುತ್ತಿದ್ದರು.

ಅವರು ಮಾವಿನ ಹಣ್ಣು ಉರುಳುತ್ತಿರುವುದನ್ನು ನೋಡಿ ಜೋರಾಗಿ ಕೂಗಿದರು. "ಅರೇ ನಿಲ್ಲು! ನಿಲ್ಲು! ನಾವು ನಿನ್ನನ್ನು ತಿನ್ನಲು ಇಷ್ಟ ಪಡುವೆವು."



ಮಾವಿನ ಹಣ್ಣು ಜಾರಿ ದೂರ
ಹೋಗುತ್ತಾ ಮತ್ತೆ ಹಾಡನ್ನು ಹಾಡಿತು.
ನಾನು ಮಂತ್ರದ ಮಾವಿನ ಹಣ್ಣು
ಬೆಳಗು ಬೈಗು ಪ್ರಪಂಚ ನೋಡುವೆ
ನಾನು ನಿನ್ನ ಕೈಗೆ ಸಿಗಲಾರೆ
ನೀನು ಈ ಮಾತನ್ನು ತಿಳಿದುಕೋ




ಮೇಕೆ, ಹುಡುಗ ಮತ್ತು ಹುಡುಗಿಯರು
ಎಲ್ಲರು ಮಾವಿನ ಹಣ್ಣಿನ ಹಿಂದೆ ಓಡಿದರು.
ಆದರೆ ಮಾವಿನ ಹಣ್ಣು ಯಾರಿಗು ಸಿಗಲಿಲ್ಲ.

ಮಾವಿನ ಹಣ್ಣಿಗೆ ಈಗ ಸುಸ್ತಾಗುತ್ತಿತ್ತು. ಅದು ಉದ್ದವಾಗಿ ಬೆಳೆದಿದ್ದ ಹುಲ್ಲಿನ ಮಧ್ಯೆ ಬಚ್ಚಿಟ್ಟುಕೊಂಡಿತು. ಎಲ್ಲರು ಸ್ವಲ್ಪ ಹೊತ್ತು ಮಾವಿನ ಹಣ್ಣನ್ನು ಹುಡುಕಿ ಹೊರಟು ಹೋದರು.

ಸುಸ್ತಾಗಿದ್ದ ಮಾವಿನ ಹಣ್ಣಿಗೆ ನಿದ್ರೆ ಬಂದಿತು. ಕೆಲವು ತಿಂಗಳುಗಳು ಹಾಗೆ ನಿದ್ರೆ ಮಾಡಿತು. ಇದ್ದಕ್ಕಿದಂತೆ ಒಂದು ದಿನ ಅದು ಕಣ್ಣು ಬಿಟ್ಟಿತು. ಸೂರ್ಯನ ಕಿರಣಗಳು ತನಗೆ ಸ್ನಾನ ಮಾಡಿಸುತ್ತಾ ಇರುವುದನ್ನು ಕಂಡಿತು. ಮಾವಿನ ಹಣ್ಣು ಬದಲಾಗಿತ್ತು. ಅದರ ಒಳಗಿನಿಂದ ಮೊಳಕೆ ಬರುತ್ತಾಇತ್ತು.

ಹಾ! ಮಂತ್ರದ ಮಾವಿನ ಹಣ್ಣು ಈಗ ಒಂದು ಮರವಾಗಿ ಬೆಳೆಯಲು ಪ್ರಾರಂಭವಾಯಿತು.


ಪಪುವಾ ನ್ಯೂಗಿನಿ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಗುಬ್ಬಚ್ಚಿಯ ಉಡುಗೊರೆ



ಕುಬಾನು ಮತ್ತು ಶಂಬು ಇಬ್ಬರು ಅಕ್ಕಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದರು. ಕುಬಾನು ತುಂಬ ದುರಾಸೆಯವನು. ಬೇರೆಯವರ ಏಳಿಗೆ ನೋಡಿ ಹೊಟ್ಟೆಕಿಚ್ಚು ಪಡುವನು. ಶಂಬು ತುಂಬ ದಯಾಮಯಿ. ಎಲ್ಲರನ್ನು ಪ್ರೀತಿಯಿಂದ ಕಾಣುತ್ತಿದ್ದನು.

ಶಂಬುನ ಮನೆಯ ಮುಂದೆ ಒಂದು ಮರ ಇತ್ತು. ಅದರಲ್ಲಿ ಗುಬ್ಬಚ್ಚಿಯ ಒಂದು ಗೂಡಿತ್ತು. ಒಂದು ದಿನ ಆ ಗೂಡಿನಿಂದ ಗುಬ್ಬಚ್ಚಿ ಮರಿ 'ಧೊಪ್!' ಎಂದು ಕೆಳಗೆ ಬಿತ್ತು. ಅದರ ಕಾಲು ಮುರಿದು ಹೋಯಿತು.


ಶಂಬು ಅದನ್ನು ಜಾಗರೂಕತೆಯಿಂದ ಎತ್ತಿಕೊಂಡನು. ಅದರ ಕಾಲಿಗೆ ಔಷಧಿ ಹಾಕಿದನು. ಪಟ್ಟಿ ಕಟ್ಟಿದನು. ಎಚ್ಚರಿಕೆಯಿಂದ ಅದರ ಗೂಡಿನಲ್ಲಿ ಇಟ್ಟನು.

ಕೆಲವು ದಿನಗಳು ಕಳೆದವು. ಗುಬ್ಬಚ್ಚಿ ಮರಿ ಚೆನ್ನಾಗಿ ಹಾರುವುದನ್ನು ಕಲಿಯಿತು. ಅದು ಹಾರಿ ಹೋಗುವ ಮೊದಲು ಶಂಬು ಹತ್ತಿರ ಬಂದು "ನೀನು ನನಗೆ ತುಂಬ ಸಹಾಯ ಮಾಡಿದೆ. ಅದಕ್ಕಾಗಿ ಈ ಜೋಳವನ್ನು ಉಡುಗೊರೆಯಾಗಿ ಕೊಡುವೆನು. ನೀನು ಇದನ್ನು ನಿನ್ನ ತೋಟದಲ್ಲಿ ಬೆಳೆಯಬಹುದು" ಎಂದು ಹೇಳಿ ಮರೆಯಾಯಿತು.

ಶಂಬು ಆ ಜೋಳವನ್ನು ತನ್ನ ಹೊಲದಲ್ಲಿ ಹಾಕಿದನು. ಪ್ರತಿದಿನ ಅದಕ್ಕೆ ನೀರನ್ನು ಹಾಕುತ್ತಿದ್ದನು. ಚೆನ್ನಾಗಿ ಬೆಳೆ ಬಂದಿತು. ಕೆಲವು ದಿನಗಳು ಕಳೆದವು. ಜೋಳದ ತೆನೆಗಳು ಬಲಿತವು. ಏನಾಶ್ಚರ್ಯ! ತೆನೆಯಲ್ಲಿ ಬೆಲೆ ಬಾಳುವ ಹರಳುಗಳು ಇದ್ದವು. ಶಂಬು ಅವುಗಳನ್ನು ಮಾರಿ, ಹಣ ಸಂಪಾದಿಸಿ ದೊಡ್ಡ ಶ್ರೀಮಂತನಾದನು.

ಇದನ್ನು ನೋಡಿ ಕುಬಾನುವಿಗೆ ತುಂಬ ಆಶ್ಚರ್ಯವಾಯಿತು. 'ಶಂಬುಗೆ ಇಷ್ಟೊಂದು ಹಣ ಹೇಗೆ ಸಿಕ್ಕಿತು?' ಎಂದು ಆತನ ಮನೆಗೆ ಹೋಗಿ ವಿಚಾರಿಸಿದನು. ಶಂಬು ನಡೆದ ಎಲ್ಲವನ್ನು ಮುಚ್ಚುಮರೆ ಇಲ್ಲದಂತೆ ಹೇಳಿದನು.





'ನಾನು ಏಕೆ ಈ ರೀತಿ ಬೆಲೆ ಬಾಳುವ ಹರಳುಗಳನ್ನು ಬೆಳೆಯ ಬಾರದು?' ಎಂದು ಕುಬಾನು ಯೋಚಿಸಿದನು.

ತನ್ನ ತೋಟದ ಮರದಲ್ಲಿದ್ದ ಗುಬ್ಬಚ್ಚಿಯ ಗೂಡನ್ನು ನೋಡಿದನು. ಒಂದು ದೊಡ್ಡ ಕಡ್ಡಿಯನ್ನು ತಂದು ಆ ಗೂಡನ್ನು ಅಲ್ಲಾಡಿಸಿದನು. ಅದರಲ್ಲಿದ್ದ ಗುಬ್ಬಚ್ಚಿ ಮರಿಗಳಲ್ಲಿ ಒಂದು 'ಧೊಪ್!' ಎಂದು ಕೆಳಗೆ ಬಿದ್ದಿತು. ಅದರ ಕಾಲು ಮುರಿಯಿತು.


ಕುಬಾನು ಅದನ್ನು ಎತ್ತಿಕೊಂಡು ಔಷಧಿ ಹಾಕಿದನು. ಪಟ್ಟಿ ಕಟ್ಟಿದನು. ಮತ್ತೆ ಗೂಡಿನಲ್ಲಿ ಇಟ್ಟನು.

ಕೆಲವು ದಿನಗಳು ಕಳೆದವು. ಗುಬ್ಬಚ್ಚಿ ಮರಿ ಕುಬಾನುಗೆ ಒಂದು ಧಾನ್ಯ ಕೊಟ್ಟಿತು. "ಇದೋ! ಇದನ್ನು ಬಿತ್ತಿ ಏನು ಬೆಳೆ ಬರುವುದೆಂದು ನೋಡು!" ಎಂದು ಹೇಳಿ ಹಾರಿ ಮರೆಯಾಯಿತು.

ಬೆಳೆ ತುಂಬ ಬೇಗ ಬೆಳೆಯಿತು. ಅದರಿಂದ ತೆನೆಗಳು ಯಾವಾಗ ಬರುವುದೆಂದು ಕುಬಾನು ಕಾಯುತ್ತಿದ್ದನು. ಒಂದು ದಿನ ಅವನು ತೋಟಕ್ಕೆ ಹೋದನು. ಏನಾಶ್ಚರ್ಯ! ಅಲ್ಲಿ ಗಿಡಗಳೇ ಇಲ್ಲ. ಕೈಯಲ್ಲಿ ಮಚ್ಚು ಹಿಡಿದಿದ್ದ ಅತಿ ಭಯಂಕರನಾದ ಒಬ್ಬ ಮನುಷ್ಯ ಅಲ್ಲಿ ನಿಂತಿದ್ದನು. ಅವನನ್ನು ನೋಡಿದ ಕುಬಾನು ಹೆದರಿ ಓಡತೊಡಗಿದನು.

ಆ ಮನುಷ್ಯನು ಅವನನ್ನು ಅಟ್ಟಿಸಿಕೊಂಡು ಮನೆಯವರೆಗು ಹೋದನು. ಆ ಮನುಷ್ಯ ಕುಬಾನು ಮನೆಯಲ್ಲಿದ್ದ ಒಡವೆ ಮತ್ತು ಹಣ ಎಲ್ಲವನ್ನು ಎತ್ತಿಕೊಂಡು ಮರೆಯಾದನು. ಪಾಪ ಕುಬಾನು!

ಮೂಲ: ಟಿಬೆಟಿಯಾ ಕಥೆ




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಜವಾಬ್ದಾರಿ ಜಗ್ಗ



ಜಗ್ಗ ಆಗಾಗ್ಗೆ ತನ್ನ ಅತ್ತೆಯ ಮನೆಗೆ ಹೋಗುತ್ತಿದ್ದನು. ಆಗ ಅತ್ತೆ ಅವನಿಗೆ ಏನಾದರು ಕೊಟ್ಟು ಕಳುಹಿಸುತ್ತಿದ್ದರು. ಒಂದು ದಿನ ಅತ್ತೆ ಜಗ್ಗನಿಗೆ ಬಿಸ್ಕೆಟ್ ಕೊಟ್ಟರು. ಅವನು ಅದನ್ನು ಕೈಯಲ್ಲಿ ಬಿಗಿಯಾಗಿ ಹಿಡಿದುಕೊಂಡು ಮನೆಗೆ ಬಂದನು.

ಆ ವೇಳೆಗೆ ಬಿಸ್ಕೆಟ್ ಎಲ್ಲಾ ಪುಡಿ ಪುಡಿಯಾಗಿ ಬಿಟ್ಟಿತ್ತು. ಅದನ್ನು ನೋಡಿದ ಅಮ್ಮ "ಬಿಸ್ಕೆಟ್ ಈ ರೀತಿ ತರುವುದೇ? ಒಂದು ಪೇಪರಿನಲ್ಲಿ ಸುತ್ತಿ ಟೋಪಿ ಒಳಗೆ ಇಟ್ಟುಕೊಂಡು ಬರಬೇಕು. ಆಗ ಕೋತಿಗಳಿಂದ ತೊಂದರೆ ಆಗುವುದಿಲ್ಲ" ಎಂದರು.



ಮುಂದಿನ ವಾರ ಮತ್ತೆ ಜಗ್ಗ ಅತ್ತೆ ಮನೆಗೆ ಹೋದನು. ಅತ್ತೆ ಅವನಿಗೆ ಬೆಣ್ಣೆ ಕೊಟ್ಟರು. ಜಗ್ಗ ಅದನ್ನು ಪೇಪರಿನಲ್ಲಿ ಸುತ್ತಿ ತಲೆಯ ಮೇಲೆ ಇಟ್ಟುಕೊಂಡು ಅದರ ಮೇಲೆ ಟೋಪಿ ಹಾಕಿಕೊಂಡನು.

ಆ ದಿನ ಬಿಸಿಲು ತುಂಬಾ ಜೋರಾಗಿತ್ತು. ತಲೆಯ ಮೇಲಿದ್ದ ಬೆಣ್ಣೆ ಕರಗತೊಡಗಿತು. ಜಗ್ಗ ಮನೆಗೆ ಹೋದಾಗ ಆತನ ಮುಖ ಮತ್ತು ಬಟ್ಟೆಯ ಮೇಲೆಲ್ಲಾ ಬೆಣ್ಣೆ ಕರಗಿ ಹರಿದಿತ್ತು.



“ಅಯ್ಯೋ ದೇವರೇ! ಬೆಣ್ಣೆ ಈ ರೀತಿ ತರುವುದೇ? ತಣ್ಣೀರಿನಲ್ಲಿ ಇಟ್ಟುಕೊಂಡು ತರಬೇಕು” ಎಂದರು ಅಮ್ಮ.

ಅದರ ಮುಂದಿನ ವಾರವು ಜಗ್ಗ ಅತ್ತೆ ಮನೆಗೆ ಹೋದಾಗ ನಾಯಿ ಮರಿ ಕೊಟ್ಟರು. ಜಗ್ಗ ಅದನ್ನು ತಣ್ಣೀರಿನಲ್ಲಿ ಇಟ್ಟುಕೊಂಡು ಮನೆಗೆ ತಂದನು. ಅಮ್ಮನಿಗೆ 'ಶಾಕ್' ಆಯಿತು.

"ಅಯ್ಯೋ ಪಾಪ! ನಾಯಿ ಮರಿಯನ್ನು ಈ ರೀತಿ ತರುವುದೇ? ಮುಂದಿನ ಬಾರಿ ಹಗ್ಗ ತೆಗೆದುಕೊಂಡು ಹೋಗಿ ಒಂದು ತುದಿಯನ್ನು ಅದರ ಕುತ್ತಿಗೆಗೆ ಕಟ್ಟಿ, ಇನ್ನೊಂದು ತುದಿಯನ್ನು ನಿನ್ನ ಕೈಯಲ್ಲಿ ಹಿಡಿದು ಎಳೆದುಕೊಂಡು ಬರಬೇಕು" ಎಂದರು.




ರಜೆಯಲ್ಲಿ ಜಗ್ಗ ಅತ್ತೆ ಮನೆಗೆ ಹೋದಾಗ ಅತ್ತೆ ಬ್ರೆಡ್ ಕೊಟ್ಟರು. ಜಗ್ಗ ಬ್ರೆಡ್ಡನ್ನು ಹಗ್ಗದಲ್ಲಿ ಕಟ್ಟಿ ಎಳೆದುಕೊಂಡು ಮನೆಗೆ ಬಂದನು. ಅದನ್ನು ನೋಡಿದ ಅಮ್ಮನಿಗೆ ತಲೆ ಸುತ್ತಿದಂತಾಯಿತು.

ಮುಂದಿನ ವಾರ ಅಮ್ಮ "ನೀನು ಅತ್ತೆ ಮನೆಗೆ ಹೋಗಬೇಡ. ನಾನು ಹೋಗಿ ಬರುತ್ತೇನೆ. ಸಂಡಿಗೆ ಒಣಗಲು ಹಾಕಿರುವೆನು. ನೋಡಿಕೊಂಡು ಓಡಾಡು" ಎಂದು ಹೇಳಿ ಅತ್ತೆ ಮನೆಗೆ ಹೋದರು.

ಜಗ್ಗ ಸಂಡಿಗೆಯನ್ನು ನೋಡುತ್ತಾ ಬಹಳ ಎಚ್ಚರಿಕೆಯಿಂದ ಅವುಗಳ ಮೇಲೆ ನಡೆಯುತ್ತಾ ಹೋದನು. ಅವನ ಅಮ್ಮ ಹಿಂತಿರುಗಿ ಬಂದಾಗ ಏನಾಗಬಹುದೆಂದು ಯಾರಿಗೆ ಗೊತ್ತು?

ಆಯ್ಕೆ: ಯೂರೋಪ್ ಕಥೆ



Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಟಿಟ್ಟಿಬ

ಹಣ್ಣಿನ ಮರದ ಮೇಲೆ ಕುಳಿತಿದ್ದ ಟಿಟ್ಟಿಬ ಹಣ್ಣನ್ನು ಕುಕ್ಕಿ ಕುಕ್ಕಿ ತಿನ್ನುತ್ತಿತ್ತು. 'ಹಾ!' ಮರದಲ್ಲಿ ಇದ್ದ ಮುಳ್ಳೊಂದು ಚುಚ್ಚಿಕೊಂಡಿತು.



"ಈ ಮುಳ್ಳನ್ನು ಸ್ವಲ್ಪ ತೆಗೆಯುವೆಯಾ?" ಎಂದು ಅಲ್ಲಿದ್ದ ಮನುಷ್ಯನನ್ನು ಕೇಳಿತು. "ಹೋಗು! ಹೋಗು! ನಾನು ಯಾರು ಗೊತ್ತಾ? ರಾಜನ ಸೇವಕ. ರಾಜನ ಕೆಲಸ ಮಾತ್ರ ನಾನು ಮಾಡುವುದು" ಎಂದು ಟಿಟ್ಟಿಬವನ್ನು ದೂರ ಓಡಿಸಿದನು.

ಟಿಟ್ಟಿಬ ರಾಜನ ಹತ್ತಿರ ಹೋಗಿ "ನಿಮ್ಮ ಸೇವಕ ನನಗೆ ಸಹಾಯ ಮಾಡಲಿಲ್ಲ. ಅವನಿಗೆ ಶಿಕ್ಷೆ ಕೊಡಿ" ಎಂದು ದೂರು ಹೇಳಿತು. ರಾಜ ಏನನ್ನು ಹೇಳದೆ ನಗುತ್ತಾ ಇದ್ದನು.

ಟಿಟ್ಟಿಬ ಇಲಿಯ ಬಳಿಗೆ ಹಾರಿ ಹೋಯಿತು. "ಇಲಿಯೇ! ಇಲಿಯೇ! ರಾಜ ನಿದ್ರೆ ಮಾಡುವಾಗ ಮೆಲ್ಲನೆ ಕಚ್ಚಿಬಿಡು" ಎಂದಿತು. ಇಲಿ "ಆ ಕೆಲಸ ನನ್ನಿಂದ ಮಾಡಲು ಆಗುವುದಿಲ್ಲ" ಎಂದು ಹೇಳಿತು.

ಟಿಟ್ಟಿಬ ಕೋಪದಿಂದ ಅಲ್ಲಿಂದ ಬೆಕ್ಕಿನ ಹತ್ತಿರ ಹೋಗಿ "ಬೆಕ್ಕೆ! ಬೆಕ್ಕೆ! ಇಲಿಯನ್ನು ಹಿಡಿದು ತಿಂದು ಬಿಡು" ಎಂದಿತು. ಬೆಕ್ಕು "ನನಗೆ ತುಂಬ ನಿದ್ರೆ ಬರುತ್ತಿದೆ. ಈಗ ಇಲಿಯನ್ನು ಹಿಡಿಯಲು ಆಗುವುದಿಲ್ಲ" ಎಂದು ಹೇಳಿ ಕಳುಹಿಸಿತು.



ಟಿಟ್ಟಿಬ 'ಪುರ್' ಎಂದು ಹಾರಿ ಒಂದು ಕೋಲಿನ ಹತ್ತಿರ ಹೋಗಿ "ಕೋಲೇ! ಕೋಲೇ! ನನಗಾಗಿ ನೀನು ಆ ಬೆಕ್ಕನ್ನು ಹೊಡೆದು ಬಾ" ಎಂದಿತು.

ಕೋಲು "ನಾನೇಕೆ ಬೆಕ್ಕನ್ನು ಹೊಡೆಯಬೇಕು? ಅದು ನನಗೇನು ಮಾಡಿಲ್ಲ" ಎಂದಿತು.



ಟಿಟ್ಟಿಬ ನಿರಾಸೆಯಿಂದ ಬೆಂಕಿಯ ಹತ್ತಿರ ಹೋಗಿ "ಬೆಂಕಿಯೇ! ಬೆಂಕಿಯೇ! ನೀನು ಆ ಕೋಲನ್ನು ಸುಟ್ಟು ಬಿಡು" ಎಂದಿತು. "ಈ ದಿನ ನಾನು ತುಂಬಾ ಸಾಮಾನುಗಳನ್ನು ಸುಟ್ಟು ಸುಸ್ತಾಗಿರುವೆನು. ನನ್ನಿಂದ ಆಗುವುದಿಲ್ಲ. ಕ್ಷಮಿಸು" ಎಂದು ಹೇಳಿತು.



ಟಿಟ್ಟಿಬ ಕೋಪದಿಂದ ನದಿಯ ಬಳಿಗೆ ಹಾರಿತು. "ನದಿ! ನದಿ! ನೀನು ಬಂದು ಆ ಬೆಂಕಿಯನ್ನು ಆರಿಸಿ ಬಿಡು" ಎಂದಿತು. ನದಿ ಏನನ್ನು ಕೇಳಿಸಿ ಕೊಳ್ಳದಂತೆ ಶಾಂತವಾಗಿ ಹರಿಯುತ್ತಿತ್ತು.



ಟಿಟ್ಟಿಬ ಅಲ್ಲಿಂದ ಆನೆಯ ಹತ್ತಿರ ಹೋಗಿ "ಆನೆ! ಆ ನದಿಯ ನೀರನ್ನೆಲ್ಲಾ ಪೂರ್ತಿ ಕುಡಿದು ಬಿಡು" ಎಂದಿತು. "ಅಯ್ಯೋ! ಅಷ್ಟೊಂದು ನೀರನ್ನು ಕುಡಿದರೆ ನನ್ನ ಹೊಟ್ಟೆ ಒಡೆದು ಹೋಗುತ್ತದೆ" ಎಂದು ಹೇಳಿತು.

ಟಿಟ್ಟಿಬ ಹೇಳಿದ ಮಾತನ್ನು ಯಾರು ಕೇಳಿಸಿಕೊಳ್ಳಲೇ ಇಲ್ಲ. ಎಲ್ಲಿಗೆ ಹೋಗುವುದು? ಟಿಟ್ಟಿಬ ನೇರವಾಗಿ ಸೊಳ್ಳೆಗಳ ಹತ್ತಿರ ಹೋಯಿತು.

"ನೀವೆಲ್ಲರು ಹೋಗಿ ಆನೆಯನ್ನು ಕಚ್ಚಿಬಿಡಿ" ಎಂದಿತು. ಸೊಳ್ಳೆಗಳು ತಕ್ಷಣ ಒಪ್ಪಿಕೊಂಡವು.

ನಾಡಿನಲ್ಲಿರುವ ಎಲ್ಲ ಸೊಳ್ಳೆಗಳು ಒಂದು ಕಡೆ ಸೇರಿದವು. ಸೊಳ್ಳೆಗಳ ಒಂದೇ ದೊಡ್ಡ ಸೈನ್ಯವೇ ಸಿದ್ಧವಾಯಿತು.

'ಗುಂಯ್. . . ಗುಂಯ್. .' ಎಂದು ಶಬ್ದ ಮಾಡುತ್ತಾ ಅವು ಆನೆಯನ್ನು ಮುತ್ತಿಕೊಂಡವು. ಎಲ್ಲರಿಗು ಭಯವಾಯಿತು.



"ನದಿಯ ನೀರನ್ನೆಲ್ಲಾ ಪೂರ್ತಿ ಕುಡಿದು ಬಿಡುವೆನು" ಎಂದಿತು ಆನೆ.

"ಬೆಂಕಿಯನ್ನು ಆರಿಸಿ ಬಿಡುವೆನು" ಎಂದಿತು ನದಿ.


"ಕೋಲನ್ನು ಸುಟ್ಟು ಹಾಕುವೆನು" ಎಂದಿತು ಬೆಂಕಿ.

"ಬೆಕ್ಕನ್ನು ಹೊಡೆಯುವೆನು" ಎಂದಿತು ಕೋಲು.

"ಇಲಿಯನ್ನು ತಿಂದು ಬಿಡುವೆನು" ಎಂದಿತು ಬೆಕ್ಕು.

"ರಾಜನನು ಕಚ್ಚಿ ಬಿಡುವೆನು" ಎಂದಿತು ಇಲಿ.

"ಸೇವಕನಿಗೆ ಶಿಕ್ಷೆ ಕೊಡುವೆನು" ಎಂದನು ರಾಜ.



ಸೇವಕ ಭಯದಿಂದ ನಡುಗುತ್ತಾ ಟಿಟ್ಟಿಬಗೆ ಚುಚ್ಚಿದ್ದ ಮುಳ್ಳನ್ನು ತೆಗೆದನು. ಟಿಟ್ಟಿಬ ಆನಂದದಿಂದ ಹಾಡುತ್ತಾ ಹಾರಿ ಹೋಯಿತು.


ಮೂಲ: ಬಂಗಾಳಿ ಜನಪದ ಕಥೆ

ಪಿ.ಸರಸ್ವತಿ   ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ   ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಗೆಳೆಯನ ಕಂಡು ಹಿಡಿ! (20)



ಒಂದು ಕಾಡಿನಲ್ಲಿ ಒಂದು ಅಳಿಲು ಮತ್ತು ಒಂದು ಮೊಲ ಆತ್ಮೀಯ ಗೆಳೆಯರಾಗಿದ್ದರು. ಅಳಿಲು ಮಾತನಾಡುತ್ತಲೇ ಇರುವುದು. ಅದಕ್ಕೆ ಎಲ್ಲವನ್ನು ತಿಳಿಯುವ ಆಸೆ. ಮೊಲ ಮೌನವಾಗಿರುವುದು. ಅದು ಯಾವುದೇ ಪ್ರಶ್ನೆಗೆ ನೇರವಾಗಿ ಉತ್ತರ ಕೊಡುತ್ತಿರಲಿಲ್ಲ. ಒಂದು ದಿನ ಮೊಲ ಹಾಡುತ್ತಾ ಹೋಗುತ್ತಿರುವುದನ್ನು ಅಳಿಲು ನೋಡಿತು.



ಅಳಿಲು : ಈ ಮುಂಜಾನೆಯಲ್ಲಿ ಹಾಡುತ್ತಾ ಎಲ್ಲಿಗೆ ಹೋಗುತ್ತಿರುವೆ?

ಮೊಲ : ನನ್ನ ಹೊಸ ಗೆಳೆಯನ ಜೊತೆ ಆಟವಾಡಲು ಹೋಗುತ್ತಿರುವೆ.





ಅಳಿಲು : ಯಾರು ನಿನ್ನ ಹೊಸ ಗೆಳೆಯ?

ಮೊಲ : ನೀನೇ ಕಂಡು ಹಿಡಿ. ನನ್ನ ಗೆಳೆಯನಿಗೆ ನಾಲ್ಕು ಕಾಲುಗಳಿವೆ.

ಅಳಿಲು : ಅದೋ! ಅಲ್ಲಿ ನಿಂತಿರುವ ಆನೆ. ಅದೇ ತಾನೇ ನಿನ್ನ ಹೊಸ ಗೆಳೆಯ?

ಮೊಲ : ಇಲ್ಲ! ನನ್ನ ಗೆಳೆಯನಿಗೆ ಸೊಂಡಿಲು ಇಲ್ಲ.

ಅಳಿಲು : ಹಾಗಾದರೆ ಘೇಂಡಾಮೃಗ. ಅದು ತಾನೆ ನಿನ್ನ ಹೊಸ ಗೆಳೆಯ?

ಮೊಲ : ಇಲ್ಲ! ಇಲ್ಲ! ನನ್ನ ಗೆಳೆಯನ ಮೂಗಿನ ಮೇಲೆ ಕೊಂಬು ಇಲ್ಲ.

ಅಳಿಲು : ಓ! ಒಂಟೆ ತಾನೆ ನಿನ್ನ ಹೊಸ ಗೆಳೆಯ? ಅದಕ್ಕೆ ನಾಲ್ಕು ಕಾಲುಗಳು ಇದೆ. ಸೊಂಡಿಲು ಇಲ್ಲ. ಕೊಂಬು ಇಲ್ಲ.

ಮೊಲ : ನನ್ನ ಗೆಳೆಯನಿಗೆ ಒಂಟೆ ತರಹ ಬೆನ್ನು ಗೂನು ಅಲ್ಲ.



ಅಳಿಲು : ಅದೋ! ಆ ಜೀಬ್ರಾ ತಾನೆ ನಿನ್ನ ಹೊಸ ಗೆಳೆಯ?

ಮೊಲ : ಇಲ್ಲ! ನನ್ನ ಗೆಳೆಯನ ಮೈ ಮೇಲೆ ಪಟ್ಟೆಗಳಿಲ್ಲ.

ಅಳಿಲು : ಹಾಗಾದರೆ ನಿನ್ನ ಹೊಸ ಗೆಳೆಯ ಕರಡಿ ಆಗಿರಬೇಕು. ಅದರ ಮೈ ಮೇಲೆ ಪಟ್ಟೆಗಳಿಲ್ಲ.



ಮೊಲ : ಇಲ್ಲವೇ ಇಲ್ಲ! ಕರಡಿ ತರ ನನ್ನ ಗೆಳೆಯನಿಗೆ ಮೈ ತುಂಬ ದಟ್ಟವಾದ ಕೂದಲುಗಳಿಲ್ಲ.


ಅಳಿಲು : ಹೌದಾ? ಸ್ವಲ್ಪ ತಡಿ ನಿನ್ನ ಗೆಳೆಯನ ಮೈ ಮೇಲೆ ಚುಕ್ಕೆಗಳಿವೆಯೇ?


ಮೊಲ : ಹೌದು! ಇವೆ!

ಅಳಿಲು : ನಿನ್ನ ಗೆಳೆಯ ಚಿರತೆ. ನಿಜ ತಾನೇ?

ಮೊಲ : ಇಲ್ಲ! ಚಿರತೆಗೆ ಇರುವಂತೆ ಚೂಪಾದ ಉಗುರು ನನ್ನ ಗೆಳೆಯನಿಗೆ ಇಲ್ಲ.

ಅಳಿಲು : ಅನುಮಾನವೇ ಇಲ್ಲ! ನಿನ್ನ ಗೆಳೆಯ ಜಿಂಕೆ ಅಲ್ಲವೇ?





ಮೊಲ : ಇಲ್ಲವೇ ಇಲ್ಲ! ನನ್ನ ಗೆಳೆಯನಿಗೆ ಉದ್ದ ಕತ್ತು ಇದೆ.

ಅಳಿಲು : ಹಾ! ಕಂಡು ಹಿಡಿದೆ. ನಿನ್ನ ಗೆಳೆಯ ಜಿರಾಫೆ.

ಮೊಲ : ಅಬ್ಬಬ್ಬ! ಈಗಲಾದರೂ ಕಂಡು ಹಿಡಿದೆಯಲ್ಲ!
ನೀನು ನನ್ನ ಜೊತೆ ಬಾ. ನನ್ನ ಗೆಳೆಯನ ಬೆನ್ನ
ಮೇಲೆ ಹತ್ತಿ ಇಬ್ಬರು ಆಟ ಆಡೋಣ.

© ಕಥಾಝುರಿ ತಂಡ 2017
ಪಿ.ಸರಸ್ವತಿ ವಿ.ವಿಜಯಕಾಂತಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ

ಕನಸುಗಳು 21

ಹೊರಗೆ ಜೋರಾಗಿ ಮಳೆ ಬರುತ್ತಿತ್ತು. ಕಮಲ ಮನೆ ಒಳಗೆ ಕುಳಿತು ಕಿಟಕಿಯಿಂದ ಹೊರಗೆ ನೋಡುತ್ತಾ ಇದ್ದಳು. ಅವಳಿಗೆ ಮಳೆ ಎಂದರೆ ತುಂಬ ಇಷ್ಟ. ಮಳೆ ನಿಂತಿತು.

ಕಮಲ ಮತ್ತು ಅವಳ ತಂಗಿ ರಾಣಿ ಹೊರಗೆ ಓಡಿದರು. ಮನೆಯ ಮೇಲ್ಛಾವಣಿಯಿಂದ ತೊಟ್ಟಿಕ್ಕುತ್ತಿರುವ ನೀರನ್ನು ಬೊಗಸೆಯಲ್ಲಿ ಹಿಡಿದರು. ಅಲ್ಲಿ ಇಲ್ಲಿ ಗುಂಡಿಗಳಲ್ಲಿ ನಿಂತಿದ್ದ ನೀರಿನಲ್ಲಿ ಕುಣಿದಾಡಿದರು.

ಆಗ ಆಕಾಶದಲ್ಲಿ ಒಂದು ಅಂದದ ಕಾಮನಬಿಲ್ಲು ಕಾಣಿಸಿತು. ಕೆಂಪು, ನೀಲಿ, ಹಳದಿ, ನೇರಳೆ ಹೀಗೆ ಹಲವಾರು ಬಣ್ಣಗಳು. ಆಶ್ಚರ್ಯದಿಂದ ಕಮಲ ಅದನ್ನು ನೋಡುತ್ತಿದ್ದಳು. ಅವಳಿಗೆ ಕಾಮನಬಿಲ್ಲು ಒಂದು ಸೇತುವೆಯಂತೆ ಕಂಡಿತು. ಈ ಸೇತುವೆ ಎಲ್ಲಿಗೆ ಹೋಗುವುದು?



ಕಮಲ ಕಾಮನಬಿಲ್ಲಿನ ಬಳಿಗೆ ಹೋದಳು. ಸೇತುವೆ ಮೇಲೆ ನಡೆಯ ತೊಡಗಿದಳು. ಹಾಗೆ ನಡೆಯುತ್ತಾ ಆಕಾಶ ಪೂರ್ತಿ ನೋಡುತ್ತಿದ್ದಳು. "ಅಕ್ಕಾ! ಅಮ್ಮ ಕರೆಯುತ್ತಿದ್ದಾರೆ" ಎಂಬ ತಂಗಿಯ ಧ್ವನಿ ಅವಳನ್ನು ಮತ್ತೆ ಭೂಮಿಗೆ ಬರುವಂತೆ ಮಾಡಿತು.

ಅವಳ ಕನಸು ಹಾರಿ ಹೋಯಿತು. ಮಾರನೆಯ ದಿನ ಸಂಜೆ ಕಮಲ ಮತ್ತು ರಾಣಿ ಶಾಲೆಯಿಂದ ಮನೆಗೆ ಬರುತ್ತಿದ್ದರು. ಆಕಾಶದಲ್ಲಿ ಹಾರುತ್ತಿರುವ ಕೊಕ್ಕರೆಯನ್ನು ಕಮಲ ನೋಡಿದಳು. ಒಂದು ಕ್ಷಣ ಕಣ್ಣು ಮುಚ್ಚಿದಳು. ಕನಸಿನಲ್ಲಿ ತೇಲುತ್ತಾ ಹೋದಳು. ಹಕ್ಕಿಯಂತೆ ಹಾರುತ್ತಾ ಕಾಡು, ಬೆಟ್ಟ, ನಗರ, ಪಟ್ಟಣ ಎಲ್ಲ ದಾಟಿದಳು. ಹಲವು ಆಶ್ಚರ್ಯಕರವಾದ ದೃಶ್ಯಗಳನ್ನು ನೋಡಿದಳು.

ಅವಳ ಊರಿನಲ್ಲಿ ಇದ್ದ ಹಿಂದಿನ ಕಾಲದ ಹಲವು ಹಳೆಯ ಕಲ್ಲಿನ ದೇವಾಲಯಗಳನ್ನು ನೋಡಿದಳು. ಕಣ್ಣು ಮಿಟುಕಿಸದಂತೆ ಅವುಗಳನ್ನೇ ನೋಡುತ್ತಾ ಕನಸಿನ ಲೋಕದಲ್ಲಿ ತೇಲ ತೊಡಗಿದಳು.





ತಾನು ಒಬ್ಬಳು ಶಿಲೆಯಲ್ಲಿ ವಿಗ್ರಹ ಕೆತ್ತುವ ಶಿಲ್ಪಿ ಆಗುವೆನೆಂದು ಆಗಾಗ ತಂಗಿಗೆ ಹೇಳುತ್ತಿದ್ದಳು.

ಕಮಲಳ ಮನೆಯ ಹತ್ತಿರ ಒಂದು ಕೊಳ ಇತ್ತು. ಕೊಳದ ಮೆಟ್ಟಿಲುಗಳ ಮೇಲೆ ಕುಳಿತು ನೀರಿನಲ್ಲಿ ಈಜಾಡುವ ಮೀನುಗಳನ್ನು ನೋಡುವಳು. ಆಗ ಅವಳು ಮೀನಾಗಿ ಬಿಡುವಳು. ಮೀನಾಗಿ ಸಮುದ್ರಕ್ಕೆ ಹೋಗುವಳು. ಅಲ್ಲಿ ಈಜಾಡುತ್ತಾ ಆಳಕ್ಕೆ ಹೋಗುವಳು.



"ನೀನು ಏನು ಯೋಚಿಸುತ್ತಿರುವೆ? ನನಗು ಹೇಳು" ಎಂದು ರಾಣಿ ಅವಳನ್ನು ಒತ್ತಾಯ ಮಾಡಿದಾಗ, ತನ್ನ ಕನಸುಗಳ ಬಗ್ಗೆ ಕಮಲ ವಿವರಿಸುವಳು. ರಾಣಿಗು ಕನಸುಗಳು ಸವಿಯಾಗಿ ಇರುವವು ಎನಿಸುವುದು.

"ನೀನು ಹೋಗುವ ಜಾಗಗಳಿಗೆಲ್ಲ ನನ್ನನ್ನು ಕರೆದುಕೊಂಡು ಹೋಗುವೆಯಾ?" ಎಂದು ಕೇಳಿದಾಗ "ಓ ! ಖಂಡಿತವಾಗಿ" ಎಂದಳು ಕಮಲ.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಏಕೆ ಈ ಓಟ?

ಈ ಭೂಮಿ ಹುಟ್ಟಿದಾಗ ನಾಯಿ, ಬೆಕ್ಕು, ಇಲಿ ಈ ಮೂರು ಪ್ರಾಣಿಗಳು ಒಟ್ಟಾಗಿ ಇದ್ದವು. ಅವರವರ ಕೆಲಸ ಅವು ಮಾಡಿಕೊಳ್ಳುತ್ತಿದ್ದವು.


ಈ ಸಹಕಾರ ಯಾವಾಗಲು ಹೀಗೆಯೇ ಇರಬೇಕೆಂದು ಒಪ್ಪಂದ ಮಾಡಿಕೊಂಡಿದ್ದವು. ಒಪ್ಪಂದದ ಪ್ರಕಾರ ನಾಯಿ ಮನೆಯ ಹೊರಗಿನ ಕೆಲಸವನ್ನು, ಬೆಕ್ಕು ಮತ್ತು ಇಲಿ ಮನೆಯ ಒಳಗಿನ ಕೆಲಸವನ್ನು ಮಾಡಿಕೊಂಡಿದ್ದವು. ಆ ಒಪ್ಪಂದವನ್ನು ಬೆಕ್ಕು ಅಟ್ಟದ ಮೇಲೆ ಭದ್ರವಾಗಿ ಇಟ್ಟಿತ್ತು.




ಹೀಗೆಯೇ ಕೆಲವು ದಿನಗಳು ಕಳೆದವು. ನಾಯಿಗೆ ಹೊರಗಿನ ಕೆಲಸ ಬೇಸರ ತಂದಿತು. ಅದು "ನಾನು ಮಾತ್ರ ಚಳಿ ಮಳೆ ಗಾಳಿ ಎನ್ನದೆ ಹೊರಗೆ ಆಳಿನಂತೆ ಕೆಲಸ ಮಾಡುತ್ತಿದ್ದೇನೆ. ನೀನು ಮತ್ತು ಇಲಿ ಇಬ್ಬರು ಮನೆ ಒಳಗೆ ಬೆಚ್ಚಗೆ ಇರುವಿರಿ" ಎಂದು ಕೋಪದಿಂದ ಬೆಕ್ಕಿನ ಬಳಿ ಹೇಳಿಕೊಂಡಿತು.

ಅದಕ್ಕೆ ಬೆಕ್ಕು "ನಾವು ಮಾಡಿಕೊಂಡಿರುವ ಒಪ್ಪಂದ ನಿನಗೆ ಗೊತ್ತಲ್ಲವೇ?" ಎಂದು ಕೇಳಿತು.

"ಎಲ್ಲಿ? ಆ ಒಪ್ಪಂದವನ್ನು ತಂದು ತೋರಿಸು. ಇನ್ನೊಮ್ಮೆ ಅದನ್ನು ನೋಡೋಣ" ಎಂದಿತು ನಾಯಿ.







ಬೆಕ್ಕು ಒಪ್ಪಂದ ತರಲು ಅಟ್ಟ ಹತ್ತಿತು. ಅಯ್ಯಯ್ಯೋ! ಅಲ್ಲಿ ಒಪ್ಪಂದದ ಕಾಗದಗಳನ್ನು ಇಲಿ ಹರಿದು ಚೂರು ಚೂರು ಮಾಡಿ, ಹಾಸಿಗೆಯಂತೆ ಹಾಸಿ, ಅದರ ಮೇಲೆ ಮಲಗಿತ್ತು!

ಬೆಕ್ಕಿಗೆ ಭಯಂಕರ ಕೋಪ ಬಂದಿತು. ಇಲಿಯನ್ನು ಅಟ್ಟಿಸಿಕೊಂಡು ಹೋಯಿತು. ಅಟ್ಟಾಡಿಸಿ ಸುಸ್ತಾಗಿ ಕೆಳಗೆ ಇಳಿಯಿತು.

ನಾಯಿ “ಒಪ್ಪಂದ ಎಲ್ಲಿ?” ಎಂದು ಕೇಳಿತು. ಬೆಕ್ಕಿಗೆ ಒಪ್ಪಂದ ತೋರಿಸಲು ಆಗಲಿಲ್ಲ. ನಾಯಿ ಕೋಪದಿಂದ ಬೆಕ್ಕನ್ನು ನೋಡಿ 'ಗುರ್ರ್' ಎಂದಿತು. ಅದನ್ನು ಅಟ್ಟಿಸಿಕೊಂಡು ಹೋಯಿತು.





ಅಂದಿನಿಂದ ಬೆಕ್ಕನ್ನು ನೋಡಿದಾಗಲೆಲ್ಲ ಒಪ್ಪಂದವನ್ನು ಕೇಳಿ ನಾಯಿ ಅದನ್ನು ಅಟ್ಟಿಸಿಕೊಂಡು ಹೋಗುವುದು. ಇಲಿ ಮಾಡಿದ ಕೆಲಸವನ್ನು ನೆನೆದು ಬೆಕ್ಕು ಇಲಿಯನ್ನು ಅಟ್ಟಿಸಿಕೊಂಡು ಹೋಗುವುದು. ಈ ರೀತಿ ಒಂದನ್ನೊಂದು ಅಟ್ಟಿಸಿಕೊಂಡು ಓಡುತ್ತಲೇ ಇವೆ.

ಮೂಲ: ರೊಮೇನಿಯಾ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಉಪವಾಸ

ಕಾಡಿನಲ್ಲಿ ಬೆಳಗಿನ ಸಮಯ. ದೊಡ್ಡ ಆಲದ ಮರದ ಕೆಳಗೆ ಕೋತಿಗಳ ಗುಂಪೊಂದು ಕುಳಿತಿತ್ತು. ಏನಾಶ್ಚರ್ಯ! ಆ ಕೋತಿಗಳೆಲ್ಲ ಒಂದು ಜಾಗದಲ್ಲಿ ಸುಮ್ಮನೆ ಕುಳಿತಿವೆ!

ಹೌದು! ಆ ಕೋತಿಗಳಿಗೆಲ್ಲಾ ಇಂದು ಉಪವಾಸದ ದಿನ. ಉಪವಾಸದ ಆರಂಭ. ಕೋತಿಗಳು ಒಂದರ ಮುಖ ಒಂದು ನೋಡುತ್ತಾ ಮೌನವಾಗಿ ಕುಳಿತಿವೆ.

ಆಗ ವಯಸ್ಸಾಗಿದ್ದ ನಾಯಕ ಕೋತಿ "ಸಂಜೆ ಊಟಕ್ಕೆ ಈಗಲೆ ಸಿದ್ಧತೆ ಮಾಡಿಕೊಳ್ಳಬೇಕು" ಎಂದು ಹೇಳಿತು. ಎಲ್ಲಾ ಕೋತಿಗಳು ತಲೆಯಾಡಿಸಿದವು.



ಮರುಕ್ಷಣದಲ್ಲೇ ಚಿಕ್ಕ ಕೋತಿಗಳು ಓಡಿದವು. ರುಚಿಯಾದ ದೊಡ್ಡ ದೊಡ್ಡ ಬಾಳೆಗೊನೆಗಳನ್ನು ತಂದವು.

ನಾಯಕ ಕೋತಿಯ ಹೆಂಡತಿ “ಈ ಹಣ್ಣುಗಳನ್ನೆಲ್ಲಾ ಈಗಲೇ ಹಂಚಿ ಬಿಡಬಹುದಲ್ಲ? ಉಪವಾಸ ಮುಗಿದ ನಂತರ ಹಂಚುವುದಕ್ಕಾಗಿ ಸಮಯ ಕಳೆಯುವುದು ಬೇಡ. ಜೊತೆಗೆ ಸಂಜೆ ಬಹಳ ಹಸಿವಾಗಿರುತ್ತದೆ” ಎಂದು ಹೇಳಿತು.

ಎಲ್ಲಾ ಕೋತಿಗಳು ಇದಕ್ಕೆ ಒಪ್ಪಿದವು. ಎಲ್ಲರಿಗು ಅವರವರ ಪಾಲು ಸಿಕ್ಕಿತು. ಎಲ್ಲವು ಅವರವರ ಪಾಲನ್ನು ತಮ್ಮ ಪಕ್ಕದಲ್ಲೇ ಸುರಕ್ಷಿತವಾಗಿ ಇಟ್ಟುಕೊಂಡವು.

ಆಗ ಪುಟ್ಟ ಕೋತಿ “ಒಂದೇ ಒಂದು ಬಾಳೆಹಣ್ಣಿನ ಸಿಪ್ಪೆ ಸುಲಿದು ಕೈಯಲ್ಲಿ ಹಿಡಿದುಕೊಳ್ಳಬಹುದೇ?” ಎಂದು ಕೇಳಿತು.






“ಹೌದೌದು. ಇದನ್ನು ನಾನು ಒಪ್ಪುವೆ” ಎಂದು ಡುಮ್ಮ ಕೋತಿ ಕಿರುಚಿತು. 'ಸುಲಿದ ಬಾಳೆಹಣ್ಣುಗಳನ್ನು ತಿನ್ನದೆ ಹಾಗೆ ಎಷ್ಟು ಹೊತ್ತು ನೋಡುತ್ತಿರುವುದು?' ಅದೇ ಅವರ ಯೋಚನೆ.

“ಸರಿಸರಿ! ಹಣ್ಣನ್ನು ಸುಲಿದು ಇಟ್ಟುಕೊಳ್ಳೋಣ. ಆದರೆ ಸಂಜೆವರೆಗು ತಿನ್ನುವಂತಿಲ್ಲ” ಎಂದು ನಾಯಕ ಕೋತಿ ಆದೇಶ ಮಾಡಿತು. “ಅಹಾ! ಇದು ಒಳ್ಳೆಯ ಯೋಚನೆ” ಎಂದು ಎಲ್ಲಾ ಕೋತಿಗಳು ತಮ್ಮ ತಮ್ಮ ಪಾಲಿನ ಹಣ್ಣನ್ನು ಸುಲಿದು ಸಿದ್ಧವಾಗಿ ಇಟ್ಟುಕೊಂಡವು.

ಆ ಗುಂಪಿನಲ್ಲಿದ್ದ ಚಿಕ್ಕ ಮರಿಯೊಂದು ತನ್ನ ಅಪ್ಪನ ಕಿವಿಯಲ್ಲಿ “ಇದನ್ನು ನಾನು ಬಾಯಲ್ಲಿ ಇಟ್ಟುಕೊಳ್ಳಲೇ? ಸಂಜೆಯವರೆಗು ಸತ್ಯವಾಗಿ ತಿನ್ನುವುದಿಲ್ಲ” ಎಂದು ಗುಟ್ಟಾಗಿ ಹೇಳಿತು. ಅಪ್ಪ ಕೋತಿ ಉಳಿದ ಕೋತಿಗಳನ್ನೆಲ್ಲಾ ನೋಡಿತು. ಅದಕ್ಕೆ ಉಪವಾಸ ಇಷ್ಟ ಇರಲಿಲ್ಲ. ಹೆಂಡತಿಯ ಒತ್ತಾಯದಿಂದ ಉಪವಾಸಕ್ಕೆ ಒಪ್ಪಿಕೊಂಡಿತ್ತು.



“ನಾವೆಲ್ಲರು ಹಣ್ಣನ್ನು ಬಾಯಲ್ಲಿ ಇಟ್ಟುಕೊಳ್ಳಬಾರದೇಕೆ? ಸಂಜೆ ಉಪವಾಸ ಮುಗಿದ ತಕ್ಷಣ ತಿನ್ನಲು ಸುಲಭವಾಗುತ್ತದೆ” ಎಂದಿತು.

ಮರುಕ್ಷಣದಲ್ಲೇ ಎಲ್ಲಾ ಕೋತಿಗಳ ಬಾಯಲ್ಲಿ ಸುಲಿದ ಬಾಳೆಹಣ್ಣುಗಳಿದ್ದವು. ಅವೆಲ್ಲ ಒಂದನ್ನೊಂದು ನೋಡುತ್ತಾ ಧರ್ಮ ಸಂಕಟದಲ್ಲಿ ಸಿಲುಕಿದವು. ಮುಂದೇನು?

ಕಣ್ಣು ಮಿಟುಕಿಸುವುದರ ಒಳಗಾಗಿ ಹಣ್ಣು ಗಂಟಲಿನಿಂದ ಮಾಯ!

ಅಲ್ಲಿಗೆ ಉಪವಾಸ ಸುಖಾಂತ್ಯವಾಯಿತು.

ಕರ್ನಾಟಕ ಜನಪದ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು



ಕಂಡು ಹಿಡಿಯೋಣ ಬಾ! 24

ನಾಲ್ಕು ಒನಕೆ ಕುಟ್ಟಿದಂತೆ ಬರುವುದು
ಎರಡು ಮೊರ ಆಡಿಸಿದಂತೆ ಬರುವುದು
ಚಿಕ್ಕ ಬಾಲ ಬೀಸುತ್ತಾ ಬರುವುದು
ಮೆರವಣಿಗೆಯಲ್ಲಿ ಮುಂದಿರುವುದು
ಅದು ಯಾರು?

ಅಂದದ ಗರಿ ಚಂದದ ನಾಟ್ಯ
ನೂರು ಕಣ್ಣು ಅದರದು – **ಅದು ಯಾರು?**



ಭಾರವನ್ನು ಹೊರುವುದು
ಹಿಂದೆ ಇದ್ದರೆ ಒದೆಯುವುದು
ಅದು ಯಾರು?

ನಂಬಿದವರನ್ನು ಕೈ ಬಿಡದು
ಗೆಳೆತನಕ್ಕೆ ಪ್ರಾಣ ಕೊಡುವುದು
ಅದು ಯಾರು?



ಬಚ್ಚಿಟ್ಟುಕೊಂಡು ಬರುವುದು ಕಳ್ಳನಲ್ಲ
ಜಿಗಿದು ಹಾರಿ ಹಿಡಿಯುವುದು ಪೊಲೀಸ್ ಅಲ್ಲ
ಮನೆಯಲ್ಲೇ ಇರುವುದು ಮಗುವಲ್ಲ – **ಅದು ಯಾರು?**

ಕಾಲಿನ ಉದ್ದ ನಾಲ್ಕು ಅಡಿ
ಕತ್ತಿನ ಉದ್ದ ಆರು ಅಡಿ
ಬಾಲ ಅಳೆದರೆ ಒಂದು ಮೊಳ
ಕಾಡಿನಲ್ಲೇ ಬದುಕಿರುವ – **ಅದು ಯಾರು?**

ಹಳದಿ ಗಡ್ಡ ಬಿಟ್ಟಿರುವುದು
ಕಾಡಿನ ರಾಜನಂತಿರುವುದು
ಎದುರಿಗೆ ಬಂದರೆ ಹೆದರುವರು – **ಅದು ಯಾರು?**

ಪುಟಪುಟನೆ ಓಡುವುದು
ಮರವನ್ನು ಏರಿ ಜಿಗಿಯುವುದು
ಬೆನ್ನ ಮೇಲೆ ಮೂರು ಗೆರೆ ಇರುವುದು – **ಅದು ಯಾರು?**

ನೀರಲ್ಲಿ ಇರಲು ಖುಷಿ ಪಡುವುದು
ನೆಲದಲ್ಲಿ ಇರಲು ಕಷ್ಟ ಪಡುವುದು – **ಅದು ಯಾರು?**

ಬೆನ್ನು ಗೂನಾಗಿರುವುದು
ಕತ್ತು ಉದ್ದವಾಗಿರುವುದು
ಮರಳಿನಲ್ಲಿ ನಡೆಯುವುದು – **ಅದು ಯಾರು?**

ಎಂಟು ಕಾಲಿರುವುದು
ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ನಡೆಯುವುದು
ಮುಂದೆ ನಡೆಯಲಾರದ್ದು – **ಅದು ಏನು?**

ಮೊಟ್ಟೆಯಿಂದ ಬಂದದ್ದು ಹುಟ್ಟಿದಾಗ ಬಾಲ ಇರುವುದು
ದಪ್ಪವಾದಾಗ ಕಾಲು ಬರುವುದು ನೆಲದಲ್ಲಿ ಜಿಗಿದಾಡುವುದು
ಹುಳುಗಳ ಬೆನ್ನಟ್ಟಿ ಹಿಡಿಯುವುದು 'ವಟರ್ ವಟರ್' ಎನ್ನುವುದು
ಅದು ಯಾರು?

ನೀರಲ್ಲಿ ನೆಲದಲ್ಲಿ ಇರುವುದು ಕಪ್ಪೆ ಅಲ್ಲ
ಚಾಚಿದ ತಲೆ ಒಳಗೆ ಎಳೆವುದು ಬಸವನಹುಳು ಅಲ್ಲ
ಬೆನ್ನ ಮೇಲೆ ಚಿಪ್ಪು ಹೊತ್ತು ಜರುಗುವುದು
ಅದು ಯಾರು?

ಕತ್ತಲಲ್ಲಿ ಹಾರಾಡುವುದು
ಮರಿಗಳಿಗೆ ಹಾಲು ಕೊಡುವುದು
ತಲೆ ಕೆಳಗಾಗಿ ನೇತಾಡುವುದು
ಖುಷಿಯಿಂದ ಹಣ್ಣು ತಿನ್ನುವುದು – **ಅದು ಯಾರು?**


ಕಾಡಿನಲ್ಲಿ ಇರುವುದು
ಮೈ ತುಂಬಾ ಕೂದಲಿರುವುದು
ಜೇನನ್ನು ಬಯಸಿ ತಿನ್ನುವುದು – **ಅದು ಯಾರು?**

ಮರಗಳ ಹತ್ತಿ ಇಳಿಯುವುದು
ಕೊಂಬೆಗಳಲ್ಲಿ ಉಯ್ಯಾಲೆ ಆಡುವುದು
ನೋಡಿದರೆ 'ಗುರ್' ಎನ್ನುವುದು – **ಅದು ಯಾರು?**

ಬೀಳದಂತೆ ಗೋಡೆ ಹಿಡಿಯುವುದು
ಕ್ರಿಮಿಕೀಟಗಳ ಹಿಡಿದು ತಿನ್ನುವುದು
ಪ್ರಾಣ ಕಾಪಾಡಿಕೊಳ್ಳಲು ಬಾಲ ಕೊಡುವುದು
ಅದು ಯಾರು?



ಸಿಂಹ, ಅಳಿಲು, ನವಿಲು, ಬೆಕ್ಕು, ಕರಡಿ
ಕತ್ತೆ, ಕೋತಿ, ಏಡಿಕಾಯಿ, ನಾಯಿ
ಆನೆ, ಹಲ್ಲಿ, ಜಿರಾಫೆ, ಕಪ್ಪೆ, ಮೀನು
ಬಾವಲಿ, ಒಂಟೆ, ಆಮೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಹರಾಜು


ನಸ್ರುದ್ದೀನ್ ಒಂದು ಕತ್ತೆಯನ್ನು ಸಾಕುತ್ತಿದ್ದರು. ಅದು ಯಾವಾಗಲು ತಿನ್ನುತ್ತಲೇ ಇರುವುದು. ಆದರೆ ಕೆಲಸವನ್ನು ಮಾತ್ರ ಮಾಡುತ್ತಿರಲಿಲ್ಲ.

ನಸ್ರುದ್ದೀನ್‌ಗೆ ಆ ಕತ್ತೆಯನ್ನು ಕಂಡರೆ ಇಷ್ಟವಿರಲಿಲ್ಲ. ಹೇಗಾದರೂ ಮಾಡಿ ಅದನ್ನು ಮಾರಾಟ ಮಾಡಬೇಕೆಂದು ನಿರ್ಧರಿಸಿದರು.



ಒಂದು ದಿನ ಬೆಳಗ್ಗೆ ಕತ್ತೆಯನ್ನು ಸಂತೆಗೆ ಕರೆದುಕೊಂಡು ಹೋದರು. ಸಂಜೆ ಖುಷಿಯಿಂದ ಜೋರಾಗಿ ನಗುತ್ತ ಮನೆಗೆ ಬಂದರು. "ಈ ದಿನ ನಾನು ಏನು ಮಾಡಿದೆ ಎಂದು ಗೊತ್ತಾ?" ಹೆಂಡತಿಯ ಬಳಿ ಹೇಳತೊಡಗಿದರು.

"ಬೆಳಗ್ಗೆ ನಾನು ಸಂತೆಗೆ ಹೋದೆ ಅಲ್ಲವೇ? ಅಲ್ಲಿ ಹರಾಜು ಮಾಡುವವನಿಗೆ ನನ್ನ ಕತ್ತೆಯನ್ನು ಕೊಟ್ಟೆ. ಒಳ್ಳೆ ಬೆಲೆಗೆ ಮಾರಿ ಕೊಡಲು ಹೇಳಿದೆ. ಹರಾಜಿನವನು ಕತ್ತೆಯನ್ನು ಹೊಗಳ ತೊಡಗಿದನು.



'ಈ ರೀತಿಯಾದ ವಿಶೇಷ ಕತ್ತೆಯನ್ನು ಎಲ್ಲಿಯಾದರು ನೋಡಿರುವಿರಾ? ಬನ್ನಿ ನೋಡಿ!' ಎಂದು ಎಲ್ಲರನ್ನು ಕರೆಯ ತೊಡಗಿದನು. ಅದಕ್ಕೆ ಒಬ್ಬ 'ಮೂರು ಚಿನ್ನದ ನಾಣ್ಯಗಳನ್ನು ಕೊಡುವೆನು' ಎಂದು ಹೇಳಿದನು. ಹರಾಜಿನವನು ಕೊಡಲಿಲ್ಲ. 'ಕತ್ತೆಯ ಉದ್ದ ಕಿವಿ ನೋಡಿ, ಬಲವಾದ ಕಾಲು ನೋಡಿ, ಗಟ್ಟಿ ಹಲ್ಲು ನೋಡಿ, ಎಳೆಯ ವಯಸ್ಸಿನ ಕತ್ತೆ ಇದು' ಎಂದೆಲ್ಲ ಹೇಳಿದ.



ಸಮಯ ಸರಿದಂತೆ ಕತ್ತೆಗೆ ಹತ್ತು ಚಿನ್ನದ ನಾಣ್ಯ, ಹದಿನೈದು ಚಿನ್ನದ ನಾಣ್ಯ ಎಂದು ಒಬ್ಬರಿಗೊಬ್ಬರು ಪೈಪೋಟಿ ಮಾಡಿ ಕೇಳಿದರು. ಕತ್ತೆಯ ಬೆಲೆ ಏರುತ್ತಲೇ ಹೋಯಿತು. ಕೊನೆಗೆ..." ಎಂದು ನಸ್ರುದ್ದೀನ್ ಹೇಳುತ್ತಿರುವಾಗಲೇ ಮನೆ ಬಾಗಿಲಲ್ಲಿ ಕತ್ತೆಯ ಧ್ವನಿ ಕೇಳಿತು.

ನಸ್ರುದ್ದೀನ್ ಹೆಂಡತಿಗೆ 'ಶಾಕ್!' ಆಯಿತು. "ಕೊನೆಗೆ ಏನಾಯಿತು? ಬೇಗ ಹೇಳಿ" ಎಂದಳು.

"ಅಷ್ಟು ಅದ್ಭುತವಾದ ಕತ್ತೆಯನ್ನು ಏಕೆ ಮಾರಬೇಕು ಎಂದು ನಾನೇ ಅದಕ್ಕೆ ಮೂವತ್ತು ಚಿನ್ನದ ನಾಣ್ಯವನ್ನು ಕೊಟ್ಟು ಕೊಂಡು ಕೊಂಡು ಬಂದೆ" ಎಂದು ಹೆಮ್ಮೆಯಿಂದ ಹೇಳಿದರು.




Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಜಾಲಿಮರದ ಆಸೆ

ರಸ್ತೆ ಪಕ್ಕದಲ್ಲಿ ಒಂದು ಜಾಲಿಮರ. ಅದರ ಮೈ ತುಂಬಾ ಮುಳ್ಳುಗಳು. 'ನನ್ನನ್ನು ಕಂಡರೆ ಯಾರು ಇಷ್ಟ ಪಡುವುದಿಲ್ಲ. ಮುಳ್ಳು ಇಲ್ಲದ ಮರಗಳು ಎಷ್ಟು ಸುಂದರವಾಗಿವೆ!' ಎಂದು ಜಾಲಿಮರ ತುಂಬಾ ಬೇಜಾರು ಮಾಡಿಕೊಂಡಿತು.

ಈ ರೀತಿ ಯೋಚಿಸುತ್ತಿರುವಾಗಲೇ ಜಾಲಿಮರದಲ್ಲಿನ ಮುಳ್ಳುಗಳೆಲ್ಲ ಮಾಯವಾದವು. ಹಚ್ಚ ಹಸುರಿನ ದೊಡ್ಡ ದೊಡ್ಡ ಎಲೆಗಳು ಮರದಲ್ಲಿ ಕಾಣಿಸಿಕೊಂಡವು. ಅದನ್ನು ನೋಡಿ ಮರ ಸಂತೋಷದಿಂದ ಉಬ್ಬಿತು.







ಆದರೆ ಈ ಸಂತೋಷ ಇದ್ದದ್ದು ಸ್ವಲ್ಪ ಸಮಯ ಮಾತ್ರ. ಎಲ್ಲಿಂದಲೋ ಂದ ಮೇಕೆ ಜಾಲಿಮರದ ಎಲೆಗಳನ್ನು ತಿನ್ನತೊಡಗಿತು.

'ಅಯ್ಯೋ! ಮೇಕೆ ನನ್ನ ಎಲೆಗಳನ್ನು ತಿನ್ನುತ್ತಿದೆ. ಏನು ಮಾಡುವುದು? ನನ್ನ ಲೆಗಳು ಚಿನ್ನದ ಎಲೆಗಳಾಗಿದ್ದರೆ ಚೆನ್ನಾಗಿತ್ತು' ಎಂದುಕೊಂಡಿತು. ನಾಶ್ಚರ್ಯ! ಜಾಲಿಮರದ ಎಲೆಗಳೆಲ್ಲ ಚಿನ್ನದ ಎಲೆಗಳಾಗಿ ಬದಲಾದವು.

ಆಗ ಆ ಕಡೆಗೆ ಒಬ್ಬ ಮನುಷ್ಯ ಬಂದನು. ಚಿನ್ನದ ಎಲೆಗಳು ವನ ಕಣ್ಣುಗಳನ್ನು ಸೆಳೆದವು.





“ಆಹಾ! ಏನು ಅದ್ಭುತ!
ನನ್ನದು ಎಂತಹ ಅದೃಷ್ಟ!”
ಎಂದು ಹೇಳುತ್ತಾ ಚಿನ್ನದ
ಎಲೆಗಳನ್ನು ಒಂದೂ ಬಿಡದಂತೆ ಕೀಳಲು ಆರಂಭಿಸಿದನು. ಜಾಲಿಮರ ದುಃಖದಿಂದ ನೊಂದುಕೊಂಡಿತು.

'ಇದೇನು ಕಷ್ಟ ನನಗೆ! ಮನುಷ್ಯರು ಚಿನ್ನದ ಎಲೆಗಳನ್ನು ಬಿಡುವುದಿಲ್ಲ. ನನ್ನ ಎಲೆಗಳು ಗಾಜಿನ ಎಲೆಗಳಾಗಿ ಬದಲಾದರೆ ಎಷ್ಟು ಚೆನ್ನಾಗಿರುವುದು?'



ಂದು ಅಂದು ಕೊಳ್ಳುತ್ತಿರುವಾಗಲೇ ಜಾಲಿಮರದಲ್ಲಿ ಗಾಜಿನ ಲೆಗಳು ಕಾಣಿಸಿಕೊಂಡವು.

ಜಾಲಿಮರಕ್ಕೆ ಬಹಳ ಆನಂದವಾಯಿತು. ಸ್ವಲ್ಪ ಸಮಯ ಕಳೆಯಿತು. ೋರಾಗಿ ಗಾಳಿ ಬೀಸಲು ಆರಂಭಿಸಿತು. ಗಾಜಿನ ಎಲೆಗಳು ಂದಕ್ಕೊಂದು ತಿಕ್ಕಾಡಿ ಒಡೆದು ಹೋದವು.

"ಅಯ್ಯೋ ದೇವರೆ! ಯಾವುದರಿಂದಲು ನನಗೆ ನೆಮ್ಮದಿಯೇ ಇಲ್ಲವೆ? ೇಕೆಗಳು ತಿನ್ನಲಾಗದ, ಮನುಷ್ಯರು ಕೀಳಲಾಗದ, ಗಾಳಿಗೆ ಒಡೆಯಲಾಗದ ಲೆಗಳ ಮರವಾಗಿ ನಾನು ಇರಲು ಸಾಧ್ಯವಿಲ್ಲವೇ?" ಎಂದು ದುಃಖದಿಂದ ಾಲಿಮರ ಹಲುಬಿತು.

ಆಗ ಜಾಲಿಮರಕ್ಕೆ ಅದರ ಮುಳ್ಳುಗಳು ಮತ್ತೆ ಬಂದವು. ಂದಿನಿಂದ ಯಾವತ್ತೂ ಸಹ ಜಾಲಿಮರ ಬೇಜಾರು ಮಾಡಿಕೊಳ್ಳಲಿಲ್ಲ.

ಮೂಲ: ಭಾರತದ ಜನಪದ ಕಥೆ






(27) ಸಿಂಹ ಮತ್ತು ಚಿಕ್ಕ ಮೊಲ

ಕಾಡಿನ ರಾಜನಾದ ಸಿಂಹಕ್ಕೆ ವಯಸ್ಸಾಗಿತ್ತು. ತನಗೆ ಬೇಕಾದ ಪ್ರಾಣಿಯನ್ನು ಹುಡುಕಿ ಬೇಟೆ ಆಡುವ ಶಕ್ತಿ ಅದಕ್ಕೆ ಇರಲಿಲ್ಲ.

ಒಂದು ದಿನ ಸಿಂಹ ಎಲ್ಲ ಪ್ರಾಣಿಗಳನ್ನು ತನ್ನ ಬಳಿಗೆ ಕರೆಯಿತು. "ಗೆಳೆಯರೇ, ನಾನು ಬೇಟೆ ಆಡಲು ಬಂದಾಗ ನೀವೆಲ್ಲ ಹೆದರಿ ದೂರ ಓಡುವಿರಿ. ಆದರೆ ನಾನು ನಿಮ್ಮಲ್ಲಿ ಒಬ್ಬನನ್ನು ಮಾತ್ರ ತಿನ್ನುವುದು. ಇನ್ನು ಮುಂದೆ ಈ ರೀತಿ ಇರುವುದು ಬೇಡ. ಪ್ರತಿದಿನ ನಿಮ್ಮಲ್ಲಿ ಒಬ್ಬರು ನನಗೆ ಆಹಾರವಾಗಿ ಬನ್ನಿ" ಎಂದು ಹೇಳಿತು.



'ಇದು ಉತ್ತಮವಾದ ವ್ಯವಸ್ಥೆ' ಎಂದು ಪ್ರಾಣಿಗಳೆಲ್ಲ ಆನಂದಪಟ್ಟವು. ಮಾರನೆಯ ದಿನ ಆಹಾರವಾಗಿ ಹೋಗುವ ಪ್ರಾಣಿಯನ್ನು ಹಿಂದಿನ ದಿನವೇ ಆಯ್ಕೆ ಮಾಡುತ್ತಿದ್ದವು. ಉಳಿದ ಪ್ರಾಣಿಗಳೆಲ್ಲ ಭಯವಿಲ್ಲದೆ ಕಾಡಿನಲ್ಲೆಲ್ಲಾ ತಿರುಗಾಡಿಕೊಂಡಿದ್ದವು. ಈ ರೀತಿ ಹಲವು ದಿನಗಳು ಕಳೆದವು.

ಒಂದು ದಿನ ಚಿಕ್ಕ ಮೊಲದ ಸರದಿ ಬಂದಿತು. 'ನಾನಾ ಸಿಂಹಕ್ಕೆ ಆಹಾರವಾಗುವುದು? ಅದನ್ನು ಈ ಕಾಡಿನಿಂದಲೇ ಓಡಿಸಿ ಬಿಡುವೆನು!' ಎಂದು ಮೊಲ ಒಂದು ಉಪಾಯ ಮಾಡಿತು. ಸಿಂಹದ ಗುಹೆಯ ಕಡೆಗೆ ನಿಧಾನವಾಗಿ ನಡೆಯತೊಡಗಿತು.

'ಗೊತ್ತಾದ ಸಮಯ ದಾಟಿ ತುಂಬಾ ಹೊತ್ತಾದರು ತನಗೆ ಆಹಾರ ಬರಲಿಲ್ಲ' ಎಂದು ಸಿಂಹ ಕೋಪ ಮಾಡಿಕೊಂಡಿತ್ತು. ಆಗ ಮೊಲ ಮೆಲ್ಲನೆ ಅಲ್ಲಿಗೆ ಬಂದಿತು. ಅದನ್ನು ನೋಡಿದ ಸಿಂಹ "ನೀನೇನಾ ಈ ದಿನದ ನನ್ನ ಆಹಾರ? ಏಕಿಷ್ಟು ತಡವಾಯಿತು?" ಎಂದು ಕೇಳಿತು.



ಆಗ ಮೊಲ "ರಾಜರೇ! ನಾನು ಮನೆಯಿಂದ ಆಗಲೇ ಹೊರಟೆನು. ದಾರಿಯಲ್ಲಿ ಬೇರೆ ಸಿಂಹ ನೋಡಿದೆ. ಅದು ನನ್ನನ್ನು ತಿನ್ನಲು ಬಂದಿತು. ನಾನು ಅದಕ್ಕೆ 'ನನ್ನ ರಾಜರ ಬಳಿಗೆ ಹೋಗುತ್ತಿರುವೆ' ಎಂದು ಹೇಳಿದೆನು. ಆ ಸಿಂಹ 'ನಿನ್ನ ರಾಜನಾ? ಯಾರವನು? ನನಗೆ ತೋರಿಸು ಅವನನ್ನು ಕೊಂದು ಬಿಡುವೆ' ಎಂದು ಹೆದರಿಸಿತು. ನಾನು ಹೇಗೋ ತಪ್ಪಿಸಿಕೊಂಡು ಬಂದೆನು" ಎಂದು ತಾಳ್ಮೆಯಿಂದ ವಿವರಿಸಿತು.



ಸಿಂಹದ ಕೋಪ ಇನ್ನೂ ಹೆಚ್ಚಾಯಿತು. "ಎಲ್ಲಿ? ಆ ಕೆಟ್ಟ ಸಿಂಹ? ಅದು ಇರುವ ಜಾಗ ಈಗಲೇ ತೋರಿಸು" ಎಂದಿತು.

ಮೊಲ ಮುಂದೆ ಮುಂದೆ ಹೋಗುತ್ತಿತ್ತು. ಸಿಂಹ ಅದನ್ನು ಹಿಂಬಾಲಿಸುತ್ತಿತ್ತು. ಎರಡು ಒಂದು ಬಾವಿಯ ಹತ್ತಿರ ಬಂದವು.

ಮೊಲ "ರಾಜರೇ! ನೀವು ಇಲ್ಲಿಯೇ ಇರಿ, ನಾನು ಹೋಗಿ ನೋಡಿಕೊಂಡು ಬರುವೆ" ಎಂದು ಹೇಳಿ ಮೆಲ್ಲಗೆ ಬಾವಿಯ ಒಳಗೆ ನೋಡಿತು. ಬಾವಿಯ ನೀರಿನಲ್ಲಿ ಚಿಕ್ಕ ಮೊಲದ ಮುಖ ಚೆನ್ನಾಗಿ ಕಾಣಿಸುತ್ತಿತ್ತು. "ರಾಜರೇ! ಇದೋ, ಆ ಸಿಂಹ ಇಲ್ಲಿ!" ಎಂದು ಹೇಳಿ ಮೊಲ ಪಕ್ಕಕ್ಕೆ ಜರುಗಿತು.

ಸಿಂಹ ಕೋಪದಿಂದ ಘರ್ಜಿಸುತ್ತಾ ಬಾವಿ ಒಳಕ್ಕೆ ನೋಡಿತು. ಬಾವಿಯ ನೀರಿನಲ್ಲಿ ಅದರ ಕೋಪದ ಮುಖವೇ ಕಂಡಿತು. ಸ್ವಲ್ಪವೂ ಯೋಚಿಸದೇ ಸಿಂಹ ಬಾವಿಯ ಒಳಕ್ಕೆ ನೆಗೆಯಿತು. ನೀರಿನಲ್ಲಿ ಮುಳುಗಿತು.

ಚಿಕ್ಕ ಮೊಲ ಖುಷಿಯಿಂದ ಜಿಗಿದು ಜಿಗಿದು ಓಡುತ್ತಾ ಮನೆಯನ್ನು ಸೇರಿತು.



ಮೂಲ: ಪಂಚತಂತ್ರದ ಕಥೆಗಳು

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ಕುಳ್ಳನೋ! ಉದ್ದನೋ!

[ಒಂಟೆ ಮತ್ತು ಹಂದಿ ಯಾವಾಗಲು ಒಂದನ್ನೊಂದು ಗೇಲಿ ಮಾಡುತ್ತಾ ಇರುವವು. ಒಂದು ದಿನ ತೋಟದಲ್ಲಿ. . . .]

ಒಂಟೆ: ಹೇ! ಮುದುಡಿ ಕುಗ್ಗಿರುವ ಹಂದಿಯೆ! ನಿನಗೆ ನನ್ನಂತೆ ಎತ್ತರವಾಗಲು ಆಸೆ ಇಲ್ಲವೇ?

ಹಂದಿ: ಉದ್ದ ಕತ್ತಿನ ಕೋಲಿನಂತ ಕಾಲಿನ ಒಂಟೆಯೇ! ನಿನ್ನಂತೆ ಉದ್ದವಾಗಿರಲು ನಾನೇಕೆ ಆಸೆ ಪಡಲಿ? ಕುಳ್ಳಗಿರುವುದೇ ಒಳ್ಳೆಯದು.

ಒಂಟೆ: ಅದು ಹೇಗೆ ಹೇಳುವೆ? ನನ್ನನ್ನು ನೋಡು. ಈ ಎತ್ತರದ ಗೋಡೆಯ ಆ ಪಕ್ಕದಲ್ಲಿ ಇರುವುದನ್ನೆಲ್ಲ ನೋಡುವೆನು. ಅಲ್ಲಿ ತಿನ್ನಲು ಬೇಕಾದಷ್ಟು ತಿಂಡಿ, ಚಿಗುರು ಎಲೆಗಳಿವೆ. ನಿನಗೆ ಅದನ್ನೆಲ್ಲ ನೋಡಲು ಆಗುವುದಿಲ್ಲ. ಈಗ ಹೇಳು ಎತ್ತರವಾಗಿ ಇರುವುದು ಎಷ್ಟು ಒಳ್ಳೆಯದು ಎಂದು.





ಹಂದಿ: ತಡಿಯಪ್ಪ! ಸ್ವಲ್ಪ ತಡಿ. ಇಲ್ಲಿ ಕೆಳಗೆ ಗೋಡೆಯಲ್ಲಿ ಒಂದು ಕಿಂಡಿ ಇದೆ ನೋಡು. ನಾನು ಆ ಕಿಂಡಿಯೊಳಗೆ ನುಗ್ಗಿ ಆಚೆ ಹೋಗುವೆನು. ಅಲ್ಲಿರುವುದನ್ನೆಲ್ಲ ಆಸೆ ಮುಗಿಯುವಷ್ಟು ತಿನ್ನುವೆನು. ಆದರೆ ನಿನಗೆ ನನ್ನಂತೆ ಒಳಗೆ ಹೋಗಲು ಆಗುವುದಿಲ್ಲ. ನಾನು ತಿನ್ನುವುದನ್ನು ಈ ಕಡೆಯಿಂದ ನೋಡುತ್ತಾ ಇರು.

[ಈ ರೀತಿ ಹೇಳಿದ ಹಂದಿ ಕಿಂಡಿಯೊಳಗೆ ನುಗ್ಗಿ ಹೋಯಿತು. ಒಂಟೆ ಶಾಕ್‌ನಿಂದ ಹಾಗೆ ನಿಂತಿತ್ತು.]


ಒಂಟೆ: ನೀನು ಹೇಳುವುದು ಸರಿ! ಉದ್ದವಾಗಿರುವುದು ಉದ್ದನೇ! ಕುಳ್ಳಗೆ ಇರುವುದು ಕುಳ್ಳನೇ!

ಸೀಳಿ ಬಿದ್ದಿರುವ ಮಡಕೆ

ಮುನಿಯ ಪ್ರತಿದಿನ ಹಲವು ಬಾರಿ ನದಿಯ ಬಳಿಗೆ ಹೋಗುವನು. ಎರಡು ಮಡಕೆಗಳಲ್ಲಿ ಮನೆಗೆ ಬೇಕಾದ ನೀರನ್ನು ತಂದು ತಂದು ತುಂಬುವನು. ಅದರಲ್ಲಿ ಒಂದು ಮಡಕೆ ಸ್ವಲ್ಪ ಸೀಳಿತ್ತು. ಅದರಿಂದ ನೀರು ಸೋರಿ ಮನೆಗೆ ಬರುವ ವೇಳೆಗೆ ಮಡಕೆಯಲ್ಲಿ ಅರ್ಧ ನೀರು ಇರುತ್ತಿತ್ತು.

ಸೀಳಿಲ್ಲದ ಮಡಕೆ "ನನ್ನನ್ನು ನೋಡು! ಒಂದು ಹನಿ ನೀರನ್ನು ಚೆಲ್ಲದಂತೆ ಪೂರ್ತಿ ತಂದು ತುಂಬುವೆನು" ಎಂದು ಹೆಮ್ಮೆಯಿಂದ ಹೇಳಿತು.

ಸೀಳಿದ ಮಡಕೆಗೆ ಇದನ್ನು ಕೇಳಿ ತುಂಬಾ ಬೇಸರವಾಯಿತು. ಅದು ಮುನಿಯನ ಬಳಿ "ನನ್ನನ್ನು ಕ್ಷಮಿಸು! ನೀನು ಎಷ್ಟು ಕಷ್ಟಪಟ್ಟು ನೀರನ್ನು ಹೊತ್ತು ತರುವೆ. ಆದರೆ ನಾನು ಅರ್ಧದಷ್ಟು ನೀರನ್ನು ದಾರಿಯಲ್ಲೇ ಹಾಳು ಮಾಡುವೆ" ಎಂದು ನೋವಿನಿಂದ ಹೇಳಿತು.



ಮುನಿಯ ನಸುನಗುತ್ತಾ ಪ್ರೀತಿಯಿಂದ ಸೀಳಿದ ಮಡಕೆಗೆ "ನಾವು ಮನೆಗೆ ಬರುವ ದಾರಿಯಲ್ಲಿ ಸುಂದರವಾದ ಹೂವುಗಳು ಅರಳಿವೆ. ಅದನ್ನು ನೋಡು" ಎಂದು ಹೇಳಿದನು.

ಹೌದು! ದಾರಿಯಲ್ಲಿ ಸುಂದರವಾದ ಹೂವುಗಳು ಅರಳಿದ್ದವು. ಸೀಳಿದ ಮಡಕೆ ತನ್ನ ನೋವನ್ನು ಮರೆತು ಆನಂದದಿಂದ ಆ ಹೂವುಗಳನ್ನು ನೋಡಿತು. ಆದರೆ ಮನೆಗೆ ಬಂದಾಗ ತಾನು ಹೊತ್ತು ತಂದ ಕಡಿಮೆ ನೀರನ್ನು ನೋಡಿ ಅದಕ್ಕೆ ಮತ್ತೆ ಬೇಸರವಾಯಿತು.

"ಸುಂದರವಾದ ಹೂವುಗಳನ್ನು ತೋರಿಸಿ ನೀನು ನನ್ನ ನೋವನ್ನು ಮರೆಯುವಂತೆ ಮಾಡಿದೆ. ಆದರು ನನ್ನ ಸೋಲನ್ನು ನನಗೆ ಮರೆಯಲು ಸಾಧ್ಯವಿಲ್ಲ" ಎಂದು ಮುನಿಯನಿಗೆ ಹೇಳಿತು.

"ನಾನು ಹೇಳಿದ್ದನ್ನು ನೀನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ದಾರಿಯಲ್ಲಿ ಒಂದು ಕಡೆ ಮಾತ್ರ ಹೂವುಗಳು ಇರುವುದನ್ನು ಗಮನಿಸು. ಪ್ರತಿದಿನ ನಾವು ಮನೆಗೆ ಬರುವಾಗ ನೀನು ಚೆಲ್ಲಿದ ನೀರಿನಿಂದ ತಾನೆ ಆ ಗಿಡಗಳು ಬೆಳೆದಿರುವುದು. ನಾನು ಹೋಗಿ ಹೊಸ ಮಡಕೆ ತಂದು ಬಿಡಬಹುದು. ಆದರೆ ಅದರಿಂದ ಗಿಡಗಳು ಚೆನ್ನಾಗಿ ಬೆಳೆದು, ಜನರು ಅದನ್ನು ನೋಡಿ ಆನಂದಪಡಲು ಆಗುವುದಿಲ್ಲ. ನೀನು ತಾನೇ ಅದಕ್ಕೆ ಸಹಾಯ ಮಾಡಿದ್ದು" ಎಂದನು ಮುನಿಯ.

ಮೂಲ: ಹಿಂದಿ ಜನಪದ ಕಥೆ



ಪಿ.ಸರಸ್ವತಿ ಪಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಇರುವೆ ಹೊಲಿದ ಚಪ್ಪಲಿ




ಇರುವೆ ಒಂದು ರಾತ್ರಿ ಪೂರ್ತಿ ನಿದ್ರೆ ಮಾಡದಂತೆ ಒಂದು ಜೊತೆ ಚಪ್ಪಲಿ ಹೊಲಿಯಿತು. ಮರುದಿನ ಬೆಳಗಾದಾಗ ಅದನ್ನು ಮಾರಲು ಹೊರಟಿತು.

ಎದುರಿಗೆ ಒಂದು ಕೋತಿ ಬಂದಿತು. "ಕೋತಿ ಮಾಮ, ಕೋತಿ ಮಾಮ! ಈ ಚಪ್ಪಲಿಗಳನ್ನು ಕೊಂಡುಕೊಳ್ಳುವೆಯಾ?" ಎಂದು ಇರುವೆ ಕೇಳಿತು.

"ನನಗೆ ನಾಲ್ಕು ಕಾಲುಗಳಿವೆ. ಎರಡು ಚಪ್ಪಲಿಗಳು ಹೇಗೆ ಆಗುವುದು?" ಎಂದು ಕೋತಿ ಹೇಳಿತು.

ಇರುವೆ ಹಿಂತಿರುಗಿ ಮನೆಗೆ ಬಂದಿತು. ಆ ದಿನವು ರಾತ್ರಿ ಪೂರ್ತಿ ನಿದ್ರೆ ಮಾಡದೆ ಒಂದು ಜೊತೆ ಚಪ್ಪಲಿಯನ್ನು ಹೊಲಿಯಿತು. ಮರುದಿನ ಬೆಳಗಾದ ನಂತರ ನಾಲ್ಕು ಚಪ್ಪಲಿಗಳನ್ನು ತೆಗೆದುಕೊಂಡು ಕೋತಿಯ ಬಳಿಗೆ ಹೋಯಿತು. ಕೋತಿ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ನೋಡಿತು.







“ಈ ಚಪ್ಪಲಿಗಳು ಚಿಕ್ಕವು. ನನ್ನ ಕಾಲಿಗೆ ಆಗುವುದಿಲ್ಲ. ನಿನ್ನಂತ ಇರುವೆಗಳಿಗೆ ಸರಿ ಹೋಗುವುದು” ಎಂದು ಹೇಳಿ ಚಪ್ಪಲಿಯನ್ನು ಹಿಂದಕ್ಕೆ ಕೊಟ್ಟಿತು.

ಚಪ್ಪಲಿಗಳನ್ನು ತೆಗೆದುಕೊಂಡು ಇರುವೆ ಇನ್ನೊಂದು ಇರುವೆಯ ಬಳಿಗೆ ಹೋಯಿತು. ಆ ಇರುವೆ ಗೆಳೆಯ “ನಾಲ್ಕು ಚಪ್ಪಲಿಗಳನ್ನು ತೆಗೆದುಕೊಂಡು ನಾನೇನು ಮಾಡಲಿ? ನಮಗೆ ಆರು ಕಾಲುಗಳಿವೆ ಎನ್ನುವುದನ್ನು ನೀನು ಮರೆತು ಬಿಟ್ಟೆಯಾ?” ಎಂದು ಕೇಳಿತು.


ಏನು ಮಾಡುವುದೆಂದು ಗೊತ್ತಾಗದೆ ಇರುವೆ ಮನೆಗೆ ಬಂದಿತು. ಮತ್ತೆ ಎರಡು ಚಪ್ಪಲಿಗಳನ್ನು ಹೊಲಿಯಿತು. ಮಾರನೆಯ ದಿನ ಆರು ಚಪ್ಪಲಿಗಳನ್ನು ತೆಗೆದುಕೊಂಡು ಹೋಯಿತು. ಇರುವೆ ಗೆಳೆಯ ಒಂದು ಚಪ್ಪಲಿ ಹಾಕಿಕೊಂಡು ನೋಡಿತು.






“ಇವು ತುಂಬಾ ಹಗುರವಾಗಿವೆ. ಎರಡು ದಿನಗಳಲ್ಲಿ ಹರಿದು ಹೋಗುತ್ತವೆ. ಇವು ನನಗೆ ಬೇಡ. ಒಂದು ಕೆಲಸ ಮಾಡು. ಜೇಡರ ಹುಳು ತೆಗೆದುಕೊಳ್ಳಬಹುದು. ಹೋಗಿ ಕೇಳು” ಎಂದಿತು.


ಇರುವೆಗೆ ತುಂಬಾ ಸುಸ್ತಾಗಿತ್ತು. ಆರು ಪ್ಪಲಿಗಳನ್ನು ತೆಗೆದುಕೊಂಡು ಜೇಡರ ಳುವಿನ ಮನೆಗೆ ಹೋಗಿ ಬಾಗಿಲಿನಲ್ಲಿ ತುಕೊಂಡಿತು. ಜೇಡನನ್ನು ಕರೆಯಿತು. ಳಗೆ ಹೋದರೆ ಜೇಡರ ಬಲೆಯಲ್ಲಿ ಕ್ಕಹಾಕಿಕೊಳ್ಳುವೆನು ಎಂಬ ಭಯ.




ಜೇಡ ಇರುವೆಯನ್ನು ನೋಡಿ “ಯಾಕೆ ತಮ್ಮ ಸುಸ್ತಾಗಿರುವೆ?” ಂದು ಕೇಳಿತು. ಇರುವೆ ನಡೆದುದೆಲ್ಲವನ್ನು ವಿವರವಾಗಿ ಹೇಳಿತು.







ಆಗ ಜೇಡರ ಹುಳು "ನೀನು ಈ ರೀತಿ ತಿರುಗಾಡುವುದರಿಂದ ಪ್ರಯೋಜನವಿಲ್ಲ. ನಾನು ನಿನಗೆ ಒಂದು ದಾರಿ ತೋರುವೆನು. ನೀನು ಶತಪದಿಯ ಬಳಿಗೆ ಹೋಗು. ಅದಕ್ಕೆ ಸುಮಾರು ಕಾಲುಗಳಿವೆ. ಪ್ರತಿದಿನ ಎರಡೆರಡು ಚಪ್ಪಲಿಯನ್ನು ಅದು ನಿನ್ನ ಬಳಿ ಕೊಂಡು ಕೊಳ್ಳುವುದು" ಎಂದಿತು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ

ಕಲಾಕಾರ ಯಾಂಗ್

ಕೆಲವು ವರ್ಷಗಳ ಹಿಂದೆ ಚೀನಾ ದೇಶದಲ್ಲಿ ಯಾಂಗ್ ಎಂಬ ಹುಡುಗನಿದ್ದನು. ಅವನು ತನ್ನ ಮಾಮನ ಮನೆಯಲ್ಲಿ ಬೆಳೆಯುತ್ತಿದ್ದನು. ಅವನ ಮಾಮ ಒಬ್ಬ ಕಲಾಕಾರರಾಗಿದ್ದರು. ಅವರು ಚಿತ್ರ ಬರೆಯುತ್ತ ಇರುವಾಗ ಯಾಂಗ್ ಗಂಟೆಗಟ್ಟಲೆ ಅವರ ಬಳಿ ಕುಳಿತಿರುತ್ತಿದ್ದನು. ಅವರು ಚಿತ್ರ ಬರೆಯುವುದನ್ನು ಗಮನವಿಟ್ಟು ನೋಡುತ್ತಿದ್ದನು.

ಚಿತ್ರ ಬರೆಯುವುದರಲ್ಲಿ ಯಾಂಗ್‌ಗೆ ಆಸಕ್ತಿ ಇರುವುದನ್ನು ಮಾಮ ಗಮನಿಸಿ, ಆತನಿಗೆ ಚಿತ್ರ ಬರೆಯಲು ಉತ್ತೇಜನ ನೀಡಿದರು. ಅವನು ಬರೆದ ಚಿತ್ರಗಳನ್ನು ಆಗಾಗ ನೋಡುತ್ತಿದ್ದರು.





ಒಂದು ದಿನ "ನಿನ್ನ ಚಿತ್ರಗಳು ತುಂಬಾ ಚೆನ್ನಾಗಿವೆ. ನನಗಿಂತ ಚೆನ್ನಾಗಿ ಬರೆಯುವೆ. ಊರಿನ ಎಲ್ಲರನ್ನು ಕರೆಸಿ ತೋರಿಸೋಣ" ಎಂದರು ಮಾಮ.

ಗೆಳೆಯರೆಲ್ಲರು ಬಂದರು. ಯಾಂಗ್ ಚಿತ್ರಗಳನ್ನು ನೋಡಿ ಆನಂದಿಸಿದರು. "ಯಾಂಗ್, ನಿನ್ನ ಚಿತ್ರಗಳು ನಿಜವಾದ ಗೊಂಬೆಗಳಂತೆ ಕಾಣುತ್ತವೆ. ನೀನು ಬರೆದಿರುವ ಜೇನುಗೂಡು ಮತ್ತು ಹೂಗಳ ಚಿತ್ರವನ್ನು ನೋಡಿದರೆ ಜೇನುಹುಳುಗಳು ಮತ್ತು ಹಕ್ಕಿಗಳು ಮೋಸ ಹೋಗುತ್ತವೆ" ಎಂದು ಪ್ರಶಂಸಿಸಿದರು.



ಒಂದು ದಿನ ಮಾಮ "ನಿನ್ನ ಚಿತ್ರಗಳನ್ನು ಪಕ್ಕದ ಊರಿನಲ್ಲಿ ಇರುವ ನನ್ನ ಗೆಳೆಯರಿಗು ತೋರಿಸಿ ಬಾ. ಇದೋ, ಅವರ ವಿಳಾಸ ತೆಗೆದುಕೋ" ಎಂದು ಹೇಳಿದರು.

ಯಾಂಗ್‌ಗೆ ಮಾಮನನ್ನು ಬಿಟ್ಟು ಹೋಗಲು ಮನಸ್ಸು ಇಲ್ಲದಿದ್ದರು ಹೋದನು. ಹೋಗುವ ದಾರಿಯಲ್ಲಿ ಕಾಡನ್ನು ದಾಟಿ ಹೋಗ ಬೇಕಾಗಿತ್ತು.

ಕಾಡಿನಲ್ಲಿ ಇದ್ದ ಮರ ಗಿಡ ಬಳ್ಳಿಗಳು, ಹಕ್ಕಿಗಳು ಎಲ್ಲವು ಯಾಂಗ್‌ನ ಮನಸ್ಸನ್ನು ಆಕರ್ಷಿಸಿದವು. ಅಲ್ಲಲ್ಲೇ ನಿಂತು ಚಿತ್ರ ಬರೆಯುತ್ತಿದ್ದನು. ಮರಗಳ ಮೇಲಿದ್ದ ಪುಟ್ಟ ಪುಟ್ಟ ಮನೆಗಳಲ್ಲಿ ಸುಮಾರು ದಿನಗಳು ತಂಗಿದ್ದನು. ಅಲ್ಲಿಂದ ನೋಡಿದ ಅಂದದ ದೃಶ್ಯಗಳನ್ನು ಚಿತ್ರದಲ್ಲಿ ಬರೆದು ಖುಷಿಪಟ್ಟನು.



ಒಂದು ದಿನ ಯಾಂಗ್ ಹಂದಿಯೊಂದನ್ನು ನೋಡಿದನು. ಅದನ್ನು ಚಿತ್ರಿಸಿ ಬಣ್ಣ ಹಚ್ಚಿದನು. ಆಗ ಎಲ್ಲಿಂದಲೋ ಕೂಗುವ ಶಬ್ದ ಕೇಳಿಸಿತು. ಒಬ್ಬ "ಹುಲಿ...ಹುಲಿ..." ಎಂದು ಜೋರಾಗಿ ಕೂಗುತ್ತಾ ವೇಗವಾಗಿ ಓಡಿ ಬಂದನು.

ಏನು ಮಾಡುವುದು? ಯಾಂಗ್‌ಗೆ ತಕ್ಷಣ ಒಂದು ಉಪಾಯ ಹೊಳೆಯಿತು. ತಾನು ಬರೆದ ಹಂದಿ ಚಿತ್ರವನ್ನು ಹುಲಿಗೆ ಕಾಣುವಂತೆ ಪೊದೆಯಲ್ಲಿ ಇಟ್ಟನು.

ಅಟ್ಟಿಸಿಕೊಂಡು ಬಂದ ಹುಲಿ ಅಲ್ಲೇ ನಿಂತು ಬಿಟ್ಟಿತು. ಜೋರಾಗಿ ಘರ್ಜಿಸಿತು. ಹುಲಿಯ ಗಮನ ಆ ಕಡೆ ಇರುವಾಗಲೇ ಇಬ್ಬರು ಮರ ಹತ್ತಿ ಮನೆ ಒಳಗೆ ಸೇರಿಕೊಂಡರು.

ಮೂಲ: ಚೀನಾ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಉತ್ತಮ ವಿದ್ಯಾರ್ಥಿ






ಪಾಂಡವರು ಮತ್ತು ಕೌರವರು ದ್ರೋಣರ ಬಳಿ ವಿದ್ಯೆಯನ್ನು ಕಲಿಯುತ್ತಿದ್ದರು. ಅದರಲ್ಲಿ ಬಿಲ್ವಿದ್ಯೆಯು ಒಂದು.

ಅರ್ಜುನ ಬಿಲ್ವಿದ್ಯೆಯಲ್ಲಿ ತುಂಬ ಆಸಕ್ತಿ ತೋರುತ್ತಿದ್ದನು. ಅದರಲ್ಲೇ ಆತ ಮುಳುಗಿ ಹೋಗಿದ್ದನು. ಜೊತೆಗೆ ಎಲ್ಲರಿಗಿಂತ ಉತ್ತಮ ವಿದ್ಯಾರ್ಥಿ ಆಗಿದ್ದನು.

ಅರ್ಜುನನ ಪ್ರತಿಭೆ ದ್ರೋಣರನ್ನು ಆಕರ್ಷಿಸಿತು. ಅವರು ಅವನಿಗೆ ವಿಶೇಷ ಪ್ರೀತಿ ತೋರಿಸುತ್ತಿದ್ದರು. ಇದು ದುರ್ಯೋಧನ ಮತ್ತು ಅವನ ತಮ್ಮಂದಿರಿಗೆ ಇಷ್ಟ ಆಗಲಿಲ್ಲ. ಅವರು ಯಾವಾಗಲು ಅರ್ಜುನನನ್ನು ಅಸೂಯೆಯಿಂದ ನೋಡುತ್ತಿದ್ದರು.



ಒಂದು ದಿನ ದ್ರೋಣರು ತಮ್ಮ ಶಿಷ್ಯಂದಿರ ಪ್ರತಿಭೆ ಪರೀಕ್ಷಿಸ ಬೇಕೆಂದು ಸಿದ್ಧತೆ ನಡೆಸಿದರು. ಮರದಿಂದ ಮಾಡಿದ ಹಕ್ಕಿ ಗೊಂಬೆಯನ್ನು ಒಂದು ಕೊಂಬೆಗೆ ಕಟ್ಟಿ ತೂಗಿ ಬಿಟ್ಟರು.

“ಶಿಷ್ಯಂದಿರೇ! ಆ ಹಕ್ಕಿ ಗೊಂಬೆಯನ್ನು ನೋಡಿ. ಸರಿಯಾಗಿ ಗುರಿ ಇಟ್ಟು ಅದರ ಕಣ್ಣಿಗೆ ಬಾಣ ಬಿಡಬೇಕು” ಎಂದು ಹೇಳಿದರು.

ವಿದ್ಯಾರ್ಥಿಗಳೆಲ್ಲಾ ಸಿದ್ಧರಾಗಿ ನಿಂತರು. ಧರ್ಮರಾಯನನ್ನು ಕರೆದು ಬಾಣ ಬಿಡಲು ಹೇಳಿದರು. ಧರ್ಮರಾಯ ಗುರಿ ಇಟ್ಟು ಬಾಣ ಬಿಡಲು ಸಿದ್ಧನಾದಾಗ “ಧರ್ಮರಾಯ! ನಿನ್ನ ಕಣ್ಣಿಗೆ ಈಗ ಏನು ಕಾಣಿಸುತ್ತಿದೆ?” ಎಂದು ಕೇಳಿದರು.





ಧರ್ಮರಾಯ "ಗುರುಗಳೇ! ನೀವು ಕಾಣುತ್ತಿರುವಿರಿ. ಮರ ಕಾಣಿಸುತ್ತಿದೆ. ಎಲೆ ಕಾಣಿಸುತ್ತಿದೆ. ಹಕ್ಕಿ ಕಾಣಿಸುತ್ತಿದೆ" ಎಂದು ಹೇಳಿದನು.

ದ್ರೋಣರು "ಪಕ್ಕಕ್ಕೆ ಹೋಗು ಧರ್ಮರಾಯ! ನಿನಗೆ ಸರಿಯಾಗಿ ಗುರಿ ಇಟ್ಟು ಬಾಣ ಬಿಡಲು ಆಗುವುದಿಲ್ಲ" ಎಂದರು.

ನಂತರ ದುರ್ಯೋಧನನನ್ನು ಕರೆದರು. ಅವನಿಗು ಅದೇ ಪ್ರಶ್ನೆಯನ್ನು ಕೇಳಿದರು. ಆಗ ದುರ್ಯೋಧನನು "ಗುರುಗಳೇ! ಇಲ್ಲಿ ಇರುವ ಎಲ್ಲರು ಕಾಣಿಸುತ್ತಿದ್ದಾರೆ. ಮರ, ಕೊಂಬೆ, ಎಲೆ, ಹಕ್ಕಿ ಎಲ್ಲವು ಚೆನ್ನಾಗಿ ಕಾಣಿಸುತ್ತಿದೆ" ಎಂದು ಗರ್ವದಿಂದ ಹೇಳಿದನು.

ದ್ರೋಣರು "ಪಕ್ಕಕ್ಕೆ ಹೋಗು ದುರ್ಯೋಧನ! ನಿನಗು ಸರಿಯಾಗಿ ಗುರಿ ಇಡಲು ಆಗುವುದಿಲ್ಲ" ಎಂದರು.



ಇದೇ ರೀತಿ ಭೀಮ, ನಕುಲ, ಸಹದೇವ ಮತ್ತು ಇತರ ಎಲ್ಲರನ್ನು ಅದೇ ಪ್ರಶ್ನೆ ಕೇಳಿದರು. ಎಲ್ಲರು ಅದೇ ರೀತಿಯ ಉತ್ತರ ನೀಡಿದರು.

ಕೊನೆಗೆ ಅರ್ಜುನ ಬಂದನು. ಬಿಲ್ಲು ಬಾಣ ಸಿದ್ಧವಾಗಿ ಹಿಡಿದುಕೊಂಡೆ ಬಂದನು. ಹಕ್ಕಿಯನ್ನು ಮೈ ಮರೆತು ನೋಡುತ್ತಿದ್ದನು.

ದ್ರೋಣರು "ಅರ್ಜುನ! ನಿನಗೆ ಏನು ಕಾಣಿಸುತ್ತಿದೆ?" ಎಂದು ಕೇಳಿದರು.

ಅರ್ಜುನನು "ಗುರುಗಳೇ! ಹಕ್ಕಿಯ ಕಣ್ಣು ಮಾತ್ರ ಕಾಣಿಸುತ್ತಿದೆ"
ಎಂದು ಹೇಳಿದನು.

ಅರ್ಜುನನ ಏಕಾಗ್ರತೆ ಮತ್ತು ಗುರಿಯ ಕಡೆಗಿನ ಆತನ ನೇರವಾದ ನೋಟ ದ್ರೋಣರನ್ನು ಆಕರ್ಷಿಸಿತು. ತಕ್ಷಣ ಅವರು "ಈಗ ನೀನು ಬಾಣವನ್ನು ಬಿಡಬಹುದು"ಎಂದರು. ಅರ್ಜುನ ಬಾಣವನ್ನು ಬಿಟ್ಟನು.

ಆಹಾ! ಬಾಣ ನೇರವಾಗಿ ಹೋಗಿ ಹಕ್ಕಿ ಗೊಂಬೆಯ ಕಣ್ಣಿಗೆ ನಾಟಿತು.

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ



32 ಆನೆಯ ತೂಕ


ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬರು ಶ್ರೀಮಂತರಿದ್ದರು. ಅವರ ಮನೆಯಲ್ಲಿ ಒಂದು ಆನೆ ಇತ್ತು.

ಒಂದು ದಿನ ಅವರು ತಮ್ಮ ಗೆಳೆಯರ ಬಳಿ “ನನ್ನ ಆನೆಯ ತೂಕ ಎಷ್ಟು ಇರಬಹುದು? ನಿಮ್ಮಲ್ಲಿ ಯಾರಿಗಾದರು ಕಂಡು ಹಿಡಿಯಲು ಸಾಧ್ಯವೇ?” ಎಂದು ಸವಾಲನ್ನು ಹಾಕಿದರು.

“ಅಷ್ಟು ದೊಡ್ಡ ತಕ್ಕಡಿ ಇಲ್ಲ. ತೂಕ ಮಾಡುವುದು ಹೇಗೆ?” ಎಂದು ಒಬ್ಬ ಗೆಳೆಯರು ಹೇಳಿದರು.

“ಆನೆಯನ್ನು ಕತ್ತರಿಸಿ ತುಂಡು ಮಾಡಿದರೆ, ಆಗ ಅದನ್ನು ತೂಕ ಮಾಡಬಹುದು. ಆದರೆ ಹಾಗೆ ಮಾಡಲು ಸಾಧ್ಯವೇ?” ಎಂದರು ಮತ್ತೊಬ್ಬರು.






ಒಬ್ಬ ಚಿಕ್ಕ ಹುಡುಗ ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದನು. 'ಆನೆಯ ತೂಕ ಕಂಡು ಹಿಡಿಯುವುದು ಹೇಗೆ?' ಎಂದು ನದಿಯ ತೀರದಲ್ಲಿ ಕುಳಿತು ತುಂಬಾ ದಿನಗಳು ಯೋಚಿಸಿದನು.


ಒಂದು ದಿನ ನದಿಯಲ್ಲಿ ತೇಲುತ್ತಿದ್ದ ತೆಪ್ಪ ಒಂದು ಅವನ ಕಣ್ಣಿಗೆ ಬಿದ್ದಿತು. ತಟ್ಟನೆ ಅವನಿಗೆ ಒಂದು ಉಪಾಯ ಹೊಳೆಯಿತು.

“ಕಂಡು ಹಿಡಿದೆ! ಕಂಡು ಹಿಡಿದೆ!” ಎಂದು ಕೂಗುತ್ತಲೇ ಶ್ರೀಮಂತರ ಬಳಿಗೆ ಓಡಿ ಹೋದನು.

“ಆನೆಯನ್ನು ನದಿ ತೀರಕ್ಕೆ ಕರೆದು ತನ್ನಿರಿ. ಅದರ ತೂಕವನ್ನು ಕಂಡು ಹಿಡಿಯಲು ಉಪಾಯವನ್ನು ಹುಡುಕಿದ್ದೇನೆ” ಎಂದನು.

ಆನೆ ಬಂದಿತು. ಹುಡುಗ ಅದನ್ನು ತೆಪ್ಪಕ್ಕೆ ಹತ್ತಿಸಿದನು. ಆನೆ ತೆಪ್ಪವನ್ನು ಹತ್ತಿತು. ಆಗ ತೆಪ್ಪ ಅಲ್ಲಾಡಿತು. ಆನೆಯ ತೂಕದ ಭಾರಕ್ಕೆ ತೆಪ್ಪದ ಸ್ವಲ್ಪ ಭಾಗ ನೀರಿನಲ್ಲಿ ಮುಳುಗಿತು






ತೆಪ್ಪ ನೀರಿನಲ್ಲಿ ಮುಳುಗಿದಷ್ಟು ಭಾಗವನ್ನು ಕಪ್ಪು ಬಣ್ಣದಲ್ಲಿ ಗುರುತು ಮಾಡಿದನು. ನಂತರ ಆನೆಯನ್ನು ತೆಪ್ಪದಿಂದ ಇಳಿಸಿ ನದಿ ತೀರಕ್ಕೆ ಬಿಟ್ಟರು.

ಆಳುಗಳನ್ನು ಕರೆಸಿ ತೆಪ್ಪದೊಳಕ್ಕೆ ದಪ್ಪ ದಪ್ಪ ಕಲ್ಲುಗಳನ್ನು ತುಂಬಿಸಿದನು. ಕಲ್ಲುಗಳ ಭಾರಕ್ಕೆ ತೆಪ್ಪ ಸ್ವಲ್ಪ ಸ್ವಲ್ಪ ನೀರಿನಲ್ಲಿ ಮುಳುಗ ತೊಡಗಿತು. ಕಪ್ಪು ಗುರುತು ಇರುವವರೆಗು ತೆಪ್ಪ ನೀರಿನಲ್ಲಿ ಮುಳುಗಿದಾಗ ಕಲ್ಲು ತುಂಬುವುದನ್ನು ನಿಲ್ಲಿಸಿದನು.

"ತೆಪ್ಪದಲ್ಲಿ ಇರುವ ಕಲ್ಲುಗಳ ತೂಕ ಆನೆಯ ತೂಕಕ್ಕೆ ಸಮ ಆಗಿದೆ. ಈ ಕಲ್ಲುಗಳನ್ನು ತೂಕ ಮಾಡಿದರೆ ಆನೆಯ ತೂಕ ಗೊತ್ತಾಗುವುದು" ಎಂದನು ಹುಡುಗ. ಅವನ ಬುದ್ಧಿವಂತಿಕೆಯನ್ನು ಎಲ್ಲರು ಮೆಚ್ಚಿದರು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಕಥೆ ಮುಗಿಯುವುದು ಯಾವಾಗ?

ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿಗೆ ಕಥೆಗಳನ್ನು ಕೇಳುವುದು ಎಂದರೆ ತುಂಬಾ ಇಷ್ಟ. ಅವನು ಒಂದು ಸಾರಿ "ತುಂಬ ದೊಡ್ಡದಾದ ಕಥೆ ಹೇಳಿದವರಿಗೆ ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಕೊಡುವೆ" ಎಂದು ಡಂಗೂರ ಹೊಡೆಸಿದನು.

ವಿಷಯ ತಿಳಿದ ಹಲವಾರು ಜನರು ಬಂದು ರಾಜನಿಗೆ ಕಥೆ ಹೇಳಿದರು. ಒಬ್ಬ ಒಂದು ದಿನ ಪೂರ್ತಿ, ಇನ್ನೊಬ್ಬ ಒಂದು ವಾರ ಪೂರ್ತಿ, ಮತ್ತೊಬ್ಬ ಹತ್ತು ದಿನಗಳು, ಮಗದೊಬ್ಬ ಒಂದು ತಿಂಗಳು. ಈ ರೀತಿ ಹೇಳಿದರು.

ರಾಜನು "ನೀವು ಹೇಳಿದ ಕಥೆಗಳು ಯಾವುವು ದೊಡ್ಡದಾಗಿಲ್ಲ. ಅದಕ್ಕಾಗಿ ನಿಮಗೆ ಬಹುಮಾನ ಕೊಡಲು ಸಾಧ್ಯವಿಲ್ಲ" ಎಂದು ಹೇಳಿದನು.

ಒಂದು ದಿನ ಬುದ್ಧಿವಂತನಾದ ಚತುರನೊಬ್ಬ 'ಹೇಗಾದರು ಮಾಡಿ ರಾಜನಿಂದ ಬಹುಮಾನ ಗೆಲ್ಲಲೇ ಬೇಕು' ಎಂದು ಯೋಚಿಸಿ ರಾಜನ ಬಳಿಗೆ ಬಂದನು.



"ರಾಜರೇ! ನನಗೆ ತುಂಬಾ ತುಂಬ ದೊಡ್ಡ ಕಥೆಗಳು ಗೊತ್ತು. ಆ ಕಥೆಗಳನ್ನು ಹೇಳಲು ಜೀವನ ಪೂರ್ತಿ ಸಮಯ ಸಾಕಾಗುವುದಿಲ್ಲ" ಎಂದನು.

ರಾಜನು ಆಸಕ್ತಿಯಿಂದ "ಹಾ! ಹೌದಾ! ಹೇಳು" ಎಂದನು. ಚತುರನು "ಆದರೆ ಒಂದು ನಿಯಮ ಇದೆ. ನಾನು ಕಥೆ ಹೇಳುವಾಗ ನೀವು 'ಆಮೇಲೆ' ಎಂದು ಕೇಳುತ್ತಾ ಇರಬೇಕು" ಎಂದನು. ರಾಜ ಒಪ್ಪಿದನು. ಚತುರನು ಕಥೆ ಹೇಳಲು ಆರಂಭಿಸಿದನು.


"ಒಂದು ದೇಶದಲ್ಲಿ ಒಂದು ಬಾರಿ ಬಹಳ ಚೆನ್ನಾಗಿ ಮಳೆ ಆಯಿತು. ಎಲ್ಲಾ ಕಡೆ ಭತ್ತ ಬೆಳೆದರು. ಎಲ್ಲಿ ನೋಡಿದರು ಭತ್ತದ ರಾಶಿಗಳೇ ಕಾಣಿಸುತ್ತಿದ್ದವು. ಭತ್ತ ಬೆಟ್ಟದಂತೆ ರಾಶಿ ರಾಶಿಯಾಗಿ ಬಿದ್ದಿತ್ತು.

ಅದನ್ನು ನೋಡಿದ ಆ ದೇಶದ ಮಂತ್ರಿ 'ಒಂದು ದೊಡ್ಡ ಕಣಜವನ್ನು ಮಾಡಿ ಅದರಲ್ಲಿ ದೇಶದ ತುಂಬೆಲ್ಲಾ ಬೆಳೆದಿರುವ ಭತ್ತವನ್ನು ತುಂಬಿಸಿದರೆ ಎಂತಹ ಬರಗಾಲ ಬಂದರು ಏನೂ ತೊಂದರೆ ಆಗುವುದಿಲ್ಲ'
ಎಂದು ಯೋಚಿಸಿದನು.

ಅದರಂತೆ ಒಂದು ದೊಡ್ಡ ಕಣಜ ಸಿದ್ಧವಾಯಿತು. ಅಂತಹ ದೊಡ್ಡ ಕಣಜ ಬೇರೆ ಯಾವ ದೇಶದಲ್ಲೂ ಇರಲಿಲ್ಲ. ಬ್ರಹ್ಮಾಂಡ ಗಾತ್ರದ ಆ ಕಣಜವನ್ನು ನೋಡಲು ಜನ ಸಾಗರವೇ ಹರಿದು ಬಂದಿತು.

ಆ ಕಣಜಕ್ಕೆ ಗಾಳಿ ಆಡಲು ಒಂದು ಚಿಕ್ಕ ತೂತು ಇತ್ತು. ಒಂದು ದಿನ ಗುಬ್ಬಚ್ಚಿಯೊಂದು ಆ ಕಣಜದ ಸುತ್ತ ಸುತ್ತಿ ಸುತ್ತಿ ಹಾರುತ್ತಿತ್ತು. ಹಾಗೆ ಹಾರಾಡುವಾಗ ಕಣಜದಲ್ಲಿದ್ದ ತೂತ ಗುಬ್ಬಚ್ಚಿಯ ಕಣ್ಣಿಗೆ ಬಿತ್ತು. ಅದು 'ವಿರ್ರ್' ಎಂದು ಆ ತೂತದಿಂದ ಕಣಜದ ಒಳಗೆ ಹೋಯಿತು.






ಒಂದು ಭತ್ತ ಕಚ್ಚಿಕೊಂಡು ಬಂದು ತನ್ನ ಗೂಡಿನಲ್ಲಿ ಇಟ್ಟಿತು" ಎಂದು ಹೇಳಿ ಕಥೆ ನಿಲ್ಲಿಸಿದ ಆ ಚತುರ. "ಆಮೇಲೆ" ಎಂದನು ರಾಜ.

"ಗುಬ್ಬಚ್ಚಿ ಮತ್ತೆ ಕಣಜದ ಒಳಗೆ ಹೋಯಿತು. ಒಂದು ಭತ್ತವನ್ನು ಕಚ್ಚಿಕೊಂಡು ಬಂದು ತನ್ನ ಗೂಡಿನಲ್ಲಿ ಇಟ್ಟಿತು" ಎಂದನು ಚತುರ. ಪುನಃ "ಆಮೇಲೆ" ಎಂದು ರಾಜ ಕೇಳಿದನು. ಪದೇ ಪದೇ ಆ ಚತುರ "ಗುಬ್ಬಚ್ಚಿ ಕಣಜದ ಒಳಗೆ ಹೋಗುವುದು, ಭತ್ತದ ಕಾಳನ್ನು ಎತ್ತಿಕೊಂಡು ಬರುವುದು" ಎಂದು ಹೇಳುತ್ತಿದ್ದ.

ರಾಜನಿಗೆ ಆತಂಕ ಪ್ರಾರಂಭವಾಯಿತು. 'ಕಣಜದಲ್ಲಿ ಇರುವ ಭತ್ತವನ್ನು ಒಂದೊಂದಾಗಿ ಗುಬ್ಬಚ್ಚಿ ತೆಗೆದುಕೊಂಡು ಹೋಗುತ್ತಿದ್ದರೆ, ಆ ಭತ್ತ ಖಾಲಿ ಆಗುವುದು ಯಾವಾಗ? ಆಮೇಲೆ ಎಂದು ಹೇಳಿದ್ದನ್ನೇ ಹೇಳುತ್ತಿದ್ದರೆ ಹುಚ್ಚು ಹಿಡಿಯುತ್ತದೆ' ಎಂದು ರಾಜ ಯೋಚಿಸಿದನು.

'ಅಯ್ಯೋ! ಈ ಚತುರನಿಂದ ಹೇಗೆ ತಪ್ಪಿಸಿಕೊಳ್ಳಲಿ? ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಕಳೆದುಕೊಂಡರು ಪರವಾಗಿಲ್ಲ' ಎಂದು, "ಈಗಲೇ ಒಂದು ಸಾವಿರ ಚಿನ್ನದ ನಾಣ್ಯಗಳನ್ನು ತಂದು ಇವನಿಗೆ ಕೊಡಿ" ಎಂದು ಆಜ್ಞೆ ಮಾಡಿದನು. ನಂತರ ರಾಜನು ನೆಮ್ಮದಿಯಿಂದ ಉಸಿರಾಡಿದನು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನಂದರಿಯೂ ಮತ್ತು ಮೊಸಳೆಯೂ

ನಂದರಿ ಒಂದು ಧೈರ್ಯವಂತ ಕೋತಿ. ಅದು ತನ್ನ ಧೈರ್ಯದಿಂದ ಯಾವ ಕೆಲಸವನ್ನಾದರು ಮಾಡಲು ಸಿದ್ಧವಾಗಿರುತ್ತಿತ್ತು. ಮನಸ್ಸಿಗೆ ಬಂದಂತೆ ಕಾಡಿನಲ್ಲಿ ಒಂಟಿಯಾಗಿ ಅಲೆದಾಡುತ್ತಿತ್ತು.

ಒಂದು ದಿನ ಅದು ಒಂದು ಹೊಳೆಯ ಬಳಿಗೆ ಹೋಯಿತು. ಹೊಳೆಯ ಮಧ್ಯದಲ್ಲಿ ಒಂದು ಪುಟ್ಟ ದ್ವೀಪ ಇತ್ತು. ಆ ದ್ವೀಪದಲ್ಲಿ ತುಂಬಾ ಮಾವಿನ ಮರಗಳಿದ್ದವು. ಆ ಮಾವಿನ ಮರಗಳ ತುಂಬ ಮಾವಿನ ಹಣ್ಣುಗಳು.

ನಂದರಿ ಆ ಪುಟ್ಟ ದ್ವೀಪಕ್ಕೆ ಹೋಗಲು ಇಷ್ಟಪಟ್ಟಿತು. ಆದರೆ ಹೊಳೆಯ ಅಗಲ ಜಾಸ್ತಿ ಇತ್ತು. ಅದು 'ದ್ವೀಪಕ್ಕೆ ಹೋಗುವುದು ಹೇಗೆ?' ಎಂದು ಯೋಚಿಸಿತು. ಆಗ ಹೊಳೆಯ ಮಧ್ಯದಲ್ಲಿ ಇದ್ದ ಬಂಡೆ ಕಣ್ಣಿಗೆ ಬಿದ್ದಿತು.




ನಂದರಿ ಒಂದೇ ನೆಗೆತಕ್ಕೆ ಬಂಡೆ ಮೇಲಕ್ಕೆ ಹಾರಿತು. ಅಲ್ಲಿಂದ ಒಂದೇ ನೆಗೆತಕ್ಕೆ ದ್ವೀಪವನ್ನು ಸೇರಿತು. ಇದು ಕಷ್ಟದ ಕೆಲಸವಾದರು ಅದು ಧೈರ್ಯದಿಂದ ಮಾಡಿತು.

ನಂದರಿ ದ್ವೀಪದಲ್ಲಿದ್ದ ಮಾವಿನ ಹಣ್ಣುಗಳನ್ನು ತಿಂದು ಖುಷಿ ಪಟ್ಟಿತು. ನಂತರ ಅಲ್ಲಿಂದ ಬಂಡೆ ಮೇಲಕ್ಕೆ ಒಂದು ನೆಗೆತ. ಬಂಡೆಯಿಂದ ಈ ದಡಕ್ಕೆ ಒಂದು ನೆಗೆತ ಜಿಗಿದ ಅದು ಮನೆಗೆ ಬಂದಿತು.


ಅಪ್ಪ ಅಮ್ಮನಿಗೆ ಎಲ್ಲ ವಿಷಯ ಹೇಳಿತು. ಗೆಳೆಯರನ್ನು ದ್ವೀಪಕ್ಕೆ ಕರೆಯಿತು. “ದ್ವೀಪ ಬಹಳ ದೂರದಲ್ಲಿದೆ. ನಾವು ಬರುವುದಿಲ್ಲ” ಎಂದು ಗೆಳೆಯರು ಒಪ್ಪಲಿಲ್ಲ.

ನಂದರಿ ಮಾತ್ರ ಹಸಿವು ಆದಾಗಲೆಲ್ಲಾ ದ್ವೀಪಕ್ಕೆ ಹೋಗಿ ಬರುತ್ತಿತ್ತು. ಇದನ್ನು ಒಂದು ಮೊಸಳೆ ನೋಡುತ್ತಾ ಇತ್ತು. ಅದಕ್ಕೆ ಈ ಕೋತಿಯನ್ನು ಹಿಡಿದು ತಿನ್ನಬೇಕೆಂಬ ಆಸೆ ಆಯಿತು.

ಮಳೆಗಾಲದ ಒಂದು ದಿನ ಹೊಳೆಯಲ್ಲಿ ನೀರು ಜಾಸ್ತಿ ಆಗಿ ಬಂಡೆ ಮುಚ್ಚಿಕೊಳ್ಳುತ್ತಾ ಬಂದಿತ್ತು. ಆ ದಿನ ನಂದರಿ ಹೊಳೆಯ ಹತ್ತಿರ ಬಂದಾಗ ಬಂಡೆ ಸ್ವಲ್ಪ ಮಾತ್ರ ಕಾಣಿಸುತ್ತಿತ್ತು.




ನಂದರಿ ತುಂಬಾ ಎಚ್ಚರಿಕೆಯಿಂದ ಬಂಡೆ ಮೇಲಕ್ಕೆ ನೆಗೆದು, ಅಲ್ಲಿಂದ ದ್ವೀಪವನ್ನು ಸೇರಿತು. ಹಣ್ಣುಗಳನ್ನು ತಿಂದು ಖುಷಿ ಪಟ್ಟಿತು. ಹಿಂದಿರುಗಲು ಬಂಡೆಯ ಮೇಲಕ್ಕೆ ನೆಗೆಯಲು ಸಿದ್ಧವಾದ ಅದು ತಕ್ಷಣ ಹಾಗೆ ನಿಂತಿತು.



'ಬಂಡೆ ಮಾತ್ರ ದೊಡ್ಡದಾಗಿ ಕಾಣುತ್ತಿದೆಯಲ್ಲ! ಆದರೆ ನೀರಿನ ಮಟ್ಟ ಏನೂ ಕಡಿಮೆ ಆಗಿಲ್ಲ. ಇದರಲ್ಲಿ ಏನೋ ಅನುಮಾನ ಇದೆ. ಅದಕ್ಕೆ ಒಂದು ಉಪಾಯ ಮಾಡುವೆನು.' ಹೀಗೆ ಯೋಚಿಸಿದ ನಂದರಿ ಬಂಡೆಯನ್ನು "ನೀನು ಚೆನ್ನಾಗಿರುವೆಯಾ?" ಎಂದು ಕೇಳಿತು. ಉತ್ತರ ಇಲ್ಲ!

"ನೀನು ಈ ದಿನ ಮಾತನಾಡುತ್ತಿಲ್ಲ ಏಕೆ?" ಎಂದು ಮತ್ತೆ ಕೇಳಿತು ನಂದರಿ. 'ಈ ಬಂಡೆ ಪ್ರತಿದಿನ ಕೋತಿ ಜೊತೆ ಮಾತನಾಡುತ್ತಿತ್ತು ಎನಿಸುತ್ತಿದೆ' ಎಂದು ಬಂಡೆ ಮೇಲೆ ಮಲಗಿದ್ದ ಮೊಸಳೆ ಯೋಚಿಸಿತು.

"ಏನು ಕೇಳಿದೆ ತಮ್ಮಾ?" ಎಂದಿತು ಮೊಸಳೆ. ಮೊಸಳೆಯ ಬಾಲ ಮತ್ತು ತಲೆ ನೀರಿನಲ್ಲಿ ಮುಳುಗಿ ಹೋಗಿತ್ತು. ನಂದರಿಗೆ ಮೊಸಳೆ ಉಪಾಯ ಗೊತ್ತಾಯಿತು.




“ಓ! ಮೊಸಳೆ ಅಣ್ಣ, ನಿನಗೆ ಏನು ಬೇಕು?” ಎಂದಿತು ನಂದರಿ. “ನಿನ್ನನ್ನು ನಾನು ತಿನ್ನಬೇಕು” ಉತ್ತರಿಸಿತು ಮೊಸಳೆ. 'ಮೊಸಳೆಯಿಂದ ತಪ್ಪಿಸಿಕೊಳ್ಳುವುದು ಹೇಗೆ?' ಎಂದು ಯೋಚಿಸಿದ ನಂದರಿ ಒಂದು ಉಪಾಯ ಮಾಡಿತು.

“ಮೊಸಳೆ ಅಣ್ಣಾ! ನಿನ್ನ ಆಸೆಯನ್ನು ನಾನು ಪೂರ್ತಿ ಮಾಡುವೆನು. ನೀನು ಬಾಯಿಯನ್ನು ಅಗಲವಾಗಿ ತೆರೆದಿಟ್ಟುಕೋ. ನಾನು ನೇರವಾಗಿ ನಿನ್ನ ಬಾಯಿಯ ಒಳಕ್ಕೆ ನೆಗೆಯುವೆನು. ಆದರೆ ನೀನು ಬಿಗಿಯಾಗಿ ಕಣ್ಣುಗಳನ್ನು ಮುಚ್ಚಿರಬೇಕು. ಸ್ವಲ್ಪ ತಪ್ಪಿದರು ನಿನ್ನ ಕಣ್ಣುಗಳಿಗೆ ಗಾಯವಾಗುವುದು” ಎಂದು ಹೇಳಿತು.

ಮೂರ್ಖ ಮೊಸಳೆ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಬಾಯಿಯನ್ನು ಅಗಲವಾಗಿ ತೆರೆಯಿತು. ನಂದರಿ ಗುರಿ ಇಟ್ಟು ಮೊಸಳೆಯ ಬೆನ್ನ ಮೇಲಕ್ಕೆ ನೆಗೆಯಿತು. ಅಲ್ಲಿಂದ ಮತ್ತೊಂದು ನೆಗೆತಕ್ಕೆ ದಡ ಸೇರಿತು.

“ಮೊಸಳೇ ಅಣ್ಣಾ! ನಿನಗೆ ನನ್ನನ್ನು ಹಿಡಿಯಲು ಆಗುವುದೇ ಇಲ್ಲ” ಎಂದು ನಗುತ್ತಾ ಓಡಿ ಹೋಯಿತು.

ಮೂಲ: ಜಾತಕದ ಕಥೆಗಳು



ಪಿ.ಸರಸ್ವತಿ ವಿ.ವಿಜಯಕಾಂತಿ
ಎಸ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಪ್ರಕೃತಿಯ ಚಮತ್ಕಾರ (35)

ಒಂದು ದಿನ ಮಧ್ಯಾಹ್ನದ ಬಿಸಿಲು ಭಯಂಕರವಾಗಿತ್ತು. ರೈತನೊಬ್ಬ ಬಾದಾಮಿ ಮರದ ಕೆಳಗೆ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಎದುರಿಗೆ ತೋಟದ ನೆಲ ಪೂರ್ತಿ ಕಲ್ಲಂಗಡಿ ಹಣ್ಣಿನ ಗಿಡಗಳು ಹರಡಿ ಬೆಳೆದಿದ್ದವು. ಅಲ್ಲಲ್ಲಿ ಬಳ್ಳಿಗಳ ನಡುವೆ ದೊಡ್ಡ ದೊಡ್ಡ ಕಲ್ಲಂಗಡಿ ಹಣ್ಣುಗಳು ಬಿಟ್ಟಿದ್ದವು.

ರೈತ ತಲೆ ಎತ್ತಿ ಮೇಲೆ ನೋಡಿದನು. ಮರದಲ್ಲಿ ಅಲ್ಲೊಂದು ಇಲ್ಲೊಂದು ಬಾದಾಮಿ ಹಣ್ಣುಗಳು ಬಿಟ್ಟಿದ್ದವು.

"ಅಷ್ಟು ಚಿಕ್ಕ ಬಳ್ಳಿಯಲ್ಲಿ ಎಷ್ಟು ದಪ್ಪ ಕಲ್ಲಂಗಡಿ ಹಣ್ಣುಗಳು. ಇಷ್ಟು ದೊಡ್ಡದಾದ ದಪ್ಪ ಮರದಲ್ಲಿ ಚಿಕ್ಕ ಚಿಕ್ಕ ಬಾದಾಮಿ ಹಣ್ಣುಗಳು" ಎಂದು ಆತ ಮನದಲ್ಲಿಯೇ ನಕ್ಕನು.




ಈ ರೀತಿ ಯೋಚಿಸುತ್ತಿರುವಾಗಲೇ ಅವನ ಮೇಲೆ 'ಟಪ್' ಎಂದು ಒಂದು ಬಾದಾಮಿ ಹಣ್ಣು ಬಿದ್ದಿತು. ರೈತ ಹೆದರಿದನು.

"ಆಹಾ! ಈಗ ನನಗೆ ಅರ್ಥವಾಯಿತು. ಬಾದಾಮಿ ಮರದ ಕಾಯಿ ಕಲ್ಲಂಗಡಿ ಹಣ್ಣಿನಷ್ಟು ದಪ್ಪ ಇದ್ದಿದ್ದರೆ ನನ್ನ ಗತಿ ಏನಾಗುತ್ತಿತ್ತು!"

ರೈತನಿಗೆ ಪ್ರಕೃತಿಯ ಚಮತ್ಕಾರವನ್ನು ನೋಡಿ ಆಶ್ಚರ್ಯವಾಯಿತು

ಮೂಲ: ಇರಾನ್ ದೇಶದ ಕಥೆ



ಪ್ರಯಾಣಿಕ ಮತ್ತು ತೆಂಗಿನಕಾಯಿ

ಮಾರ್ಕೊಸ್ ತನ್ನ ಕುದುರೆಯ ಮೇಲೆ ತೆಂಗಿನ ಕಾಯಿಗಳನ್ನು ತುಂಬಿಕೊಂಡು ಪ್ರಯಾಣ ಮಾಡುತ್ತಿದ್ದನು. ದಾರಿಯಲ್ಲಿ ಚಿಕ್ಕ ಹುಡುಗನನ್ನು ನೋಡಿದನು.

ತಾನು ಹೋಗ ಬೇಕಾಗಿದ್ದ ಊರಿನ ಹೆಸರನ್ನು ಹೇಳಿ "ಆ ಊರಿಗೆ ಹೋಗಲು ಸಮಯ ಎಷ್ಟು ಬೇಕಾಗುವುದು?" ಎಂದು ಕೇಳಿದನು.

ಹುಡುಗ ಕುದುರೆಯನ್ನು ನೋಡಿದನು. "ನೀವು ನಿಧಾನವಾಗಿ ಹೋದರೆ ಬೇಗ ಊರನ್ನು ಸೇರಬಹುದು. ಆದರೆ ವೇಗವಾಗಿ ಹೋದರೆ ತುಂಬಾ ಸಮಯ ಬೇಕಾಗುವುದು" ಎಂದು ಹೇಳಿದನು.




ಮಾರ್ಕೋಸ್ ಆ ಹುಡುಗನನ್ನು ಆಶ್ಚರ್ಯದಿಂದ ನೋಡಿದನು. 'ವಿಚಿತ್ರವಾಗಿ ಮಾತನಾಡುತ್ತಾನೆ' ಎಂದುಕೊಂಡು ಕುದುರೆಯನ್ನು ವೇಗವಾಗಿ ಓಡಿಸಿದನು. ಸ್ವಲ್ಪ ದೂರ ಹೋಗುವಷ್ಟರಲ್ಲಿ ತೆಂಗಿನ ಕಾಯಿಗಳು ಒಂದೊಂದಾಗಿ ಕೆಳಗೆ ಬೀಳಲು ಆರಂಭಿಸಿದವು. ಕುದುರೆಯನ್ನು ನಿಲ್ಲಿಸಿ ತೆಂಗಿನ ಕಾಯಿಗಳನ್ನು ಆರಿಸಿಕೊಂಡನು.

"ಅಯ್ಯೋ! ಹೊತ್ತಾಯಿತು. ಬೇಗ ಊರು ಸೇರಬೇಕು" ಎಂದು ಪುನಃ ಕುದುರೆಯನ್ನು ವೇಗವಾಗಿ ಓಡಿಸಿದನು. ಮತ್ತೆ ತೆಂಗಿನ ಕಾಯಿಗಳು ನಾಲ್ಕು ದಿಕ್ಕಿಗೂ ಚೆಲ್ಲಾಪಿಲ್ಲಿಯಾಗಿ ಬಿದ್ದವು. ಕುದುರೆಯನ್ನು ನಿಲ್ಲಿಸಿ ಪುನಃ ಕಾಯಿಗಳನ್ನು ಆಯ್ದುಕೊಂಡನು. ಈ ರೀತಿ ದಾರಿ ಉದ್ದಕ್ಕೂ ಕುದುರೆಯನ್ನು ನಿಲ್ಲಿಸಿ ಊರಿಗೆ ಹೋಗುವಷ್ಟರಲ್ಲಿ ಕತ್ತಲಾಯಿತು.

'ಓಹೋ! ನಿಧಾನವಾಗಿ ಹೋದರೆ ಬೇಗ ಊರನ್ನು ಸೇರಬಹುದು ಎಂದು ಆ ಹುಡುಗ ಹೇಳಿದ್ದು ಇದಕ್ಕಾಗಿ' ಎಂದು ಮಾರ್ಕೋಸ್‌ಗೆ ಈಗ ತಿಳಿಯಿತು.

ಮೂಲ: ಫಿಲಿಪಿನ್ಸ್ ಜನಪದ ಕಥೆ




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

36 ಕಂಡು ಹಿಡಿಯೋಣ ಬಾ!



ನೀರಲ್ಲಿ ನೇರವಾದ ಕಡ್ಡಿ ಇರುವುದು
ಮಧ್ಯದಲ್ಲಿ ಹೂ ಅರಳಿ ನಗುವುದು
ಅಂದದ ಎಲೆಗಳು ತೇಲುವವು – **ಅದು ಏನು?**

ಶುಭ್ರ ಬಿಳಿಯ ಹಲ್ಲಿನಂತಿಹವು
ಡುಮ್ಮ ಡುಮ್ಮಗೆ ಕಾಣುವವು
ಸುಗಂಧವ ಎಲ್ಲೆಡೆ ಹರಡುವವು
ಹುಡುಗಿಯರು ಮುಡಿಯ ಬಯಸುವರು – **ಅದು ಏನು?**

ಪದರ ಪದರದಂತಹ ಎಲೆಗಳು ಇರುವವು
ಅದರಲ್ಲಿರುವವು ಮೊಗ್ಗಿನಂತ ಮುಳ್ಳುಗಳು – **ಅದು ಏನು?**

ಹಳದಿ ದಳಗಳ ದೊಡ್ಡ ಹೂವು
ಸೂರ್ಯನ ಕಡೆ ಹೊರಳಿ ಅರಳುವುದು – **ಅದು ಏನು?**

ಬಳ್ಳಿಗಳಲ್ಲಿ ಗೊಂಚಲುಗಳು ಮಗುವಿನಂತೆ ನಗುವವು
ಚಿಕ್ಕ ದಳಗಳು ಅರಳಿದರೆ ಎಲ್ಲ ಕಡೆ ಘಂ ಎನ್ನುವುದು – **ಅದು ಏನು?**

ತಿಂಗಳಿನ ಹೆಸರಿನಲಿ ಇರುವುದು
ಹೂವಿನ ಹೆಸರು ಅದು ಹೌದು – **ಅದು ಏನು?**

ಮಲ್ಲೆ ಹೂವು, ಡಿಸೆಂಬರ್ ಹೂವು, ತಾಳೆ ಹೂವು
ದುಂಡುಮಲ್ಲಿಗೆ ಹೂವು, ತಾವರೆ ಹೂವು, ಸೂರ್ಯಕಾಂತಿ ಹೂವು



ಮೈಯ ಬಣ್ಣ ಹಸಿರು
ಬಾಯಿ ಬಣ್ಣ ಹವಳ
ಮನೆಯಲ್ಲೂ ಇರುವುದು
ಕಾಡಿನಲ್ಲೂ ಇರುವುದು – **ಅದು ಏನು?**

ತಲೆಯ ಮೇಲೆ ಹೂ ಇರುವುದು
ಬಿಡಿಸುವರು ಯಾರೂ ಇಲ್ಲ
ಕಾಲಿನಲ್ಲಿ ಮುಳ್ಳುಗಳು ಇರುವವು
ತೆಗೆಯುವವರು ಯಾರು ಇಲ್ಲ – **ಅದು ಏನು?**

ಶರೀರವೆಲ್ಲ ಮಿಂಚುವುದು
ಆದರೆ ಅದು ಮಿಂಚುಹುಳು ಅಲ್ಲ
ತಲೆಯ ಮೇಲೆ ತುರಾಯಿ ಇರುವುದು
ಆದರೆ ಅದು ಹುಂಜ ಅಲ್ಲ
ಉದ್ದ ಕತ್ತು ಇರುವುದು
ಆದರೆ ಅದು ಒಂಟೆ ಅಲ್ಲ
ಹಲವು ಕಣ್ಣುಗಳಿರುವ – **ಅದು ಏನು?**


ಅರಮನೆಗಳಲ್ಲಿ ಇರುವುದು ರಾಜನಲ್ಲ
ಗುಡಿ ಗೋಪುರಗಳಲ್ಲಿ ಇರುವುದು ದೇವರಲ್ಲ
ಅದು ಏನು?






ಈಜಾಡಲು ಗೊತ್ತು ಮೀನಲ್ಲ
ಓಡಾಡಲು ಗೊತ್ತು ಮಾನವನಲ್ಲ
ಗರಿಗಳಿರುವ – **ಅದು ಏನು?**

ಬಾನಲ್ಲಿ ಮನ ಬಂದಂತೆ ಹಾರಾಡುವುದು
ಬಟ್ಟೆ ಹೊಲಿದಂತೆ ಗೂಡು ಕಟ್ಟುವುದು
ಗೂಡು ಗಾಳಿಯಲ್ಲಿ ತೂಗಾಡುವುದು
ಅದು ಏನು?



ಎರಡು ಕಾಲು ಇರುವುದು
ಕುದುರೆಯಂತೆ ಓಡುವುದು
ರೆಕ್ಕೆಗಳಿದ್ದರು ಹಾರಲಾರದ್ದು
ಅದು ಏನು?



ಹಗಲು ನಿದ್ರೆ ರಾತ್ರಿ ಬೇಟೆ
ಮರದ ಪೊಟರೆ ಅದರ ಮನೆ
ಅದು ಏನು?

ಬಾಗಿದ ಚೂಪು ಕೊಕ್ಕು
ನೋಟ ಬಲು ಚುರುಕು
ಒರಟು ರೆಕ್ಕೆಗಳಿರುವುದು
ಎತ್ತರೆತ್ತರಕ್ಕೆ ಹಾರುವುದು – **ಅದು ಏನು?**



ಕೊಳಗಳಲ್ಲಿ ಮೀನು ಹಿಡಿಯುವುದು
ಒಂಟಿ ಕಾಲಲ್ಲಿ ನಿಲ್ಲುವುದು – **ಅದು ಏನು?**



ಕಾಡಿನಲ್ಲಿ ಅಲೆದಾಡುವುದು
ಇಂಪಾದ ಗಾನವ ಹರಿಸುವುದು
ಕಣ್ಣಿಗೆ ಕಾಣದಂತೆ ಮರೆಯಾಗಿರುವುದು
ಅದು ಏನು?

ಕಪ್ಪು ತಲೆ ಕಂದು ದೇಹ
ಕಣ್ಣ ಸುತ್ತ ಹಳದಿ ವೃತ್ತ
ಕಾಲು ಹಳದಿ ಚಪ್ಪಟೆ ಕೊಕ್ಕು
ಮಾನವರಂತೆ ಶಬ್ದ ಮಾಡುವ – **ಅದು ಏನು?**

ಮೈನಾ, ಉಷ್ಟ್ರಪಕ್ಷಿ, ಗೀಜಗ, ಬಾತುಕೋಳಿ
ಹದ್ದು, ನವಿಲು, ಗಿಳಿ, ಕೋಗಿಲೆ
ಪಾರಿವಾಳ, ಕೊಕ್ಕರೆ, ಹುಂಜ, ಗೂಬೆ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ದಾಟುವುದೋ? ಬೇಡವೋ?

ಒಂದು ಹಸಿರಾದ ಬೆಟ್ಟ. ಆ ಬೆಟ್ಟದ ಪಕ್ಕದಲ್ಲಿ ಒಂದು ಕುದುರೆ ಮರಿ ಅಮ್ಮನ ಜೊತೆ ಇತ್ತು. ಆ ಪುಟ್ಟ ಕುದುರೆ ಮರಿ ಅಮ್ಮನನ್ನು ಬಿಟ್ಟು ಎಲ್ಲಿಗು ಹೋಗುತ್ತಿರಲಿಲ್ಲ.

ಒಂದು ದಿನ ಅದರ ಅಮ್ಮ "ನೀನು ಯಾವಾಗಲು ಚಿಕ್ಕ ಮಗುವಿನಂತೆ ನನ್ನನ್ನೇ ಸುತ್ತಿ ಸುತ್ತಿ ಬರುವೆಯಲ್ಲ! ಒಬ್ಬನೇ ಕೆಲಸ ಮಾಡುವುದನ್ನು ಕಲಿಯುವುದು ಯಾವಾಗ?" ಎಂದು ಕೇಳಿತು.

"ನಾನು ತಯಾರು! ಕೆಲಸ ಕೊಡು" ಎಂದಿತು ಮರಿ.

"ಹೌದಾ! ಇದೋ, ಈ ಭತ್ತದ ಮೂಟೆಯನ್ನು ಮಿಲ್‌ಗೆ ತೆಗೆದುಕೊಂಡು ಹೋಗು ನೋಡೋಣ" ಎಂದಿತು.





ತಕ್ಷಣ ಮರಿ ಚಟುವಟಿಕೆಯಿಂದ ಕೆಲಸ ಆರಂಭಿಸಿತು. ಮೂಟೆಯನ್ನು ಬೆನ್ನ ಮೇಲೆ ಇಟ್ಟುಕೊಂಡಿತು. ಸಂತೋಷವಾಗಿ ಮಿಲ್ ಕಡೆಗೆ ಹೊರಟಿತು.

ಸ್ವಲ್ಪ ದೂರ ಹೋಗುವಷ್ಟರಲ್ಲೇ 'ದಿಢೀರ್' ಎಂದು ನಿಂತು ಬಿಟ್ಟಿತು. "ಅಯ್ಯೋ! ಇದೇನು? ನದಿ ನೀರು ಹರಿಯುತ್ತಿದೆ. ಇದನ್ನು ದಾಟುವುದೋ? ಬೇಡವೋ?" ಎಂಬ ಗೊಂದಲದಿಂದ ಸುತ್ತಮುತ್ತ ನೋಡಿತು.

ಪಕ್ಕದಲ್ಲಿ ಒಂದು ಎತ್ತು ಹುಲ್ಲು ಮೇಯುತ್ತಿತ್ತು. "ಎತ್ತು ಮಾಮ! ಈ ನದಿಯನ್ನು ದಾಟಬಹುದಾ?" ಎಂದು ಕೇಳಿತು ಮರಿ.

"ನೋಡಿದ್ರೆ ಕಾಣಲ್ವಾ! ನೀರು ನನ್ನ ಮೊಣಕಾಲಿನವರೆಗು ಇಲ್ಲ. ದಾಟಲು ಏಕೆ ಆಗುವುದಿಲ್ಲ?" ಎಂದಿತು. ಕುದುರೆ ಮರಿಗೆ ಧೈರ್ಯ ಬಂದಿತು. ನೀರಿನ ಹತ್ತಿರಕ್ಕೆ ನಡೆಯ ತೊಡಗಿತು.






“ಏಯ್! ನಿಲ್ಲು...ನಿಲ್ಲು... ಅವಸರ ಪಡಬೇಡ” ಎಂಬ ಶಬ್ದ ಕೇಳಿಸಿತು. “ಯಾರದು?” ಎಂದು ಮರಿ ತಲೆ ಎತ್ತಿ ನೋಡಿತು. ಮರದ ಕೊಂಬೆಯಲ್ಲಿದ್ದ ಅಳಿಲು “ಆ ಎತ್ತು ಹೇಳಿದ ಮಾತು ಕೇಳಬೇಡ. ನದಿ ತುಂಬ ಆಳ ಇದೆ. ಈ ಹರಿಯುವ ನೀರು ನನ್ನ ಗೆಳೆಯನನ್ನು ಕೊಚ್ಚಿಕೊಂಡು ಹೋಯಿತು” ಎಂದು ಹೇಳಿತು.

ನೀರು ಆಳವಾಗಿದೆಯೋ ಇಲ್ಲವೋ ಎಂದು ಮರಿಗೆ ಗೊಂದಲವಾಯಿತು. 'ಮನೆಗೆ ಹೋಗಿ ಅಮ್ಮನನ್ನು ಕೇಳಿ ಬರುವೆನು' ಎಂದು ಯೋಚಿಸುತ್ತಾ ವಾಪಸ್ಸು ಮನೆಗೆ ಬಂದಿತು. ಅಮ್ಮನಿಗೆ ಆಶ್ಚರ್ಯ!

“ಯಾಕೆ ಇಷ್ಟು ಬೇಗ ಬಂದೆ?” ಎಂದು ಕೇಳಿತು. “ದಾರಿಯಲ್ಲಿ ನದಿಯನ್ನು ನೋಡಿದೆ. ಅದು ಆಳವಾಗಿದೆಯಂತೆ” ಎಂದಿತು ಮರಿ.

“ಯಾರು ಹೇಳಿದ್ದು? ದಿನಾ ನಾನು ಅದೇ ದಾರಿಯಲ್ಲಿ ಎಷ್ಟು ಬಾರಿ ಹೋಗಿ ಬರುತ್ತೇನೆ” ಎಂದಿತು ಅಮ್ಮ.




“ಇಲ್ಲ ಅಮ್ಮ, ಎತ್ತು ಮಾಮ ಹೋಗಬಹುದು ಎಂದಿತು. ಆದರೆ ಅಳಿಲು ಆ ‘ನೀರು ನಿನ್ನನ್ನು ಕೊಚ್ಚಿಕೊಂಡು ಹೋಗುತ್ತದೆ’ ಎಂದು ಹೇಳಿತು. ನಾನೇನು ಮಾಡಲಿ?” ಎಂದು ಕೇಳಿತು ಮರಿ.

ಅಮ್ಮನ ಮುಖದಲ್ಲಿ ನಗು ಕಾಣಿಸಿತು. “ಎತ್ತು ಮಾಮನ ಎತ್ತರ ಎಷ್ಟು? ಅಳಿಲಿನ ಎತ್ತರ ಎಷ್ಟು? ಎರಡನ್ನು ಹೋಲಿಸಿದರೆ ಯಾರು ಎತ್ತರ ಇರುವುದು? ಚೆನ್ನಾಗಿ ಯೋಚಿಸಿ ನೋಡು! ನೀನು ಸರಿಯಾಗಿ ಯೋಚಿಸಿದರೆ ನದಿ ದಾಟುವುದೋ ಬೇಡವೋ ನಿನಗೆ ಗೊತ್ತಾಗುತ್ತದೆ” ಎಂದು ಹೇಳಿತು.

'ಅಹಾ! ಈಗ ನನಗೆ ಅರ್ಥವಾಯಿತು. ನದಿ ನೀರು ಆಳ ಇಲ್ಲ. ಇದು ನನಗೆ ಮೊದಲೇ ಏಕೆ ತಿಳಿಯಲಿಲ್ಲ?' ಮರಿ ಜಿಗಿಯುತ್ತಾ ಆನಂದದಿಂದ ನದಿಯತ್ತ ಹೊರಟಿತು.

ಚೀನಾದ ಜನಪದ ಕಥೆ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ನಮ್ಮ ಬೆಕ್ಕಿನ ಮರಿ



ಬಾನು ಮತ್ತು ವೇಣು ಒಂದು ಬೆಕ್ಕನ್ನು ಸಾಕಿದ್ದರು. ಒಂದು ದಿನ ಅದು
ಣದಂತಾಯಿತು. ಎಲ್ಲಿ ಹುಡುಕಿದರು ಸಿಗಲಿಲ್ಲ.

ಮೂರು ದಿನ ಕಳೆಯಿತು.

"ಮಿಯ್ಯಾವ್. . ಮಿಯ್ಯಾವ್. . ."

ಶಬ್ದ ಎಲ್ಲಿಂದ ಬರುತ್ತಿದೆ?' ಬಾನು ಏಣಿ ಹತ್ತಿ ಮೇಲೆ ನೋಡಿದಳು.

"ನಮ್ಮ ಬೆಕ್ಕು ಅಟ್ಟದ ಮೇಲಿದೆ ವೇಣು. ಅದರ ಜೊತೆ ಮರಿಗಳಿವೆ.
ೀಗ ಬಂದು ನೋಡು" ಎಂದಳು. ವೇಣು ಏಣಿ ಹತ್ತಿ ನೋಡಿದನು.
ಲ್ಲಿ ಅವರ ಬೆಕ್ಕು ಬುಟ್ಟಿಯಲ್ಲಿ ಮಲಗಿತ್ತು. ಅದರ ಜೊತೆ
ದು ಮರಿಗಳಿದ್ದವು.



ಬಾನು ಮತ್ತು ವೇಣುಗೆ ತುಂಬಾ ಖುಷಿ ಆಯಿತು. ಗೆಳೆಯರನ್ನು ಮನೆಗೆ ಕರೆದು ಬೆಕ್ಕಿನ ಮರಿಗಳನ್ನು ತೋರಿಸಿ ಹೆಮ್ಮೆ ಪಟ್ಟರು.

ಮರಿಗಳು ಬೆಳೆದವು. ಅಲ್ಲಿ ಇಲ್ಲಿ ಓಡಾಡ ತೊಡಗಿದವು. ಒಂದರ ಮೇಲೆ ಒಂದು ಹತ್ತಿ ಆಟ ಆಡಿದವು. ಜಗಳ ಕಾಯುತ್ತಿದ್ದವು. ಉರುಳಾಡುತ್ತಿದ್ದವು. ಹಂಡೆ ಪಾತ್ರೆ ಒಳಗೆ ನೆಗೆದು ಬೀಳಿಸುತ್ತಿದ್ದವು.

ಬಾನು ಮತ್ತು ವೇಣು ಬೂದು ಬಣ್ಣದ ಬೆಕ್ಕಿನ ಮರಿಯನ್ನು ತಮಗಾಗಿ ಎತ್ತಿಟ್ಟುಕೊಂಡು, ಉಳಿದ ನಾಲ್ಕು ಮರಿಗಳನ್ನು ತಮ್ಮ ಗೆಳೆಯರಿಗೆ ಕೊಟ್ಟರು.

ಬೂದು ಬಣ್ಣದ ಮರಿಗೆ ಅವರು ದಿನಾ ಊಟ ಕೊಡುತ್ತಿದ್ದರು. ಆಟ ಆಡಿಸುತ್ತಿದ್ದರು. ಸಮಯ ಸರಿಯುವುದೇ ಗೊತ್ತಾಗದಂತೆ ಅದರ ಜೊತೆ ಅವರು ಆಟ ಆಡುತ್ತಿದ್ದರು. ಅದನ್ನು ಜೊತೆಯಲ್ಲಿಯೇ ಮಲಗಿಸಿ ಕೊಳ್ಳುತ್ತಿದ್ದರು.

ಒಂದು ದಿನ ಬಾನು ಮತ್ತು ವೇಣು ಬೂದು ಬಣ್ಣದ ಮರಿಯನ್ನು ಹೊರಗೆ ಎತ್ತಿಕೊಂಡು ಹೋದರು. ಅಲ್ಲಿ ಒಂದು ಹುಲ್ಲಿನ ಬಣವೆ ಇತ್ತು. ಬಣವೆಯಲ್ಲಿ ಇದ್ದ ಹುಲ್ಲು ಗಾಳಿಗೆ ಹಾರಾಡುತ್ತಿತ್ತು. ಅದನ್ನು ಹಿಡಿಯಲು ಬೂದು ಬಣ್ಣದ ಬೆಕ್ಕಿನ ಮರಿ ಜಿಗಿದಾಡುತ್ತಿತ್ತು.

ಅದು ಆಡುವ ಆಟವನ್ನು ನೋಡುತ್ತಾ ಮಕ್ಕಳೆಲ್ಲರು ನಗುತ್ತಿದ್ದರು. ಸ್ವಲ್ಪ ಸಮಯದ ನಂತರ ಎಲ್ಲರು ಬೇರೆ ಆಟದಲ್ಲಿ ತೊಡಗಿದರು. ಬೆಕ್ಕಿನ ಮರಿಯನ್ನು ಮರೆತರು.

ಕತ್ತಲಾಯಿತು. ಮನೆಗೆ ಹೊರಟಾಗ ಬೆಕ್ಕಿನ ಮರಿ ಕಾಣಿಸಲಿಲ್ಲ. ಅಲ್ಲಿ ಇಲ್ಲಿ ಎಲ್ಲ ಕಡೆ ಹುಡುಕಿದರು. ಸಿಗಲಿಲ್ಲ. ಅಳುತ್ತಾ ಇಬ್ಬರು ಮನೆಗೆ ಬಂದರು.

“ಅಯ್ಯೋ ಪಾಪ! ಬೂದು ಬಣ್ಣದ ಬೆಕ್ಕಿನ ಮರಿಗೆ ಯಾರು ಹಾಲು ಕೊಡುತ್ತಾರೆ? ಚಳಿಯಾದರೆ ಅದು ಹೇಗೆ ಮಲಗುತ್ತದೆ?” ಎಂದು ಅವರು ಒಬ್ಬರಿಗೊಬ್ಬರು ಮಾತನಾಡುತ್ತಾ ಇದ್ದರು.



ಅವರ ಕೈಯಲ್ಲಿ ಪುಸ್ತಕ ಇದ್ದರು ಮನಸ್ಸು ಬೆಕ್ಕಿನ ಮರಿ ಮೇಲೆ ಇತ್ತು. ದ್ದಕ್ಕಿದ್ದಂತೆ ಮೂಲೆಯಲ್ಲಿ ಇದ್ದ ಟೋಪಿ ಜರುಗತೊಡಗಿತು.


"ಅಯ್ಯೋ! ಟೋಪಿ ಜರುಗುತ್ತಾ ಇದೆ!" ಎಂದು ಬಾನು ಮತ್ತು ವೇಣು ಬ್ಬರು ಹೆದರಿ ರೂಮಿಗೆ ಓಡಿದರು.

ಟೋಪಿ ಜರುಗುತ್ತಾ ಜರುಗುತ್ತಾ ಅವರ ಹಿಂದೆಯೇ ಬಂದಿತು. "ಅಮ್ಮ! ಮ್ಮ! ಇಲ್ಲಿ ನೋಡಿ. ಟೋಪಿ ಅದೇ ಜರುಗುತ್ತಿದೆ" ಎಂದು ಕೂಗಿದರು. ಮ್ಮ ಓಡಿ ಬಂದರು. ಟೋಪಿ ಹೊರಗೆ ಬೂದು ಬಣ್ಣದ ಬೆಕ್ಕಿನ ಮರಿ ಾಲ ತೋರಿಸಿ ನಕ್ಕರು ಅಮ್ಮ.

ಓ! ಇದು ನಮ್ಮ ಬೆಕ್ಕಿನ ಮರಿ" ಎಂದಳು ಬಾನು.

"ನೀನು ಇಲ್ಲೇ ಬಚ್ಚಿಟ್ಟು ಕೊಂಡಿದ್ದೆಯಾ? ನಿನ್ನನ್ನು ಎಲ್ಲೆಲ್ಲಿ ಹುಡುಕಿದೆವು ೊತ್ತಾ?" ಎಂದು ಮಕ್ಕಳು ಬೆಕ್ಕಿನ ಮರಿಯನ್ನು ಪ್ರೀತಿಯಿಂದ ಅಪ್ಪಿಕೊಂಡರು.

ಮೂಲ: ರಷ್ಯಾ ಕಥೆ



Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮಾಯದ ಮದ್ದಳೆ

ಒಂದಾನೊಂದು ಕಾಲದಲ್ಲಿ ಜಪಾನ್ ದೇಶದಲ್ಲಿ ಜೆನ್‌ಕೋರ್ ಎಂಬ ಒಬ್ಬ ಹುಡುಗನಿದ್ದನು. ಅವನ ಹತ್ತಿರ ಒಂದು ಮದ್ದಳೆ ಇತ್ತು.

ಆ ಮದ್ದಳೆಯ ಒಂದು ಪಕ್ಕ ಹೊಡೆದು "ಮಾಯದ ಮದ್ದಳೆ, ಉದ್ದ ಮೂಗು ಬೇಕು" ಎಂದರೆ ಉದ್ದ ಮೂಗು ಆಗುವುದು. ಅದರ ಇನ್ನೊಂದು ಪಕ್ಕ ಹೊಡೆದು "ಚಪ್ಪಟೆ ಮೂಗು ಬೇಕು" ಎಂದರೆ ಹಾಗೆ ಆಗುವುದು.

ಉದ್ದ ಮೂಗು ಯಾರು ಯಾರಿಗೆ ಅಗತ್ಯವಿದೆ, ಚಪ್ಪಟೆ ಮೂಗು ಯಾರು ಯಾರಿಗೆ ಬೇಕು, ಅವರಿಗೆಲ್ಲ ಜೆನ್‌ಕೋರ್ ತನ್ನ ಮದ್ದಳೆಯನ್ನು ಹೊಡೆದು ಸಹಾಯ ಮಾಡುತ್ತಿದ್ದನು.



ಒಂದು ದಿನ ಅವನು ಮಾಯದ ಮದ್ದಳೆ ಮೇಲೆ ಹೊಡೆದು ತನ್ನ ಮೂಗು ಎಷ್ಟು ಉದ್ದ ಆಗುವುದು ಎಂದು ನೋಡಲು ಆಸೆಪಟ್ಟನು.

ಒಂದು ಆಟದ ಮೈದಾನಕ್ಕೆ ಹೋದನು, ಮದ್ದಳೆಯನ್ನು ತಟ್ಟಿದನು. ಮದ್ದಳೆಯ ಒಂದು ಪಕ್ಕ ತಟ್ಟಿದಂತೆ ಮೂಗು ಉದ್ದ ಆಗುತ್ತಲೇ ಇತ್ತು. ಉದ್ದ ಮೂಗಿನಿಂದ ಆತನಿಗೆ ನಿಲ್ಲಲು ಆಗುತ್ತಿರಲಿಲ್ಲ. ನೆಲದಲ್ಲಿ ಅಂಗಾತ ಮಲಗಿದನು. ಮದ್ದಳೆ ಬಾರಿಸುತ್ತಲೇ ಇದ್ದನು. ಮರದ ಎತ್ತರಕ್ಕಿಂತಲೂ ಅವನ ಮೂಗು ಇನ್ನು ಉದ್ದ ಆಯಿತು.



ಬೆಟ್ಟಗಳನ್ನು ದಾಟಿ ಬೆಳೆಯಿತು. ಕೊನೆಗೆ ಆಕಾಶದ ಎತ್ತರಕ್ಕೂ ಹೋಯಿತು.

ಆಕಾಶದಲ್ಲಿ ಬಡಗಿಗಳು ಸೇತುವೆ ಕಟ್ಟುವ ಕೆಲಸ ಮಾಡುತ್ತಿದ್ದರು. ಅವರು ಹುಡುಗನ ಉದ್ದವಾಗಿ ಬೆಳೆದಿದ್ದ ಮೂಗಿನ ತುದಿಯನ್ನು ಸೇತುವೆಗೆ ಸೇರಿಸಿ ಮೊಳೆ ಹೊಡೆದರು.

ಜೆನ್‌ಕೋರ್‌ಗೆ ಮೂಗಿನ ತುದಿಯಲ್ಲಿ ಏನೋ ಆಗುತ್ತಿದೆ ಎನಿಸಿತು. ಅವನಿಗೆ ಅದಕ್ಕಿಂತ ಉದ್ದ ಮೂಗನ್ನು ಮಾಡಲು ಆಗಲಿಲ್ಲ. ಮೂಗಿನ ಉದ್ದ ಕಡಿಮೆ ಮಾಡಲು ಅವನು ಮದ್ದಳೆಯ ಮತ್ತೊಂದು ಪಕ್ಕ ಬಾರಿಸತೊಡಗಿದನು.



ಮೂಗಿನ ಉದ್ದ ಕಡಿಮೆ ಆಗ ತೊಡಗಿತು. ಆದರೆ ಅದಕ್ಕೆ ಮೊಳೆ ಹೊಡೆದಿದ್ದರಿಂದ ಮೂಗಿನ ಉದ್ದ ಕಡಿಮೆ ಆಗುತ್ತಾ ಆಗುತ್ತಾ ಹುಡುಗ ಮೇಲೆ ಮೇಲೆ ಹೋದನು. ಅಲ್ಲಿ ಅವನ ಮೂಗಿನ ತುದಿ ಸೇತುವೆ ಒಳಗೆ ಸೇರಿರುವುದನ್ನು ನೋಡಿದನು.

ಮೊಳೆ ಕಿತ್ತನು. ಹಾ! ಮೊಳೆ ಕಿತ್ತಾಕ್ಷಣ ಜೆನ್‌ಕೋರ್ ಕೆಳಗೆ ಬೀಳಲಾರಂಭಿಸಿದನು. ಅವನ ಅದೃಷ್ಟ ಚೆನ್ನಾಗಿತ್ತು. ಅವನು ಅಲ್ಲಿಯೇ ಇದ್ದ ಕೊಳದೊಳಕ್ಕೆ 'ಧೊಪ್' ಎಂದು ಬಿದ್ದು ಬಿಟ್ಟನು.

ನೀರಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಈಜಾಡತೊಡಗಿದನು. ಅವನ ಕೈ ಕಾಲುಗಳು ಮೀನಿನಂತೆ ಬದಲಾಗತೊಡಗಿದವು. ಈಗಲೂ ಆ ಕೊಳದಲ್ಲಿರುವ ಮೀನುಗಳನ್ನು "ಜೆನ್‌ಕೋರ್ ಕುಟುಂಬದ ಮೀನುಗಳು" ಎಂದು ಹೇಳುತ್ತಾರೆ.

ಮೂಲ: ಜಪಾನ್ ಜನಪದ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಕವಿ ಕರಿರಾಜ

ಯಾವಾಗಲು ಕಲ್ಪನೆಯಲ್ಲಿ ತೇಲುತ್ತಾ ಇರುವ, ಕಿಟಕಿಯ ಬಳಿ ಕುಳಿತು ಗಂಟೆಗಟ್ಟಲೆ ಹೊರಗೆ ನೋಡುವ ಅವನನ್ನು ಯಾರಾದರು "ಏನು ಮಾಡುತ್ತಾ ಇರುವೆ?" ಎಂದು ಕೇಳಿದರೆ, ಅವನು "ಹಾಡು ಕಟ್ಟುತ್ತಿರುವೆ" ಎಂದು ಉತ್ತರ ಹೇಳುವನು.

"ದೊಡ್ಡದಾದ ಹಳ್ಳ ಮಾಡಿ, ಹಳ್ಳದಲ್ಲಿ ನೀರು ತುಂಬಿ, ನೀರಿನಲ್ಲಿ ಚಂದ್ರನ ನೋಡಿ, ಚಂದ್ರನಲ್ಲಿ ಚಿತ್ರ ನೋಡಿ" ಎಂದು ಪದ ಜೋಡಿಸಿ ಹೇಳುವನು. "ಇದೋ! ಕವಿ ಕರಿರಾಜ ಬಂದ!" ಎಂದು ಚಿಕ್ಕ ಮಕ್ಕಳು ಅವನನ್ನು ಗೇಲಿ ಮಾಡುತ್ತಿದ್ದರು.


ಒಂದು ದಿನ ಅವನು ತನ್ನ ಅಜ್ಜಿಯ ಮನೆಗೆ ಹೊರಟನು. ದಾರಿಯಲ್ಲಿ ಮರಗಳು, ತೋಟಗಳು, ಹಕ್ಕಿಗಳು ಎಲ್ಲವನ್ನು ನೋಡುತ್ತಾ, ಅಂಗಿಯ ಜೇಬಿನಲ್ಲಿದ್ದ ಬಟಾಣಿ ತಿನ್ನುತ್ತಾ ಹೋಗುತ್ತಿದ್ದನು.



ಹೀಗೆ ಸುತ್ತಮುತ್ತ ನೋಡುತ್ತಾ ಹೋಗುತ್ತಿರುವಾಗ ಅಲ್ಲಿ ಒಂದು ಉದ್ದವಾದ ತೆಂಗಿನಮರ ನೋಡಿದನು. "ಉದ್ದ ಕಾಲಿನ ಹಸಿರು ಟೋಪಿಯ ತೆಂಗಿನಮರವೇ ಹೋಯೇ ಹೋಯೇ. ." ಎಂದು ಹಾಡಿದನು.

ಮುಂದಕ್ಕೆ ಸ್ವಲ್ಪ ದೂರ ನಡೆದಾಗ ಗೂಬೆ ಒಂದು ಕಣ್ಣಿಗೆ ಬಿತ್ತು. ಅದನ್ನು ನೋಡಿ "ಸುತ್ತುವ ಕತ್ತಿನ ಪಿಳಿಪಿಳಿ ಕಣ್ಣಿನ ಗೂಕ್ ಗೂಕ್ ಗೂಬೆಯೇ ಹೋಯೇ ಹೋಯೇ. ." ಎಂದು ಹಾಡಿದನು.

ಅವನಲ್ಲಿ ಆನಂದ ಉಕ್ಕಿ ಉಕ್ಕಿ ಬರುತ್ತಿತ್ತು. "ಉದ್ದ ಕಾಲಿನ ಹಸಿರು ಟೋಪಿಯ ತೆಂಗಿನ ಮರವೇ, ಸುತ್ತುವ ಕತ್ತಿನ ಪಿಳಿಪಿಳಿ ಕಣ್ಣಿನ ಗೂಕ್ ಗೂಕ್ ಗೂಬೆಯೇ ಹೋಯೇ ಹೋಯೇ. ."ಎಂದು ಹಾಡುತ್ತಾ ಹೋಗುತ್ತಿದ್ದನು.



ದೂರದಲ್ಲಿ ನಾಯಿ ಮಣ್ಣು ಕೆರೆಯುತ್ತಾ ಹಳ್ಳ ಮಾಡುತ್ತಿತ್ತು. ಅವನ ಕಣ್ಣಿಗೆ ಅದು ದೂರ ಇದ್ದುದರಿಂದ ನರಿಯಂತೆ ಕಂಡಿತು.

"ನೆಲದಲಿ ಬಿಲ ಮಾಡಿ ಅಡಗುವ ನರಿಯೇ ಹೋಯೇ ಹೋಯೇ. ." ಎಂದು ಹಾಡಿದನು.


“ಆಹಾ! ಅದ್ಭುತ!” ಎಂದು ಕವಿ
ಕರಿರಾಜ ತುಂಬ ಆನಂದದಿಂದ
ಮೈ ಮರೆತನು.

“ಉದ್ದ ಕಾಲಿನ ಹಸಿರು ಟೋಪಿಯು
ತೆಂಗಿನ ಮರವೇ
ಹೊಯೇ ಹೊಯೇ
ಸುತ್ತುವ ಕತ್ತಿನ ಪಿಳಿಪಿಳಿ ಕಣ್ಣಿನ ಗೂಕ್
ಗೂಕ್ ಗೂಬೆಯೇ
ಹೊಯೇ ಹೊಯೇ
ನೆಲದಲಿ ಬಿಲ ಮಾಡಿ ಅಡಗುವ ನರಿಯೇ
ಹೊಯೇ ಹೊಯೇ”

ಹೀಗೆ ಹಾಡುತ್ತಾ ಅಜ್ಜಿ ಮನೆಯ ಹತ್ತಿರ ಬಂದನು. ಆಗ ಕತ್ತಲಾಗ ತೊಡಗಿತ್ತು. “ಅಯ್ಯೋ! ಇದೇನು? ಅಜ್ಜಿ ಮನೆ ಬೀಗ ಹಾಕಿದೆ!” ಅವನಿಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ.

ಹತ್ತಿರದಲ್ಲೇ ಒಂದು ಪಾಳು ಬಿದ್ದಿರುವ ಮನೆ ಕಂಡಿತು. ಮನೆಯ ಹೊರಗೆ ಜಗಲಿಯ ಮೇಲೆ ಮಲಗಿ ನಿದ್ರಿಸಿದನು. ಮಧ್ಯರಾತ್ರಿ ಸಮಯ. ಏನೋ ಶಬ್ದವಾಯಿತು. ದಢಕ್ಕನೆ ಎದ್ದು ಕುಳಿತನು. ಮನೆಯ ಕಿಟಕಿಯಿಂದ ಒಳಗೆ ನೋಡಿದನು. ಎರಡು ಉದ್ದ ಕಾಲುಗಳು ಕಾಣಿಸಿದವು. ಅವು ತೆಂಗಿನ ಮರದಂತೆ ಕಾಣಿಸಿದವು.

ಆಗ “ಉದ್ದ ಕಾಲಿನ ಹಸಿರು ಟೋಪಿಯು ತೆಂಗಿನ ಮರವೇ ಹೊಯೇ ಹೊಯೇ. .”ಎಂದು ಹಾಡಿದನು. ಕಳ್ಳ ಗೊಂದಲದಿಂದ ನೋಡುವಾಗ



“ಸುತ್ತುವ ಕತ್ತಿನ ಪಿಳಿಪಿಳಿ ಕಣ್ಣಿನ ಗೂಕ್ ಗೂಕ್ ಗೂಬೆಯೋ ಹೊಯೋ ಹೊಯೋ. .” ಎಂದು ಹಾಡಿದನು ಇದನ್ನು ಕೇಳಿದ ಕಳ್ಳ 'ಯಾರೋ ಬರುತ್ತಾ ಇದ್ದಾರೆ. ಕದ್ದಿರುವ ಎಲ್ಲವನ್ನು ಬಚ್ಚಿಡೋಣ' ಎಂದು ಹಳ್ಳ ತೆಗೆಯಲು ಆರಂಭಿಸಿದನು. ಅದನ್ನು ನೋಡಿದ ಹುಡುಗ “ನೆಲದಲಿ ಬಿಲ ಮಾಡಿ ಅಡಗುವ ನರಿಯೋ ಹೊಯೋ ಹೊಯೋ. .” ಎಂದು ಹಾಡಿದನು.

ಹೆದರಿದ ಕಳ್ಳ ಕೈಯಲ್ಲಿ ಇರುವುದನ್ನೆಲ್ಲಾ ಅಲ್ಲೇ ಬಿಸಾಕಿ ಓಡ ತೊಡಗಿದನು. ತಕ್ಷಣ ಕರಿರಾಜ “ಕಳ್ಳ. . ಕಳ್ಳ. .” ಎಂದು ಕೂಗಿದನು.

ಅಕ್ಕಪಕ್ಕದ ಮನೆಯವರೆಲ್ಲ ಎದ್ದು ಓಡಿ ಬಂದರು. ಕಳ್ಳನನ್ನು ಹಿಡಿದರು. ಹುಡುಗನ ಧೈರ್ಯ ಮೆಚ್ಚಿದರು. ಅಂದಿನಿಂದ ಕವಿ ಕರಿರಾಜನ ಹಾಡನ್ನು ಎಲ್ಲರು ಆನಂದದಿಂದ ಕೇಳುತ್ತಿದ್ದರು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು



ಬರುತ್ತಿರುವುದು ಯಾರು? (41)

ಸರಕ್. . . . ಸರಕ್. . . .


ಸರಕ್. . . . ಸರಕ್. . . .


ಸರಕ್. . . . ಸರಕ್. . . .

ಇದು ಏನು ಶಬ್ದ?

ಗೂಬೆ ತನ್ನ ದೊಡ್ಡ ಕಣ್ಣುಗಳನ್ನು ಹೊರಳಿಸಿ ಹೊರಳಿಸಿ ನೋಡಿತು. ತುಂಬ ಚಿಕ್ಕ ಶಬ್ದವನ್ನು ಕೇಳಲು ಅದಕ್ಕೆ ತಾನೇ ಸಾಧ್ಯ! ಕಿವಿಯನ್ನು ನಿಮಿರಿಸಿ ಕೇಳಿತು.


ಶಬ್ದವನ್ನು ಕೇಳಿದ ಮೊಲ ಹೆದರಿ ಓಡಿ ಹೋಗಿ ತನ್ನ ಬಿಲವನ್ನು ಸೇರಿಕೊಂಡಿತು. ತಲೆಯನ್ನು ಮಾತ್ರ ಹೊರಗೆ ಇಟ್ಟುಕೊಂಡು ನೋಡಿತು.





ಶಬ್ದ ಕೇಳಿದ ಹಾವು ತಕ್ಷಣ ತಲೆ ಎತ್ತಿ ತನ್ನ ಹೆಡೆಯನ್ನು ಬಿಚ್ಚಿ ಸುತ್ತಮುತ್ತ ನೋಡಿತು. ಸರಕ್ . . ಸರಕ್ . . ಶಬ್ದ ಇನ್ನೂ ಹತ್ತಿರ ಬಂದಿತು.

ಊಸರವಳ್ಳಿ ಶಬ್ದವನ್ನು ಕೇಳಿತು. ಅಪಾಯ ಬಂದಾಗ ಅದು ಬುದ್ಧಿವಂತಿಕೆಯಿಂದ ಬಚ್ಚಿಟ್ಟುಕೊಳ್ಳುವುದು ಅಲ್ಲವೇ! ತಕ್ಷಣ ಅದು ತನ್ನ ಬಣ್ಣ ಬದಲಾಯಿಸಿ ಕೊಂಡಿತು. ಎಲೆಗಳ ಮಧ್ಯದಲ್ಲಿ ಎಲೆ ಆಯಿತು.



ಚಿಟ್ಟೆ ತನ್ನ ರೆಕ್ಕೆಗಳನ್ನು ಪಟಪಟ ಬಡಿಯಿತು. ನಂತರ ಅವುಗಳನ್ನು ಮುದುಡಿಕೊಂಡಿತು. ಹೂಗಳ ಮಧ್ಯೆ ಅಲ್ಲಾಡದಂತೆ ಕುಳಿತಿತು. ಹೂವಿನ ದಳಗಳ ರೀತಿಯಲ್ಲೇ ಇತ್ತು.




ತೆವಳುತ್ತಾ ಸಾಗುತ್ತಿದ್ದ ಬಸವನ ಹುಳು ತನ್ನ ದೇಹವನ್ನು ಚಿಪ್ಪಿನೊಳಕ್ಕೆ ಎಳೆದುಕೊಂಡಿತು. ಕಲ್ಲುಗಳೊಳಗೆ ಕಲ್ಲಾಗಿ ಕಾಣುತ್ತಿತ್ತು.





ಸರಕ್. . . ಸರಕ್. . . ಮುಳ್ಳು ಹಂದಿಯ ಮೈ ನಿಮಿರಿ ನಿಂತಿತು. ಅದರ ದೇಹದ ಮೇಲಿನ ಮುಳ್ಳುಗಳು ನೆಟ್ಟಗೆ ನಿಂತವು.






ನಡೆದು ಹೋಗುತ್ತಿದ್ದ ಏಡಿ ಬಿಲದೊಳಗೆ ಬಚ್ಚಿಟ್ಟುಕೊಂಡಿತು. ಎಲೆ ಮೇಲೆ ಕುಳಿತು ಹಾಡುತ್ತಿದ್ದ ಕಪ್ಪೆ ಒಂದೇ ನೆಗೆತಕ್ಕೆ ನೀರಿಗೆ ಹಾರಿತು.

ಸರಕ್. . . ಸರಕ್. . . ಶಬ್ದ ಹತ್ತಿರ ಹತ್ತಿರ ಬರುತ್ತಾ ಇತ್ತು. ಶಬ್ದ ಬಂದ ದಿಕ್ಕಿನ ಕಡೆಗೆ ಎಲ್ಲವು ನೋಡುತ್ತಾ ಇದ್ದವು.



ಅಂಕು ಡೊಂಕಾದ ದಾರಿಯಲ್ಲಿ
ಬರುತ್ತಿರುವುದು ಯಾರು?
ಓ! ಅದು ನಮ್ಮ ಜರಿ ತಾನೇ!

ಅದರ ಒಂದೊಂದು ಕಾಲಿನಲ್ಲೂ
ಒಂದೊಂದು ಚಪ್ಪಲಿ!
ನಡೆಯಲಾರದೆ ನಡೆದು ಬರುತ್ತಿತ್ತು!



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಓಟದ ಪಂದ್ಯ

ಅದು ಬೇಸಿಗೆಯ ಕಾಲ. ಆನೆ ಒಂದು ಕೊಳದಲ್ಲಿ ಆನಂದದಿಂದ ಈಜಾಡುತ್ತಿತ್ತು. ನಂತರ ಅದು ತನ್ನ ಮನೆಗೆ ಹೊರಟಿತು. ಅದು ಹೋಗುವ ದಾರಿಯಲ್ಲಿ ಇರುವೆಗಳು ಸಾಲು ಸಾಲಾಗಿ ಹೋಗುತ್ತಾ ಇದ್ದವು. ಅವುಗಳನ್ನು ನೋಡಿ ಆನೆಗೆ ಕೋಪ ಬಂದಿತು.


"ನಾನು ಬರುವುದು ನಿಮಗೆ ಗೊತ್ತಿಲ್ಲವೆ ಅಲ್ಪ ಜೀವಿಗಳೇ?" ಎಂದಿತು. ಆನೆ ಮಾತುಗಳನ್ನು ಕೇಳಿದ ಧೈರ್ಯಶಾಲಿ ಇರುವೆಯೊಂದು "ನಾವು ಚಿಕ್ಕವರೇ ಇರಬಹುದು. ಆದರೆ ಅಲ್ಪರಲ್ಲ" ಎಂದಿತು.



ಆನೆ "ಚಿಕ್ಕ ಇರುವೆಯೇ! ನಿನಗೆಷ್ಟು ಧೈರ್ಯ? ನನಗೆ ಎದುರುತ್ತರ ಕೊಡುವೆಯಾ? ನಿಮ್ಮಿಂದ ಯಾರಿಗೆ ಏನು ಪ್ರಯೋಜನ ಇದೆ? ನನ್ನನ್ನು ನೋಡಿ! ಶಕ್ತಿಶಾಲಿಯಾದ ನಾನು ಏನನ್ನು ಬೇಕಾದರು ಮಾಡುವೆನು" ಎಂದಿತು.

ಇರುವೆ "ನಾವೇನು ನಿನಗಿಂತ ಕಡಿಮೆಯೇ? ನೀನು ಮಾಡುವುದೆಲ್ಲಾ ನಾವು ಮಾಡುತ್ತೇವೆ" ಎಂದು ಹೇಳಿತು.

"ಓ! ಹಾಗಾದರೆ ನನ್ನ ಜೊತೆ ಓಟದ ಪಂದ್ಯಕ್ಕೆ ಬರುವೆಯಾ?" ಎಂದು ಗೇಲಿ ಮಾಡುವ ಧ್ವನಿಯಲ್ಲಿ ಕೇಳಿತು.



“ಓ! ಧಾರಾಳವಾಗಿ. ಖಂಡಿತ ನಾನು ನಿನ್ನನ್ನು ಸೋಲಿಸುವೆನು” ಎಂದು ಇರುವೆ ಆತ್ಮವಿಶ್ವಾಸದಿಂದ ಹೇಳಿತು.

ಕೋಪಗೊಂಡು ಆನೆ ಘೀಳಿಟ್ಟಿತು. “ಹೇ ಇರುವೆ! ನನ್ನ ಕೆಲವು ಹೆಜ್ಜೆಗಳಷ್ಟು ದೂರ ಹೋಗಲು ನಿನಗೆ ಒಂದು ಯುಗ ಬೇಕು. ಇರು, ನಾನು ನಿನಗೆ ಪಾತ ಕಲಿಸವೆನು. ಈಗಲೆ ಪಂದ್ಯಕ್ಕೆ ಬಾ” ಎಂದಿತು.




ಪಂದ್ಯ ಆರಂಭವಾಯಿತು. ಆನೆ ಮೆಲ್ಲಗೆ ಓಡುತ್ತಿತ್ತು. ಸ್ವಲ್ಪ ದೂರ ಓಡಿದ ನಂತರ ಅದು ನಗುತ್ತಾ ಕೆಳಗೆ ನೋಡಿತು.
'ಆ! ಇರುವೆ!'

“ಓ! ನೀನು ಇನ್ನು ಓಡುತ್ತಾ ಇರುವೆಯಾ?” ಆಶ್ಚರ್ಯದಿಂದ ಹೇಳುತ್ತಾ ಮತ್ತೆ ಸ್ವಲ್ಪ ದೂರ ಓಡಿತು. 'ಇರುವೆ ಅಷ್ಟು ದೂರ ಹೇಗೆ ಬಂದಿತು?' ಎಂದು ಯೋಚಿಸಿತು. ಆನೆ ಮತ್ತೆ ಕೆಳಗೆ ನೋಡಿತು. ಏನಾಶ್ಚರ್ಯ! ಇರುವೆ ತುಂಬ ಹತ್ತಿರದಲ್ಲೆ ಇದೆ.

ಆನೆ ವೇಗವಾಗಿ ಓಡಲು ಆರಂಭಿಸಿತು. ಬೆಟ್ಟಗಳನ್ನು ದಾಟುತ್ತಾ ಓಡಿತು. ಬಂಡೆಗಳನ್ನು ಬಳಸಿಕೊಂಡು ಹೋಯಿತು. ಅಂಕುಡೊಂಕಾದ ದಾರಿಯಲ್ಲಿ ಚಿಕ್ಕ ಪುಟ್ಟ ಗಿಡಗಳನ್ನು ತುಳಿಯುತ್ತಾ ಓಡಿತು.

'ಜಯ ನನ್ನದೇ ತಾನೆ? ' ಎಂದು ಯೋಚಿಸುತ್ತಾ ಆನೆ ಕೆಳಗೆ ನೋಡಿತು. ಆ ಸಮಯದಲ್ಲಿ ಇರುವೆ ಅದರ ಜೊತೆಗೆ ಬರುತ್ತಿತ್ತು. ಆನೆಗೆ ಸುಸ್ತಾಯಿತು. ಏದುಸಿರು ಬಿಡುವಂತಾಯಿತು.


'ಪಂದ್ಯವನ್ನು ಇಲ್ಲಿಗೆ ಮುಗಿಸಿಬಿಡೋಣವೇ?' ಎಂದು ಯೋಚಿಸುತ್ತಾ ಕೆಳಗೆ ನೋಡಿದಾಗಲೆಲ್ಲಾ ಇರುವೆ ಜೊತೆಯಲ್ಲೆ ಬರುವುದು ಕಾಣುತ್ತಿತ್ತು.



'ನಾನಾ! ಸೋಲುವೆನಾ? ' ಎಂದು ಆನೆ ಇನ್ನು ವೇಗವಾಗಿ ಓಡಿತು.

ಪಂದ್ಯದ ಬಗ್ಗೆ ತಿಳಿದ ಉಳಿದ ಪ್ರಾಣಿಗಳು "ಓಡು ಇರುವೆ ಓಡು" ಎಂದು ಕೂಗುತ್ತಿದ್ದವು. ಇದರಿಂದ ಆನೆಯ ಕೋಪ ಮತ್ತಷ್ಟು ಹೆಚ್ಚಾಯಿತು. ಓಡಿ ಓಡಿ ಕಾಲುಗಳು ನೋಯಲು ಆರಂಭಿಸಿದವು. ಮುಂದಕ್ಕೆ ಓಡಲು ಆಗದಂತಾಯಿತು. ತೂರಾಡುತ್ತಾ ಆನೆ ಒಂದು ಹಳ್ಳದೊಳಕ್ಕೆ ಬಿದ್ದಿತು. ಮೇಲೆ ನೋಡಿದರೆ ಇರುವೆ ಅಲ್ಲಿಯೇ ಇತ್ತು.






“ನಾನು ನಿನ್ನನ್ನು ಮೇಲಕ್ಕೆ ಎತ್ತುವುದಿಲ್ಲ ಹೋಗು” ಎಂದು ಹೇಳುತ್ತಾ ಇರುವೆ ಮುಂದಕ್ಕೆ ಹೋಯಿತು. ಪ್ರಾಣಿಗಳೆಲ್ಲಾ ಹಳ್ಳದ ಒಳಗಿದ್ದ ಆನೆಯನ್ನು ಕುತೂಹಲದಿಂದ ನೋಡಿದವು. “ಯಾರಾದರು ನನ್ನನ್ನು ಇಲ್ಲಿಂದ ಮೇಲೆ ಎತ್ತಿರಿ” ಎಂದು ಕೇಳಿಕೊಂಡಿತು. ಪ್ರಾಣಿಗಳಿಗೆ ಆನೆಯನ್ನು ನೋಡಿ 'ಅಯ್ಯೊ' ಎನಿಸಿತು. ಅವುಗಳು ಆನೆ ಮೇಲೆ ಬರಲು ಸಹಾಯ ಮಾಡಿದವು.

‘ಇರುವೆ ಪಂದ್ಯದಲ್ಲಿ ಹೇಗೆ ಗೆದ್ದಿತು’ ಎಂಬ ಗೊಂದಲದಲ್ಲೇ ಆನೆ ಮನೆಯ ಕಡೆಗೆ ನಡೆಯಿತು.

ಪಾಪದ ಆನೆ! ಅದಕ್ಕೆ ಗೊತ್ತೇ ಆಗಲಿಲ್ಲ. ಪ್ರತಿ ಬಾರಿಯೂ ತಾನು ನೋಡಿದ್ದು ಬೇರೆ ಬೇರೆ ಇರುವೆ ಎಂದು. ಅಲ್ಲಿ ಎಷ್ಟೊಂದು ಇರುವೆಗಳು ಎಲ್ಲಾ ಕಡೆ ಓಡಾಡುತ್ತಿದ್ದವು. ಅವುಗಳನ್ನು ತಾನೇ ಆನೆ ನೋಡಿದ್ದು? ಆದರೆ ಆನೆ ‘ತಾನು ಮೊದಲು ಮಾತನಾಡಿದ ಇರುವೆಯೇ ಆ ಪಂದ್ಯದಲ್ಲಿ ಓಡಿದ್ದು’ ಎಂದು ಅಂದುಕೊಂಡಿತ್ತು.

ಮೂಲ: ಭಾರತದ ಜನಪದ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಚಂದ್ರ ರಾತ್ರಿ ಮಾತ್ರ ಆಚೆ ಬರುವುದೇಕೆ?

ಹಿಂದಿನ ಕಾಲ. ಒಂದು ದಿನ ಚಂದ್ರ ಸೂರ್ಯನನ್ನೇ ನೋಡುತ್ತಿತ್ತು. 'ಓ! ಈ ಸೂರ್ಯ ನನಗಿಂತ ದೊಡ್ಡದಾಗಿ ಪ್ರಕಾಶಮಾನವಾಗಿ ಇದೆ!' ಅದು ನಿದ್ದೆ ಮಾಡುತ್ತಿದ್ದ ಗೂಬೆಯನ್ನು ಎಚ್ಚರಿಸಿ "ಸೂರ್ಯ ತನ್ನ ಬೆಳಕನ್ನು ಎಲ್ಲಿ ಬಚ್ಚಿಟ್ಟುಕೊಂಡಿರುವುದು ಎಂದು ತಿಳಿದುಕೊಂಡು ಬರುವೆಯಾ?" ಎಂದಿತು.

"ಓ! ಧಾರಾಳವಾಗಿ" ಎಂದಿತು ಗೂಬೆ. "ತುಂಬ ಉಪಕಾರ ಆಯಿತು. ನಾಳೆ ಸೂರ್ಯ ಮುಳುಗಿದ ನಂತರ ಆ ಮುಳ್ಳು ಗಿಡಗಳ ಹಿಂದೆ ಭೇಟಿ ಆಗೋಣ" ಎಂದು ಚಂದ್ರ ಗುಟ್ಟಾಗಿ ಹೇಳಿತು. ಗೂಬೆ ಹಾರಿ ಹೋಯಿತು. ಆದರೆ ಚಂದ್ರನಿಗೆ ಸುಮ್ಮನೆ ಇರಲು ಆಗಲಿಲ್ಲ.




'ಸೂರ್ಯನ ಬೆಳಕು ಎಲ್ಲಿದೆ ಎಂದು ಗೂಬೆಗೆ ಕಂಡು ಹಿಡಿಯಲು ಸಾಧ್ಯವೇ? ಅಯ್ಯೋ! ಗೂಬೆ ಏನಾದರೂ ಸೂರ್ಯನನ್ನು ಎಚ್ಚರಿಸಿದರೆ? ಇಲ್ಲ ಇಲ್ಲ. ಗೂಬೆ ಒಂದು ಬಾರಿಯೂ ಅಂತಹ ಕೆಲಸ ಮಾಡಿಲ್ಲ' ಈ ರೀತಿ ಹಲವು ವಿಧದಲ್ಲಿ ಚಂದ್ರ ಯೋಚಿಸುತ್ತಿತ್ತು.

ಮಾರನೆಯ ದಿನ ಚಂದ್ರನಿಗೆ ಸಂಜೆಯವರೆಗು ಕಾಯುತ್ತಿರಲು ಆಗಲಿಲ್ಲ. ಬೆಳಗಾದ ತಕ್ಷಣ ಮುಳ್ಳು ಗಿಡಗಳ ಪೊದೆಯ ಬಳಿಗೆ ಹೋಯಿತು. ಸೂರ್ಯ ಮುಳುಗುವವರೆಗು ಅಲ್ಲಿಯೇ ಕಾಯುತ್ತಿತ್ತು. ಗೂಬೆ ಬರುತ್ತಿರುವುದೇ ಎಂದು ಕತ್ತೆತ್ತಿ ನೋಡುತ್ತಿತ್ತು.

ಗೂಬೆಯನ್ನು ನೋಡಿದ ತಕ್ಷಣ "ಹಾ! ಬಂದು ಬಿಟ್ಟೆಯಾ?" ಎಂದು ಆತಂಕದಿಂದ ಕೇಳಿತು.

"ಸೂರ್ಯ ನಿದ್ದೆ ಮಾಡುವ ಮುಂಚೆ ತನ್ನ ಬೆಳಕನ್ನು ಒಂದು ಪೆಟ್ಟಿಗೆ ಒಳಗೆ ಇಡುತ್ತದೆ" ಎಂದು ಗೂಬೆ ಉತ್ಸಾಹದಿಂದ ಹೇಳಿತು.




"ತುಂಬ ಉಪಕಾರ ಆಯಿತು. ಆ ಬೆಳಕನ್ನು ನನಗೆ ಸ್ವಲ್ಪ ತಂದು ಕೊಡುವೆಯಾ?" ಎಂದು ಚಂದ್ರ ಸಂಕೋಚದಿಂದ ಕೇಳಿತು.

"ಓ! ಆಗಲಿ" ಎಂದಿತು ಗೂಬೆ. "ನಾಳೆ ಇದೇ ಜಾಗದಲ್ಲಿ ಇದೇ ಸಮಯದಲ್ಲಿ ಭೇಟಿ ಆಗೋಣ" ಎಂದು ಪಿಸುಗುಟ್ಟಿತು ಚಂದ್ರ.

ಗೂಬೆ ಮತ್ತೆ ಸೂರ್ಯನ ಮನೆಯ ಕಡೆ ಹಾರುತ್ತಾ ಹೋಯಿತು. 'ಗೂಬೆ ಸಿಕ್ಕಿಹಾಕಿಕೊಂಡರೆ? ಅದು ಶಬ್ದ ಮಾಡದಂತೆ ಒಳಗೆ ಹೋಗುವುದೇ?'
ಆ ದಿನ ಚಂದ್ರ ಆತಂಕದಿಂದಲೇ ನಿದ್ರೆ ಮಾಡಿತು.

ಮಾರನೆಯ ದಿನ ಸಂಜೆ ಒಂದು ತುಂಡು ಸೂರ್ಯನ ಬೆಳಕಿನ ಸಹಿತ ಗೂಬೆ ಪೊದೆಯ ಬಳಿಗೆ ಬಂದಿತು. ಚಂದ್ರ ಬೆಳಕನ್ನು ಹಾಕಿಕೊಂಡಿತು.

"ಇಷ್ಟು ಬೆಳಕಲ್ಲೇ ನೀನೆಷ್ಟು ಹೊಳೆಯುತ್ತಿರುವೆ!" ಎಂದು ಗೂಬೆ ಹೊಗಳಿತು. ಇದೇ ರೀತಿ ಕೆಲವು ದಿನಗಳು ಕಳೆದವು. ಒಂದು ದಿನ ಸೂರ್ಯ ಚಂದ್ರನನ್ನು ನೋಡಿತು. ತನ್ನನ್ನು ನೋಡಿಕೊಂಡಿತು. 'ಓ! ನನ್ನ ಬೆಳಕನ್ನು ಚಂದ್ರ ಕದಿಯುತ್ತಿದೆ' ಎಂದು ಸೂರ್ಯನಿಗೆ ಅರ್ಥವಾಯಿತು.



ಆ ರಾತ್ರಿ ಸೂರ್ಯ ನಿದ್ರಿಸಲಿಲ್ಲ. ತನ್ನ ಬೆಳಕನ್ನು ಗೂಬೆ ಕದಿಯುತ್ತಾ ಇರುವುದನ್ನು ನೋಡಿತು. ಗೂಬೆಯ ಹಿಂದೆಯೇ ಹೋಯಿತು. ಚಂದ್ರ ಗೂಬೆ ಕೊಟ್ಟ ಬೆಳಕನ್ನು ಹಾಕಿಕೊಳ್ಳುವುದನ್ನು ನೋಡಿತು.


ಸೂರ್ಯ ಬಂದು ಚಂದ್ರನ ಎದುರಿಗೆ ನಿಂತಿತು. “ನೀನು ಏಕೆ ನನ್ನ ಬೆಳಕನ್ನು ಕದಿಯುತ್ತಿರುವೆ?” ಎಂದು ಅಧಿಕಾರದಿಂದ ಕೇಳಿತು.

“ನೀನು ನನಗಿಂತ ಪ್ರಕಾಶಮಾನವಾಗಿ ಇರುವೆ ಅದಕ್ಕೆ” ಎಂದಿತು ಚಂದ್ರ. ಕೋಪಗೊಂಡ ಸೂರ್ಯ ಚಂದ್ರನ ಹತ್ತಿರ ಇದ್ದ ಎಲ್ಲ ಬೆಳಕನ್ನು ಕಿತ್ತುಕೊಂಡಿತು. “ನೀನು ಹಗಲು ಪೂರ್ತಿ ನಿದ್ದೆ ಮಾಡುತ್ತಾ ಇರು. ರಾತ್ರಿ ಮಾತ್ರ ಆಚೆ ಬಾ” ಎಂದು ಶಿಕ್ಷೆ ಕೊಟ್ಟಿತು.

ಇಂದಿಗು ಸಹ ಚಂದ್ರ ಗೂಬೆಯ ಸಹಾಯದಿಂದ ಸೂರ್ಯನ ಬೆಳಕನ್ನು ಕದಿಯುತ್ತಾ ಇದೆ. ಆದರೆ ಬೆಳಗು ಆಗುವುದರೊಳಗೆ ವಾಪಸ್ಸು ಹೋಗಿ ಇಡುತ್ತದೆ.

ಇಂಡೋ ಅಮೇರಿಕನ್ ಕಥೆ

ಅನುವಾದ: ನಿರುಪಮ ರಾಘವನ್



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಶಿಬಿ ಮತ್ತು ಹದ್ದು




ಒಂದಾನೊಂದು ಕಾಲದಲ್ಲಿ ಶಿಬಿ ಎಂಬ ಒಬ್ಬ ರಾಜ ಇದ್ದನು. ಅವನು ಎಲ್ಲಾ ಜೀವಿಗಳ ಜೊತೆ ಪ್ರೀತಿ ಮತ್ತು ಕರುಣೆಯಿಂದ ಇರುತ್ತಿದ್ದನು. ಒಂದು ದಿನ ಶಿಬಿ ತನ್ನ ಉದ್ಯಾನವನದಲ್ಲಿ ತಿರುಗಾಡುತ್ತಾ ಇದ್ದನು. ಆಗ ಒಂದು ಪಾರಿವಾಳ ವೇಗವಾಗಿ ಹಾರುತ್ತಾ ಬಂದಿತು. "ಕಾಪಾಡಿ! ಕಾಪಾಡಿ!" ಎಂದು ಬೇಡಿಕೊಂಡಿತು.



"ಭಯ ಪಡಬೇಡ! ನನ್ನನ್ನು ನಂಬು. ನಂಬಿ ಬಂದವರನ್ನು ನಾನು ಎಂದಿಗು ಕೈ ಬಿಡುವುದಿಲ್ಲ. ನಾನು ನಿನ್ನನ್ನು ಕಾಪಾಡುತ್ತೇನೆ" ಎಂದನು ಶಿಬಿ. ನಂತರ ಪಾರಿವಾಳವನ್ನು ಬಚ್ಚಿಟ್ಟನು. ಆ ಪಾರಿವಾಳವನ್ನು ಅಟ್ಟಿಸಿಕೊಂಡು ಬಂದಿದ್ದ ಒಂದು ದೊಡ್ಡ ಹದ್ದು "ಪಾರಿವಾಳವನ್ನು ನನಗೆ ಕೊಡು. ಅದು ನನ್ನ ಆಹಾರ" ಎಂದು ಶಿಬಿಯನ್ನು ಕೇಳಿತು.

“ಪಾರಿವಾಳವನ್ನು ಕಾಪಾಡುವೆ ಎಂದು ಹೇಳಿರುವೆ. ಆಡಿದ ಮಾತನ್ನು ನಾನು ಮೀರುವುದಿಲ್ಲ. ಪಾರಿವಾಳಕ್ಕೆ ಬದಲಾಗಿ ಏನನ್ನು ಬೇಕಾದರು ಕೊಡುವೆ” ಎಂದನು ಶಿಬಿ.

“ನನಗೆ ಬೇರೆ ಏನು ಬೇಡ. ಆ ಪಾರಿವಾಳವೇ ಬೇಕು” ಎಂದು ಹದ್ದು ಹಠ ಮಾಡಿತು. ಶಿಬಿ ಹಲವು ವಿಧದಲ್ಲಿ ಅದನ್ನು ಸಮಾಧಾನ ಮಾಡಲು ಪ್ರಯತ್ನಿಸಿದನು. ಆಗಲಿಲ್ಲ. ಕೊನೆಗೆ ಹದ್ದು “ಸರಿ! ಪಾರಿವಾಳದ ತೂಕಕ್ಕೆ ಸಮನಾಗಿ ನಿನ್ನ ಮಾಂಸವನ್ನು ಕೊಡುವೆಯಾ?” ಎಂದು ಕೇಳಿತು.



ಶಿಬಿ ಖುಷಿಯಿಂದ ಒಪ್ಪಿಕೊಂಡನು. ಒಂದು ತಕ್ಕಡಿ ತರಲು ಹೇಳಿದನು. ಪಾರಿವಾಳವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಇಟ್ಟನು. ಇನ್ನೊಂದು ತಟ್ಟೆಯಲ್ಲಿ ತನ್ನ ತೊಡೆಯ ಚರ್ಮ ಕತ್ತರಿಸಿ ಇಟ್ಟನು.

ಎಲ್ಲರು ಮುಂದೇನು ಆಗುವುದೆಂದು ಆತಂಕದಿಂದ ನೋಡುತ್ತಿದ್ದರು. ಪಾರಿವಾಳ ಇದ್ದ ತಟ್ಟೆ ಮೇಲೆ ಏಳಲಿಲ್ಲ. ಶಿಬಿ ತನ್ನ ದೇಹದ ಮಾಂಸವನ್ನು ಮತ್ತೆ ಮತ್ತೆ ಕತ್ತರಿಸಿ ಇಡುತ್ತಲೇ ಇದ್ದ. ಆದರು ತಟ್ಟೆ ಮೇಲೆ ಏಳಲೇ ಇಲ್ಲ.





ಕೊನೆಗೆ ಶಿಬಿ ತಾನೇ ತಟ್ಟೆಯಲ್ಲಿ ಕುಳಿತನು. ಆಗ ಎರಡು ತಟ್ಟೆಗಳು ಸಮ ಆದವು. ಇದನ್ನು ಕಂಡ ದೇವರುಗಳು ಶಿಬಿ ಮೇಲೆ ಹೂವಿನ ಮಳೆಗರೆದು ಆಶೀರ್ವಾದ ಮಾಡಿದರು. ಪಾರಿವಾಳ ಮತ್ತು ಹದ್ದು ಇಬ್ಬರು ದೇವರುಗಳು. ಶಿಬಿಯನ್ನು ಪರೀಕ್ಷಿಸಲು ಹಕ್ಕಿಗಳ ವೇಷದಲ್ಲಿ ಬಂದಿದ್ದರು.

ಅವರು "ಚಿಕ್ಕ ಹಕ್ಕಿ ತಾನೇ! ಎಂದು ಅಂದುಕೊಳ್ಳದೆ ನಿನ್ನ ಪ್ರಾಣವನ್ನು ಕೊಟ್ಟು ಪಾರಿವಾಳದ ಪ್ರಾಣವನ್ನು ಕಾಪಾಡಿದೆ. ನಿನ್ನನ್ನು ಭೂಲೋಕದಲ್ಲಿ ಎಲ್ಲರು ಮೆಚ್ಚಲಿ" ಎಂದು ಶಿಬಿಗೆ ಆಶೀರ್ವಾದ ಮಾಡಿ ಮರೆಯಾದರು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ವಿಧೇಯ ಶಿಷ್ಯರು

ಒಂದಾನೊಂದು ಕಾಲದಲ್ಲಿ ಒಬ್ಬ ಗುರು ಮತ್ತು ನಾಲ್ವರು ಶಿಷ್ಯರು ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ತಂಗಾಳಿ ಬೀಸುತ್ತಿತ್ತು. ಗುರುಗಳಿಗೆ ಅರಿವಿಲ್ಲದಂತೆ ನಿದ್ರೆ ಬಂದು ಬಿಟ್ಟಿತು.

ದಾರಿಯಲ್ಲಿ ಹಳ್ಳ ದಿಣ್ಣೆಗಳು ಇದ್ದುದರಿಂದ ಗಾಡಿ ಹೆಚ್ಚು ಕುಲುಕಾಡುತ್ತಿತ್ತು. ಆಗ ಗುರುಗಳ ಪೇಟ ಗಾಡಿಯಿಂದ ಕೆಳಕ್ಕೆ ಬಿದ್ದಿತು.

ಶಿಷ್ಯರು ಪೇಟ ಕೆಳಗೆ ಬೀಳುವುದನ್ನು ನೋಡಿದರು. ಏನು ಮಾಡಬೇಕೆಂದು ತೋಚದೆ "ನನ್ನನ್ನು ಕೇಳದೆ ಯಾವ ಕೆಲಸವನ್ನು ಮಾಡಬಾರದು" ಎಂದು ಗುರುಗಳು ಹೇಳಿದ್ದರಿಂದ ಅದನ್ನು ಅಲ್ಲಿಯೇ ಬಿಟ್ಟರು.




ಸ್ವಲ್ಪ ಸಮಯದ ನಂತರ ಗುರುಗಳು ಕಣ್ಣು ಬಿಟ್ಟರು. “ನನ್ನ ಪೇಟ ಎಲ್ಲಿ?” ಎಂದು ಶಿಷ್ಯರನ್ನು ಕೇಳಿದರು. ಅವರು ನಡೆದ ಎಲ್ಲವನ್ನು ವಿವರಿಸಿದರು.

“ಅಯ್ಯೋ ಮೂರ್ಖರೇ! ಪೇಟ ಕೆಳಗೆ ಬೀಳುವುದನ್ನು ನೋಡಿಯೂ ಅದನ್ನು ಎತ್ತಿಡಲಿಲ್ಲವೇ?” ಎಂದು ಬೈಯ್ಯತೊಡಗಿದರು. “ಇನ್ನು ಮುಂದೆ ಗಾಡಿಯಿಂದ ಏನೇ ಬಿದ್ದರು ತಕ್ಷಣ ಎತ್ತಿಡಬೇಕು” ಎಂದು ಆಜ್ಞೆ ಮಾಡಿದರು.

ಗುರುಗಳು ಮತ್ತೆ ನಿದ್ರೆ ಮಾಡತೊಡಗಿದರು. ಗಾಡಿಯಿಂದ ಏನೇ ಬಿದ್ದರು ಅದನ್ನು ಎತ್ತಿಡಬೇಕೆಂದು ಶಿಷ್ಯರು ಕಣ್ಣು ಮಿಟುಕಿಸದೆ ನೋಡುತ್ತಾ ಇದ್ದರು.

ಗಾಡಿಗೆ ಕಟ್ಟಿದ್ದ ಎತ್ತು ಸಗಣಿ ಇಟ್ಟಿತು. ಒಂದು ಬಿದಿರಿನ ಮಂಕರಿ ತೆಗೆದುಕೊಂಡು ಸಗಣಿ ತುಂಬಿ ಗಾಡಿಯಲ್ಲಿ ಇಟ್ಟರು.




ಕಣ್ಣು ಬಿಟ್ಟ ಗುರುಗಳಿಗೆ ಗಾಡಿಯಲ್ಲಿ ಸಗಣಿ ನೋಡಿ 'ಶಾಕ್!' ಆಯಿತು. ಅವರು “ಏನಿದು?” ಎಂದು ಕೂಗಿದರು.

ಶಿಷ್ಯರು “ಗಾಡಿಯಿಂದ ಏನೇ ಬಿದ್ದರು ಎತ್ತಿಡಬೇಕೆಂದು ನೀವು ಹೇಳಿದ್ದರಿಂದ ಹಾಗೆ ಮಾಡಿದೆವು” ಎಂದು ಹೆಮ್ಮೆಯಿಂದ ಹೇಳಿದರು.

ಗುರುಗಳಿಗೆ ಏನು ಮಾಡಬೇಕೆಂದು ತೋಚದಂತಾಯಿತು. ಸಗಣಿಯನ್ನು ಗಾಡಿಯಿಂದ ಎಸೆಯಲು ಹೇಳಿದರು.

ಗಾಡಿಯಿಂದ ಏನೇನು ಬಿದ್ದರೆ ಎತ್ತಿಡಬೇಕು, ಏನೇನು ಬಿದ್ದರೆ ಎತ್ತಿಡಬಾರದು ಎಂದು ಪಟ್ಟಿ ಮಾಡಿದರು. "ಮುಂದೆ ಈ ರೀತಿ ಮಾಡಬೇಡಿ" ಎಂದು ಹೇಳಿ ಪಟ್ಟಿಯನ್ನು ಶಿಷ್ಯರಿಗೆ ಕೊಟ್ಟು ಪುನಃ ನಿದ್ರೆ ಮಾಡತೊಡಗಿದರು.

ಗಾಡಿ ಹಾದಿ ಸರಿ ಇಲ್ಲದ ದಾರಿಯಲ್ಲಿ ಹೋಗುತ್ತಿತ್ತು. ಆಗ ಇದ್ದಕ್ಕಿದ್ದಂತೆ ಒಂದು ಕಡೆ ವಾಲಿತು. ಗುರುಗಳು ಪಕ್ಕದ ಹಳ್ಳದೊಳಕ್ಕೆ ಬಿದ್ದರು.
"ಅಯ್ಯೋ! ನನ್ನನ್ನು ಆಚೆ ಎತ್ತಿ" ಎಂದು ಕೂಗಿದರು.



ಶಿಷ್ಯರು ಗುರುಗಳು ಕೊಟ್ಟಿದ್ದ ಪಟ್ಟಿಯನ್ನು ನೋಡಿದರು. “ನೀವು ಕೊಟ್ಟ ಪಟ್ಟಿಯಲ್ಲಿ ನಿಮ್ಮ ಹೆಸರಿಲ್ಲ. ಅದಕ್ಕೆ ನಾವು ನಿಮ್ಮನ್ನು ಆಚೆ ಎತ್ತುವುದಿಲ್ಲ” ಎಂದರು. ಗುರುಗಳು ಎಷ್ಟು ಬೇಡಿಕೊಂಡರು ಶಿಷ್ಯರು ಸಹಾಯ ಮಾಡಲಿಲ್ಲ.

“ಗುರುಗಳೇ! ನಾವು ಯಾವತ್ತು ನಿಮ್ಮ ಮಾತನ್ನು ಮೀರಿಲ್ಲ. ಈಗ ನೀವು ನಮ್ಮನ್ನು ಪರೀಕ್ಷಿಸಲು ಈ ರೀತಿ ಮಾಡುತ್ತಿರುವಿರಿ” ಎಂದು ಹೇಳಿದರು.

ಬೇರೆ ದಾರಿ ಕಾಣದೆ ಗುರುಗಳು ಪಟ್ಟಿ ಮತ್ತು ಪೆನ್ನನ್ನು ಹಳ್ಳದೊಳಗೆ ಹಾಕಲು ಹೇಳಿದರು. ನಂತರ ಕೆಳಗೆ ಬಿದ್ದರೆ ಎತ್ತಿಡುವ ಸಾಮಾನುಗಳ ಪಟ್ಟಿಗೆ ತಮ್ಮ ಹೆಸರನ್ನು ಬೇಗನೆ ಸೇರಿಸಿದರು. ಶಿಷ್ಯರಿಗೆ ಪಟ್ಟಿ ಕೊಟ್ಟರು.

ಆನಂತರ ಶಿಷ್ಯರು ಅವರನ್ನು ಹಳ್ಳದಿಂದ ಆಚೆ ತೆಗೆದರು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಗಿಳಿಯ ಆಲೋಚನೆ

ಒಬ್ಬ ವ್ಯಾಪಾರಿಯ ಹತ್ತಿರ ಒಂದು ಮಾತನಾಡುವ ಗಿಳಿ ಇತ್ತು. ಆತ ಅದನ್ನು ಒಂದು ಬೆಳ್ಳಿಯ ಪಂಜರದಲ್ಲಿ ಪ್ರೀತಿಯಿಂದ ಸಾಕುತ್ತಿದ್ದನು. ಹಣ್ಣುಗಳು, ಬೀಜಗಳು ಎಂದು ಗಿಳಿ ಕೇಳಿದ್ದನ್ನೆಲ್ಲಾ ಕೊಡುತ್ತಿದ್ದನು.


ಗಿಳಿ ವ್ಯಾಪಾರಿಯ ಜೊತೆ ಗಂಟೆಗಟ್ಟಲೆ ಮಾತನಾಡುತ್ತಾ ಇರುತ್ತಿತ್ತು. ಆತನು ಕೇಳುವ ಪ್ರಶ್ನೆಗಳಿಗೆಲ್ಲ ಬುದ್ಧಿವಂತಿಕೆಯಿಂದ ಉತ್ತರ ಹೇಳುತ್ತಿತ್ತು. ಒಮ್ಮೆ ಮಾತಿನ ಮಧ್ಯದಲ್ಲಿ ಗಿಳಿ ಇದ್ದಕ್ಕಿದ್ದಂತೆ “ನನ್ನನ್ನು ಬಿಟ್ಟುಬಿಡು. ನಾನು ಸ್ವತಂತ್ರವಾಗಿ ಇರಲು ಇಷ್ಟ ಪಡುವೆನು” ಎಂದಿತು.



ವ್ಯಾಪಾರಿ "ಬೇರೆ ಇನ್ನೇನಾದರೂ ಬೇಕಿದ್ದರೆ ಕೇಳು ಕೊಡುವೆನು" ಎಂದು ಹೇಳಿ ಗಿಳಿಯ ಮಾತಿಗೆ ಕಿವಿಗೊಡಲಿಲ್ಲ.

ಒಂದು ದಿನ ಗಿಳಿ "ನೀನು ನನ್ನನ್ನು ಬಿಟ್ಟರೆ ನಾನು ನಿನಗೆ ಮೂರು ಮಾತುಗಳನ್ನು ಹೇಳುವೆ. ಅವು ನಿನಗೆ ಯಾವಾಗಲು ಸಹಾಯಕ್ಕೆ ಬರುವವು" ಎಂದಿತು.


ವ್ಯಾಪಾರಿ ಸ್ವಲ್ಪ ಹೊತ್ತು ಯೋಚಿಸಿದನು. ನಂತರ ಪಂಜರದ ಬಾಗಿಲನ್ನು ತೆರೆದನು. ಗಿಳಿ ಹೊರಕ್ಕೆ ಹಾರಿ ಅವನ ಕೈ ಮೇಲೆ ಕುಳಿತಿತು. "ಇದು ನನ್ನ ಮೊದಲನೆಯ ಮಾತು. ಆಸ್ತಿ ಕಳೆದು ಹೋದರೆ ದುಃಖಿಸಬೇಡ" ಎಂದಿತು.



ವ್ಯಾಪಾರಿ "ನೀನು ಹೊಸದಾಗಿ ಏನನ್ನು ಹೇಳಲಿಲ್ಲ" ಎಂದನು. ಗಿಳಿ ಹಾಡುತ್ತಾ ಹಾರಿತು. ಮನೆಯ ಮೇಲೆ ಹೋಗಿ ಕುಳಿತಿತು. "ಇದು ನನ್ನ ಎರಡನೆಯ ಮಾತು, ನಿನ್ನ ಹತ್ತಿರ ಯಾರು ಏನೇ ಹೇಳಿದರು ಅದನ್ನು ಹಾಗೆ ನಂಬಬೇಡ" ಎಂದಿತು.

ವ್ಯಾಪಾರಿ ಸಿಡಿಮಿಡಿ ಎನ್ನುತ್ತಾ "ಇದು ನನಗೆ ಮೊದಲೇ ಗೊತ್ತಿತ್ತು. ನನಗೆ ಗೊತ್ತಿಲ್ಲದ ಒಂದನ್ನು ಹೇಳು" ಎಂದನು. ಗಿಳಿ "ನಿನಗೆ ಗೊತ್ತಿಲ್ಲದ್ದನ್ನು ಹೇಳಲಾ? ನನ್ನ ಹೊಟ್ಟೆಯಲ್ಲಿ ಬೆಲೆ ಬಾಳುವ ಮಾಣಿಕ್ಯಗಳಿವೆ" ಎಂದು ಹೇಳಿ ನಗುತ್ತಿತ್ತು.

ವ್ಯಾಪಾರಿ "ಹಾ! ಮಾಣಿಕ್ಯಗಳಾ! ಅಯ್ಯೋ! ನಿನ್ನನ್ನು ಬಿಟ್ಟು ಬಿಟ್ಟ ನಾನೆಷ್ಟು ದೊಡ್ಡ ಮೂರ್ಖ. ನನ್ನ ಜೀವನ ಪೂರ್ತಿ ಇದನ್ನು ನೆನೆಯುತ್ತಾ ದುಃಖಿಸುವಂತೆ ಆಯಿತು" ಎಂದನು.




ಗಿಳಿ "ನೋಡಿದೆಯಾ! ಆಸ್ತಿ ಕಳೆದು ಹೋದರೆ ದುಃಖಿಸಬೇಡ ಎಂದು ಈಗ ತಾನೇ ನಾನು ಹೇಳಿದೆ. ಅಷ್ಟರಲ್ಲಿ ನೀನು ದುಃಖ ಪಡುತ್ತಿರುವೆ. ಯಾರು ಏನೇ ಹೇಳಿದರು ಅದನ್ನೇ ನಂಬಬೇಡ ಎಂದಿದ್ದೆ, ಆದರೆ ನನ್ನ ಹೊಟ್ಟೆಯಲ್ಲಿ ಮಾಣಿಕ್ಯಗಳಿವೆ ಎಂದಾಕ್ಷಣ ನೀನು ನಂಬಿದೆ. ನನ್ನ ಹೊಟ್ಟೆಯಲ್ಲಿ ಅಷ್ಟೊಂದು ಕಲ್ಲುಗಳಿದ್ದರೆ ನಾನು ಜೀವದಿಂದ ಇರುವುದು ಹೇಗೆ ಸಾಧ್ಯ?" ಎಂದಿತು.

“ಈಗ ನನ್ನ ಮೂರನೆಯ ಮಾತನ್ನು ಕೇಳು. ಯಾರು ಏನೇ ಹೇಳಿದರು ಸ್ವಂತ ಬುದ್ಧಿ ಉಪಯೋಗಿಸಿ, ಆಲೋಚಿಸಿ ನೋಡು. ಸತ್ಯವನ್ನು ಶೋಧಿಸು. ಕಿವಿಯಿಂದ ಕೇಳಿದ್ದನ್ನು ಹಾಗೆ ನಂಬಬೇಡ. ಸತ್ಯ ಶೋಧಿಸಿ ಪರೀಕ್ಷಿಸು!” ಎಂದು ಹೇಳಿ ಗಿಳಿ ಹಾರಿ ಹೋಯಿತು.



ವ್ಯಾಪಾರಿ ಮಾತನಾಡಲು ಶಕ್ತಿ ಇಲ್ಲದವನಂತೆ ಗಿಳಿ ಹಾರಿ ಹೋಗುವುದನ್ನೇ ನೋಡುತ್ತಾ ಇದ್ದನು.



Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮೊಲ ಸಮುದ್ರ ದಾಟಿದ್ದು

ಒಂದು ಮೊಲ ಪ್ರತಿದಿನ ಸಂಜೆ ಸಮುದ್ರ ತೀರಕ್ಕೆ ಬಂದು ಗಂಟೆಗಟ್ಟಲೆ ಒಂದು ಬಂಡೆಯ ಮೇಲೆ ಕುಳಿತು ಏನನ್ನೋ ಯೋಚಿಸುತ್ತಿತ್ತು. ಒಂದು ದಿನ ಒಂದು ಶಾರ್ಕ್ ಸಮುದ್ರದ ನೀರಿನಿಂದ ಆಚೆ ಜಿಗಿದು ಹೊರಗೆ ಬಂದು ಮೊಲವನ್ನು ನೋಡಿ "ಓ ಗೆಳೆಯ! ನೀನು ಒಂಟಿಯಾಗಿ ಕುಳಿತು ಏನನ್ನು ನೋಡುತ್ತಾ ಇರುವೆ?" ಎಂದು ಕೇಳಿತು.



ಅದಕ್ಕೆ ಮೊಲ "ಸಮುದ್ರದ ಆ ತೀರದಲ್ಲಿರುವ ಚಿಕ್ಕ ಬೆಟ್ಟ ಎಷ್ಟು ಸುಂದರವಾಗಿದೆ. ಸಮುದ್ರವನ್ನು ದಾಟಿ ಅಲ್ಲಿಗೆ ಹೋಗಲು ನಾನು ಇಷ್ಟ ಪಡುವೆನು" ಎಂದು ಹೇಳಿತು.



ಶಾರ್ಕ್ ಜೋರಾಗಿ ನಗುತ್ತಾ "ಅಯ್ಯೋ ಪೆದ್ದ! ನಿನಗೆ ಈಜಾಡಲು ಬರುವುದಿಲ್ಲ. ಸಮುದ್ರವನ್ನು ಹೇಗೆ ದಾಟುವೆ?" ಎಂದು ಕೇಳಿತು.


ಮೊಲ "ನಾನು ಸಮುದ್ರವನ್ನು ದಾಟಲು ಏನಾದರು ಉಪಾಯ ಮಾಡುವೆನು" ಎಂದು ಹೇಳಿತು.

ಶಾರ್ಕ್ ಮುಖದಲ್ಲಿ ನಗು ಮೂಡಿತು. "ಹೌದಾ! ನೀನು ಸಮುದ್ರವನ್ನು ಹೇಗೆ ದಾಟುವೆ ನಾನು ನೋಡುತ್ತೇನೆ?" ಎಂದಿತು.

ಒಂದು ದಿನ ಮೊಲಕ್ಕೆ ಒಂದು ಉಪಾಯ ಹೊಳೆಯಿತು. ಅದು ಶಾರ್ಕ್ ಬಳಿ "ನಮ್ಮಿಬ್ಬರಲ್ಲಿ ಯಾರ ಹತ್ತಿರ ಹೆಚ್ಚು ಗೆಳೆಯರಿದ್ದಾರೆ? ನಿನ್ನ ಹತ್ತಿರನಾ ಅಥವ ನನ್ನ ಹತ್ತಿರನಾ?" ಎಂದು ಕೇಳಿತು.

ಶಾರ್ಕ್ "ನಾನು ಗ್ಯಾರಂಟಿ ಹೇಳುತ್ತೇನೆ, ನನ್ನ ಹತ್ತಿರವೇ ಹೆಚ್ಚು ಗೆಳೆಯರಿರುವುದು" ಎಂದು ಉತ್ತರಿಸಿತು.

ಮೊಲ "ಹೌದಾ! ಹಾಗಾದರೆ ನಿನ್ನ ಗೆಳೆಯರನ್ನು ಈ ತೀರದಿಂದ ಆ ಚಿಕ್ಕ ಬೆಟ್ಟದವರೆಗು ಒಂದೇ ಸಾಲಿನಲ್ಲಿ ನಿಲ್ಲಿಸು. ನಾನು ಅವುಗಳನ್ನು ಎಣಿಸಿ ನೋಡುತ್ತೇನೆ" ಎಂದು ಹೇಳಿತು.





ಎಲ್ಲಾ ಶಾರ್ಕ್‌ಗಳು ಒಂದೇ ಸಾಲಿನಲ್ಲಿ ನಿಂತವು. ಮೊಲ ಒಂದು ಶಾರ್ಕ್ ಆದ ಮೇಲೆ ಇನ್ನೊಂದು ಶಾರ್ಕ್ ಬೆನ್ನ ಮೇಲೆ ಜಿಗಿದು ಎಣಿಸುತ್ತಾ ಹೊರಟಿತು. “ಒಂದು, ಎರಡು, ಮೂರು.......”

ಜಿಗಿದು ಜಿಗಿದು ಆ ಚಿಕ್ಕ ಬೆಟ್ಟವನ್ನು ತಲುಪಿದ ಮೇಲೆ “ಧನ್ಯವಾದಗಳು ಶಾರ್ಕ್ ಗೆಳೆಯರೇ! ನೀವೆಲ್ಲರು ಬಂದು ಸೇತುವೆ ಮಾಡಿದಿರಿ. ಜೊತೆಗೆ ಸಮುದ್ರ ದಾಟಲು ನನಗೆ ಸಹಾಯ ಮಾಡಿದಿರಿ” ಎಂದು ಹೇಳಿತು.

ಆಗ ಶಾರ್ಕ್‌ಗೆ ಮೊಲ ತನ್ನನ್ನು ಪೆದ್ದನನ್ನಾಗಿ ಮಾಡಿತೆಂದು ಅನಿಸಿತು. ಅದಕ್ಕೆ ತುಂಬಾ ಕೋಪ ಬಂದರೂ ಮನಸ್ಸಿನಲ್ಲಿ ಮೊಲದ ಚತುರತೆಯನ್ನು ಮೆಚ್ಚಿತು.


ಶಾರ್ಕ್ ಆ ಚಿಕ್ಕ ಬೆಟ್ಟದ ತೀರಕ್ಕೆ ಬಂದಾಗಲೆಲ್ಲಾ ಮೊಲವನ್ನು ಹುಡುಕುತ್ತಿತ್ತು. ಆದರೆ ಮೊಲ ಎಲ್ಲಿಯೂ ಕಾಣಿಸುತ್ತಿರಲಿಲ್ಲ.

ಹೀಗೆ ಹಲವು ತಿಂಗಳುಗಳು ಕಳೆದವು. ಒಂದು ದಿನ ಇದ್ದಕ್ಕಿದಂತೆ ಶಾರ್ಕ್ ಮೊಲವನ್ನು ಕಡಲ ತೀರದಲ್ಲಿ ನೋಡಿತು. ಮೊಲ ಡುಮ್ಮಗೆ ಆಗಿತ್ತು.

ಶಾರ್ಕ್ ಆನಂದದಿಂದ ನೀರಿನಲ್ಲಿ ಜಿಗಿಯಿತು. ಮೊಲವನ್ನು ಕೂಗಿತು. "ಗೆಳೆಯ! ಈಗ ನೀನು ವಾಪಸ್ಸು ಆ ತೀರಕ್ಕೆ ಹೋಗಲು ಇಷ್ಟಪಡುವೆಯಾ? ಆದರೆ ಈ ಬಾರಿ ನೀನು ನನ್ನನ್ನು ಪೆದ್ದನನ್ನಾಗಿ ಮಾಡಲು ಸಾಧ್ಯವಿಲ್ಲ. ನೀನು ಸಮುದ್ರ ತೀರವನ್ನು ಸುತ್ತು ಹಾಕುತ್ತಾ ಹೋಗುವುದೇ ಒಳ್ಳೆಯದು" ಎಂದಿತು.

ಮೊಲ ಆತ್ಮವಿಶ್ವಾಸದಿಂದ ಹೇಳಿತು. "ಇಲ್ಲ. ನಾನು ಮತ್ತೆ ಸಮುದ್ರವನ್ನು ದಾಟಿಯೇ ಆ ತೀರಕ್ಕೆ ಹೋಗುವೆನು." ಮೊಲ ಹಲವು ದಿನ ಆ ಸಮುದ್ರ ತೀರದಲ್ಲೇ ಕುಳಿತು ಯೋಚಿಸುತ್ತಿತ್ತು. ಒಂದು ದಿನ ಅದಕ್ಕೆ ಒಂದು ಹೊಸ ಉಪಾಯ ಹೊಳೆಯಿತು...

ಜಪಾನ್ ಜನಪದ ಕಥೆ ಆಧಾರಿತ




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಕಂಡು ಹಿಡಿಯೋಣ ಬಾ!



ಆಡಿ ತೂಗಾಡುವುದು ಬಾಗಿ ಬಳುಕಾಡುವುದು
ಚಿನ್ನದ ಬಣ್ಣದಲ್ಲಿ ಇರುವುದು – **ಅದು ಏನು?**


ಅರಳಿದ ಹೂಗಳು ಗಿಡಗಳಲ್ಲಿ ಇರುವವು
ಬಲಶಾಲಿ ಬೀಜಗಳು ಭೂಮಿಯೊಳಗಿರುವವು
ಅದು ಏನು?



ಹತ್ತಲಾರದ ಮರಕ್ಕೆ
ಎಂಟು ಸಾವಿರ ಬೀಜಗಳು – **ಅದು ಏನು?**

ಬಟ್ಟೆ ಹಾಕಿರುವುದು ಮಾನವನಲ್ಲ
ಮುತ್ತು ಪೋಣಿಸಿದಂತೆ ಇರುವುದು ಮುತ್ತಲ್ಲ
ಗಡ್ಡ ಮೀಸೆಗಳು ಇದ್ದರು ಮನುಷ್ಯನಲ್ಲ
ಜನರಿಗೆ ಉತ್ತಮ ಆಹಾರ ಆಗಿರುವ – **ಅದು ಏನು?**

ಅದರಿಂದ ಹೊಡೆದರೆ ನೋಯುವುದು
ಅದನ್ನು ಕಚ್ಚಿದರೆ ಸಿಹಿಯಾಗಿ ಇರುವುದು – **ಅದು ಏನು?**



ರಾಗಿ, ಭತ್ತ, ಮುಸುಕಿನ ಜೋಳ
ಕಬ್ಬು, ಕಡಲೆಕಾಯಿ







ಬಾಯಿಂದ ನೂಲು ತೆಗೆವೆ
ಮಂತ್ರವಾದಿ ಅಲ್ಲ
ಬಲೆಯ ಹರಡಿ ಹಾಸುವೆ
ಮಧ್ಯದಲ್ಲಿ ಅಡಗುವೆ
ನಾನು ಯಾರು?

ನನಗೆ ಆರು ಕಾಲುಗಳು ಉಂಟು
ಕೆಟ್ಟ ವಾಸನೆ ಒಳ್ಳೆ ವಾಸನೆ ಗೊತ್ತುಂಟು
ಆಹಾರದ ಮೇಲೆ ಕುಳಿತುಕೊಳ್ಳುವೆ
ಅದರ ಸವಿ ನಾ ನೋಡುವೆ
ನಾನು ಯಾರು?





ಅಂದದ ಅರಮನೆ ಇದು
ಸುರಂಗದ ಮನೆ ಇದು
ಮಣ್ಣಿಂದ ಕಟ್ಟಿದ ಗೋಪುರ ಇದು
ಹಾವು ವಾಸಿಸುವ ಜಾಗ ಇದು – **ಅದು ಏನು?**

ಜೀವದಿಂದ ಇರಲಿ ಸಾಯುತ್ತಿರಲಿ
ರೆಕ್ಕೆಗಳು ಮುದುರುವುದಿಲ್ಲ – **ಅದು ಏನು?**

ದೊಡ್ಡ ಕಾಡುಗಳಲ್ಲಿ ಇರುವುದು
ಮಾನವರ ಹಿಡಿತಕ್ಕೆ ಸಿಗದು
ಬೇಕಾದಂತೆ ಬೇಟೆ ಆಡುವುದು
ವೀರನಂತೆ ತಿರುಗುವುದು – **ಅದು ಏನು?**







ಬಣ್ಣ ಬಣ್ಣದ ಹೂಗಳ ಮೇಲಿರುವುದು
ಸಿಹಿ ಮಕರಂದ ಕುಡಿಯುವುದು
ಅಂದದಿ ಊರೆಲ್ಲ ಹಾರುವುದು – **ಅದು ಏನು?**

ಬೆಂಕಿ ಹೊತ್ತು ಹಾರುವುದು
ರಾತ್ರಿ ಬೆಳಕು ಕೊಡುವುದು – **ಅದು ಏನು?**




ವೈದ್ಯರು ಬಂದರು
ಚುಚ್ಚುಮದ್ದು ಕೊಟ್ಟರು
ಹಣ ಪಡೆಯದೆ ಹೋದರು – **ಅವರು ಯಾರು?**

ಹಾವಿನಂತೆ ಸರಿಯುವುದು
ಸಾವಿರ ಕಾಲು ಇರುವುದು
ಮನೆಗಳಲ್ಲು ಕಾಣುವುದು
ಅಪಾಯಕಾರಿ ಆಗಿರುವುದು – **ಅದು ಏನು?**










ಸಾವಿರ ಜನರಿರುವ ಅರಮನೆಯಲ್ಲಿ
ಅಧಿಕಾರವಿರುವುದು ಒಬ್ಬಳಿಗೆ
ಅವಳು ಯಾರು?

ಮಣ್ಣಿನಲ್ಲೇ ಹುಟ್ಟಿ
ಮಣ್ಣಿನಲ್ಲೇ ಮನೆ ಮಾಡಿ
ಮಣ್ಣನ್ನೇ ತಿಂದು ಬದುಕುವ – **ನಾನು ಯಾರು?**



ಕೆಂಪು ಕಪ್ಪು ಬಣ್ಣ
ಗುಂಪಿನಲ್ಲಿ ಇರುವೆನಣ್ಣ
ಸಿಹಿ ಇರುವಲ್ಲಿಗೆ ಸಾಲಾಗಿ ಸಾಗುವೆನಣ್ಣ
ನಾನು ಯಾರೆಂದು ಯೋಚಿಸಿ ಹೇಳಣ್ಣ?

ಹುತ್ತ, ಜಿರಲೆ, ಚಿಟ್ಟೆ, ಸೊಳ್ಳೆ, ನೊಣ, ಕೀಟ, ಜೇಡ
ಇರುವೆ, ರಾಣಿಜೇನು, ಎರೆಹುಳು, ಮಿಂಚುಹುಳು, ಜರಿ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಮಾತನಾಡದ ಮಾತುಗಾರ

ಮುಲ್ಲಾ ನಸ್ರುದ್ದೀನ್ ತುಂಬ ಬುದ್ಧಿವಂತರು. ಮಾತಿನಲ್ಲಿ ಚತುರರು. ಯಾವಾಗಲು ಎಲ್ಲರನ್ನು ನಗಿಸುತ್ತಿದ್ದರು. ಹಾಸ್ಯದಲ್ಲಿಯೇ ಆಲೋಚಿಸುವಂತೆ ಮಾಡುತ್ತಿದ್ದರು.

ಒಮ್ಮೆ ಆ ಊರಿನ ಜನ ಅವರನ್ನು ಸಭೆಯೊಂದರಲ್ಲಿ ಮಾತನಾಡಲು ಕೇಳಿಕೊಂಡರು. ಮುಲ್ಲಾಗೆ ಆ ಸಭೆಯಲ್ಲಿ ಭಾಗವಹಿಸಲು ಇಷ್ಟವಿರಲಿಲ್ಲ. ಆದರೆ ಬೇರೆ ದಾರಿ ಕಾಣದೆ ಒಪ್ಪಿಗೆ ಕೊಟ್ಟರು. 'ಕೊನೆ ಗಳಿಗೆಯಲ್ಲಿ ಹೇಗಾದರು ತಪ್ಪಿಸಿಕೊಳ್ಳೋಣ' ಎಂದು ಯೋಚಿಸಿದರು.




ಸಭೆಯಲ್ಲಿ ಭಾಗವಹಿಸುವ ದಿನ ಬಂದಿತು. ಮುಲ್ಲಾ ವೇದಿಕೆ ಹತ್ತಿದರು. ಜನರ ಗುಂಪನ್ನು ನೋಡಿದರು. "ನಾನು ಏನು ಮಾತನಾಡುವೆ ಎಂದು ನಿಮಗೆ ಗೊತ್ತಾ?" ಎಂದು ಕೇಳಿದರು

"ಗೊತ್ತಿಲ್ಲ... ಗೊತ್ತಿಲ್ಲ..." ಜನರಿಂದ ಉತ್ತರ ಬಂದಿತು. ಮುಲ್ಲಾಗೆ ಕೋಪ ಬಂದಿತು.

"ಏನೂ ಗೊತ್ತಿಲ್ಲದವರ ಜೊತೆ ನಾನು ಮಾತನಾಡುವುದಿಲ್ಲ" ಎಂದು ಚಕ್ಕನೆ ಹೊರಟು ಹೋದರು.

ಜನರ ಗುಂಪಿನಲ್ಲಿ ಗೊಂದಲ ಉಂಟಾಯಿತು. ಕೆಲವು ಮಂದಿ ಮುಲ್ಲಾ ಮನೆಗೆ ಹೋಗಿ ಕ್ಷಮೆ ಕೇಳಿದರು.





ಮುಂದಿನ ಶುಕ್ರವಾರದ ಸಭೆಗೆ ಬಂದು ಮಾತನಾಡುವಂತೆ ಪುನಃ ಕೇಳಿಕೊಂಡರು. ಮುಲ್ಲಾ ಒಪ್ಪಿಕೊಂಡರು.

ಈ ಬಾರಿ ಮುಲ್ಲಾಗೆ ಕೋಪ ಬರದಂತೆ ನೋಡಿ ಕೊಳ್ಳಬೇಕೆಂದು ತೀರ್ಮಾನಿಸಿದರು.

ಶುಕ್ರವಾರ ಬಂದಿತು. ಸಭೆ ಆರಂಭವಾಯಿತು. ಮುಲ್ಲಾ ವೇದಿಕೆ ಹತ್ತಿದರು. ಮಾತನಾಡಲು ಪ್ರಾರಂಭಿಸಿದರು.

"ನಾನು ಏನು ಮಾತನಾಡುವೆ ಎಂದು ನಿಮಗೆ ಗೊತ್ತಾ?" ಎಂದು ಕಳೆದ ವಾರ ಕೇಳಿದ ಅದೇ ಪ್ರಶ್ನೆಯನ್ನು ಕೇಳಿದರು. ಮೊದಲೇ ತೀರ್ಮಾನಿಸಿದಂತೆ ಎಲ್ಲರು "ಗೊತ್ತು! ಗೊತ್ತು!" ಎಂದು ಕೂಗಿದರು.

"ನಿಮಗೆ ಮೊದಲೇ ಗೊತ್ತಿರುವುದರ ಬಗ್ಗೆ ನಾನೇಕೆ ಮಾತನಾಡಬೇಕು?" ಎಂದು ಹೇಳಿ ವೇದಿಕೆಯಿಂದ ಇಳಿದು ಅಲ್ಲಿಂದ ತಪ್ಪಿಸಿಕೊಂಡರು. ಆಘಾತದಿಂದ ಏನು ಮಾಡಬೇಕೆಂದು ಯಾರಿಗು ತೋಚಲಿಲ್ಲ. ಅವರವರೆ ಮಾತನಾಡಿಕೊಂಡು ಒಂದು ನಿರ್ಧಾರಕ್ಕೆ ಬಂದರು.

ಮುಂದಿನ ಶುಕ್ರವಾರವು ಮುಲ್ಲಾನನ್ನು ಮಾತನಾಡಲು ಕರೆದರು. ಮುಲ್ಲಾ ಬಂದರು. "ನಾನು ಏನು ಮಾತನಾಡುವೆ ಎಂದು ನಿಮಗೆ ಗೊತ್ತಾ?" ಎಂದು ಯಾವಾಗಲು ಕೇಳುವಂತೆ ಕೇಳಿದರು.

ಮುಲ್ಲಾ ಬಗ್ಗೆ ಜನರಿಗೆ ಗೊತ್ತಿಲ್ಲವೇನು? ಮೊದಲೇ ನಿರ್ಧಾರ ಮಾಡಿದಂತೆ ಅರ್ಧ ಜನ "ನಮಗೆ ಗೊತ್ತು!" ಎಂದರು. ಉಳಿದ ಅರ್ಧ ಜನ "ನಮಗೆ ಗೊತ್ತಿಲ್ಲ!" ಎಂದರು.

"ಹೌದಾ? ಹಾಗಾದರೆ ನಾನು ಏನು ಹೇಳಬಹುದೆಂದು ಗೊತ್ತಿರುವವರು ಗೊತ್ತಿಲ್ಲದವರಿಗೆ ತಿಳಿಸಿ" ಎಂದು ಹೇಳಿ ಮುಲ್ಲಾ ಹೊರಟು ಹೋದರು.

ಸಭೆಗೆ ಬಂದಿದ್ದವರು ಸುಸ್ತಾದರು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನನ್ನ ಹೆಸರು ಏನು?



ತೋಟದಲ್ಲಿ ಹಾರಾಡುತ್ತಿದ್ದ ನೊಣಕ್ಕೆ ಇದ್ದಕ್ಕಿದ್ದಂತೆ ತನ್ನ ಹೆಸರು ಮರೆತು ಹೋಯಿತು. ಅದು ಅಲ್ಲೇ ಹತ್ತಿರದಲ್ಲಿ ಇದ್ದ ಕರುವಿನ ಹತ್ತಿರ ಹೋಗಿ,

"ಗುಂಡು ಗುಂಡಾದ ಮುದ್ದಿನ ಕರುವೇ,
ನನ್ನ ಹೆಸರು ಏನು?" ಎಂದು ಕೇಳಿತು. ಅದಕ್ಕೆ ಕರು

"ನನಗೆ ಗೊತ್ತಿಲ್ಲ. ನನ್ನ ಅಮ್ಮನನ್ನು ಕೇಳು" ಎಂದು ಹೇಳಿತು. ತಕ್ಷಣ ನೊಣ ಹಸುವಿನ ಹತ್ತಿರ ಹೋಗಿ,


"ಗುಂಡು ಗುಂಡಾದ ಮುದ್ದಿನ ಕರುವಿನ ತಾಯಿಯೇ,
ನನ್ನ ಹೆಸರು ಏನು?" ಎಂದು ಕೇಳಿತು. ಅದಕ್ಕೆ ಹಸು "ನನಗೆ ಗೊತ್ತಿಲ್ಲ. ನನ್ನ ಮೇಯಿಸುವ ಗೋಪಾಲಕನನ್ನು ಕೇಳು" ಎಂದು ಹೇಳಿತು. ತಕ್ಷಣ ನೊಣ ಗೋಪಾಲಕನ ಹತ್ತಿರ ಹೋಗಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ
ತಾಯಿ ಮೇಯಿಸುವ ಗೋಪಾಲಕನೇ,
ನನ್ನ ಹೆಸರು ಏನು?" ಎಂದು ಕೇಳಿತು. ಅದಕ್ಕೆ ಗೋಪಾಲಕ "ನನಗೆ ಗೊತ್ತಿಲ್ಲ. ನನ್ನ ಕೈಯಲ್ಲಿ ಇರುವ ಕೋಲನ್ನು ಕೇಳು" ಎಂದು ಹೇಳಿದನು. ತಕ್ಷಣ ನೊಣ ಕೋಲನ್ನು ನೋಡಿ,





"ಗುಂಡು ಗುಂಡಾದ ಮುದ್ದಿನ ಕರು,
ಕರುವಿನ ತಾಯಿ ಮೇಯಿಸುವ
ಗೋಪಾಲಕನ ಕೈಯಲ್ಲಿರುವ ಕೋಲೇ,
ನನ್ನ ಹೆಸರು ಏನು?" ಎಂದು ಕೇಳಿತು.



ತಕ್ಷಣ ಕೋಲು "ಅದೋ! ಅಲ್ಲಿ ಕಾಣುತ್ತಿದೆಯಲ್ಲ ಆ ಮರ. ಅದರಿಂದ ನನ್ನನ್ನು ಕತ್ತರಿಸಿ ತಂದಿದ್ದಾರೆ. ಹೋಗಿ ಅದನ್ನು ಕೇಳು" ಎಂದು ಹೇಳಿತು. ನೊಣ ಮರವನ್ನು ನೋಡಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ ಗೋಪಾಲಕನ ಕೈಯಲ್ಲಿರುವ ಕೋಲನ್ನು ಕೊಟ್ಟ ಮರವೇ, ನನ್ನ ಹೆಸರು ಏನು?" ಎಂದು ಕೇಳಿತು.

ಅದಕ್ಕೆ ಮರ "ನನಗೆ ಗೊತ್ತಿಲ್ಲ. ನನ್ನ ಕೊಂಬೆಯ ಮೇಲೆ ಕುಳಿತಿರುವ ಕೊಕ್ಕರೆಯನ್ನು ಕೇಳು" ಎಂದು ಹೇಳಿತು.

ನೊಣ ಕೊಕ್ಕರೆಯ ಹತ್ತಿರ ಹೋಗಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ ಗೋಪಾಲಕನ ಕೈಯಲ್ಲಿರುವ ಕೋಲನ್ನು ಕೊಟ್ಟ ಮರದ ಕೊಂಬೆಯ ಮೇಲಿರುವ ಕೊಕ್ಕರೆಯೇ, ನನ್ನ ಹೆಸರು ಏನು?" ಎಂದು ಕೇಳಿತು. ಕೊಕ್ಕರೆಯು "ನನಗೆ ಗೊತ್ತಿಲ್ಲ. ನಾನು ವಾಸ ಮಾಡುವ ಕೊಳವನ್ನು ಕೇಳು" ಎಂದು ಹೇಳಿತು. ತಕ್ಷಣ ನೊಣ,


"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ

. . . .

ಕೊಕ್ಕರೆ ವಾಸಿಸುವ ಕೊಳವೇ, ನನ್ನ ಹೆಸರು ಏನು?" ಎಂದು ಕೇಳಿತು. ಅದಕ್ಕೆ ಕೊಳ "ಈ ದೊಡ್ಡ ಮೀನನ್ನು ಕೇಳು" ಎಂದು ಹೇಳಿತು.

ಅದನ್ನು ಕೇಳಿದ ನೊಣ ಮೀನನ್ನು ನೋಡಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ . . . .



ಕೊಳದಲ್ಲಿ ಇರುವ ದೊಡ್ಡ ಮೀನೇ, ನನ್ನ ಹೆಸರು ಏನು?'' ಎಂದು ಕೇಳಿತು. ಅದಕ್ಕೆ ಮೀನು ''ನನಗೇನು ಗೊತ್ತು. ಅದೋ! ಆ ಬೆಸ್ತನನ್ನು ಕೇಳು'' ಎಂದು ಹೇಳಿತು. ತಕ್ಷಣ ನೊಣ ಬೆಸ್ತನನ್ನು ನೋಡಿ,

''ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ

. . . .

ದೊಡ್ಡ ಮೀನನ್ನು ಹಿಡಿಯುವ ಬೆಸ್ತನೇ, ನನ್ನ ಹೆಸರು ಏನು? ''

ಎಂದು ಕೇಳಿತು. ಬೆಸ್ತನು ''ನನಗೆ ಗೊತ್ತಿಲ್ಲ. ನನ್ನ ಕೈಯಲ್ಲಿರುವ ಮಡಕೆಯನ್ನು ಕೇಳು'' ಎಂದು ಹೇಳಿದನು. ನೊಣ ಮಡಕೆಯನ್ನು ನೋಡಿ,

''ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ

. . . .

ಬೆಸ್ತನ ಕೈಯಲ್ಲಿರುವ ಮಡಕೆಯೇ, ನನ್ನ ಹೆಸರು ಏನು?''

ಎಂದು ಕೇಳಿತು. ಅದಕ್ಕೆ ಮಡಕೆ ''ನನಗೆ ಗೊತ್ತಿಲ್ಲ. ನನ್ನನ್ನು ಮಾಡಿದ ಮಾನವನನ್ನು ಕೇಳು'' ಎಂದು ಹೇಳಿತು. ತಕ್ಷಣ ನೊಣ ಮಾನವನ ಹತ್ತಿರ ಹೋಗಿ,

''ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ

. . . .

ಮಡಕೆಯ ಮಾಡಿದ ಮಾನವನೇ, ನನ್ನ ಹೆಸರು ಏನು?''


ಎಂದು ಕೇಳಿತು. ಅದಕ್ಕೆ ಅವನು ''ನನಗೆ ಗೊತ್ತಿಲ್ಲ. ಈ ಮಣ್ಣನ್ನು ಕೇಳಿ ನೋಡು'' ಎಂದನು. ನೊಣ ಮಣ್ಣನ್ನು ನೋಡಿ,


''ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ

. . . .

ಮಾನವನು ಕಲೆಸುವ ಮಣ್ಣೇ, ನನ್ನ ಹೆಸರು ಏನು?''

ಎಂದು ಕೇಳಿತು.





ಅದನ್ನು ಕೇಳಿದ ಮಣ್ಣು "ನನಗೆ ಗೊತ್ತಿಲ್ಲ. ನನ್ನ ಮೇಲೆ ಬೆಳೆದಿರುವ ಹುಲ್ಲನ್ನು ಕೇಳು" ಎಂದು ಹೇಳಿತು. ತಕ್ಷಣವೇ ನೊಣ ಹುಲ್ಲನ್ನು ನೋಡಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ . . . .
ಮಣ್ಣಿನ ಮೇಲೆ ಬೆಳೆದಿರುವ ಹುಲ್ಲೇ, ನನ್ನ ಹೆಸರು ಏನು?" ಎಂದು ಕೇಳಿತು. ಅದಕ್ಕೆ ಹುಲ್ಲು "ನನಗೇನು ಗೊತ್ತು. ನನ್ನನ್ನು ತಿನ್ನುತ್ತಾ ಇರುವ ಕುದುರೆಯನ್ನು ಕೇಳು" ಎಂದು ಹೇಳಿತು. ತಕ್ಷಣ ನೊಣ ಕುದುರೆಯನ್ನು ನೋಡಿ,

"ಗುಂಡು ಗುಂಡಾದ ಮುದ್ದಿನ ಕರು, ಕರುವಿನ ತಾಯಿ ಮೇಯಿಸುವ . . . .
ಹುಲ್ಲನ್ನು ತಿನ್ನುವ ಕುದುರೆಯೇ,
ನನ್ನ ಹೆಸರು ಏನು?" ಎಂದು ಕೇಳಿತು.

ಕುದುರೆ "ನೂನೆ. . .ನೂನೆ. . .ನೂನೆ" ಎಂದು ಕೂಗಿದ್ದನ್ನು ಕೇಳಿದ ತಕ್ಷಣ ನೊಣಕ್ಕೆ ತನ್ನ ಹೆಸರು ನೆನಪಿಗೆ ಬಂತು. "ಅಹಾ! ನನ್ನ ಹೆಸರು ನೊಣ! ನನ್ನ ಹೆಸರು ನೊಣ!" ಎಂದು ಹಾಡುತ್ತಾ ಹಾರಿ ಹೋಯಿತು.

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ




51 ಯಾಮಾರಿದ ಭೂತ

ಒಂದು ಕಾಡಿಗೆ ಹೊಸ ಕೋತಿಗಳ ಗುಂಪೊಂದು ಬಂದಿತು. ಆ ಗುಂಪಿನ ನಾಯಕ ತನ್ನವರಿಗೆಲ್ಲ "ಈ ಕಾಡಿನಲ್ಲಿ ಇರುವ ಕೆರೆ ಒಂದರಲ್ಲಿ ಭೂತ ಬಚ್ಚಿಟ್ಟುಕೊಂಡಿದೆ. ಆದುದರಿಂದ ನನ್ನನ್ನು ಕೇಳದೆ ಯಾರು ಆ ಕೆರೆ ನೀರನ್ನು ಕುಡಿಯಬೇಡಿ" ಎಂದು ಎಚ್ಚರಿಕೆ ನೀಡಿತು.

ಒಂದು ದಿನ ಕೋತಿಗಳೆಲ್ಲ ಕಾಡಿನ ಒಳಕ್ಕೆ ಬಹಳ ದೂರ ಹೋಗಿದ್ದವು. ಒಂದು ಮರಿ ಕೋತಿ "ಅಮ್ಮ, ತುಂಬಾ ಬಾಯಾರಿಕೆ ಆಗಿದೆ" ಎಂದಿತು.

"ಇದೋ! ಇಲ್ಲೇ ಕೆರೆ ಇದೆ. ನೀರು ಕುಡಿಯೋಣ ಬಾ" ಎಂದಿತು ಅಮ್ಮ ಕೋತಿ.





“ನಿಲ್ಲಿ! ಕೆರೆ ಹತ್ತಿರ ಹೋಗಬೇಡಿ. ನಮ್ಮ ನಾಯಕ ಎಚ್ಚರಿಕೆ ನೀಡಿದ್ದು ಗೊತ್ತಿಲ್ಲವೇ?” ಎಂದಿತು ಇನ್ನೊಂದು ಕೋತಿ

ಅಷ್ಟರಲ್ಲಿ ನಾಯಕ ಅಲ್ಲಿಗೆ ಬಂದಿತು. “ನೀರು ಬೇಕೆ? ತಡೆಯಿರಿ. ನಾನು ಹೋಗಿ ನೋಡಿ ಬರುತ್ತೇನೆ” ಎಂದು ಕೆರೆಯ ಹತ್ತಿರ ಹೋಯಿತು. ಎಚ್ಚರಿಕೆಯಿಂದ ನೋಡಿತು.

'ಇಲ್ಲಿ ಇರುವ ಹೆಜ್ಜೆ ಗುರುತುಗಳೆಲ್ಲ ಕೆರೆಯ ಕಡೆಗೆ ಹೋಗಿವೆ. ಕೆರೆಯಿಂದ ತಿರುಗಿ ಬಂದಿರುವ ಹೆಜ್ಜೆ ಗುರುತುಗಳಿಲ್ಲ. ಭೂತ ಇಲ್ಲೇ ಬಚ್ಚಿಟ್ಟುಕೊಂಡಿದೆ' ಎಂದು ಊಹೆ ಮಾಡಿತು.

"ಇದು ಒಂದು ಅಪಾಯಕಾರಿ ಜಾಗ. ಇಲ್ಲಿ ನೀರಿಗೆ ಇಳಿಯುವುದು ಬೇಡ" ಎಂದು ನಾಯಕ ಹೇಳುತ್ತಿರುವಾಗಲೇ "ಹ್ಹ . . ಹ್ಹ . ." ಎಂಬ ದೊಡ್ಡ ನಗು ಕೇಳಿಸಿತು.


ಕೆರೆಯಿಂದ ಒಂದು ಭೂತ ಹೊರಗೆ ಬಂದಿತು. "ಕೆರೆ ಒಳಗೆ ಯಾರೇ ಇಳಿದರು ಅವರನ್ನು ನುಂಗಿ ಬಿಡುತ್ತೇನೆ" ಎಂದು ಹೆದರಿಸಿತು.

"ನಾವು ಯಾರು ಕೆರೆ ಒಳಗೆ ಇಳಿಯುವುದಿಲ್ಲ" ಎಂದಿತು ನಾಯಕ ಕೋತಿ. "ಹಾಗಾದರೆ ನೀರು ಕುಡಿಯದೆ ಹಾಗೆ ಸತ್ತು ಹೋಗುವಿರಿ" ಎಂದು ಗೇಲಿ ಮಾಡಿತು ಭೂತ.

"ಇಲ್ಲ, ನಾವು ನೀರು ಕುಡಿದೇ ಕುಡಿಯುತ್ತೇವೆ" ಎಂದು ನಾಯಕ ಕೋತಿ ಗಟ್ಟಿಯಾಗಿ ಹೇಳಿತು.

"ಆದು ಹೇಗೆ?" ಭೂತ ಆಶ್ಚರ್ಯದಿಂದ ಕೇಳಿತು.

"ನೋಡುತ್ತಾ ಇರು" ಎಂದು ಹೇಳಿದ ನಾಯಕ ಕೋತಿ ಉಳಿದ ಕೋತಿಗಳನ್ನೆಲ್ಲಾ ಕರೆಯಿತು. ಹತ್ತಿರದಲ್ಲೇ ಇದ್ದ ದಪ್ಪ ಬಿದಿರನ್ನು ಕತ್ತರಿಸಿ ತರುವಂತೆ ಹೇಳಿತು. ಪ್ರತಿಯೊಂದು ಬಿದಿರನ್ನು ಒಳಗೆ ಕೊಳವೆ ರೀತಿ ಇದೆಯೇ ಎಂದು ನೋಡಿತು.




ಕೊಳವೆಯ ಒಂದು ತುದಿಯನ್ನು ಕೆರೆಯ ನೀರಿನ ಒಳಗೆ ಇಟ್ಟಿತು. ಇನ್ನೊಂದು ತುದಿಯಿಂದ ಜೋರಾಗಿ ನೀರನ್ನು ಬಾಯಿಂದ ಎಳೆದುಕೊಂಡಿತು.

ನೀರು ವೇಗವಾಗಿ ನುಗ್ಗಿ ಬಂದಿತು. ಎಲ್ಲ ಕೋತಿಗಳು ನೀರಿನಿಂದ ಒದ್ದೆಯಾದವು. "ಅಬ್ಬ! ಎಷ್ಟು ರುಚಿ!" ಎಂದು ಆಸೆ ತೀರುವವರೆಗು ನೀರನ್ನು ಕುಡಿದವು.

ಭೂತ ಯಾಮಾರಿತು. ಅದಕ್ಕೆ ಕೋಪ ಬಂದಿತು. ಕೋಪದಿಂದಲೇ ಕೆರೆ ಒಳಗೆ ಹೋಯಿತು.

ಮೂಲ: ಜಾತಕದ ಕಥೆಗಳು



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮೇರಿಯ ಖುಷಿ

ಮೇರಿ ಕೈಯಲ್ಲಿ ಒಂದು ಕಾಗದ. ಅದರಲ್ಲಿ ಒಂದು ಚಿತ್ರ. "ಅರೆ! ಇದೇನಿದು? ಚಿತ್ರವೇ? ತೋರಿಸು ನೋಡೋಣ" ಎಂದಳು ದೀಪ.

ಮೇರಿ ಕಣ್ಣಲ್ಲಿ ನೀರು. 'ಶಾಕ್' ಆದಳು ದೀಪ. "ಏಕೆ ಅಳುತ್ತಿರುವೆ?" ಎಂದು ಕೇಳಿದಳು.


"ನಾನು ನನ್ನ ಮನೆ, ತೋಟ ಎಲ್ಲದರ ಚಿತ್ರ ಬರೆದಿದ್ದೇನೆ. ಆದರೆ ರಘು ಅದನ್ನು ನೋಡಿ ನಗುತ್ತಿದ್ದಾನೆ.



‘ಚಿತ್ರ ಚೆನ್ನಾಗಿಲ್ಲ’ ಎಂದು ಗೇಲಿ ಮಾಡುತ್ತಿದ್ದಾನೆ. ನಾನು ಇನ್ನು ಮುಂದೆ ಚಿತ್ರಗಳನ್ನು ಬರೆಯುವುದಿಲ್ಲ” ಎಂದು ಮೇರಿ ಮುಸಿಮುಸಿ ಅತ್ತಳು.

“ಚೆನ್ನಾಗಿಲ್ಲವೇ? ಅಂದವಾಗಿಯೇ ಇದೆ. ನಾವು ಎಲ್ಲರು ಬೇರೆ ಬೇರೆ ರೀತಿಯಲ್ಲಿ ನೋಡುತ್ತೇವೆ. ಯೋಚಿಸುತ್ತೇವೆ. ಅವರವರ ಇಷ್ಟ ಬಂದಂತೆ ಚಿತ್ರ ಬರೆಯುತ್ತೇವೆ. ಎಲ್ಲರು ಒಂದೇ ರೀತಿ ಚಿತ್ರ ಬರೆಯಬೇಕಾಗಿಲ್ಲ. ನೀನು ಅಳಬೇಡ” ಎಂದಳು ದೀಪ.

ಮೇರಿಗೆ ದೀಪಳ ಈ ಮಾತುಗಳು ಸ್ವಲ್ಪ ಸಮಾಧಾನ ತಂದವು. ಅದರ ಮುಂದಿನ ವಾರ ದೀಪಳ ಮನೆಗೆ ಅವಳ ಬಂಧುಗಳು ಬಂದರು. ಅವರ ಜೊತೆ ದೀಪ ಮತ್ತು ಮೇರಿ ಇಬ್ಬರು ಬೀಚಿಗೆ ಹೋದರು.



ದೀಪ ಬಣ್ಣದ ಪೆನ್ಸಿಲ್ ಮತ್ತು ಪೇಪರನ್ನು ತಂದಿದ್ದಳು. ಬೀಚಿನಲ್ಲಿ ಕೆಲವು ಮೀನುಗಾರರು ದೋಣಿಗಳನ್ನು ರಿಪೇರಿ ಮಾಡುತ್ತಿದ್ದರು. ಕೆಲವರು ಮೀನು ಹಿಡಿಯುತ್ತಿದ್ದರು. ಅದನ್ನು ನೋಡಿದ ಎಲ್ಲರು ಚಿತ್ರ ಬರೆಯ ತೊಡಗಿದರು.

ಮೇರಿ 'ನನಗೆ ಚಿತ್ರ ಬರೆಯಲು ಗೊತ್ತಿಲ್ಲ' ಎಂದು ಬೇಸರ ಪಡುತ್ತಿದ್ದವಳು, ಅವಳಿಗೆ ಗೊತ್ತಿಲ್ಲದಂತೆ ಚಿತ್ರ ಬರೆಯುವುದರಲ್ಲಿ ಮುಳುಗಿ ಹೋದಳು. ಬರೆದ ನಂತರ ಎಲ್ಲರು ಅವರವರ ಚಿತ್ರ ತೋರಿಸಿದರು. ಅವರುಗಳೆಲ್ಲ ನೋಡಿದ ಬೀಚ್ ಒಂದೇ ಆಗಿದ್ದರು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಬರೆದಿದ್ದರು.

ಮೇರಿಗೆ ಈಗ ಅರ್ಥವಾಯಿತು. 'ಆ ದಿನ ದೀಪ ಹೇಳಿದ್ದು ಸರಿ. ಎಲ್ಲರು ಬೇರೆ ಬೇರೆ ರೀತಿಯಲ್ಲಿ ನೋಡುತ್ತಾರೆ. ಯೋಚಿಸುತ್ತಾರೆ. ಚಿತ್ರ ಬರೆಯುತ್ತಾರೆ. ಅದಕ್ಕೆ ಎಲ್ಲರ ಚಿತ್ರಗಳು ಒಂದೇ ರೀತಿ ಇರುವುದಿಲ್ಲ.'



ಮೇರಿ ಉತ್ಸಾಹದಿಂದ ತಾನು ಬರೆದ ಚಿತ್ರ ತೋರಿಸಿದಳು. ಅದನ್ನು ಹಿಡಿದು ಒಂದು ಕಥೆ ಹೇಳಿದಳು. ಎಲ್ಲರಿಗು ಆಶ್ಚರ್ಯ! "ನೀನು ತುಂಬಾ ಚೆನ್ನಾಗಿ ಕಥೆ ಹೇಳುವೆ!" ಎಂದು ಎಲ್ಲರು ಹೊಗಳಿದರು. ಆ ದಿನ ಮೇರಿಗೆ ತುಂಬಾ ಖುಷಿ ಆಯಿತು.

ಈಗ ಮೇರಿ ತನಗೆ ಬೇಕಾದ ಚಿತ್ರ ಬರೆಯುತ್ತಾಳೆ. ಯಾರು ಏನು ಹೇಳುತ್ತಾರೆ ಎಂದು ಚಿಂತಿಸುವುದಿಲ್ಲ. ಬರೆದು ಮುಗಿಸಿದ ಮೇಲೆ ಆ ಚಿತ್ರ ತೋರಿಸುತ್ತಾ ತುಂಬಾ ಕಥೆಗಳನ್ನು ಹೇಳುತ್ತಾಳೆ.



Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

53 ಭೂಮಿ ಬಾಯಿ ಬಿಟ್ಟಿತು

ಒಂದು ದಿನ ಮೊಲಗಳೆಲ್ಲ ತಾಟಿನಿಂಗಿನ ಮರದ ನೆರಳಿನಲ್ಲಿ ಮಲಗಿ ನಿದ್ರಿಸುತ್ತಿದ್ದವು. ಪಕ್ಕದಲ್ಲೇ ಒಂದು ದೊಡ್ಡ ಬೇಲದ ಹಣ್ಣಿನ ಮರವಿತ್ತು. ಅದರಿಂದ ಒಂದು ಬೇಲದ ಹಣ್ಣು 'ಧೊಪ್!' ಎಂದು ತಾಟಿನಿಂಗು ಮರದ ಗರಿಗಳ ಮೇಲೆ ಬಿದ್ದಿತು.

'ಧಡಕ್!' ಎಂದು ಒಂದು ಮೊಲ ಕಣ್ಣು ಬಿಟ್ಟಿತು. 'ಅಯ್ಯೋ! ಭೂಮಿ ಬಾಯಿ ಬಿಟ್ಟಿತು!' ಎಂದು ಅಂದುಕೊಳ್ಳುತ್ತಾ ಓಡತೊಡಗಿತು. ಏನಾಯಿತು ಎಂದು ಗೊತ್ತಾಗದೆ ಜೊತೆಯಲ್ಲಿ ಮಲಗಿದ್ದ ಇತರ ಮೊಲಗಳು ಎದ್ದು ಓಡತೊಡಗಿದವು.

ದಾರಿಯಲ್ಲಿ ಜಿಂಕೆ "ಯಾಕೆ ಈ ರೀತಿ ಜೋರಾಗಿ ಓಡುತ್ತಿರುವಿರಿ?" ಎಂದು ಒಂದು ಮೊಲವನ್ನು ಕೇಳಿತು.




"ಭೂಮಿ ಬಾಯಿ ಬಿಟ್ಟಿದೆ. ಓಡು! ಓಡು!" ಎಂದಿತು ಆ ಮೊಲ. ಜಿಂಕೆಯೂ ಓಡಲು ಆರಂಭಿಸಿತು.


ದಾರಿಯಲ್ಲಿ ಕರಡಿ "ಜಿಂಕೆ ನಿಲ್ಲು! ಏಕೆ ಹೀಗೆ ಓಡುತ್ತಿರುವಿರಿ?" ಎಂದು ಕೇಳಿತು. "ನೀನು ಓಡು! ಭೂಮಿ ಬಾಯಿ ಬಿಟ್ಟಿದೆ" ಎಂದು ಹೇಳುತ್ತಾ ನಿಲ್ಲದಂತೆ ಜಿಂಕೆ ಓಡುತ್ತಿತ್ತು. ಕರಡಿಯೂ ಓಡತೊಡಗಿತು.

ಕರಡಿಯನ್ನು ನೋಡಿದ ನರಿ "ಕರಡಿ ಅಣ್ಣ! ಏನಾಯಿತು? ಎಲ್ಲರು ಏಕೆ ಈ ರೀತಿ ಓಡುತ್ತಿರುವಿರಿ?" ಎಂದು ಕೇಳಿತು.

"ಭೂಮಿ ಬಾಯಿ ಬಿಟ್ಟಿದೆ! ಓಡಿ ಹೋಗಿ ತಪ್ಪಿಸಿಕೊ" ಎಂದು ಕೂಗುತ್ತಾ ಕರಡಿ ಓಡಿತು. ಇದೇ ರೀತಿ ಎಮ್ಮೆ, ಹಂದಿ, ಘೇಂಡಾಮೃಗ, ಆನೆ, ಹುಲಿ ಎಂದು ಓಡುತ್ತಿರುವ ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು.

ದೂರದಲ್ಲಿ ಪ್ರಾಣಿಗಳ ಗುಂಪು ಓಡಿ ಬರುತ್ತಿರುವುದನ್ನು ನೋಡಿದ ಸಿಂಹ ಆಶ್ಚರ್ಯಪಟ್ಟಿತು.





ಅವುಗಳೆಲ್ಲ ಸಿಂಹದ ಹತ್ತಿರ ಬಂದಾಗ "ನಿಲ್ಲಿ! ಎಲ್ಲರು ಏಕೆ ಈ ರೀತಿ ಹೆದರಿ ಓಡುತ್ತಾ ಇರುವಿರಿ?" ಎಂದು ಕೇಳಿತು.

ಏದುಸಿರು ಬಿಡುತ್ತಾ ಮಾತನಾಡಲು ಕಷ್ಟ ಪಡುತ್ತಾ ಹುಲಿ "ಭೂಮಿ ಬಾಯಿ ಬಿಟ್ಟಿದೆ. ಓಡು! ಓಡು!" ಎಂದು ಓಡುತ್ತಲೇ ಹೇಳಿತು.



'ಭೂಮಿ ಬಾಯಿ ಬಿಡುವುದೇ? ಏನನ್ನೋ ತಪ್ಪಾಗಿ ತಿಳಿದು ಈ ಪ್ರಾಣಿಗಳು ಓಡುತ್ತಿವೆ. ಇವುಗಳ ಓಟ ನಿಲ್ಲಿಸಬೇಕು' ಎಂದು ಯೋಚಿಸಿದ ಸಿಂಹ, ಇಡೀ ಕಾಡು ನಡುಗುವಂತೆ ಮೂರು ಬಾರಿ ಘರ್ಜಿಸಿತು.

ಓಡುತ್ತಿದ್ದ ಪ್ರಾಣಿಗಳೆಲ್ಲ 'ಗಪ್‌ಚಿಪ್' ಎಂದು ನಿಂತವು. “ಭೂಮಿ ಬಾಯಿ ಬಿಟ್ಟಿದೆ ಎಂದು ಯಾರು ಹೇಳಿದ್ದು ಹೇಳಿ?” ಎಂದು ಕೇಳಿತು ಸಿಂಹ.

ತಕ್ಷಣ ಹುಲಿ “ನನಗೆ ಆನೆಯೇ ಹೇಳಿದ್ದು” ಎಂದಿತು. ಆನೆ “ನನಗೆ ಎಮ್ಮೆ ಹೇಳಿತು” ಎಂದಿತು. ಎಮ್ಮೆ “ನನಗೆ ಹಂದಿ ಹೇಳಿತು” ಎಂದಿತು. ಈ ರೀತಿ ಎಮ್ಮೆ, ನರಿ, ಕರಡಿ, ಹಂದಿ, ಜಿಂಕೆ, ಒಂದರ ಮೇಲೆ ಮತ್ತೊಂದು ಹೇಳುತ್ತಾ ಹೋದವು.

ಕೊನೆಗೆ ಮೊಲವನ್ನು ಕೇಳಿದ್ದಕ್ಕೆ “ಹೌದು! ಭೂಮಿ ಬಾಯಿ ಬಿಟ್ಟ ಶಬ್ದವನ್ನು ನಾನು ಕೇಳಿದೆ” ಎಂದಿತು. “ಎಲ್ಲಿ ಆ ಜಾಗ ತೋರಿಸು!” ಎಂದು ಸಿಂಹ ಕೇಳಿತು.

ಮೊಲ ತಾನು ನಿದ್ರೆ ಮಾಡುತ್ತಿದ್ದ ಜಾಗವನ್ನು ತೋರಿಸಿತು. ಆ ಜಾಗದಲ್ಲಿ ಒಂದು ಬೇಲದ ಹಣ್ಣು ಬಾಯಿ ತೆರೆದು ಬಿದ್ದಿತ್ತು. ಎಲ್ಲರು ಅದನ್ನು ನೋಡುತ್ತಿರುವಾಗಲೇ 'ಧೊಪ್!' ಎಂದು ಇನ್ನೊಂದು ಹಣ್ಣು ತಾಟಿನಿಂಗು ಮರದ ಗರಿಯ ಮೇಲೆ ಬಿದ್ದಿತು.

“ನೋಡಿದಿರಾ! ಈ ಶಬ್ದವನ್ನು ಮೊಲ ಕೇಳಿದೆ. ನಿದ್ರೆಗಣ್ಣಿನಲ್ಲಿ ಭೂಮಿ ಬಾಯಿ ಬಿಟ್ಟಿತು ಅಂತ ತಿಳಿದುಕೊಂಡಿದೆ” ಎಂದು ಸಿಂಹ ನಗುತ್ತಿತ್ತು. ಉಳಿದ ಎಲ್ಲ ಪ್ರಾಣಿಗಳು ನಕ್ಕವು.


ಮೂಲ: ಜಾತಕದ ಕಥೆಗಳು




Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಹಳ್ಳಿಯನ್ನು ಕಾಪಾಡಿದ ಬಾಲಕ



ಅದು ಕಡಲ ತೀರದಲ್ಲಿರುವ ಒಂದು ಹಳ್ಳಿ. ಅಲ್ಲಿ ಆಗಾಗ್ಗೆ ಬಿರುಗಾಳಿ ಬೀಸುವುದು. ಆಗ ಕಡಲಿನ ನೀರು ಹಳ್ಳಿಯೊಳಗೆ ನುಗ್ಗಿ ಸಾಕಷ್ಟು ಹಾನಿ ಮಾಡುವುದು. ಅದಕ್ಕಾಗಿ ಹಳ್ಳಿ ಜನರೆಲ್ಲ ಕಡಲ ತೀರದ ಉದ್ದಕ್ಕೂ ಎತ್ತರವಾದ ತಡೆ ಗೋಡೆ ಕಟ್ಟಿದ್ದರು.



ಆ ತಡೆ ಗೋಡೆಯ ಪಕ್ಕದಲ್ಲೇ ಒಂದು ಕಾಲು ದಾರಿ ಇತ್ತು. ಹಾನ್ಸ್ ಪ್ರತಿದಿನ ಆ ದಾರಿಯಲ್ಲೇ ಶಾಲೆಗೆ ಹೋಗುತ್ತಿದ್ದನು. ಅವನ ಶಾಲೆ ಮೂರು ಕಿಲೋಮೀಟರ್ ದೂರ ಇತ್ತು.



ಅದು ಚಳಿಗಾಲ. ಬೇಗನೆ ಕತ್ತಲು ಆಗಿತ್ತು. ಜೋರಾಗಿ ಗಾಳಿ ಬೀಸುತ್ತಿತ್ತು.
ಸಾವಾಗ ಬೇಕಾದರೂ ಬಿರುಗಾಳಿ ಏಳಬಹುದಾಗಿತ್ತು. ಶಾಲೆ ಮುಗಿದಿತ್ತು.
ಾನ್ಸ್ ಬೇಗ ಬೇಗನೆ ಮನೆಗೆ ಬರುತ್ತಿದ್ದನು.

ಆಗ ದಾರಿಯಲ್ಲಿ ನೀರು ಇರುವುದನ್ನು ಕಂಡು ಅವನಿಗೆ 'ಶಾಕ್' ಆಯಿತು.
ಲ್ಲಿಂದ ಬಂದಿತು?' ಎಂದು ಸುತ್ತಲೂ ನೋಡಿದನು. ತಡೆ ಗೋಡೆಯಿಂದ
ೀರು ಜಿನುಗುತ್ತಿತ್ತು.

ಅಯ್ಯೋ! ಗೋಡೆಯಲ್ಲಿ ಚಿಕ್ಕದಾದ ತೂತು ಆಗಿದೆ. ಇದು ದೊಡ್ಡದಾದರೆ ಗೋಡೆ
ದ್ದು ಹೋಗುವುದು. ಪ್ರವಾಹದ ನೀರು ಒಳಗೆ ಬಂದು, ಇಡೀ ಹಳ್ಳಿ ಮುಳುಗಿ
ೀಗುವುದು. ಏನು ಮಾಡಲಿ?' ಎಂದು ಯೋಚಿಸಿದನು.

'ಗೋಡೆಯಲ್ಲಿನ ತೂತವನ್ನು ಮುಚ್ಚಲು ಕಲ್ಲುಗಳು ಸಿಗುವುದೇ?' ಎಂದು ಹುಡುಕಿದನು. ಅಲ್ಲಿ ಏನು ಇರಲಿಲ್ಲ. "ಯಾರಾದರೂ ಬಂದು ಸಹಾಯ ಮಾಡಿ" ಎಂದು ಜೋರಾಗಿ ಕೂಗಿದನು. ಅಲ್ಲಿ ಯಾರು ಇರಲಿಲ್ಲ. ಅವನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ತಕ್ಷಣ ತನ್ನ ಕೈಯಿಂದ ತೂತವನ್ನು ಮುಚ್ಚಿದನು.

'ಹಾನ್ಸ್ ಇನ್ನು ಏಕೆ ಮನೆಗೆ ಬರಲಿಲ್ಲ? ಉಳಿದ ಮಕ್ಕಳೆಲ್ಲಾ ಆಗಲೇ ಶಾಲೆಯಿಂದ ಮನೆಗೆ ಬಂದರಲ್ಲ' ಎಂದು ಅವನ ಪೋಷಕರು ಚಿಂತಿಸಿದರು. ಹುಡುಕಲು ಹೊರಟರು.



ಅವನ ಅಪ್ಪ ಕೈಯಲ್ಲಿ ಲಾಟೀನು ಹಿಡಿದು ಶಾಲೆಗೆ ಹೋಗುವ ದಾರಿಯಲ್ಲಿ
ದರು. ಒಂದು ಜಾಗದಲ್ಲಿ ನೆಲ ಒದ್ದೆ ಆಗಿರುವುದನ್ನು ಗಮನಿಸಿದರು.


ೀರು ಎಲ್ಲಿಂದ ಬರುತ್ತಿದೆ?' ಎಂದು ಎಚ್ಚರಿಕೆಯಿಂದ ನೋಡಿದಾಗ ತಡೆ ಗೋಡೆ
ಲೆಯಲ್ಲಿ ಯಾರೋ ಕುಳಿತಿರುವುದು ಕಾಣಿಸಿತು. ಹತ್ತಿರ ಹೋದರು.
ಶ್ಚರ್ಯ! ಅದು ಬೇರೆ ಯಾರು ಅಲ್ಲ. ಹಾನ್ಸ್!

ಹಾನ್ಸ್ ಚಳಿಯಿಂದ ನಡುಗುತ್ತಿದ್ದನು. ಅವನಿಗೆ ತುಂಬಾ ಸುಸ್ತಾಗಿತ್ತು. ಅಪ್ಪನನ್ನು
ಡಿದ ತಕ್ಷಣ ಅವನಿಗೆ ಆನಂದವಾಯಿತು.

ಅಪ್ಪ! ಗೋಡೆಯಲ್ಲಿ ಒಂದು ತೂತು ಆಗಿದೆ. ನಾನು ಕೈಯನ್ನು
ಯುವಂತಿಲ್ಲ. ನೀವೇ ಹೋಗಿ ಜನರನ್ನು ಕರೆದುಕೊಂಡು ಬನ್ನಿ.
ಯವರೆಗೆ ನಾನು ಇಲ್ಲೇ ಇರುವೆನು" ಎಂದನು.

ಅಪ್ಪ ಉಲ್ಲನ್ ಕೋಟನ್ನು ಪ್ರೀತಿಯಿಂದ ಅವನಿಗೆ
ಸಿದರು. ಓಡಿ ಹೋಗಿ ಜನರನ್ನು ಕರೆತಂದರು.
ರು ಸೇರಿ ತೂತವನ್ನು ಮುಚ್ಚಿದರು.

ಮಾರನೆಯ ದಿನ ಬೆಳಿಗ್ಗೆ ಊರ ಜನರೆಲ್ಲಾ
ಗಿ ಹಾನ್ಸ್ ಮನೆಗೆ ಬಂದರು. ಹಳ್ಳಿ
ಆಗುವುದನ್ನು ತಪ್ಪಿಸಿ ತಮ್ಮನ್ನೆಲ್ಲ
ಡಿದ್ದಕ್ಕೆ ಅವನನ್ನು ಹೊಗಳಿದರು.
ಗೊರೆಗಳನ್ನು ಕೊಟ್ಟರು.



ಲ: ಹಾಲೆಂಡಿನ ಚಿಕ್ಕ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ

Rajalakshmi Srinivasan

ಅನುವಾದ : ಸುಗಂಧಿನಿ ಪುಷ್ಪ.ಎಂ


ಕೊಡಲಾರ! ಬಿಡಲಾರ!

ಒಂದು ಊರಿನಲ್ಲಿ ಇಬ್ಬರು ಗೆಳೆಯರಿದ್ದರು. ಒಬ್ಬನಿಗೆ ಆ ಊರ ಜನರು "ಕೊಡಲಾರ" ಎಂದು ಹೆಸರಿಟ್ಟಿದ್ದರು. ಏಕೆಂದರೆ ಅವನು ಯಾರಿಗೂ ಏನನ್ನು ಬೇಗ ಕೊಡುತ್ತಿರಲಿಲ್ಲ. ಇನ್ನೊಬ್ಬನಿಗೆ "ಬಿಡಲಾರ" ಎಂದು ಹೆಸರಿಟ್ಟಿದ್ದರು. ಏಕೆಂದರೆ ಎಷ್ಟು ಬಾರಿ ಇಲ್ಲ ಎಂದರು ಆತ ಬಿಡುತ್ತಿರಲಿಲ್ಲ.

ಒಂದು ದಿನ ಜೋರಾಗಿ ಮಳೆ ಬಂದಿತು. ಬಿಡಲಾರದವರ ಬಳಿ ಛತ್ರಿ ಇರಲಿಲ್ಲ. ಬಿಡಲಾರದವನು ಛತ್ರಿ ಕೊಡುವಂತೆ ಕೊಡಲಾರದವನನ್ನು ಕೇಳಿದನು.

ಅದಕ್ಕೆ ಆತ "ಗೆಳೆಯ! ನೀನು ಯಾವಾಗಲೂ ನಿನ್ನ ಕಾಲ ಮೇಲೆ ನಿಲ್ಲ ಬೇಕೆಂಬುದು ನನ್ನ ಆಸೆ. ಈಗ ನಾನು ನಿನಗೆ ಛತ್ರಿ ಕೊಟ್ಟರೆ ಮುಂದೆ ನೀನು ಛತ್ರಿ ಕೊಂಡು ಕೊಳ್ಳುವುದಿಲ್ಲ. ಯಾವಾಗ ಮಳೆ ಬಂದರು ಬೇರೆಯವರನ್ನು ಕೇಳುವೆ" ಎಂದು ಛತ್ರಿ ಕೊಡಲಿಲ್ಲ. ಬಿಡಲಾರದವನು ಮಳೆಯಲ್ಲಿ ನೆನೆಯುತ್ತಲೇ ಹೋದನು.





ಇನ್ನೊಂದು ಬಾರಿ ಗೆಳೆಯರಿಬ್ಬರು ಅಂಚೆ ಕಛೇರಿಯಲ್ಲಿ ಭೇಟಿ ಆದರು. ಆಗ ಬಿಡಲಾರದವನು ಒಂದು ಪತ್ರ ಬರೆಯ ಬೇಕೆಂದು ಬಯಸಿದನು. ಕೊಡಲಾರದವನನ್ನು ಪೆನ್ ಕೇಳಿದನು. ಅವನಾ ಕೊಡುವುದು?

"ಪ್ರೀತಿಯ ಗೆಳೆಯ! ಈ ರೀತಿ ಕೇಳಿ ಕೇಳಿ ಕೆಲಸ ಮಾಡಿಕೊಳ್ಳುವ ಗುಣ ನಿನಗೆ ಬರಬಾರದು. ನಿನ್ನ ಮೇಲಿನ ಪ್ರೀತಿಯಿಂದ ಈ ಮಾತು ಹೇಳುತ್ತಿರುವೆ. ನೀನು ನಿನ್ನ ಪೆನ್ ತೆಗೆದುಕೊಂಡು ಪತ್ರವನ್ನು ಬರೆ" ಎಂದನು.

ಬಿಡಲಾರದವನಿಗೆ ಬಹಳ ಕಿರಿಕಿರಿ ಎನಿಸಿತು. 'ಈ ಕೊಡಲಾರದವನಿಗೆ ಒಂದು ಪಾಠ ಕಲಿಸುವೆ' ಎಂದು ಯೋಚಿಸಿ ಅದಕ್ಕಾಗಿ ಸಮಯ ಕಾಯುತ್ತಿದ್ದನು.


ಆ ದಿನವೂ ಬಂದಿತು. ಗೆಳೆಯರಿಬ್ಬರು ಪಕ್ಕದ ಊರಿನ ಜಾತ್ರೆಗೆ ಹೊರಟರು. ಹೋಗುವ ದಾರಿಯಲ್ಲಿ ನದಿ ಹರಿಯುತ್ತಿತ್ತು. ಅದನ್ನು ದಾಟಲು ಚಿಕ್ಕ ಮರದ ಸೇತುವೆ ಇತ್ತು. ಇಬ್ಬರು ಅದರ ಮೇಲೆ ನಡೆಯತೊಡಗಿದರು. ಇದ್ದಕ್ಕಿದ್ದಂತೆ ಕೊಡಲಾರದವನು ಕಾಲು ಜಾರಿ ನದಿಗೆ ಬಿದ್ದನು. ಆತನಿಗೆ ಈಜು ಬರುತ್ತಿರಲಿಲ್ಲ. “ಕಾಪಾಡು! ಕಾಪಾಡು!” ಎಂದು ಕೂಗಿದನು.



ಬಿಡಲಾರದವನು ಇದೇ ಸರಿಯಾದ ಸಮಯ ಎಂದು ಯೋಚಿಸಿ "ಗೆಳೆಯ! ಈಗ ನಾನು ನಿನ್ನನ್ನು ಕಾಪಾಡುವೆ. ಆದರೆ ನೀನು ಈಜು ಕಲಿಯುವುದಿಲ್ಲ. ನೀರಿಗೆ ಬಿದ್ದಾಗಲೆಲ್ಲಾ ಯಾರಾದರು ಬಂದು ಕಾಪಾಡಲಿ ಎಂದು ಕಾಯುವೆ. ನೀನೇ ಹೇಗಾದರು ಮಾಡಿ ದಡ ಸೇರು" ಎಂದು ಹೇಳಿ ನಡೆಯಲು ಆರಂಭಿಸಿದನು.

ಕೊಡಲಾರದವನು ತನ್ನ ತಪ್ಪನ್ನು ತಿಳಿದುಕೊಂಡನು. "ಅಯ್ಯೋ! ನನ್ನನ್ನು ಕ್ಷಮಿಸು. ಈಗ ನೀನು ನನ್ನನ್ನು ಕಾಪಾಡದಿದ್ದರೆ ನಾನು ನೀರಿನಲ್ಲಿ ಮುಳುಗಿ ಬಿಡುವೆನು. ಇನ್ನು ಮುಂದೆ ನಾನು ಉಪದೇಶ ಮಾಡುವುದಿಲ್ಲ" ಎಂದು ಬೇಡಿಕೊಂಡನು.

ಬಿಡಲಾರದವನಿಗೆ ಕರುಣೆ ಬಂದು ಕಾಪಾಡಿದನು. ಅಂದಿನಿಂದ ಅವರಿಬ್ಬರು ಆತ್ಮೀಯ ಗೆಳೆಯರಾದರು. ಊರಿನ ಜನ ಅವರನ್ನು 'ರಾಮಪ್ಪ, ಕೃಷ್ಣಪ್ಪ' ಎಂಬ ಅವರ ನಿಜ ಹೆಸರಿನಿಂದ ಕರೆಯಲು ಆರಂಭಿಸಿದರು. ಕಾರಣ ಈಗ ಅವರಿಬ್ಬರ ಸ್ವಭಾವ ಬದಲಾಗಿದೆ ಅಲ್ಲವೇ?



ಮೂಲ: ತಮಿಳು ಜನಪದ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್. ಪಿ. ರಾಜು

ಕಳೆದು ಹೋದ ಚಂದ್ರ

ಕಣ್ಣಮ್ಮ ತನ್ನ ಮುಖವನ್ನು ತಿರುಗಿಸಿಕೊಂಡಳು ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು. ಯಾವ ಕ್ಷಣದಲ್ಲಿಯಾದರು ಕೆಳಗೆ ಉರುಳುವಂತಿತ್ತು. ಅವಳ ಅಪ್ಪ ಅದನ್ನು ನೋಡಿದರು.

"ಅಳಬೇಡ ಕಣ್ಣಮ್ಮ! ನಾನು ನಿನ್ನ ಹುಟ್ಟಿದ ಹಬ್ಬಕ್ಕೆ ಒಂದು ದಿನ ಮುಂಚೆ ಬಂದು ಬಿಡುವೆನು" ಎಂದು ಹೇಳಿದರು. ಊಹೂಂ! ಕಣ್ಣಮ್ಮನ ಮುಖ ಹಾಗೆ ಇತ್ತು.

"ಕಣ್ಣಮ್ಮ. ಅಲ್ಲಿ ನೋಡು, ಅದೋ! ಆ ದೇವಾಲಯದ ಗೋಪುರದ ಹತ್ತಿರ ಇರುವ ಪೂರ್ಣ ಚಂದ್ರನನ್ನು ನೋಡು! ಆ ಚಂದ್ರ ಮೆಲ್ಲ ಮೆಲ್ಲಗೆ ದುಂಡಗಿರುವ ತನ್ನ ಆಕಾರವನ್ನು ಕಡಿಮೆ ಮಾಡಿಕೊಳ್ಳುತ್ತಾ ಅರ್ಧ ಚಂದ್ರ ಆಗುತ್ತದೆ. ಅರ್ಧ ಚಂದ್ರ ಕರಗಿ ಕರಗಿ ಚಂದ್ರನೇ ಇಲ್ಲದಂತೆ ಆಗುತ್ತದೆ. ಮತ್ತೆ ಅದು ಚಿಕ್ಕ ಚಿಕ್ಕದಾಗಿ ಬೆಳೆಯುತ್ತಾ ಅರ್ಧ ಚಂದ್ರ ಆಗುತ್ತದೆ. ಆ ಅರ್ಧ ಚಂದ್ರ ಮತ್ತೆ ಪೂರ್ಣ ಚಂದ್ರ ಆದಾಗ ನಿನ್ನ ಹುಟ್ಟಿದ ಹಬ್ಬ ಬರುತ್ತದೆ" ಎಂದರು ಅಪ್ಪ.




"ಹಾ! ಇದು ಸ್ವಾರಸ್ಯಕರವಾಗಿದೆ!" ಎಂದು ಚಂದ್ರನನ್ನು ನೋಡಲು ತಿರುಗಿದಳು ಕಣ್ಣಮ್ಮ. ಬೆಳದಿಂಗಳ ಬೆಳಕಿನಲ್ಲಿ ಅವಳ ಕಣ್ಣೀರು ಮಿನುಗುತ್ತಿತ್ತು. ಮಗಳ ಮನಸ್ಸು ಬದಲಾಗುತ್ತಿರುವುದನ್ನು ಗಮನಿಸಿದ ಅಪ್ಪ "ಕಣ್ಣಮ್ಮ! ನಿನಗೆ ಗೊತ್ತಾ? ಜನರು ಮೊದಲು ಚಂದ್ರನ ಆಕಾರವನ್ನು ನೋಡಿ ಕ್ಯಾಲೆಂಡರ್ ಮಾಡುತ್ತಾ ಇದ್ದರು. ನೀನು ಗೋಡೆಯ ಮೇಲೆ ಚೌಕಗಳನ್ನು ಬರೆ. ಪ್ರತಿ ರಾತ್ರಿ ಚಂದ್ರನ ಬದಲಾಗುವ ಆಕಾರವನ್ನು ಚೌಕಗಳಲ್ಲಿ ಬರೆಯುತ್ತಾ ಇರು. ಅಷ್ಟರಲ್ಲಿ ನಾನು ವಾಪಸ್ಸು ಬರುತ್ತೇನೆ." ಎಂದರು.

ಕಣ್ಣಮ್ಮನ ಕಣ್ಣೀರು ಮಾಯವಾಯಿತು. ಅವಳು ಪಡೆಯುವ ಅನುಭವದ ನೆನಪಿನಿಂದ ಕಣ್ಣುಗಳು ಹೊಳೆದವು. ಮುಖದಲ್ಲಿ ನಸುನಗೆ ಮೂಡಿತು. ಅಪ್ಪ ನೆಮ್ಮದಿಯ ಉಸಿರು ಬಿಟ್ಟರು. ಆ ವೇಳೆಗೆ ರೈಲು ಬಂದಿತು. ಕಣ್ಣಮ್ಮ ಸಂತೋಷದಿಂದ ಅಪ್ಪನಿಗೆ ಕೈ ಬೀಸಿದಳು.

ಮಾರನೆಯ ದಿನ ಕಣ್ಣಮ್ಮ ಬಹಳ ಆನಂದ ಮತ್ತು ಉತ್ಸಾಹದಿಂದ ಇದ್ದಳು. ಅಂದು ಅವಳು ಗೋಡೆಯ ಮೇಲೆ ಚೌಕಗಳನ್ನು ಬರೆಯಬೇಕಿತ್ತು. ಪಕ್ಕದ ಮನೆಯ ಹುಡುಗ ಸಹಾಯ ಮಾಡಲು ಮುಂದೆ ಬಂದನು. ಅವಳು ಕತ್ತಲು ಆಗುವುದನ್ನೇ ಕಾಯುತ್ತಾ ಇದ್ದಳು. ದೇವಾಲಯದ ಗೋಪುರವನ್ನು ಆಗಾಗ್ಗೆ ನೋಡುತ್ತಿದ್ದಳು. ಸಮಯ ನಿಧಾನವಾಗಿ ಸರಿಯುತ್ತಿತ್ತು. ಬಹಳ ಸಮಯ ಕಾದ ನಂತರ ಚಂದ್ರ ಮೇಲೆ ಬಂದಿತು.

ಕಣ್ಣಮ್ಮ ಏನನ್ನೋ ಯೋಚಿಸುತ್ತಿದ್ದಳು. 'ಚಂದ್ರ ಇನ್ನು ದುಂಡಗೆ ಇದೆ. ಅಪ್ಪ ನನಗೆ ಸಮಾಧಾನ ಆಗಲು ಆ ರೀತಿ ಹೇಳಿದರೇ?' ನಿರಾಸೆಯಿಂದ ಆ ಚಂದ್ರನನ್ನೇ ನೋಡುತ್ತಾ ಇದ್ದಳು.



ನಂತರ 'ಓ! ಅಪ್ಪ ಹೇಳಿದ್ದು ನಿಜ, ಚಂದ್ರ ನೋಡಲು ದುಂಡಗೆ ಇದ್ದರು, ಅದು ಪೂರ್ತಿ ದುಂಡಗಿಲ್ಲ.' ಕಣ್ಣಮ್ಮ ಚಂದ್ರನ ಆಕಾರವನ್ನು ಗೋಡೆಯ ಚೌಕದ ಒಳಗೆ ಬರೆಯಲು ಹೋದಳು.

'ಯಾವ ಕಡೆ ಚಂದ್ರ ಪೂರ್ತಿ ದುಂಡಗಿಲ್ಲ?' ಯೋಚಿಸಿದಳು ಅವಳಿಗೆ ಮರೆತು ಹೋಯಿತು. ಮತ್ತೆ ಚಂದ್ರನನ್ನು ನೋಡಲು ಹೊರಗೆ ಹೋದಳು. 'ಆ!' ಈಗ ಅವಳಿಗೆ ನೆನಪಾಯಿತು.

ಮಾರನೆಯ ದಿನ ಕಣ್ಣಮ್ಮ ಚಂದ್ರನ ಬರೆಯುವುದನ್ನು ಮರೆತು ಹೋಗಿದ್ದಳು. ಪಕ್ಕದ ಮನೆಯ ಹುಡುಗ ಓಡಿ ಬಂದು “ಚಂದ್ರ ಇನ್ನೂ ಚಿಕ್ಕದಾಗಿದೆ” ಎಂದು ಹೇಳಿದಾಗ ಅವಳು ಬರೆಯುವುದನ್ನು ನೆನಪು ಮಾಡಿಕೊಂಡಳು.

ಮರುದಿನ ದೇವಾಲಯದ ಗೋಪುರದ ಮೇಲೆ ಚಂದ್ರ ಕಾಣಿಸಲೇ ಇಲ್ಲ. ಕಣ್ಣಮ್ಮನಿಗೆ ಗೊಂದಲವಾಯಿತು. ಅವಳು ನಿದ್ರಿಸುವ ಮುಂಚೆ ಮತ್ತೆ ಹೊರಗೆ ಬಂದು ನೋಡಿದಳು 'ಆ! ಚಂದ್ರ ಬಂದು ಬಿಟ್ಟಿದೆ.'

ಅಂದು ಚಂದ್ರ ಹಿಂದಿನ ದಿನಕ್ಕಿಂತ ಚಿಕ್ಕದಾಗಿತ್ತು. ಸ್ವಲ್ಪ ಸ್ವಲ್ಪವಾಗಿ ಚಿಕ್ಕದಾಗುತ್ತಿದ್ದ ಚಂದ್ರನ ಆಕಾರಗಳು ಗೋಡೆಯ ಮೇಲಿನ ಕ್ಯಾಲೆಂಡರ್‌ನ ಚೌಕಗಳನ್ನು ತುಂಬುತ್ತಾ ಹೋದವು.

ನಾಲ್ಕನೆಯ ದಿನ ರಾತ್ರಿ, ಐದನೆಯ ದಿನ ರಾತ್ರಿ ಮಳೆ ಬಂದಿತು. ಗೋಡೆಯ ಮೇಲಿನ ಚೌಕಗಳನ್ನು ಖಾಲಿ ಬಿಡಬೇಕಾಯಿತು. ಆರನೆಯ ದಿನ ರಾತ್ರಿ ಆಕಾಶ ಶುಭ್ರವಾಗಿತ್ತು. ನೂರಾರು ನಕ್ಷತ್ರಗಳು ಮಿನುಗುತ್ತಿದ್ದವು. ಆದರೆ ಚಂದ್ರನೆ ಕಾಣುತ್ತಿರಲಿಲ್ಲ. ಕಣ್ಣಮ್ಮ ರಾತ್ರಿ ಹನ್ನೊಂದು ಗಂಟೆಯವರೆಗು ಆಗಾಗ್ಗೆ ಹೊರಗೆ ಹೋಗಿ ನೋಡುತ್ತಿದ್ದಳು. ಊಹೂಂ! ಚಂದ್ರ ಬರಲೇ ಇಲ್ಲ. ಅವಳಿಗೆ ನಿದ್ರೆ ತಡೆಯಲು ಆಗಲಿಲ್ಲ.

ನಿದ್ರೆಯಲ್ಲಿ ಕಣ್ಣಮ್ಮ ರಾಕ್ಷಸನೊಬ್ಬ ಚಂದ್ರನನ್ನು ಕದ್ದುಕೊಂಡು ಹೋಗುತ್ತಿರುವ ಕನಸನ್ನು ಕಂಡಳು. 'ದಢಕ್' ಎಂದು ಎಚ್ಚರವಾಯಿತು.

'ಚಂದ್ರ ಎಲ್ಲಿಗೆ ಹೋಗಿದೆ? ನಾಳೆ ರಾತ್ರಿ ಅದು ಬರುವುದೇ?' ಕಾಯುತ್ತಾ ಕುಳಿತಳು. ಆ ದಿನವೂ ಚಂದ್ರ ಬರಲಿಲ್ಲ. 'ನಿಜವಾಗಿಯೂ ಚಂದ್ರನನ್ನು ಯಾರಾದರು ತೆಗೆದುಕೊಂಡು ಹೋಗಿ ಬಿಟ್ಟರಾ?' ಕಣ್ಣಮ್ಮ ಯೋಚಿಸುತ್ತಿದ್ದಳು.

ಕಣ್ಣಮ್ಮನ ಮಾತನ್ನು ಕೇಳಿದ ಪಕ್ಕದ ಮನೆಯ ಹುಡುಗ "ಯಾರು ಚಂದ್ರನನ್ನು ಕದ್ದುಕೊಂಡು ಹೋಗಿರುವರೋ, ಅವರು ಅದನ್ನು ಮತ್ತೆ ತಂದೇ ತರುವರು. ಏಕೆಂದರೆ ಅಷ್ಟು ದೊಡ್ಡ ಚಂದ್ರನನ್ನು ಯಾರಿಂದಲು ಹೊತ್ತುಕೊಂಡು ತಿರುಗಲು ಸಾಧ್ಯವಿಲ್ಲ" ಎಂದನು. ಅವನೊಬ್ಬ ಪೆದ್ದ!

"ನೀನು ಎಷ್ಟು ಹೊತ್ತು ಎಚ್ಚರವಾಗಿದ್ದರು ಏನೂ ಪ್ರಯೋಜನ ಆಗುವುದಿಲ್ಲ. ಅಪ್ಪ ಬೆಳಗ್ಗೆಯೇ ಬರುವುದು. ಬಾ ಮಲಗು" ಎಂದು ಅಮ್ಮ ಹೇಳಿದರು. ಕಣ್ಣುಗಳನ್ನು ಮುಚ್ಚಿ ಮಲಗಿದಳು ಕಣ್ಣಮ್ಮ. ನಿದ್ರೆಯಲ್ಲಿ ಅಪ್ಪ ಮಂತ್ರದ ಕತ್ತಿಯನ್ನು ಬೀಸುತ್ತಾ ಚಂದ್ರನನ್ನು ರಾಕ್ಷಸನಿಂದ ಬಿಡಿಸಿದಂತೆ ಕನಸನ್ನು ಕಂಡಳು.

ಮರುದಿನ ಬೆಳಗ್ಗೆ ಕಣ್ಣಮ್ಮ ನಿದ್ರೆಗಣ್ಣುಗಳಲ್ಲೆ ಹೊರಗೆ ಬಂದಳು. ತಣ್ಣನೆಯ ಗಾಳಿ ಅವಳ ನಿದ್ರೆಯನ್ನು ದೂರ ಮಾಡಿತು. ಕತ್ತೆತ್ತಿ ಆಕಾಶ ನೋಡಿದಳು. "ಅಮ್ಮಾ! ಚಂದ್ರ ಬಂದಿದೆ. ನಿಜವಾಗಿಯೂ ಅದು ಒಂದು ದೊಡ್ಡ ಸೋಮಾರಿ. ಬೆಳಕಾದಾಗ ಹೊರಗೆ ಬಂದಿದೆ" ಎಂದು ಕೂಗಿದಳು

ಪೂರ್ಣ ಚಂದ್ರ ಈಗ ಅರ್ಧ ಚಂದ್ರ ಆಗಿತ್ತು. ಅಷ್ಟೆ ಅಲ್ಲ. ಅದು ದೇವಾಲಯದ ಗೋಪುರದ ಮೇಲೆ ಇರಲಿಲ್ಲ. ಅದು ಕಣ್ಣಮ್ಮನ ತಲೆಯ ಮೇಲೆ ಇತ್ತು. ದೂರದಲ್ಲಿ ಅಪ್ಪ ಬರುವುದು ಕಾಣಿಸಿತು.

ಚಂದ್ರನನ್ನು ಕಂಡು ಹಿಡಿದದ್ದು ಆಯಿತು. ಅಪ್ಪನು ಬಂದರು. ಗೋಡೆಯ ಮೇಲಿನ ಕ್ಯಾಲೆಂಡರ್‌ನ ಎಲ್ಲ ಚೌಕಗಳು ಪೂರ್ತಿ ಮಾಡಲು, ಸೋಮಾರಿ ಕಣ್ಣಮ್ಮ ಚಂದ್ರನನ್ನು ಬೆಳಗಿನ ಆಕಾಶದಲ್ಲಿ ಹುಡುಕುತ್ತಿದ್ದಾಳೆ.

– ನಿರುಪಮ ರಾಘವನ್



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ನೀರಿನ ಹನಿ



ಒಂದು ಮಣ್ಣಿನ ಮಡಕೆ. ಅದರ ತುಂಬಾ ನೀರು ತುಂಬಿತ್ತು. ಆ ನೀರಿನಲ್ಲಿದ್ದ ಒಂದು ನೀರಿನ ಹನಿ ಕತ್ತೆತ್ತಿ ಮೇಲೆ ಆಕಾಶ ನೋಡಿತು. ಅಲ್ಲಿ ಪ್ರಕಾಶಮಾನವಾದ ಸೂರ್ಯ ಹೊಳೆಯುತ್ತಿದ್ದನು. ಎಲ್ಲ ಕಡೆ ಬೆಳಕು ಹರಡಿತ್ತು. ಈ ನೀರಿನ ಹನಿಗೆ ಆ ಸೂರ್ಯನ ಕಿರಣದ ಬಳಿಗೆ ಹೋಗಬೇಕೆಂದು ಬಹಳ ಆಸೆ ಆಯಿತು.




ನೀರಿನ ಹನಿ ಎಲ್ಲರನ್ನು ತಳ್ಳಿಕೊಂಡು ಮಡಕೆ ಮೇಲಕ್ಕೆ ಬಂದಿತು. ಮಡಕೆಯಿಂದ ನೆಗೆಯಿತು. ಒಂದು ಕ್ಷಣ ನೀರಿನ ಹನಿಗೆ ಭಯ ಆದರು ಸೂರ್ಯನನ್ನು ನೋಡಿದ ತಕ್ಷಣ ಅದರ ಭಯ ದೂರ ಆಯಿತು. ಮೆಲ್ಲ ಮೆಲ್ಲನೆ ನೀರಿನ ಹನಿ ಆವಿಯಾಗ ತೊಡಗಿತು. ಈ ರೀತಿ ಆವಿಯಾಗಿ ಮೇಲೆ ಹೋಗಬೇಕೆಂದು ಅದು ತುಂಬ ಇಷ್ಟಪಟ್ಟಿತ್ತು.



ಬಾನಿನಲ್ಲಿ ಎಲ್ಲೆಲ್ಲೂ ಹತ್ತಿ ಮೂಟೆಯಂತಹ ಬಿಳಿಯ ಮೋಡಗಳು ಹರಡಿಕೊಂಡಿದ್ದವು. ಈ ನೀರಿನ ಹನಿಯ ತರಹ ಹಲವು ನೀರಿನ ಹನಿಗಳು ಆ ಮೋಡಗಳಲ್ಲಿ ಇದ್ದವು. ಇದು ಅವುಗಳನ್ನು ಸೂರ್ಯನ ಬಳಿಗೆ ಹೋಗಲು ದಾರಿ ಕೇಳಿತು.

“ನನಗೆ ಗೊತ್ತಿಲ್ಲ” ಎಂದಿತು ಒಂದು ಧ್ವನಿ. “ಹೀಗೆ ಸುತ್ತಿಕೊಂಡು ಹೋಗು” ಎಂದಿತು ಇನ್ನೊಂದು ಧ್ವನಿ. “ನೀನೇ ದಾರಿ ಹುಡುಕಿಕೋ” ಎಂದಿತು ಮತ್ತೊಂದು ಧ್ವನಿ.






ನೀರಿನ ಹನಿ ಬಹಳ ದಿನ ಇದೇ ರೀತಿ ಸುತ್ತಾಡುತ್ತಿತ್ತು. ಒಂದು ದಿನ ಹೊಸ ಮೋಡ ಒಂದನ್ನು ನೋಡಿತು. ಆ ಮೋಡ ದೊಡ್ಡದಾಗಿ, ಭಾರವಾಗಿ, ಕಪ್ಪಾಗಿ ಇತ್ತು. ಈ ನೀರಿನ ಹನಿ ಒಂದೇ ನೆಗೆತಕ್ಕೆ ಆ ಮೋಡದ ಒಳಗೆ ಸೇರಿ ಹೋಯಿತು.

ಕತ್ತಲಾಯಿತು. ಕಪ್ಪು ಮೋಡ ಚಟಪಟಿಸತೊಡಗಿತು. ಹಾಗೆ ಹೀಗೆ ನುಲಿದಾಡಿತು. ಬಾಗಿತು. ಪಟಪಟ ಹಾರಾಡಿತು. ‘ನಾನು ಸರಿಯಾದ ಜಾಗಕ್ಕೆ ಬರಲಿಲ್ಲ’ ಎಂದು ನೀರಿನ ಹನಿ ಯೋಚಿಸಿತು.


ಗಾಳಿ ಸುತ್ತಿ ಸುತ್ತಿ ಜೋರಾಗಿ ಬೀಸತೊಡಗಿತು. ಮಿಂಚು ಮಿಂಚಿತು. ಎಲ್ಲಾ ಕಡೆ ಮಳೆ ಹನಿಗಳು ಬೀಳಲು ಆರಂಭಿಸಿದವು. ಈ ನೀರಿನ ಹನಿಯು ಕೆಳಗೆ ಬೀಳತೊಡಗಿತು. ಅದು ಒಂದು ಸಣ್ಣ ಝರಿಯಲ್ಲಿ ಬಿದ್ದಿತು. ಆ ಝರಿ ಜೊತೆ ಬೆಟ್ಟದಿಂದ ಜಾರಿತು. ಬಂಡೆಯನ್ನು ಬಳಸಿಕೊಂಡು ಓಡಿತು. ಝರಿ ಹರಿಯುವ ವೇಗ ಕಡಿಮೆ ಆಗುತ್ತಾ ಬಂದಿತು.




“ಈ ಝರಿ ಎಲ್ಲಿಗೆ ಹೋಗುತ್ತಿದೆ?” ನೀರಿನ ಹನಿ ಕೇಳಿತು. “ಇದು ನದಿಯನ್ನು ಸೇರಲು ಹೋಗುತ್ತಿದೆ” ಎಂದವು ಉಳಿದ ಹನಿಗಳು. ನದಿಯ ಎರಡು ದಡದಲ್ಲೂ ದೊಡ್ಡ ದೊಡ್ಡ ಮರಗಳಿದ್ದವು. ಅಲ್ಲಲ್ಲಿ ಸೂರ್ಯನ ಕಿರಣಗಳಿಂದ ನದಿಯ ನೀರು ಫಳಫಳ ಹೊಳೆಯುತ್ತಿತ್ತು. ನದಿಯಲ್ಲಿ ವೇಗವಾಗಿ ಹೋಗುವುದು ನೀರಿನ ಹನಿಗೆ ತುಂಬಾ ಇಷ್ಟವಾಯಿತು. ಅದು ತನ್ನ ಪ್ರಯಾಣವನ್ನು ತುಂಬಾ ಆನಂದಿಸಿತು.

'ಏನೆ ಆದರು ನದಿಯಲ್ಲಿ ಹೆಚ್ಚು ದಿನಗಳು ಇರಲು ಆಗುವುದಿಲ್ಲ' ಎಂದು ನೀರಿನ ಹನಿಗೆ ಗೊತ್ತಿತ್ತು. ಕಡಲಿನ ಶಕ್ತಿ ಹನಿಯನ್ನು ಎಳೆಯುತ್ತಿತ್ತು.

ಈಗ ನೀರಿನ ಹನಿ ಕಡಲಿನಲ್ಲಿ ನಿಂತು ಮೇಲೆ ಆಕಾಶ ನೋಡಿತು. ಅಲ್ಲಿ ಹತ್ತಿಯ ಮೂಟೆಯಂತಹ ಬಿಳಿಯ ಮೋಡಗಳು! ತಾನು ಮೊದಲು ಮಡಕೆಯಿಂದ ಹೊರ ಬಂದಾಗ ನೋಡಿದ ಮೋಡದ ನೆನಪಾಯಿತು. ಸೂರ್ಯನನ್ನು ನೋಡಿತು. ಅದು ಫಳಫಳ ಹೊಳೆಯುತ್ತಿತ್ತು.





ಮುಂದೆ ಏನು ಮಾಡಬೇಕೆಂದು ನೀರಿನ ಹನಿಗೆ ಗೊತ್ತಿತ್ತು. ಅದು ಜಿಗಿಯಿತು. ಪುನಃ ಆವಿಯಾಗಿ ಮೇಲಕ್ಕೆ ಹೋಯಿತು. ಅಲ್ಲಿ ಚಿಕ್ಕ ಚಿಕ್ಕ ಮೋಡಗಳ ಗುಂಪಿತ್ತು. ಹಗಲು ಸೂರ್ಯ ಕಾಣುವನು. ರಾತ್ರಿ ನಕ್ಷತ್ರಗಳು ಮಿನುಗುವವು. ನೀರಿನ ಹನಿ ಕೆಳಗೆ ನೋಡಿತು. ತಾನು ಇದ್ದ ವಿಶಾಲ ಕಡಲು, ಅಂಕುಡೊಂಕಾಗಿ ಹರಿಯುವ ನದಿ, ಮೊದಲು ತಾನು ಬಿದ್ದ ಝರಿ ಎಲ್ಲವು ಕಂಡವು.

ಒಂದು ಹಗುರವಾದ ಮೋಡ ನೀರಿನ ಹನಿಯನ್ನು ಸುತ್ತುವರೆಯಿತು. ನೀರಿನ ಹನಿ ಕಷ್ಟಪಟ್ಟು ಹೊರಗೆ ಬಂದಿತು. ಬಂದ ತಕ್ಷಣ ಸಣ್ಣ ಸಣ್ಣ ಚೂರುಗಳಾಗಿ ಸಿಡಿಯಿತು.

ನೀರಿನ ಹನಿ 'ತನಗೆ ಸ್ವಾತಂತ್ರ್ಯ ಸಿಕ್ಕಿತು' ಎಂದುಕೊಂಡು ಆನಂದಿಸಿತು.

ಮೂಲ: ನೀರಿನ ಹನಿ

– ಕ್ರಿಸ್ಟೋಫರ್ ಇ ಜೋನ್ಸ್

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ಬಾಲ ಯಾರದು?



ನದಿಯ ತೀರದಲ್ಲಿ ಒಂದು ದೊಡ್ಡ ಆಲದಮರ ಇತ್ತು. ಅಲ್ಲಿ ಚಿಟ್ಟೆಗಳು ಹಾರಾಡುತ್ತಾ ಇದ್ದವು. ಆ ಹಾರಾಡುವ ಚಿಟ್ಟೆಗಳನ್ನು ಹಿಡಿಯಲು ಒಂದು ಪುಟ್ಟ ಕೋತಿ ಕೊಂಬೆಯಿಂದ ಕೊಂಬೆಗೆ ನೆಗೆದಾಡುತ್ತಿತ್ತು. ಹಾಗೆ ನೆಗೆದಾಡುವಾಗ ಕೆಳಗೆ ನೆಲದ ಮೇಲೆ ಬಾಲ ಒಂದು ಬಿದ್ದಿರುವುದನ್ನು ನೋಡಿತು.

‘ನನ್ನ ಬಾಲ ಹರಿದು ತುಂಡಾಗಿ ಬಿಟ್ಟಿತೆ!’ ಎಂದು ಪುಟ್ಟ ಕೋತಿ ತನ್ನ ಬಾಲವನ್ನು ಮುಟ್ಟಿ ನೋಡಿಕೊಂಡಿತು.

‘ನನ್ನ ಪುಣ್ಯ! ಬಾಲ ಭದ್ರವಾಗಿದೆ. ಇದು ಯಾರ ಬಾಲ?’ ಯೋಚಿಸುವಂತೆ ನಟಿಸಿತು. ಅದನ್ನು ಹಿಡಿದು ದಾರಿಯಲ್ಲಿ ಹೋಗುವಾಗ ನದಿಯ ನೀರಿನಲ್ಲಿದ್ದ ಮೀನು ಒಂದು ಮೇಲಕ್ಕೆ ನೆಗೆಯಿತು.






ಕೋತಿ: ಈ ಬಾಲ ನಿನ್ನದಾ?

ಮೀನು: ಅದು ನನ್ನದಲ್ಲ. ನನಗೆ
ಬಾಲ ಇಲ್ಲದಿದ್ದರೆ ನೀರಿನಲ್ಲಿ
ಬಳುಕಿ ಬಳುಕಿ ಈಜಾಡಲು
ಆಗುತ್ತಿತ್ತೇ?

(ಗೊಂದಲಕ್ಕೆ ಸಿಕ್ಕಿದ ಕೋತಿ ಮುಂದಕ್ಕೆ ಹೋಯಿತು. ಟೊಕ್...ಟೊಕ್... ಶಬ್ದ. ಹಾ! ಮರಕುಟಿಕ!)

ಕೋತಿ: ಈ ಬಾಲ ನಿನ್ನದಾ?
ಮರಕುಟಿಕ ಹಕ್ಕಿ: ಹಾಂ! ಇದೋ ನನ್ನ ಬಾಲ ನೋಡು. ಈ ಬಾಲ
ಇಲ್ಲದಿದ್ದರೆ ನಾನು ಮರದಲ್ಲಿ ಈ ರೀತಿ ಕುಳಿತು
ಕುಟ್ಟಲು ಆಗುತ್ತಿತ್ತೇ?
(ಮರದಿಂದ ಅಳಿಲು ಕೆಳಕ್ಕೆ ನೆಗೆಯಿತು.)

ಕೋತಿ: ಈ ಬಾಲ ನಿನ್ನದಾ?
ಅಳಿಲು: ಅದು ನನ್ನದಲ್ಲ! ಇದೋ! ನನ್ನ ಬಾಲ
ಸೊಂಪಾಗಿ ಕುಚ್ಚಿನಂತೆ ಎಷ್ಟು ಚೆನ್ನಾಗಿದೆ
ನೋಡು. ಈ ಬಾಲದ ಸಹಾಯದಿಂದ
ಪ್ಯಾರಚೂಟ್‌ನಂತೆ ಎತ್ತರದಿಂದ
ಕೆಳಗೆ ನೆಗೆಯುವೆನು.



(ಪಟ್. . ಪಟ್. . ಎಂದು ಯಾರೋ ಓಡುತ್ತಿರುವ ಶಬ್ದ. ಅಮ್ಮ ಮೊಲ ತನ್ನ ಮರಿಗಳೊಂದಿಗೆ ಬಿಲದ ಕಡೆಗೆ ಓಡುತ್ತಿತ್ತು. ಪುಟ್ಟ ಕೋತಿ ಬಿಲದ ಬಾಗಿಲಲ್ಲಿ ನಿಂತಿತು.)

ಕೋತಿ: ಏಕೆ ಹೀಗೆ ಓಡಿ ಬಂದಿರಿ? ಬಾಲವನ್ನು ಹುಡುಕುತ್ತಿರುವಿರಾ?

ಮೊಲ: ಇಲ್ಲ, ಇದೋ ನೋಡು! ನಮ್ಮ ಬಾಲ.


ಕೋತಿ: ಇದೇನಿದು? ನಿನ್ನ ಬಾಲದಲ್ಲಿ ಮಾತ್ರ ಬೆಳ್ಳಗೆ ಗೊಂಚಲಿನಂತೆ ಕೂದಲುಗಳಿವೆ.

ಮೊಲ: ಅಪಾಯ ಬಂದಾಗ ನನ್ನ ಮರಿಗಳನ್ನು ಎಚ್ಚರಿಸುವುದು ಇದು ತಾನೇ? ನನ್ನ ಕಂದು ಮೈ ಬಣ್ಣ ಶತ್ರುಗಳ ಕಣ್ಣಿಗೆ ಕಾಣುವುದಿಲ್ಲ. ಬಾಲದಲ್ಲಿ ಇರುವ ಬಿಳಿ ಬಣ್ಣ ನೋಡಿ ನನ್ನ ಮರಿಗಳು ನನ್ನ ಹಿಂದೆ ಓಡಿ ಬರುತ್ತವೆ.

('ಈ ರೀತಿ ಇರುವುದು ಒಂದು ಬಾಲವೇ?'ಎಂದು ಯೋಚಿಸುತ್ತಾ ಪುಟ್ಟ ಕೋತಿ ಮುಂದಕ್ಕೆ ನಡೆಯಿತು. ಹಾ! ದಾರಿಯಲ್ಲಿ ಬಾಲ ಮುರಿದ ಒಂದು ಹಲ್ಲಿ ಕಂಡಿತು.)

ಕೋತಿ: ಬೇಜಾರು ಮಾಡಿ ಕೊಳ್ಳಬೇಡ! ಇದೋ! ನಿನ್ನ ಬಾಲ.

ಹಲ್ಲಿ: ಇದು ನನ್ನದೇ ಬಾಲ. ಆದರೆ ನನಗೆ ಈಗ ಅದು ಬೇಡ.




ಕೋತಿ: ಏನು? ಬಾಲ ಬೇಡವೇ? ಬಾಲ ಇಲ್ಲದೆ ಮೀನಿಗೆ ನೀರಿನಲ್ಲಿ ಈಜಾಡಲು ಆಗುವುದಿಲ್ಲ. ಅಳಿಲಿಗೆ ಮೇಲಿಂದ ಕೆಳಕ್ಕೆ ನೆಗೆಯಲು ಆಗುವುದಿಲ್ಲ. ಮೊಲಕ್ಕೆ ತನ್ನ ಮರಿಗಳನ್ನು ಅಪಾಯದಿಂದ ಪಾರು ಮಾಡಲು ಬಾಲ ಬೇಕು. ಅಷ್ಟೇ ಏಕೆ? ಬಾಲ ಇಲ್ಲದಿದ್ದರೆ ನನಗೆ ಕೊಂಬೆಯಿಂದ ಕೊಂಬೆಗೆ ಉಯ್ಯಾಲೆ ಆಡಲು ಆಗುವುದಿಲ್ಲ. ಆದರೆ ನಿನಗೆ ಮಾತ್ರ ಬಾಲ ಬೇಡವೇ? ಏಕೆ?

ಹಲ್ಲಿ: ಬಾಲ ಬೇಡ ಎಂದು ಯಾರು ಹೇಳುವುದಿಲ್ಲ. ಮೊನ್ನೆ ಹಾವು ನನ್ನ ಬಾಲವನ್ನು ಹಿಡಿದು ಬಿಟ್ಟಿತು. ಅದಕ್ಕೆ ನಾನು ಬಾಲ ಅಲ್ಲಿಯೇ ಉದುರಿಸಿ ಬಿಟ್ಟು ತಪ್ಪಿಸಿಕೊಂಡೆ. ಬರಿ ಬಾಲವಾದ್ದರಿಂದ ಹಾವು ನನ್ನ ಬಾಲ ಉಗಿದು ಬಿಟ್ಟಿತು. ತುಂಡಾದ ಬಾಲವನ್ನು ಅಂಟಿಸುವುದಕ್ಕೆ ಸಾಧ್ಯವಿಲ್ಲ. ನೀನು ಬೇಜಾರು ಮಾಡಿಕೊಳ್ಳಬೇಡ. ನನಗೆ ಮತ್ತೆ ಬಾಲ ಬೆಳೆಯುತ್ತದೆ.

ಪುಟ್ಟ ಕೋತಿಯ ಬೇಸರ ಹೊರಟು ಹೋಯಿತು. 'ಅಯ್ಯಪ್ಪ! ಇನ್ನು ಬಾಲವನ್ನು ಕೊಡಲು ನಾನು ಯಾರನ್ನು ಹುಡುಕಿಕೊಂಡು ಅಲೆದಾಡಬೇಕಿಲ್ಲ' ಎಂದು ಅಂದುಕೊಂಡಿತು.

ಸ್ಪಾಸ್ಟಿಕ್ ಸೊಸೈಟಿಯ ಮಕ್ಕಳ ನಾಟಕ ಆಧಾರಿತ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಜಾತ್ರೆಯಲ್ಲಿ. . .

ಆ ದಿನ ನನ್ನ ತರಗತಿಯಲ್ಲಿ ಉಲ್ಲಾಸ ತುಂಬಿತ್ತು. ಶಾಲೆ ಮುಗಿದ ನಂತರ ನಾನು ಮನೆಗೆ ಓಡುತ್ತಾ ಬಂದೆನು. "ಅಮ್ಮ! ಅಮ್ಮ! ಮುಂದಿನ ವಾರ ಸ್ಕೌಟ್ಸ್‌ನವರೆಲ್ಲ ಹೊರಗಡೆ ಶಿಬಿರಕ್ಕೆ ಹೋಗುತ್ತಿದ್ದಾರೆ. ರಜನಿ, ರಹಿಮ್ ಎಲ್ಲರು ಹೋಗುತ್ತಿದ್ದಾರೆ. ನಾನು ಹೋಗುವೆನಮ್ಮ" ಎಂದೆನು.

"ಯಾವ ಜಾಗಕ್ಕೆ ಹೋಗುತ್ತಿದ್ದಿರಾ ಮಣಿ?" ಅಮ್ಮ ಕೇಳಿದರು. "ಪಕ್ಕದ ಊರಿಗೆ ಹೋಗುತ್ತಾ ಇದ್ದೇವೆ. ಅಲ್ಲಿ ಒಂದು ದೊಡ್ಡ ಜಾತ್ರೆ ಇದೆ. ಸುತ್ತಮುತ್ತಲಿನ ಹಳ್ಳಿಗಳ ಜನರೆಲ್ಲ ಜಾತ್ರೆಗೆ ಬರುವರು. ನಾವುಗಳೆಲ್ಲ ಅಲ್ಲಿದ್ದು ಅವರಿಗೆ ಸಹಾಯ ಮಾಡುವೆವು" ಎಂದೆನು.

ಭಾನುವಾರ ರಜ ಬಂದಿತು. ಶಿಬಿರಕ್ಕೆ ಬೇಕಾದ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಬಸ್ ಹತ್ತಿದೆವು. ಸಂಜೆಯ ವೇಳೆಗೆ ಆ ಊರನ್ನು ತಲುಪಿದೆವು.



ಅಬ್ಬಬ್ಬ! ಎಲ್ಲಿ ನೋಡಿದರು ಜನರ ಗುಂಪು. ಅಂಗಡಿಗಳ ಸಾಲು. ಅಲ್ಲಿನ ಮೈದಾನದಲ್ಲಿ ನಾವು ಇರಲು ಗುಡಾರ ಹಾಕಿಕೊಂಡೆವು. ನಂತರ ಮರುದಿನ ಮಾಡಬೇಕಾದ ಕೆಲಸಗಳನ್ನು ಹಂಚಿಕೊಂಡೆವು.

ರಾತ್ರಿ ನಾವೆಲ್ಲ ಊಟ ಮಾಡುವಾಗ "ನನ್ನ ಕೆಲಸ ಏನು ಗೊತ್ತಾ? ಜನರ ಆರೋಗ್ಯದ ಕಡೆ ಗಮನ ಹರಿಸಬೇಕು, ಚಿಕಿತ್ಸೆಗೆ ಸಹಾಯ ಮಾಡಬೇಕು" ಎಂದಳು ರಜನಿ. "ನಾನು ಸಂಚಾರಿ ಪೊಲೀಸರಿಗೆ ಸಹಾಯ ಮಾಡುವೆನು" ಎಂದನು ರಹಿಮ್. "ಊರಿಗೆ ಹೊಸದಾಗಿ ಬಂದವರಿಗೆ ಸಹಾಯ ಮಾಡುವುದು ನನ್ನ ಕೆಲಸ" ಎಂದೆನು ನಾನು.

ಮರುದಿನ ಬೆಳಗ್ಗೆ ನಾವೆಲ್ಲ ಬೇಗನೆ ಎದ್ದೆವು. ನಿತ್ಯದ ಕೆಲಸ ಮುಗಿಸಿ ಊಟದ ಪೊಟ್ಟಣದೊಂದಿಗೆ ನಮ್ಮ ನಮ್ಮ ಕೆಲಸದ ಜಾಗಗಳಿಗೆ ಹೋದೆವು. ಇಡೀ ದಿನ ಕೆಲಸ ಮಾಡಿದೆವು. ಸಮಯ ಸರಿದಿದ್ದೇ ಗೊತ್ತಾಗಲಿಲ್ಲ.

ಆ ಸಂಜೆ ನಾನು ಮತ್ತು ರಹಿಮ್ ಮಾತನಾಡುತ್ತಾ ಗುಡಾರಕ್ಕೆ ವಾಪಸ್ಸು ಬರುತ್ತಿದ್ದೆವು. ಎದುರಿಗೆ ಒಂದು ಅಜ್ಜಿ ಬೆಟ್ಟವನ್ನು ಹತ್ತಿ ದೇವರ ದರ್ಶನ ಪಡೆಯಲು ಕಷ್ಟಪಟ್ಟು ಬರುತ್ತಿದ್ದರು. "ನಾನು ನಿಮಗೆ ಸಹಾಯ ಮಾಡಲೇ ಅಜ್ಜಿ?" ಎಂದು ನಾನು ವಿನಯದಿಂದ ಕೇಳಿದೆನು.




ರಹಿಮ್ ಅವರ ಕೈಯಲ್ಲಿದ್ದ ಸಾಮಾನುಗಳನ್ನು ತೆಗೆದುಕೊಂಡನು. ನಾನು ಅಜ್ಜಿಯ ಕೈ ಹಿಡಿದು ಮೆಲ್ಲಗೆ ನಡೆಸಿಕೊಂಡು ಹೊರಟೆನು.

ಅಜ್ಜಿಯನ್ನು ಬೆಟ್ಟದ ಮೇಲಕ್ಕೆ ಬಿಟ್ಟು ನಾವಿಬ್ಬರು ಕೆಳಗೆ ಇಳಿಯುತ್ತಿದ್ದೆವು. ಆಗ ಯಾರೋ ಆಪಾಯದಲ್ಲಿದ್ದಾಗ ಕೂಗುವಂತೆ ಕೂಗುತ್ತಿರುವುದನ್ನು ಕೇಳಿದೆವು. ಶಬ್ದ ಬಂದ ಕಡೆಗೆ ಓಡಿದೆವು. ಅಲ್ಲಿ ಒಬ್ಬ ಚಿಕ್ಕ ಹುಡುಗ ಅಕಸ್ಮಾತಾಗಿ ಕಾಲು ಜಾರಿ ಕೊಳದೊಳಕ್ಕೆ ಬಿದ್ದು ಬಿಟ್ಟಿದ್ದನು. ರಹಿಮ್ ತನ್ನ ಕೈಯಲ್ಲಿದ್ದ ಬ್ಯಾಗನ್ನು ಎಸೆದು ನೀರಿನತ್ತ ಓಡಿದನು. ತಾನು ಧರಿಸಿದ್ದ ಚಪ್ಪಲಿ ಮತ್ತು ಶರ್ಟ್‌ನ್ನು ಕಳಚಿ ಹಾಕಿ, ಒಂದೇ ನೆಗೆತಕ್ಕೆ ಕೊಳಕ್ಕೆ ಹಾರಿದನು. ವೇಗವಾಗಿ ಈಜುತ್ತಾ ಹೋಗಿ ಆ ಹುಡುಗನನ್ನು ಹಿಡಿದುಕೊಂಡನು. ದಡಕ್ಕೆ ತಂದನು.

ನಾನು ಆ ಹುಡುಗನನ್ನು ಅಂಗಾತ ಮಲಗಿಸಿದೆನು. ಸ್ಕೌಟ್ಸ್‌ನಲ್ಲಿ ಕೊಟ್ಟಿದ್ದ ತರಬೇತಿಯಂತೆ ಅವನಿಗೆ ಕೃತಕ ಉಸಿರಾಟ ನೀಡಿದೆನು.

ಅದೃಷ್ಟ ಚೆನ್ನಾಗಿತ್ತು. ಆತ ಹೆಚ್ಚು ನೀರನ್ನು ಕುಡಿದಿರಲಿಲ್ಲ. ಬೇಗನೆ ಉಸಿರಾಡಲು ಆರಂಭಿಸಿದನು. ಭಯದಿಂದ ಅಳತೊಡಗಿದನು. ಸುತ್ತಲು ಜನ ಸೇರಿದರು.



ಹುಡುಗನಿಗೆ ಹೆಚ್ಚು ಗಾಳಿಯ ಅಗತ್ಯ ಇದ್ದುದರಿಂದ "ಸುತ್ತ ನಿಲ್ಲಬೇಡಿ. ಸ್ವಲ್ಪ ಜಾಗ ಬಿಡಿ" ಎಂದನು ರಹಿಮ್. ಅಷ್ಟರಲ್ಲಿ ಹುಡುಗನ ತಂದೆ ತಾಯಿಗಳು ಅಲ್ಲಿಗೆ ಬಂದರು.

ನಾವೆಲ್ಲರು ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಡಾಕ್ಟರ್ ಆ ಹುಡುಗನನ್ನು ಪರೀಕ್ಷಿಸಿದರು. "ಸಮಯಕ್ಕೆ ಸರಿಯಾಗಿ ಸರಿಯಾದ ಚಿಕಿತ್ಸೆ ನೀಡಿರುವಿರಿ. ಆದುದರಿಂದ ಏನೂ ತೊಂದರೆ ಇಲ್ಲ" ಎಂದರು.

ಹುಡುಗನ ತಂದೆ ತಾಯಿ ನಮಗೆ "ಧನ್ಯವಾದ" ಹೇಳಿ ಹೋದರು. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ರಜನಿಯನ್ನು ಕರೆದುಕೊಂಡು, ನಾವು ಮೂರು ಜನರು ಮಾತನಾಡುತ್ತಾ ನಮ್ಮ ಗುಡಾರಕ್ಕೆ ಬಂದೆವು. ನಿದ್ರೆ ಬರುವವರೆಗು ಆ ದಿನ ನಡೆದ ಎಲ್ಲವನ್ನು ಮಾತನಾಡುತ್ತಲೇ ಇದ್ದೆವು.




Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಕಂಡು ಹಿಡಿಯೋಣ ಬಾ!






ರಸ್ತೆ ಬದಿಯಲ್ಲಿ ಸಾಲು ಮರಗಳು
ಅಡುಗೆಗೆ ಹಣ್ಣು ಕೊಡುವವು
ವನದಂತೆ ನೆರಳು ಕೊಡುವವು
ಅವು ಎಂತಹ ಮರಗಳು?

ಎಲೆಗಳಿವೆ ಕೊಂಬೆಗಳಿಲ್ಲ
ಹೂಗಳಿವೆ ಪರಿಮಳ ಇಲ್ಲ
ತೊಗಟೆ ಇದೆ ದಿಮ್ಮಿಯಲ್ಲ
ಅದು ಯಾವ ಮರ?

ನೆಟ್ಟಗೆ ನೇರವಾಗಿ ನಿಲ್ಲುವುದು
ನೆಲದಲ್ಲಿನ ನೀರನ್ನು ಕುಡಿಯುವುದು
ತಲೆಯ ಮೇಲೆ ನಾವು ಕುಡಿಯುವ
ನೀರನ್ನು ಹೊತ್ತಿರುವುದು – **ಅದು ಯಾವ ಮರ?**

ಉದ್ದವಾದ ನೀಳ ಕಾಯಿಗಳು
ಮುತ್ತಿನಂತ ಬಿಳಿಯ ಹೂಗಳು
ಹಣ್ಣುಗಳನ್ನು ಕೊಡುವುದಿಲ್ಲ
ಅಡುಗೆಗೆ ಸೊಪ್ಪು ಕೊಡುವುದು
ಅದು ಯಾವ ಮರ?

ಕತ್ತಿಯಂತ ಉದ್ದ ಎಲೆಗಳು
ಚಮರಿ ಮೃಗದಂತೆ ಉಸಿರ ಬಿಡುವವು
ತಿನ್ನಲು ಆಗದ ಕಾಯಿಗಳು ಬಿಡುವವು
ತಿನ್ನುವ ಹಣ್ಣುಗಳನ್ನು ಕೊಡುವುದು
ಅದು ಯಾವ ಮರ?



ಬೀಸಣಿಗೆಯಂತ ಎಲೆಗಳು
ಆರೋಗ್ಯಕರ ಹಣ್ಣುಗಳು
ಒಳಗೆ ಮೆಣಸಿನಂತ ಬೀಜಗಳು
ನಾನು ಯಾರು?

ಹಣ್ಣಾಗದ ಕಾಯಿ ಬಿಡುವುದು
ಆ ಕಾಯಿ ಬಾಯಿ ಬಿಟ್ಟರೆ
ಬಿಳಿ ಹಲ್ಲು ಕಾಣುವುದು
ಅದು ಏನು?






ಊಟಕ್ಕೆ ಎಲೆ ಕೊಡುವುದು
ತಿನ್ನಲು ಹಣ್ಣು ಕೊಡುವುದು
ಬೀಜ ಹಾಕಿ ಬೆಳೆಯಲಾಗದು
ಅದು ಏನು?

ಒಂದೇ ಮರ ಸಾವಿರ ಕಂಬಗಳು
ಅದು ಏನು?

ಆನೆಗಳು ಮಲಗುವಷ್ಟು
ನೆರಳು ಕೊಡುವುದು
ಸಾಸಿವೆ ಇಟ್ಟು ಮಡಿಸಲಾರದ
ಎಲೆಗಳಿರುವವು
ಅದು ಏನು?



ಚಿಕ್ಕ ಕೆಂಪು ಹಣ್ಣುಗಳ ಮರ
ಮೈ ತುಂಬ ಮುಳ್ಳಿರುವುದು

ಅದು ಯಾವ ಮರ?

ಹೃದಯದ ಆಕಾರದ ಎಲೆಗಳು
ತಂಪಾದ ನೆರಳು ನೀಡುವವು

ಅದು ಯಾವ ಮರ?

ಉದ್ದುದ್ದಕ್ಕೆ ಬೆಳೆದಿರುವ ಮರ
ನೋಡಿದರೆ ಕತ್ತು ನೋಯುವುದು
ಎಲೆಯನ್ನು ಉಜ್ಜಿ ಹಚ್ಚಿದರೆ
ತಲೆನೋವು ಮಾಯ

ಅದು ಯಾವ ಮರ?



ತಾಟಿನಿಂಗು, ಅಡಿಕೆಮರ, ಹತ್ತಿಗಿಡ, ಬಾಳೆಗಿಡ
ಸರ್ವೆಮರ, ತೆಂಗಿನಮರ, ಪರಂಗಿಮರ
ಹುಣುಸೆಮರ, ನೀಲಗಿರಿಮರ, ಆಲದಮರ
ನುಗ್ಗೆಮರ, ಬುರುಗದಮರ, ಅರಳಿಮರ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ಮಗುವಿನ ಅಳು


ಒಂದು ದಿನ ಅಕ್ಬರ್ ದರ್ಬಾರಿಗೆ ಮಂತ್ರಿ ಬೀರಬಲ್ಲರು ತುಂಬ ತಡವಾಗಿ ಬಂದರು. ಇದರಿಂದ ಕೋಪಗೊಂಡ ಅಕ್ಬರ್ "ಏಕೆ ಈ ದಿನ ಇಷ್ಟು ತಡವಾಗಿ ಬಂದಿರಿ?" ಎಂದು ಕೇಳಿದರು.

"ರಾಜರೇ! ನಾನು ಪ್ರತಿನಿತ್ಯದಂತೆ ಸಮಯಕ್ಕೆ ಸರಿಯಾಗಿ ಸಿದ್ಧನಾಗಿ ಹೊರಟಿದ್ದೆನು. ಆ ಸಮಯಕ್ಕೆ ಸರಿಯಾಗಿ ನನ್ನ ಮಗ ಅಳಲು ಆರಂಭಿಸಿದನು. ಅವನನ್ನು ಸಮಾಧಾನ ಮಾಡಿ ಬರುವಷ್ಟರಲ್ಲಿ ತಡವಾಯಿತು" ಎಂದರು ಬೀರಬಲ್.

"ಬೀರಬಲ್ಲರೇ! ನನ್ನನ್ನು ಯಾಮಾರಿಸಲು ಪ್ರಯತ್ನಿಸ ಬೇಡಿ. ಒಂದು ಮಗುವಿನ ಅಳು ನಿಲ್ಲಿಸಲು ಇಷ್ಟೊಂದು ಸಮಯ ಬೇಕಾ?" ಎಂದು ಗೇಲಿ ಮಾಡಿದರು ಅಕ್ಬರ್.

"ಹೌದು ರಾಜರೇ! ಅಳುತ್ತಿರುವ ಮಗುವನ್ನು ಸಮಾಧಾನ ಮಾಡುವುದು ತುಂಬಾ ಕಷ್ಟದ ಕೆಲಸ" ಎಂದರು ಬೀರಬಲ್.





“ಇದೂ ಒಂದು ಕಷ್ಟದ ಕೆಲಸವೇ? ನಾನು ಒಂದು ಕ್ಷಣದಲ್ಲಿ ಸಮಾಧಾನ ಮಾಡುತ್ತೇನೆ” ಎಂದರು ಅಕ್ಬರ್.

“ಹೌದಾ! ನೋಡೆ ಬಿಡೋಣ. ಈಗ ಒಂದು ನಾಟಕ ಮಾಡೋಣ. ನಾನು ಮಗುವಾಗಿ ನಟಿಸುವೆನು. ನೀವು ನನ್ನ ತಂದೆ ಆಗಿ” ಸವಾಲು ಹಾಕಿದರು.

“ಓ! ನಾನೂ ಸಿದ್ಧ” ಎಂದು ಉತ್ಸಾಹದಿಂದ ಒಪ್ಪಿಕೊಂಡರು ಅಕ್ಬರ್. ಬೀರಬಲ್ಲರು ಮಗುವಿನಂತೆ ನೆಲದ ಮೇಲೆ ಹೊರಳಾಡುತ್ತಾ ಅಳತೊಡಗಿದರು.

“ಪಾಪು! ಏಕೆ ಅಳುತ್ತಿರುವೆ?” ಎಂದು ಅತಿ ಮುದ್ದಿನಿಂದ ರಮಿಸಿ ಕೇಳಿದರು ಅಪ್ಪ ಅಕ್ಬರ್. “ನನಗೆ ಕಬ್ಬು ಬೇಕು” ಎಂದು ಅಳುತ್ತಾ ಕೇಳಿತು ಮಗು.

“ಅಳಬೇಡ! ನಿನಗೆ ಕಬ್ಬು ತಾನೇ ಬೇಕು. ಈಗಲೇ ಬರುತ್ತದೆ ನೋಡು” ಎಂದು ಹೇಳಿ ಸೇವಕರನ್ನು ಕಳುಹಿಸಿ ಕಬ್ಬನ್ನು ತರಿಸಿದರು.




ಕಬ್ಬು ಬಂದಿತು. ಅದನ್ನು ನೋಡಿದ ಮಗು ಮತ್ತೆ ಕೈ ಕಾಲು ಬಡಿಯುತ್ತಾ ಅಳತೊಡಗಿತು.

“ಮತ್ತೆ ಏಕೆ ಅಳುತ್ತಿರುವೆ? ಕಬ್ಬು ಇಲ್ಲೇ ಇದೆಯಲ್ಲ” ಎಂದರು ಅಕ್ಬರ್. “ನನಗೆ ದೊಡ್ಡ ಕಬ್ಬು ಬೇಡ. ಚಿಕ್ಕಚಿಕ್ಕ ತುಂಡಾಗಿರುವ ಕಬ್ಬು ಬೇಕು” ಎಂದು ಮಗು ಅಳತೊಡಗಿತು.

“ಇಷ್ಟೇ ತಾನೇ? ಈಗಲೇ ಈ ಕಬ್ಬನ್ನು ಕತ್ತರಿಸಲು ಹೇಳುವೆನು” ಎಂದು ಹೇಳಿದ ಅಕ್ಬರ್, ಸೇವಕರನ್ನು ಕರೆದು ಕಬ್ಬನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ತರಲು ಹೇಳಿದರು. ಸೇವಕರು ತಂದರು.

ಮಗು ಕಬ್ಬಿನ ಚೂರುಗಳನ್ನು ಎತ್ತಿ ಎಸೆದು ಮತ್ತೆ ಅಳಲು ಆರಂಭಿಸಿತು. ಅಕ್ಬರ್ ಗೊಂದಲಕ್ಕೆ ಸಿಲುಕಿದರು.



“ಈಗ ಏಕೆ ಅಳುತ್ತಿರುವೆ? ನೀನು ಹೇಳಿದಂತೆ ಕಬ್ಬನ್ನು ಚಿಕ್ಕ ಚಿಕ್ಕ ತುಂಡು ಮಾಡಿರುವೆವಲ್ಲ” ಎಂದು ಅಸಹನೆಯಿಂದ ಕೇಳಿದರು.

“ಕಬ್ಬಿನ ಚೂರುಗಳನ್ನೆಲ್ಲ ಸೇರಿಸಿ ಒಂದೇ ಕಬ್ಬು ಮಾಡಿ ಕೊಡಿ” ಎಂದು ಮಗು ಹಠ ಮಾಡತೊಡಗಿತು.

ಅಕ್ಬರ್ ತಾಳ್ಮೆ ಕಳೆದು ಕೊಂಡರು. “ಚೂರುಗಳು ಒಂದಾಗಿ ಮತ್ತೆ ಕಬ್ಬು ಆಗಲು ಹೇಗೆ ಸಾಧ್ಯ?” ಎಂದರು. ಬೀರಬಲ್ಲರ ಉಪಾಯ ಅಕ್ಬರ್‌ಗೆ ಅರ್ಥವಾಯಿತು.

“ಅಳುತ್ತಿರುವ ಮಗುವನ್ನು ಸಮಾಧಾನ ಮಾಡುವುದು ಅಷ್ಟು ಸುಲಭದ ಕೆಲಸ ಅಲ್ಲ. ನಿನ್ನ ಮಾತನ್ನು ಒಪ್ಪುವೆ” ಎಂದರು.

ಬೀರಬಲ್ಲರು ಮೆಲ್ಲಗೆ ನಕ್ಕರು. ತಮ್ಮ ಬಟ್ಟೆಗೆ ಅಂಟಿದ್ದ ಧೂಳನ್ನು ಕೊಡವಿಕೊಳ್ಳುತ್ತಾ ಎದ್ದು ನಿಂತರು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನಂದಿರಿಯ ತ್ಯಾಗ



ಒಂದು ಉದ್ದವಾದ ನದಿ. ನದಿಯ ಮಧ್ಯೆ ಒಂದು ದ್ವೀಪ. ಆ ದ್ವೀಪದಲ್ಲಿ ತುಂಬಾ ಮಾವಿನ ಮರಗಳಿದ್ದವು. ಅಲ್ಲಿ ವಾಸಿಸುವ ಕೋತಿಗಳು ಪ್ರತಿದಿನ ಆ ಮರದ ಹಣ್ಣುಗಳನ್ನು ತಿನ್ನುತ್ತಾ ಆನಂದವಾಗಿ ಇದ್ದವು.

ಹೆಚ್ಚು ಮಾವಿನ ಮರಗಳು ದ್ವೀಪದ ಮಧ್ಯೆ ಇದ್ದವು. ಆದರೆ ಒಂದೇ ಒಂದು ಮರ ದಡದಲ್ಲಿತ್ತು.

ಕೋತಿಗಳ ನಾಯಕ ನಂದಿರಿ "ಈ ಮರದಿಂದ ಒಂದೇ ಒಂದು ಹಣ್ಣು ನೀರಿಗೆ ಬಿದ್ದರು ನಮಗೆ ಅಪಾಯ. ಜನರು ಈ ಮರವನ್ನು ಹುಡುಕುತ್ತಾ ಬರುವರು. ನಮ್ಮನ್ನು ದೂರ ಓಡಿಸುವರು. ಆದುದರಿಂದ ನೀರಿಗೆ ಒಂದೂ ಹಣ್ಣು ಬೀಳದಂತೆ ನೋಡಿಕೊಳ್ಳಬೇಕು" ಎಂದು ತನ್ನ ಗುಂಪಿಗೆ ಎಚ್ಚರಿಕೆ ನೀಡಿತು.





ಆದರೆ ಒಂದು ದಿನ ಒಂದು ಹಣ್ಣು ಅವುಗಳಿಗೆ ಗೊತ್ತಿಲ್ಲದಂತೆ ನೀರಿಗೆ ಬಿದ್ದಿತು. ನದಿ ನೀರು ಅದನ್ನು ತೆಗೆದುಕೊಂಡು ಹೋಯಿತು. ಹೇಗೋ ಏನೋ ಆ ಹಣ್ಣು ರಾಜನ ಕೈ ಸೇರಿತು.

ಹಣ್ಣಿನ ರುಚಿ ನೋಡಿದ ರಾಜನು 'ಇಂತಹ ಹಣ್ಣು ಎಲ್ಲಿ ಸಿಗುವುದು ಕಂಡು ಹಿಡಿಯಬೇಕು' ಎಂದು ಯೋಚಿಸಿದನು. ತನ್ನ ಸೈನಿಕರ ಜೊತೆ ಮಾವಿನ ಮರಗಳು ಇದ್ದ ಜಾಗವನ್ನು ಹುಡುಕಿಕೊಂಡು ಬಂದನು.



ದ್ವೀಪದಲ್ಲಿ ಎಲ್ಲಿ ನೋಡಿದರು ಕೋತಿಗಳು. ಸೈನಿಕರು ಅವುಗಳನ್ನು ಓಡಿಸಲು ಸಿದ್ಧರಾದರು. ರಾಜ "ಈಗ ಕತ್ತಲಾಗಿದೆ. ಈ ಕೋತಿಗಳನ್ನು ನಾಳೆ ಓಡಿಸಿ" ಎಂದು ಅಪ್ಪಣೆ ಮಾಡಿದನು.

ರಾಜನ ಮಾತನ್ನು ಕೇಳಿದ ಕೋತಿಗಳು ನಂದಿರಿ ಬಳಿಗೆ ಓಡಿದವು. "ಅಪಾಯ! ಅಪಾಯ! ಅವರು ನಾಳೆ ನಮ್ಮನ್ನು ಕೊಂದು ಬಿಡುವರು ತಪ್ಪಿಸಿಕೊಳ್ಳುವುದು ಹೇಗೆ?" ಎಂದು ಕೇಳಿದವು.

ನಂದಿರಿ "ಚಿಂತಿಸಬೇಡಿ. ನಾನು ನಿಮ್ಮನ್ನು ಕಾಪಾಡುವೆ" ಎಂದು ಹೇಳಿ ಹಗ್ಗದಂತಿದ್ದ ದಪ್ಪ ಬಳ್ಳಿಯೊಂದನ್ನು ಕಿತ್ತುಕೊಂಡಿತು. ಅದರ ಒಂದು ತುದಿಯನ್ನು ದಡದಲ್ಲಿದ್ದ ಮಾವಿನ ಮರಕ್ಕೆ ಕಟ್ಟಿತು. ಇನ್ನೊಂದು ತುದಿಯನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡು ಎದುರಿಗಿದ್ದ ದಡದಲ್ಲಿನ ಮರಕ್ಕೆ ನೆಗೆಯಿತು.



'ಅಯ್ಯೋ! ಇದರ ಉದ್ದ ಸಾಕಾಗುವುದಿಲ್ಲ' ಎಂದು ಯೋಚಿಸಿದ ಅದು ಮರದ ಕೊಂಬೆ ಹಿಡಿದು ನೇತಾಡತೊಡಗಿತು.

ಹಗ್ಗದ ಜೊತೆಗೆ ತನ್ನ ದೇಹವನ್ನು ಸೇರಿಸಿ ಸೇತುವೆ ಮಾಡಿತು. ಉಳಿದ ಕೋತಿಗಳಿಗೆ "ಬೇಗ ಬೇಗ ಬನ್ನಿ. ಈ ಹಗ್ಗದ ಮೇಲೆ ನಡೆದು ನನ್ನ ಬೆನ್ನ ಮೇಲೆ ಹತ್ತಿ ತಪ್ಪಿಸಿಕೊಳ್ಳಿ" ಎಂದು ಹೇಳಿತು.

ಕೋತಿಗಳು ಒಂದೊಂದಾಗಿ ಹಗ್ಗದ ಮೇಲೆ ನಡೆದು, ನಂದಿರಿ ಬೆನ್ನನ್ನು ಹತ್ತಿ ಎದುರಿನ ದಡ ಸೇರಿದವು. ಕೊನೆಯ ಕೋತಿ ಬರುವಾಗ ಭಾರ ತಡೆಯಲಾರದೆ ಬಳ್ಳಿ ಹರಿದು ಹೋಯಿತು. ನಂದಿರಿ ದ್ವೀಪದ ದಡಕ್ಕೆ ಹೋಗಿ ಬಿದ್ದಿತು.

ಮರೆಯಲ್ಲಿ ನಿಂತು ಇದನ್ನೆಲ್ಲ ನೋಡುತ್ತಿದ್ದ ರಾಜನಿಗೆ ಆಶ್ಚರ್ಯವಾಯಿತು. ಅವನು ನಂದಿರಿ ಬಿದ್ದ ಜಾಗದತ್ತ ಓಡಿದನು. ಆ ಸಮಯಕ್ಕೆ ನಂದಿರಿಯ ಉಸಿರಾಟ ನಿಧಾನವಾಗುತ್ತಿತ್ತು.

"ನೀನು ನಿನ್ನ ಪ್ರಾಣವನ್ನು ಲೆಕ್ಕಿಸದೆ ನಿನ್ನ ಗುಂಪನ್ನು ಉಳಿಸಿದೆ. ಮಾನವರಾದ ನಮ್ಮಲ್ಲೂ ಈ ಗುಣ ಇಲ್ಲ. ನಿನ್ನ ಕೊನೆಯ ಆಸೆ ಏನೆಂದು ಹೇಳು. ನಾನು ಅದನ್ನು ನೆರವೇರಿಸುವೆನು" ಎಂದನು ರಾಜ.

"ನನ್ನ ಗುಂಪಿಗೆ ತೊಂದರೆ ಕೊಡಬೇಡ" ಎಂದು ಹೇಳುವಷ್ಟರಲ್ಲಿ ನಂದಿರಿ ಸತ್ತು ಹೋಯಿತು. ರಾಜ ಮಾವಿನ ತೋಪನ್ನು ಕೋತಿಗಳಿಗೆ ಬಿಟ್ಟು ತನ್ನ ಸೈನಿಕರೊಂದಿಗೆ ಹಿಂತಿರುಗಿ ಹೋದನು.

ಮೂಲ: ಜಾತಕದ ಕಥೆಗಳು



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ತೆನಾಲಿರಾಮ ಮತ್ತು ಜಾದುಗಾರ

ಒಮ್ಮೆ ವಿಜಯನಗರಕ್ಕೆ ಒಬ್ಬ ಜಾದುಗಾರ ಬಂದನು. ಅವನು ಅರಮನೆಯಲ್ಲಿ ಹಲವು ರೀತಿಯ ಜಾದುಗಳನ್ನು ಮಾಡಿ ತೋರಿಸಿದನು. ಒಂದು ಖಾಲಿ ಬಿದಿರಿನ ಬುಟ್ಟಿಯನ್ನು ಬೋರಲು ಹಾಕಿ ತಕ್ಷಣ ಅದನ್ನು ತೆಗೆದನು. ಅಲ್ಲೊಂದು ಮಾವಿನ ಗಿಡವಿತ್ತು. ಜನರೆಲ್ಲ ಆನಂದದಿಂದ ಚಪ್ಪಾಳೆ ತಟ್ಟಿದರು. ಕೈಯಲ್ಲಿ ಕೆಲವು ಕಲ್ಲುಗಳನ್ನು ಹಿಡಿದುಕೊಂಡು ಒಂದು ಕ್ಷಣದಲ್ಲಿ ಅವುಗಳನ್ನು ಚಿನ್ನದ ನಾಣ್ಯ ಮಾಡಿದನು.

ಇಷ್ಟೇನಾ! ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ರಾಜನ ಬೆರಳಿನಲ್ಲಿ ಇದ್ದ ಉಂಗುರ ತನ್ನ ಬೆರಳಿಗೆ ಬರುವಂತೆ ಮಾಡಿದನು. ಖಾಲಿ ಪಂಜರದ ಬಾಗಿಲನ್ನು ತೆರೆದಾಗ ಅದರಿಂದ ಪಾರಿವಾಳ ಒಂದು ಹಾರಿ ಹೋಯಿತು.




ಜಾದುಗಾರನ ಕೈ ಚಳಕಕ್ಕೆ ಮೆಚ್ಚಿದ ರಾಜನು ಅವನಿಗೆ ಬೆಳ್ಳಿ ತಟ್ಟೆ ತುಂಬ ಉಡುಗೊರೆಗಳನ್ನು ಕೊಟ್ಟನು. ಆದರೆ ಆ ಜಾದುಗಾರ ಒಂದು ಉದ್ದೇಶಿತ ಕೆಲಸಕ್ಕಾಗಿ ಬಂದಿದ್ದನು.

“ಇಲ್ಲಿರುವ ಜನರಲ್ಲಿ ಯಾರಾದರು ನನ್ನನ್ನು ಸೋಲಿಸಿದರೆ ಇದನ್ನೆಲ್ಲಾ ನಾನು ಅವರಿಗೆ ಕೊಡುವೆನು. ಒಂದು ವೇಳೆ ಸೋಲಿಸಲು ಆಗದಿದ್ದರೆ ತೆನಾಲಿರಾಮನನ್ನು ನನ್ನ ಜೊತೆ ಕಳುಹಿಸಿ ಕೊಡಬೇಕು. ಈ ಸವಾಲನ್ನು ಒಪ್ಪಿಕೊಳ್ಳುವಿರಾ?” ಎಂದು ಕೇಳಿದನು.

ಜಾದುಗಾರನ ಸವಾಲನ್ನು ಒಪ್ಪಿಕೊಳ್ಳಲು ಯಾರು ಮುಂದೆ ಬರಲಿಲ್ಲ. ರಾಜನ ಮುಖದಲ್ಲಿ ಚಿಂತೆ ಕಾಣಿಸಿತು. ತೆನಾಲಿರಾಮ 'ಈ ಜಾದುಗಾರನ ಅಹಂಕಾರಕ್ಕೆ ತಕ್ಕ ಪಾಠ ಕಲಿಸಬೇಕು' ಎಂದು ಯೋಚಿಸಿದನು.

“ಜಾದುಗಾರರೇ! ನೀವು ಬೇಕಾದಷ್ಟು ಜಾದುಗಳನ್ನು ಮಾಡಿ ತೋರಿಸಿದಿರಿ. ನಾನು ನಿಮ್ಮ ಸವಾಲನ್ನು ಸ್ವೀಕರಿಸುತ್ತೇನೆ. ನಾನು ನಿಮಗೆ ಒಂದು ಜಾದು ತೋರಿಸುವೆ. ನಾನು ಕಣ್ಣು ಮುಚ್ಚಿಕೊಂಡು ಮಾಡುವುದನ್ನು ನೀವು ಕಣ್ಣು ತೆರೆದುಕೊಂಡು ಮಾಡಿದರೆ ಸಾಕು” ಎಂದನು.



ತೆನಾಲಿರಾಮನ ಮಾತಿಗೆ ಜಾದುಗಾರ ಒಪ್ಪಿಕೊಂಡನು. ಎಲ್ಲರು ಆತ ಏನು ಮಾಡುತ್ತಾನೆ ಎಂದು ಕುತೂಹಲದಿಂದ ನೋಡುತ್ತಿದ್ದರು.

ತೆನಾಲಿರಾಮನ ಒಂದು ಪಕ್ಕದಲ್ಲಿ ಹೂವಿನ ಕುಂಡ ಇತ್ತು. ಅದರಲ್ಲಿ ಇದ್ದ ಮರಳನ್ನು ತನ್ನ ಎರಡು ಕೈಗಳಲ್ಲಿ ತೆಗೆದುಕೊಂಡನು. ಕಣ್ಣುಗಳನ್ನು ಮುಚ್ಚಿಕೊಂಡು ಕೈಗಳಲ್ಲಿದ್ದ ಮರಳನ್ನು ತನ್ನ ಎರಡು ಕಣ್ಣುಗಳ ಮೇಲೆ ಹಾಕಿಕೊಂಡನು. ನಂತರ ಬಟ್ಟೆಯಿಂದ ಕಣ್ಣುಗಳನ್ನು ಒರೆಸಿಕೊಂಡನು.



ಜಾದುಗಾರನ ಕಡೆ ತಿರುಗಿ "ಇದನ್ನು ನೀವು ಕಣ್ಣು ತೆರೆದುಕೊಂಡು ಮಾಡಿ ತೋರಿಸಲು ಆಗುವುದೇ?" ಎಂದನು. ಜಾದುಗಾರ ಪಿಳಿಪಿಳಿ ಕಣ್ಣು ಬಿಡುತ್ತಾ ನಿಂತನು. ಏನು ಹೇಳಬೇಕೆಂದು ತಿಳಿಯದೆ ತಲೆ ತಗ್ಗಿಸಿದನು.


"ಅಬ್ಬ! ಹೇಗೋ ತೆನಾಲಿರಾಮ ಸಮಸ್ಯೆಯನ್ನು ಪರಿಹರಿಸಿದನು" ಎಂದು ರಾಜ ನೆಮ್ಮದಿಯ ಉಸಿರನ್ನು ಬಿಟ್ಟನು. ತೆನಾಲಿರಾಮನಿಗೆ ಉಡುಗೊರೆ ಕೊಟ್ಟು ಗೌರವಿಸಿದನು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು





ಅಪ್ಪುವಿನ ಬೇಸರ

ಅಪ್ಪು ಒಂದು ಪುಟ್ಟ ಆನೆ ಮರಿ. ಒಂದು ದಿನ ಅದಕ್ಕೆ ತುಂಬ ಬೇಸರವಾಗಿತ್ತು. ಯಾರ ಜೊತೆಯು ಆಟ ಆಡಲು ಹೋಗಲಿಲ್ಲ. "ನಿನಗೇಕೆ ಬೇಸರ? ನನ್ನ ಬಳಿ ಹೇಳು" ಎಂದಿತು ಮರಕುಟಿಕ ಹಕ್ಕಿ. ಅಪ್ಪುವಿನ ಬಳಿ ಉತ್ತರ ಇರಲಿಲ್ಲ.

"ಓ! ನನಗೆ ಗೊತ್ತು. ಉದ್ದವಾಗಿ ನೇತಾಡುತ್ತಿರುವ ಈ ನಿನ್ನ ಸೊಂಡಿಲನ್ನು ನೋಡಿ ಬೇಸರ ಪಡುತ್ತಿರುವೆಯಾ?" ಎಂದು ಕೇಳಿತು ಮರಕುಟಿಕ ಹಕ್ಕಿ.

ತಕ್ಷಣ ಅಪ್ಪು "ಇಲ್ಲ! ಇಲ್ಲ! ನನ್ನ ಸೊಂಡಿಲು ನನಗೆ ತುಂಬಾ ಇಷ್ಟ. ಈ ಸೊಂಡಿಲಿನಿಂದ ನಾನು ಎಷ್ಟೊಂದು ಕೆಲಸಗಳನ್ನು ಮಾಡುತ್ತೇನೆ" ಎಂದಿತು.



ಆಗ ಕೋತಿ "ನಿನ್ನ ಚಿಕ್ಕ ಬಾಲವನ್ನು ನೋಡಿ ಬೇಸರ ಪಡುತ್ತಿರುವೆಯಾ? ನನ್ನ ತರ ಬಾಲವನ್ನು ಕೊಂಬೆಗೆ ಸುತ್ತಿಕೊಂಡು ಉಯ್ಯಾಲೆ ಆಡಲು ಆಗುವುದಿಲ್ಲ ಎಂದು ತಾನೇ ನಿನಗೆ ದುಃಖ" ಎಂದಿತು.

“ಇಲ್ಲ! ಇಲ್ಲ! ನನ್ನ ಬಾಲ ಚಿಕ್ಕದೇ? ಇದರಿಂದ ನವಿಲಿನ ಬಾಲದ ರೀತಿ ಬೇರೆಯವರಿಗೆ ತೊಂದರೆ ಆಗುವುದಿಲ್ಲ” ಎಂದು ಹೇಳಿತು ಅಪ್ಪು.




ಆಗ ಅಲ್ಲಿಗೆ ಬಂದ ಜಿಂಕೆ “ದಪ್ಪ ಕಾಲುಗಳಿಂದ ತಾನೇ ನಿನಗೆ ತೊಂದರೆ? ನನ್ನ ಕಾಲುಗಳ ತರಹ ಸಣ್ಣಗೆ ಅಂದವಾಗಿಲ್ಲ ಎಂದು ಬೇಸರ ತಾನೇ?” ಎಂದು ಕೇಳಿತು.


“ಹಾಗೇನಿಲ್ಲ, ನನ್ನ ಕಾಲುಗಳು ನನಗೆ ಚೆಂದ” ಎಂದಿತು ಅಪ್ಪು. “ನಿನ್ನ ಬೂದು ಬಣ್ಣ ತಾನೇ ನಿನಗೆ ಇಷ್ಟವಿಲ್ಲ. ನನ್ನಂತೆ ನೀಲಿ, ಹಸಿರು ಬಣ್ಣದ ಗರಿಗಳು ನಿನಗಿಲ್ಲ ಎಂದು ಬೇಸರ ಆಗಿದೆಯೇ?” ಎಂದಿತು ನವಿಲು.

“ಇಲ್ಲ! ನನ್ನ ಬಣ್ಣದಿಂದ ನನಗೆ ಬೇಸರ ಇಲ್ಲ. ನನ್ನ ಬೂದು ಬಣ್ಣವೇ ನನ್ನನ್ನು ಬೇಟೆಗಾರರಿಂದ ಕಾಪಾಡುವುದು” ಎಂದಿತು ಅಪ್ಪು.

“ಹಾಗಾದರೆ ನಮ್ಮ ಜೊತೆ ಬಾ. ಅಲ್ಲಿ ತುಂಬ ಕಬ್ಬು ಇದೆ ತಿನ್ನೋಣ” ಎಂದಿತು ಕೋತಿ.



"ನಾನು ತುಂಬಾ ತುಂಬ ದಪ್ಪ ಇರುವೆನು. ನನಗೆ ಊಟ ಬೇಡ" ಎಂದು ಅಪ್ಪು ಅಳತೊಡಗಿತು.




"ಓಹೋ! ಇದೇನಾ ನಿನ್ನ ಬೇಸರಕ್ಕೆ ಕಾರಣ? ಆನೆಗಳು ಎಂದರೆ ದೊಡ್ಡದಾಗಿ ದಪ್ಪಗೆ ಬಲಶಾಲಿಗಳಾಗಿ ಇರಬೇಕು. ನೀನೇನು ತುಂಬಾ ದಪ್ಪ ಇಲ್ಲ. ಡುಮ್ಮಕ್ಕೂ ಇಲ್ಲ" ಎಂದು ಹೇಳಿತು ಜಿಂಕೆ.

"ದಪ್ಪ ಇಲ್ಲ ನಿಜ. ಮೂರು ದಿನಗಳಿಂದ ನಾನು ಊಟವನ್ನು ಮಾಡಿಲ್ಲ. ಆದರು ನನ್ನ ಮೈ ಸಣ್ಣ ಆಗಿಲ್ಲ" ಎಂದಿತು ಅಪ್ಪು.

ಆಗ ಇದ್ದಕ್ಕಿದ್ದಂತೆ ಕಿರುಚಾಟ ಕೇಳಿಸಿತು. "ಯಾರಾದರು ನನ್ನನ್ನು ಕಾಪಾಡಿ" ಎಂಬ ಕೂಗು ಬಂದ ದಿಕ್ಕಿಗೆ ಎಲ್ಲವು ಓಡಿದವು. ಅಲ್ಲಿ ಹುಲಿ ಮೇಲೆ ಮರದ ಕೊಂಬೆ ಬಿದ್ದಿತ್ತು. ಹುಲಿ ನೋವಿನಿಂದ ಕಿರುಚಾಡುತ್ತಿತ್ತು.

ಕೋತಿ, ನವಿಲು, ಜಿಂಕೆ, ಮರಕುಟಿಕ ಎಲ್ಲವು ಮರದ ಕೊಂಬೆಯನ್ನು ತಳ್ಳಲು ನೋಡಿದವು. ಇಲ್ಲ! ಕೊಂಬೆ ಸ್ವಲ್ಪವು ಅಲುಗಾಡಲಿಲ್ಲ!




'ಅಯ್ಯೋ! ಹುಲಿಯನ್ನು ಹೇಗಾದರು ಕಾಪಾಡಬೇಕು' ಎಂದು ಯೋಚಿಸಿದ ಪ್ರಾಣಿಗಳು ಅಪ್ಪುವನ್ನು ಕರೆ ತಂದವು. ಅಪ್ಪು ಕೊಂಬೆಯನ್ನು ಜರುಗಿಸಲು ಪ್ರಯತ್ನಿಸಿತು. ಮೂರು ದಿನಗಳಿಂದ ಉಪವಾಸ ಇದ್ದ ಕಾರಣ ಅದನ್ನು ಜರುಗಿಸಲು ಆಗಲಿಲ್ಲ.

"ಇದೋ! ಈ ಕಬ್ಬನ್ನು ತಿಂದು ಜರುಗಿಸು" ಎಂದರು ಗೆಳೆಯರು. ಅಪ್ಪು "ಹೌದು! ಇದುವೇ ನನ್ನ ಶಕ್ತಿ" ಎಂದು ಹೇಳಿ ಕಬ್ಬನ್ನು ಬೇಗ ಬೇಗ ತಿಂದಿತು. ಒಂದು ಕ್ಷಣದಲ್ಲಿ ಮರ ಜರುಗಿತು.

ಪ್ರಾಣಿಗಳಿಗೆಲ್ಲ ಖುಷಿ. "ನೀನು ಎಲ್ಲರಿಗಿಂತ ಬಲಶಾಲಿ ಎಂದು ಈಗಲಾದರು ಗೊತ್ತಾಯಿತಾ?" ಎಂದು ಕೇಳಿದವು.

ಸೊಂಡಿಲನ್ನು ಎತ್ತಿ ಸಂತೋಷದಿಂದ ಘೀಳಿಟ್ಟಿತು ಆನೆ!



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ




65 ನಮ್ಮ ನಾಯಕ

ಒಂದು ದಟ್ಟವಾದ ಕಾಡು. ಆ ಕಾಡಿನಲ್ಲಿದ್ದ ಪ್ರಾಣಿಗಳೆಲ್ಲ ಒಟ್ಟಾಗಿ ಜೀವಿಸುತ್ತಿದ್ದವು. ಸಿಂಹ ಅವುಗಳ ನಾಯಕ ಆಗಿತ್ತು.

ಶಕ್ತಿಶಾಲಿಯಾಗಿದ್ದ ಸಿಂಹ ಬಹಳ ಬುದ್ಧಿವಂತ ಆಗಿತ್ತು. ಕಾಡಿನಲ್ಲಿ ಏನೇ ಸಮಸ್ಯೆ ಬಂದರು ಪ್ರಾಣಿಗಳೆಲ್ಲ ಸಿಂಹದ ಹತ್ತಿರ ಹೋಗುತ್ತಿದ್ದವು. ಸಿಂಹ ಸಮಸ್ಯೆಗೆ ಸರಿಯಾದ ಪರಿಹಾರ ಕೊಡುತ್ತಿತ್ತು. ಇದರಿಂದ ಪ್ರಾಣಿಗಳಿಗೆಲ್ಲ ಸಿಂಹದ ಬಗ್ಗೆ ಹೆಚ್ಚು ಗೌರವ ಮತ್ತು ನಂಬಿಕೆ ಇತ್ತು.

ಒಂದು ದಿನ ಕೆಲವು ಜನ ಬೇಟೆಗಾರರು ಆ ಕಾಡಿಗೆ ಬಂದರು. ಎಲ್ಲ ಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋದರು. ಭಯದಿಂದ ನಡುಗುತ್ತಿದ್ದ ಪ್ರಾಣಿಗಳೆಲ್ಲ ಸಿಂಹದ ಹತ್ತಿರ ಬಂದವು.


ಸಿಂಹ "ನಿಮ್ಮಿಂದ ಬೇಟೆಗಾರರನ್ನು ಎದುರಿಸಲು ಆಗುವುದಿಲ್ಲ. ನೀವೆಲ್ಲರು ಇಲ್ಲಿಯೇ ಇರಿ. ನಾನು ಹೋಗಿ ಅವರ ಜೊತೆ ಹೋರಾಡುತ್ತೇನೆ" ಎಂದು ಹೇಳಿ ಹೋಯಿತು.



ಸಿಂಹ ಬೇಟೆಗಾರರ ಮೇಲೆ ಹಾರಿತು. ಕೆಲವರು ಹೆದರಿ ಓಡಿದರು. ಕೆಲವರು ಸಿಂಹದ ಜೊತೆ ಹೋರಾಡಿ ಅದನ್ನು ಗಾಯಗೊಳಿಸಿದರು. ಆದರು ಸಿಂಹ ಹೋರಾಟ ನಿಲ್ಲಿಸಲಿಲ್ಲ. ಕೊನೆಗೆ ಸಿಂಹವೇ ಗೆದ್ದಿತು.

ಪ್ರಾಣಿಗಳೆಲ್ಲ ಸಿಂಹಕ್ಕೆ ಧನ್ಯವಾದ ಹೇಳಲು ಓಡಿ ಬಂದವು. "ಅಯ್ಯೋ! ಇದೇನು? ಸಿಂಹ ಗಾಯಗೊಂಡು ನೋವಿನಿಂದ ಒದ್ದಾಡುತ್ತಿದೆ. ಅದರ ಕಾಲುಗಳು ಮುರಿದು ಹೋಗಿವೆ" ಎಂದು ಹೇಳಿಕೊಂಡವು.

ಹೀಗೆ ಕೆಲವು ದಿನಗಳು ಕಳೆದವು. ಸಿಂಹದ ಕಾಲುಗಳು ಸರಿ ಹೋಗಲಿಲ್ಲ. ಸಿಂಹಕ್ಕೆ ಚಕ್ರಗಳಿರುವ ಗಾಡಿ ಬಂದಿತು. ಅದರಲ್ಲಿ ಕುಳಿತು ಸಿಂಹ ಅಲ್ಲಿ ಇಲ್ಲಿ ಮೆಲ್ಲಗೆ ಓಡಾಡುತ್ತಿತ್ತು. ತನ್ನ ಊಟಕ್ಕಾಗಿ ಬೇಟೆ ಆಡಲು ಸಹ ಅದರಿಂದ ಆಗುತ್ತಿರಲಿಲ್ಲ.



ಕೆಲವು ಪ್ರಾಣಿಗಳು ಅದಕ್ಕೆ ಊಟ ತಂದು ಕೊಡುತ್ತಿದ್ದವು. ದಿನಗಳು ಕಳೆದಂತೆ ಪ್ರಾಣಿಗಳಿಗೆ ಈ ಕೆಲಸ ಬೇಜಾರು ಆಯಿತು. ಸಿಂಹಕ್ಕೆ ಊಟ ತೆಗೆದುಕೊಂಡು ಹೋಗಿ ಕೊಡುವುದು ಕಷ್ಟದ ಕೆಲಸ ಎನಿಸಿತು. ಈ ಕೆಲಸಕ್ಕೆ ಕೆಲವು ಪ್ರಾಣಿಗಳು ತಪ್ಪಿಸಿಕೊಳ್ಳ ತೊಡಗಿದವು. ಅವು ಸಿಂಹದ ಬಳಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕೇಳಲು ಬರುವುದನ್ನು ನಿಲ್ಲಿಸಿದವು.

ಸಿಂಹ ತನ್ನ ಬಳಿಗೆ ಊಟ ತಂದವರ ಜೊತೆ ಆನಂದದಿಂದ ಮಾತನಾಡುತ್ತಿತ್ತು. ಅವರು ಬರುವುದನ್ನೆ ಕಾಯುತ್ತಾ ಇರುತ್ತಿತ್ತು. ಕಾಡಿನಲ್ಲಿ ನಡೆಯುವುದೆಲ್ಲವನ್ನು ಅವರಿಂದ ಕೇಳಿ ತಿಳಿಯುತ್ತಿತ್ತು. ತನ್ನ ಜವಾಬ್ದಾರಿಯನ್ನು ತನ್ನ ಕೈಲಾದಷ್ಟು ಮಾಡುತ್ತಿತ್ತು.

ಒಂದು ದಿನ ಇಡೀ ಕಾಡು ನಿಶಬ್ದವಾಗಿತ್ತು. ಒಂದು ಪ್ರಾಣಿಯು ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಸಿಂಹಕ್ಕೆ ಬಹಳ ಆಶ್ಚರ್ಯವಾಯಿತು. ಚಕ್ರಗಳ ಗಾಡಿಯಲ್ಲಿ ಕುಳಿತು ಮೆಲ್ಲಮೆಲ್ಲನೆ ಎಲ್ಲಾ ಕಡೆ ಹುಡುಕುತ್ತಾ ಹೊರಟಿತು.

ಒಂದು ಜಾಗದಲ್ಲಿ ಎಲ್ಲ ಪ್ರಾಣಿಗಳು ಕುಳಿತಿದ್ದವು. ಅದನ್ನು ನೋಡಿ ಸಿಂಹಕ್ಕೆ ಆಘಾತವಾಯಿತು. ಅದು ಯಾರಿಗು ಕಾಣದಂತೆ ಮರೆಯಲ್ಲಿ ಅವುಗಳ ಮಾತನ್ನು ಎಚ್ಚರಿಕೆಯಿಂದ ಕೇಳಿಸಿಕೊಳ್ಳತೊಡಗಿತು.



"ಒಂದು ಪ್ರಾಣಿ ನಾವೇಕೆ ಬೇರೆ ನಾಯಕನನ್ನು ಆರಿಸಿಕೊಳ್ಳಬಾರದು?" ಎಂದು ಕೇಳಿತು. "ಬೇಡ! ಬೇಡ! ಸಿಂಹವೇ ನಮ್ಮ ನಾಯಕನಾಗಿರಲಿ. ಅದು ನಮ್ಮ ಸಮಸ್ಯೆಗಳಿಗೆಲ್ಲ ಸರಿಯಾದ ಪರಿಹಾರ ನೀಡುವುದು" ಎಂದಿತು ಇನ್ನೊಂದು ಪ್ರಾಣಿ.

"ಸಿಂಹಕ್ಕೆ ನಮ್ಮನ್ನು ಕಾಪಾಡುವ ಶಕ್ತಿ ಇಲ್ಲ. ಅದೇಕೆ ನಮ್ಮ ನಾಯಕ ಆಗಿರಬೇಕು?" ಎಂದಿತು ಮತ್ತೊಂದು ಪ್ರಾಣಿ.

"ಸಿಂಹಕ್ಕೆ ದೇಹದಲ್ಲಿ ಶಕ್ತಿ ಇಲ್ಲ. ಆದರೆ ಬುದ್ಧಿ ಇದೆಯಲ್ಲ? ಜೊತೆಗೆ ತುಂಬ ಅನುಭವವು ಇದೆ. ಜ್ಞಾನವು ಇದೆ. ಇದರಿಂದ ಸಿಂಹ ನಮ್ಮನ್ನು ಸರಿ ದಾರಿಯಲ್ಲಿ ನಡೆಸುವುದು" ಎಂದಿತು ಒಂದು ಹಿರಿಯ ಪ್ರಾಣಿ.

ಎಲ್ಲಾ ಪ್ರಾಣಿಗಳು ಕೆಲವು ನಿಮಿಷ ಮೌನವಾಗಿ ಯೋಚಿಸಿದವು. ನಂತರ ಅವುಗಳೆಲ್ಲ "ಸಿಂಹವೇ ನಮ್ಮ ನಾಯಕ ಆಗಿರಲಿ" ಎಂದು ಒಪ್ಪಿಕೊಂಡವು. ಎಲ್ಲವು ಸಿಂಹ ಇರುವ ಜಾಗದತ್ತ ಹೊರಟವು.

ಸ್ಪಾಸ್ಟಿಕ್ ಸೊಸೈಟಿಯ ಮಕ್ಕಳ ನಾಟಕ ಆಧಾರಿತ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ತಾವರೆಗೆ ಕೋಪ ಏಕೆ?

ಪ್ರತಿದಿನ ಜೇನುಹುಳುಗಳೆಲ್ಲ ಎಲ್ಲಿಗೆ ಹೋಗುತ್ತವೆ? ಅಲ್ಲಿ ಏನಿರುತ್ತದೆ? ಈ ಕುತೂಹಲದಲ್ಲೇ ಪುಟಾಣಿ ಜೇನುಹುಳು ಗೂಡಿನಿಂದ ಹೊರಟಿತು.

ಅದು ತುಂಬಾ ತುಂಬ ದೂರ ಹಾರಿ ಹೋಯಿತು. ದಾರಿಯಲ್ಲಿ ಒಂದು ತಾವರೆಯ ಕೊಳ. ಅದರಲ್ಲಿ ಒಂದು ಅಂದವಾದ ಕೆಂಪು ತಾವರೆ. ಜೇನುಹುಳು 'ಧೊಪ್!' ಎಂದು ಹೂವಿನ ಮೇಲೆ ಬಿದ್ದಿತು. ಹೂವು ನಡುಗಿತು. ಹೂವಿನ ಕೆಲವು ದಳಗಳು ಉದುರಿದವು.



ತಾವರೆಗೆ ಕೋಪ ಬಂದಿತು. “ನಿನಗೆ ಜೇನು ಕೊಡುವುದಿಲ್ಲ. ಹೋಗು, ಹೋಗು” ಎಂದು ಜೇನುಹುಳುವನ್ನು ಓಡಿಸಿತು.

ಜೇನುಹುಳುವಿಗೆ ಭಯ ಆಯಿತು. ಹತ್ತಿರ ಇದ್ದ ಹುಲ್ಲಿನ ಮೇಲೆ ಕುಳಿತು ಯೋಚಿಸಿತು. 'ತಾವರೆಗೆ ನನ್ನ ಮೇಲೆ ಕೋಪ ಏಕೆ?'





ಆಗ ಕೊಂಬೆಗಳ ಮಧ್ಯದಿಂದ ಸೂರ್ಯನ ಕಿರಣಗಳು ಮಿನುಗುತ್ತಿದ್ದವು. ಅದನ್ನು ನೋಡಿದ ಜೇನುಹುಳು,

"ಕೆಂಪು ಬಣ್ಣದ ತಾವರೆ
ಜೇನು ಕೊಡುವುದಿಲ್ಲವಂತೆ
ಚಿನ್ನದ ಬಣ್ಣದ ಕಿರಣವೇ
ಜಿಗಿದು ಬಂದು ಸಹಾಯ ಮಾಡೆ" ಎಂದಿತು.




ಕಿರಣ "ಇದೋ! ನಾನು ತಾವರೆಯ ಮೇಲೆ ಬಿದ್ದು ಅದನ್ನು ಖುಷಿಪಡಿಸುವೆನು" ಎಂದು ಹೇಳಿ, ತಾವರೆಯ ಮೇಲೆ ಚಿನ್ನದ ಬಣ್ಣದ ಕಿರಣಗಳನ್ನು ಹರಡಿ ಅದು ಮಿನುಗುವಂತೆ ಮಾಡಿತು. ಆದರು ತಾವರೆ ಜೇನುಹುಳುವಿಗೆ ಜೇನು ಕೊಡಲಿಲ್ಲ.

ಆಗ ತಂಗಾಳಿ ಮೆಲ್ಲನೆ ಬೀಸುತ್ತಾ ಬಂದಿತು. ಜೇನುಹುಳು ಅದರ ಬಳಿಗೆ ಹೋಗಿ,



"ಕೆಂಪು ಬಣ್ಣದ ತಾವರೆ
ಜೇನು ಕೊಡುವುದಿಲ್ಲವಂತೆ
ನನಗೆ ಸಹಾಯ ಮಾಡುವೆಯಾ?
ಸುಲಭದ ದಾರಿ ಹೇಳುವೆಯಾ?" ಎಂದಿತು.



ಗಾಳಿ "ಇದೋ! ತಾವರೆಯನ್ನು ಖುಷಿ ಪಡಿಸುವೆನು" ಎಂದು ಮೆಲ್ಲ ಮೆಲ್ಲನೆ ಬೀಸಿತು. ತಾವರೆ ಖುಷಿಯಿಂದ ತೂಗಾಡಿತು. ಆದರು ಜೇನುಹುಳುವಿಗೆ ಜೇನು ಕೊಡಲಿಲ್ಲ.

ಜೇನುಹುಳುವಿಗೆ ತುಂಬಾ ಬೇಜಾರಾಯಿತು. ಮುಂದೆ ಏನು ಮಾಡುವುದು? ಆಗ ಬಾನಿನಲ್ಲಿ ಮೋಡಗಳು ಚಲಿಸುತ್ತಾ ಇದ್ದವು. ಜೇನುಹುಳು ಮೋಡದ ಹತ್ತಿರ ಹೋಗಿ,

"ಕೆಂಪು ಬಣ್ಣದ ತಾವರೆ
ಜೇನು ಕೊಡುವುದಿಲ್ಲವಂತೆ
ಕಪ್ಪು ಬಣ್ಣದ ಮೋಡವೇ!
ಮುದ್ದಾಗಿ ಸಹಾಯ
ಮಾಡುವೆಯಾ?" ಎಂದಿತು.

ಮೋಡ "ಬೇಸರಿಸಬೇಡ! ನಾನು ಮಳೆ ಹನಿಗಳನ್ನು ಕಳುಹಿಸುವೆ" ಎಂದಿತು. ತಾವರೆಯ ಮೇಲೆ ಮಳೆ ಹನಿಗಳು ಹೂವುಗಳಂತೆ ಸುರಿದವು. ತಾವರೆಗೆ ತಂಪಾಯಿತು. ಆದರು ಅದು ಜೇನು ಹುಳುವಿಗೆ ಜೇನು ಕೊಡಲಿಲ್ಲ.

ಜೇನುಹುಳುವಿಗೆ ಸುಸ್ತಾಗಿ ಮರದ ಕೊಂಬೆ ಒಂದರ ಮೇಲೆ ಕುಳಿತುಕೊಂಡಿತು. ಅಲ್ಲಿ ಮರದ ಪೊಟರೆಯಲ್ಲಿದ್ದ ಗೂಬೆಯನ್ನು ನೋಡಿತು.

"ಕೆಂಪು ಬಣ್ಣದ ತಾವರೆ
ಜೇನು ಕೊಡುವುದಿಲ್ಲವಂತೆ
ಬುದ್ಧಿವಂತ ಗೂಬೆಯೇ!
ಪ್ರೀತಿಯಿಂದ ಸಹಾಯ ಮಾಡೆ" ಎಂದಿತು.

ಗೂಬೆ "ಹತ್ತಿರ ಬಾ! ನಿನಗೊಂದು ಗುಟ್ಟು ಹೇಳುವೆ" ಎಂದಿತು. ಜೇನುಹುಳುವಿನ ಕಿವಿಯಲ್ಲಿ ಏನೋ ಹೇಳಿತು. ಕೊಂಬೆಗಳು, ಎಲೆಗಳು, ಹಕ್ಕಿಗಳು ಎಲ್ಲಾ ಕಿವಿಗೊಟ್ಟು ಕೇಳಿದವು. ಆದರು ಯಾರಿಗೂ ಆ ಗುಟ್ಟು ಕೇಳಲು ಆಗಲಿಲ್ಲ. ಜೇನುಹುಳು ಮಾತ್ರ ಆನಂದದಿಂದ ಹಾರಿ ಹೋಯಿತು. ತಾವರೆಯ ಮೇಲೆ ಮೆಲ್ಲ ಮೆಲ್ಲನೆ ಕುಳಿತಿತು.

"ನನಗೂ ಜೇನು ಕೊಡುವೆಯಾ?" ಎಂದು ತುಂಬ ವಿನಯದಿಂದ ಕೇಳಿತು. ತಾವರೆ ಮನಸ್ಸಿಗೆ ಸಂತೋಷ ಆಯಿತು. ಅದು ಜೇನುಹುಳುವಿಗೆ ಜೇನು ಕೊಟ್ಟಿತು.

ಭಾರತದ ಜನಪದ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಗಾಂಧಿ ತಾತ

ಆ ದಿನ ಅಕ್ಟೋಬರ್ ಎರಡು. ಗಾಂಧಿ ತಾತನ ಹುಟ್ಟಿದ ಹಬ್ಬ. ಗಾಂಧಿ ತಾತನಿಗೆ ಶುಭಾಷಯ ಹೇಳಲು ನಾನು ಹಾಗು ನನ್ನ ತಮ್ಮ ಹಾರ ಹಿಡಿದು ಹೊರಟೆವು.

ಆಶ್ರಮದಲ್ಲಿ ತುಂಬಾ ಜನ ಇದ್ದರು. ಪ್ರತಿಯೊಬ್ಬರು ಖಾದಿ ಬಟ್ಟೆ ಧರಿಸಿದ್ದರು. ಕೆಲವರು ತಲೆಯ ಮೇಲೆ ಖಾದಿ ಟೋಪಿ ಹಾಕಿದ್ದರು. ನಾವು ಗಾಂಧಿ ತಾತನ ಹತ್ತಿರ ಹೋದೆವು. ಅವರಿಗೆ ಶುಭಾಷಯ ಹೇಳಿ ಕೈಯಲ್ಲಿದ್ದ ಮಾಲೆ ಹಾಕಿದೆವು.

ಗಾಂಧಿ ತಾತ ನಸು ನಗುತ್ತ "ಮುಂದಿನ ಬಾರಿ ಬರುವಾಗ ಇದಕ್ಕಿಂತ ಚೆನ್ನಾಗಿರುವ ಉಡುಗೊರೆ ತರುವಿರಾ?" ಎಂದು ಕೇಳಿದರು.



"ಏನು ಉಡುಗೊರೆ ಬೇಕು ಹೇಳಿ ತಾತ" ಎಂದೆನು.
"ಚರಕದಿಂದ ನಿಮ್ಮ ಕೈಯಲ್ಲಿ ಮಾಡಿದ ಹಾರ ತರುವಿರಾ?" ಎಂದು ನಗುತ್ತಾ ಕೇಳಿದರು ಗಾಂಧಿ ತಾತ.

"ನಮಗೆ ಚರಕದಲ್ಲಿ ನೂಲುವುದು ಗೊತ್ತಿಲ್ಲ" ಎಂದನು ನನ್ನ ತಮ್ಮ. ಅದಕ್ಕೆ ಅವರು "ನಿಮ್ಮ ಅಪ್ಪ ಅಮ್ಮ ಹೇಳಿ ಕೊಡುತ್ತಾರೆ" ಎಂದರು.

ಹಿಂತಿರುಗಿ ಬರುವಾಗ ದಾರಿಯಲ್ಲಿ "ಗಾಂಧಿ ತಾತ ಚರಕವನ್ನು ಬಳಸಲು ಏಕೆ ಹೇಳಿದರು?" ಎಂದು ತಮ್ಮ ಕೇಳಿದನು.

"ನಾವು ವಿದೇಶಿ ಬಟ್ಟೆ ಉಪಯೋಗಿಸಿದರೆ ನಮ್ಮ ನಾಡಿನ ಬಡವರಿಗೆ ಕೆಲಸ ಇಲ್ಲದಂತಾಗುತ್ತದೆ. ಹಳ್ಳಿ ಜನರಿಗೆ, ಖಾದಿ ಉದ್ಯೋಗಕ್ಕೆ ಜೀವ ಕೊಟ್ಟಂತೆ ಆಗುವುದಿಲ್ಲ. ಅದಕ್ಕೆ ಚರಕದಿಂದ ಮಾಡಿದ ಬಟ್ಟೆಗಳನ್ನು ಮಾತ್ರ ಬಳಸಬೇಕೆಂದು ಹೇಳುತ್ತಾರೆ" ಎಂದು ನಾನು ಹೇಳಿದೆನು.

ಮನೆಗೆ ಬಂದ ನಾವು ಅಮ್ಮನಿಗೆ ಅಲ್ಲಿ ನಡೆದುದೆಲ್ಲವನ್ನು ಹೇಳಿದೆವು. "ಗಾಂಧೀಜಿ ಬಿಳಿ ಜನರಿಂದ ಭಾರತಕ್ಕೆ ಸ್ವತಂತ್ರ ತಂದು ಕೊಡಲು ಮಾತ್ರ ಹೋರಾಡುತ್ತಿಲ್ಲ. ಜೊತೆಗೆ ಖಾದಿ ಚಳುವಳಿಯನ್ನು ಎಲ್ಲಾ ಕಡೆ ಹರಡುತ್ತಿದ್ದಾರೆ" ಎಂದು ಅಮ್ಮ ವಿವರಿಸಿದರು.


ಆ ದಿನದಿಂದ ನಾವು ಚರಕದಲ್ಲಿ ನೂಲುವುದನ್ನು ಕಲಿತೆವು.



ಗಾಂಧಿ ತಾತ ಒಂದು ಬಾರಿ ಮಧುರೆಗೆ ಹೋದರು. ಅಲ್ಲಿ ನದಿಗೆ ಸ್ನಾನ ಮಾಡಲು ಹೋದಾಗ ಅಲ್ಲೊಂದು ಜಾಗದಲ್ಲಿ ತಾಯಿ ಮಗು ಇದ್ದರು.

ಆ ತಾಯಿ ಅರ್ಧ ಸೀರೆ ತನ್ನ ಮೈಗೆ ಸುತ್ತಿಕೊಂಡು, ಇನ್ನರ್ಧ ಸೀರೆ ಒಗೆಯುತ್ತಿದ್ದರು. ಆಕೆಯ ಬಳಿ ಇದ್ದದ್ದು ಅದೊಂದೆ ಸೀರೆ. ಅದು ಹರಿದು ಹೋಗಿತ್ತು. ಆಕೆಯ ಬಡತನ ಗಾಂಧಿ ತಾತನ ಮನಸ್ಸನ್ನು ತಟ್ಟಿತು. ತಮ್ಮ ಬಳಿ ಇದ್ದ ಶಾಲನ್ನು ಆಕೆಗೆ ಕೊಟ್ಟರು. 'ನಾಡಿನಲ್ಲಿ ಇಷ್ಟೊಂದು ಬಡತನ ಇರುವಾಗ ನಾನು ಬಗೆ ಬಗೆಯ ಅಂಗಿ ಧರಿಸುವುದು ಸರಿಯಲ್ಲ' ಎಂದು ಯೋಚಿಸಿದರು. ಅಂದಿನಿಂದ ಮೇಲಂಗಿ ಧರಿಸುವುದನ್ನು ಬಿಟ್ಟು ಬಿಟ್ಟರು.

ಶಬರಮತಿ ಆಶ್ರಮಕ್ಕೆ ಒಮ್ಮೆ ಒಬ್ಬ ಚಿಕ್ಕ ಹುಡುಗ ಗಾಂಧಿ ತಾತನನ್ನು ನೋಡಲು ಬಂದನು. ಅವನು "ತಾತ! ತಾತ! ನೀವೇಕೆ ಅಂಗಿ ಧರಿಸುತ್ತಿಲ್ಲ? ನನ್ನ ಅಮ್ಮನಿಗೆ ಹೇಳಿ ಅಂಗಿ ಹೊಲಿಸಿ ಕೊಡಲಾ"? ಎಂದು ಕೇಳಿದನು.



ಗಾಂಧಿ ತಾತ ನಗುತ್ತಾ "ನಿನ್ನ ಅಮ್ಮ ಎಷ್ಟು ಅಂಗಿ ಹೊಲಿದು ಕೊಡುವರು?" ಎಂದು ಕೇಳಿದರು.

“ನಿಮಗೆ ಎಷ್ಟು ಅಂಗಿ ಬೇಕು ಹೇಳಿ ತಾತ. ಅಷ್ಟು ಅಂಗಿ ಅಮ್ಮನಿಗೆ ಹೊಲಿಯಲು ಹೇಳುವೆನು” ಎಂದನು ಹುಡುಗ.

ಗಾಂಧಿ ತಾತ “ನನಗೆ ನಲವತ್ತು ಕೋಟಿ ಅಣ್ಣ ತಮ್ಮ, ಅಕ್ಕ ತಂಗಿಯರು ಇದ್ದಾರೆ. ಅವರಿಗೆಲ್ಲಾ ಅಂಗಿ ಇಲ್ಲ. ನಾನು ಮಾತ್ರ ಹೇಗೆ ಅಂಗಿ ಹಾಕಿಕೊಳ್ಳಲಿ? ನಿನ್ನ ಅಮ್ಮ ಅಷ್ಟು ಜನರಿಗೆ ಅಂಗಿ ಹೊಲಿದು ಕೊಡುತ್ತಾರಾ?” ಎಂದು ಶಾಂತವಾಗಿ ಕೇಳಿದರು.

ಹುಡುಗನಿಗೆ ಆಗ ಗೊತ್ತಾಯಿತು.....

ನಾಡು ಪೂರ್ತಿ ತಾತನ ಸಂಸಾರ ಎಂದು. ಈ ನಾಡಿನಲ್ಲಿ ಇರುವವರೆಲ್ಲಾ ತಾತನ ಸಂಬಂಧಿಕರು ಎಂದು. ಎಲ್ಲರು ಅವರ ಸ್ನೇಹಿತರು ಎಂದು. ಹೀಗಿರುವಾಗ ಒಂದು ಅಂಗಿ ಅವರಿಗೆ ಹೇಗೆ ಸಾಕಾಗುವುದು?



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ನಾಲ್ವರು ಗೆಳೆಯರು



ಆಮೆ, ಕಾಗೆ, ಇಲಿ, ಜಿಂಕೆ ನಾಲ್ವರು ಗೆಳೆಯರು. ಅವುಗಳು ಒಂದು ಕೊಳದ ದಡದಲ್ಲಿ ಇದ್ದವು. ಊಟ ಹುಡುಕುವಾಗ ಮಾತ್ರ ಬೇರೆ ಬೇರೆ ಹೋಗುತ್ತಿದ್ದವು. ಉಳಿದಂತೆ ಎಲ್ಲವು ಒಟ್ಟಾಗಿ ಇರುತ್ತಿದ್ದವು.

ಒಂದು ದಿನ ಊಟ ಹುಡುಕಲು ಹೋದ ಜಿಂಕೆ ಹಿಂತಿರುಗಿ ಬರಲಿಲ್ಲ. ಗೆಳೆಯರೆಲ್ಲರು ಚಿಂತಿಸುತ್ತಿದ್ದರು.

"ನಾನು ಹಾರುತ್ತಾ ಹೋಗಿ ನೋಡಿಕೊಂಡು ಬರುವೆನು" ಎಂದು ಕಾಗೆ ಹಾರಿ ಹೋಯಿತು. ತುಂಬಾ ದೂರ ಹಾರಿದ ನಂತರ ಒಂದು ಜಾಗದಲ್ಲಿ ಜಿಂಕೆ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವುದನ್ನು ಕಾಗೆ ನೋಡಿತು. ಅದು ಹಿಂತಿರುಗಿ ಬಂದು ಸ್ನೇಹಿತರಿಗೆ ವಿಷಯವನ್ನು ಭಯದಿಂದ ಹೇಳಿತು.



"ಜಿಂಕೆಯನ್ನು ಕಾಪಾಡಲು ತಕ್ಷಣ ಹೋಗಬೇಕು" ಎಂದು ಹೇಳಿದ ಇಲಿ ಕಾಗೆಯ ಬೆನ್ನ ಮೇಲೆ ಕುಳಿತಿತು. ಕಾಗೆ ಹಾರುತ್ತಾ ಹೋಗಿ ಜಿಂಕೆ ಇದ್ದ ಜಾಗವನ್ನು ಸೇರಿತು.

ಇಲಿ ಬೇಗ ಬೇಗ ಬಲೆಯನ್ನು ಕಚ್ಚಿ ಕತ್ತರಿಸಿ ಜಿಂಕೆಯನ್ನು ಬಿಡಿಸಿತು. ಆ ಸಮಯಕ್ಕೆ ಆಮೆ ಅಲ್ಲಿಗೆ ಬಂದಿತು.

"ಅಯ್ಯೋ! ಕೊಳ ಬಿಟ್ಟು ನೀನೇಕೆ ಇಲ್ಲಿಗೆ ಬಂದೆ? ಬೇಟೆಗಾರ ಬಂದರೆ ಕಾಗೆ ಹಾರಿ ಹೋಗುತ್ತದೆ. ನಾನು ಬಿಲದೊಳಗೆ ಹೋಗುವೆ. ಜಿಂಕೆ ವೇಗವಾಗಿ ಓಡುವುದು. ನೀನು ಬೇಟೆಗಾರನಿಗೆ ಸಿಕ್ಕಿ ಬಿಡುವೆ" ಎಂದು ಇಲಿ ಚಿಂತಿಸುತ್ತಾ ಹೇಳಿತು.

"ಜಿಂಕೆ ಅಪಾಯದಲ್ಲಿದೆ ಎಂದು ಕೇಳಿದ ತಕ್ಷಣ ನನಗೆ ಅಲ್ಲಿ ಇರಲು ಆಗಲಿಲ್ಲ. ಅದಕ್ಕೆ ನಾನು ಬಂದೆನು" ಎಂದು ಆಮೆ ಹೇಳಿತು.

ಈ ರೀತಿ ಅವುಗಳೆಲ್ಲ ಮಾತನಾಡುತ್ತಿರುವಾಗ ಬೇಟೆಗಾರ ಬರುತ್ತಿರುವುದು ಕಾಣಿಸಿತು. ಜಿಂಕೆ ಒಂದೇ ನೆಗೆತಕ್ಕೆ ಹಾರಿ ಮುಚ್ಚಿಟ್ಟು ಕೊಂಡಿತು. ಇಲಿ ಹತ್ತಿರದಲ್ಲಿದ್ದ ಬಿಲ ಸೇರಿತು. ಕಾಗೆ ಹಾರಿ ಹೋಯಿತು.




ಅಯ್ಯೋ ಪಾಪ! ಆಮೆ ಸಿಕ್ಕಿಹಾಕಿಕೊಂಡಿತು. ಬೇಟೆಗಾರ ಹುಲ್ಲನ್ನು ದಾರದಂತೆ ಮಾಡಿ ಆಮೆಯ ಕಾಲುಗಳಿಗೆ ಕಟ್ಟಿದನು. ಅದನ್ನು ಬೆನ್ನ ಮೇಲೆ ಹಾಕಿಕೊಂಡು ಮನೆಯ ಕಡೆಗೆ ಹೊರಟನು.



ಗೆಳೆಯರೆಲ್ಲರು ಬಚ್ಚಿಟ್ಟುಕೊಂಡು ಎಲ್ಲವನ್ನು ನೋಡುತ್ತಿದ್ದರು. "ಏನಾದರು ಮಾಡಿ ಆಮೆಯನ್ನು ರಕ್ಷಿಸಬೇಕು" ಎಂದಿತು ಜಿಂಕೆ.

ಇಲಿ ಜಿಂಕೆಗೆ "ನೀನು ಬೇಟೆಗಾರ ಹೋಗುವ ದಾರಿಯಲ್ಲಿ ಸತ್ತಂತೆ ಮಲಗಿರು. ಕಾಗೆ ನಿನ್ನನ್ನು ಕುಕ್ಕುತ್ತಿರುವಂತೆ ಮಾಡಲಿ.




ಆಗ ಬೇಟೆಗಾರ ಆಮೆ ಕೆಳಗಿಟ್ಟು ನಿಮ್ಮ ಬಳಿಗೆ ಬರುವನು. ಆಗ ನಾನು ದಾರವನ್ನು ಕಚ್ಚಿ ಆಮೆಯನ್ನು ಬಿಡಿಸುವೆನು" ಎಂದು ಉಪಾಯ ಹೇಳಿತು.

ಅದರಂತೆ ಮಾಡಲು ಎಲ್ಲವು ಒಪ್ಪಿದವು. ಬೇಟೆಗಾರ ದಾರಿಯಲ್ಲಿ ಜಿಂಕೆ ಬಿದ್ದಿರುವುದನ್ನು ನೋಡಿದನು. ಆಮೆಯನ್ನು ಕೆಳಗಿಟ್ಟು ಜಿಂಕೆಯ ಹತ್ತಿರ ಹೋದನು. ತಕ್ಷಣ ಇಲಿ ಆಮೆಯನ್ನು ಬಿಡಿಸಿತು.

ಬೇಟೆಗಾರ ಹತ್ತಿರ ಬಂದ ತಕ್ಷಣ ಜಿಂಕೆ ಮಿಂಚಿನಂತೆ ಓಡಿ ಮರೆಯಾಯಿತು. ಕಾಗೆ ಹಾರಿ ಹೋಯಿತು. ಆಶ್ಚರ್ಯದಿಂದ ಬೇಟೆಗಾರ ಆಮೆಯನ್ನು ತೆಗೆದುಕೊಳ್ಳಲು ಹೋದನು. ಅಲ್ಲಿ ಆಮೆ ಇರಲಿಲ್ಲ. ನಿರಾಸೆಯಿಂದ ಆತ ಬರಿಗೈಯಲ್ಲಿ ಮನೆಗೆ ಹೋದನು.

ಮೂಲ: ಪಂಚತಂತ್ರದ ಕಥೆಗಳು





Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಸೂರ್ಯನ ಜೊತೆ ಆಡಿದ ಮಗು








ಹನುಮಾನ್ ಮಗುವಾಗಿದ್ದಾಗ ತುಂಬಾ ತುಂಟನಾಗಿದ್ದನು. ಅವನಿಗೆ ಭಯ ಎನ್ನುವುದೇ ಇರಲಿಲ್ಲ. ಎಲ್ಲಾ ಸಮಯದಲ್ಲೂ ಆಟ. ತಾಯಿ ಅಂಜನಾ ದೇವಿಗಂತು ಅವನನ್ನು ನೋಡಿಕೊಳ್ಳುವುದೇ ಕಷ್ಟವಾಗುತ್ತಿತ್ತು.



ಒಂದು ದಿನ ಹನುಮಾನ್ ಆಟ ಆಡುತ್ತಿರುವಾಗ ಸೂರ್ಯನ ಕಿರಣಗಳು ಅವನ ಮೇಲೆ ಬಿದ್ದವು. ಕತ್ತೆತ್ತಿ ಮೇಲಕ್ಕೆ ನೋಡಿದನು. ಬಾನಿನಲ್ಲಿ ಸೂರ್ಯ ಒಂದು ಕೆಂಪು ಚೆಂಡಿನಂತೆ ಕಂಡನು.

“ನಾನು ಆ ಚೆಂಡನ್ನು ಹಿಡಿದು ಆಟ ಆಡುವೆನು” ಎಂದು ಒಂದೇ ನೆಗೆತಕ್ಕೆ ಬಾನಿಗೆ ಹಾರಿದನು. ಸೂರ್ಯನನ್ನು ಹಿಡಿಯಲು ಪ್ರಯತ್ನಿಸಿದನು.




ಸೂರ್ಯನಿಗೆ ಇದು ಇಷ್ಟ ಆಗಲಿಲ್ಲ. ಆತ ವೇಗವಾಗಿ ಓಡ ತೊಡಗಿದನು. ಹನುಮಾನ್ ಅವನನ್ನು ಅಟ್ಟಿಸಿಕೊಂಡು ಓಡಿದನು. ಪ್ರಪಂಚದಲ್ಲಿ ಹಗಲು ರಾತ್ರಿ ಅತಿ ವೇಗವಾಗಿ ಆಗತೊಡಗಿದವು. ಇದು ಹನುಮಾನ್‌ಗೆ ತಮಾಷೆಯಾಗಿ ಕಂಡಿತು.

ಹೆದರಿದ ಸೂರ್ಯ ಇಂದ್ರನನ್ನು ಸಹಾಯಕ್ಕೆ ಕರೆದನು. ಸೂರ್ಯನ ಸ್ಥಿತಿಯನ್ನು ನೋಡಿದ ಇಂದ್ರನಿಗೆ ಕೋಪ ಬಂದಿತು. ಒಂದು ಮಿಂಚನ್ನು ಕಳುಹಿಸಿ ಹನುಮನನ್ನು ಹಿಡಿದನು.

ಹನುಮಾನ್ ಉಸಿರಾಟ ನಿಂತು ಹೋಯಿತು. ಅವನು ಕೆಳಗೆ ಬೀಳತೊಡಗಿದನು. ತಕ್ಷಣ ಅವನ ತಂದೆ ವಾಯು ಬೀಳದಂತೆ ಹಿಡಿದುಕೊಂಡರು. ಅವರು "ಇದು ಒಂದು ಪುಟ್ಟ ಮಗು ಎನ್ನುವುದನ್ನು ಯೋಚಿಸದೆ ಈ ರೀತಿ ಮಾಡಿದೆಯಾ?" ಎಂದು ಇಂದ್ರನ ಕೆಲಸಕ್ಕೆ ಕೋಪ ಮಾಡಿಕೊಂಡರು.

ವಾಯು ತಾನೇ ಗಾಳಿ ಕೊಡುವುದು? ಅವರು ಗಾಳಿಯನ್ನೆಲ್ಲಾ ಒಳಗೆ ತೆಗೆದುಕೊಂಡು ನಂತರ ಬಲವಾಗಿ ಊದಿ ಹೊರಗೆ ಬಿಟ್ಟರು. ಎಲ್ಲ ಕಡೆ ಬಿರುಗಾಳಿ ಬೀಸಿತು. ಬೆಟ್ಟಗಳು ಮರಗಳು ಅಲ್ಲಾಡಿದವು. ಜನರು ಭಯದಿಂದ ಅಲ್ಲಿ ಇಲ್ಲಿ ಓಡಾಡತೊಡಗಿದರು.



“ನನ್ನ ಮಗುವಿಗೆ ಉಸಿರು ಬರುವವರೆಗೆ ಈ ಜಗತ್ತಿಗೆ ಗಾಳಿ ಇಲ್ಲ” ಎಂದರು ವಾಯು. ಗಾಳಿ ನಿಂತು ಹೋಯಿತು. ವಾಯು ತನ್ನ ಮಗನನ್ನು ಎತ್ತಿಕೊಂಡು ಭೂಮಿಯ ತಳಕ್ಕೆ ಹೊರಟು ಹೋದರು.

ಗಿಡಮರಬಳ್ಳಿಗಳಿಗೆ ಗಾಳಿ ಇಲ್ಲದಂತಾಯಿತು. ಮಾನವರು ಉಸಿರುಗಟ್ಟಿ ತಲೆ ಸುತ್ತಿ ಬೀಳತೊಡಗಿದರು. ಎಲ್ಲಾ ಕಡೆ ನಿಶಬ್ದ!

ಗಾಳಿ ಇಲ್ಲದಿದ್ದರೆ ಈ ಪ್ರಪಂಚ ನಾಶವಾಗಿ ಹೋಗುವುದು. ದೇವರುಗಳಿಗೆ ಆತಂಕವಾಯಿತು. ಅವರು ವಾಯುವಿನ ಬಳಿಗೆ ಹೋದರು. “ಇಂದ್ರನನ್ನು ಕ್ಷಮಿಸಿ ಬಿಡು” ಎಂದು ಹೇಳಿ ಹನುಮನಿಗೆ ಜೀವ ತುಂಬಿದರು. ಅವನು ಎಚ್ಚರಗೊಳ್ಳುವಂತೆ ಮಾಡಿದರು.

ದೇವರುಗಳೆಲ್ಲ “ಮಿಂಚು ಗುಡುಗು ನಿನ್ನನ್ನು ಮುಟ್ಟುವುದಿಲ್ಲ. ಬಾನಿನಲ್ಲಿ ಎಲ್ಲಿ ಬೇಕಾದರು ನೀನು ಹಾರಬಹುದು. ನಿನ್ನ ಶರೀರವನ್ನು ಇಷ್ಟ ಬಂದಂತೆ ಹಿಗ್ಗಿಸಿ ಕುಗ್ಗಿಸಿ ಮಾಡಬಹುದು” ಎಂದು ಆಶೀರ್ವಾದ ಮಾಡಿದರು.





"ಈ ಎಲ್ಲ ಶಕ್ತಿಗಳು ಅವನಲ್ಲಿ ಇದ್ದರೆ ಸಾಲದು. ಹನುಮಾನ್ ಬುದ್ಧಿವಂತನಾಗಿದ್ದರೆ ಮಾತ್ರ ಅವುಗಳನ್ನು ಸರಿಯಾಗಿ ಉಪಯೋಗಿಸಲು ಸಾಧ್ಯ" ಎಂದು ಹೇಳಿದರು ವಾಯು.

"ಚಿಂತಿಸಬೇಡಿ! ಹನುಮಾನ್ ತುಂಬ ಬುದ್ಧಿವಂತ" ಎಂದು ದೇವರುಗಳು ಮತ್ತೊಮ್ಮೆ ಆಶೀರ್ವಾದ ಮಾಡಿದರು.

ವಾಯು ನಿಧಾನವಾಗಿ ಉಸಿರಾಡಲು ಆರಂಭಿಸಿದರು. ಗಾಳಿ ನಿಧಾನವಾಗಿ ಬೀಸಲು ಆರಂಭಿಸಿತು. ಗಿಡ ಮರ ಬಳ್ಳಿಗಳಿಗೆ ಗಾಳಿ ಸಿಕ್ಕಿತು. ಮಾನವರು ಉಸಿರಾಡ ತೊಡಗಿದರು.




ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಮೂರು ಗರಿಗಳು


ಒಂದು ದಿನ ಗುರುಗಳು ತಮ್ಮ ಶಿಷ್ಯನಿಗೆ "ನೀನು ಕಾಡಿಗೆ ಹೋಗಿ ಗಿಡ ಮೂಲಿಕೆಗಳನ್ನು ತೆಗೆದುಕೊಂಡು ಬಾ. ದಾರಿಯಲ್ಲಿ ಏನಾದರು ಅಪಾಯ ಎದುರಾದರೆ ಈ ಗರಿಗಳನ್ನು ಉಪಯೋಗಿಸಿ ಪಾರಾಗು" ಎಂದು ಹೇಳಿ ಮೂರು ಗರಿಗಳನ್ನು ಕೊಟ್ಟರು.

ಶಿಷ್ಯ ಕಾಡಿನಲ್ಲಿ ಗಿಡ ಮೂಲಿಕೆಗಳನ್ನು ಹುಡುಕುತ್ತಾ ತುಂಬಾ ಹೊತ್ತು ಅಲೆದಾಡಿದನು. ಅವನಿಗೆ ಬಹಳ ಸುಸ್ತಾಯಿತು. ವಿಶ್ರಾಂತಿ ಪಡೆಯಲು ಬಯಸಿದನು. ಆಗ "ತಮ್ಮಾ! ಇಲ್ಲಿ ಏನು ಮಾಡುತ್ತಿರುವೆ? ನನ್ನ ಮನೆಗೆ ಬಾ. ಹಬ್ಬದೂಟ ತಿಂದು ವಿಶ್ರಾಂತಿ ಪಡೆಯಬಹುದು" ಎಂದು ಒಂದು ಅಜ್ಜಿ ಪ್ರೀತಿಯಿಂದ ಕರೆಯಿತು.

ಶಿಷ್ಯ ಮತ್ತು ಅಜ್ಜಿ ಒಂದು ದೊಡ್ಡ ಬಂಗಲೆಗೆ ಹೋದರು. 'ಈ ಕಾಡಿನ ಮಧ್ಯೆ ಇಷ್ಟು ದೊಡ್ಡ ಬಂಗಲೆ ಇದೆಯಲ್ಲ!' ಎಂದು ಶಿಷ್ಯನು ಯೋಚಿಸುತ್ತಾ ಬಂಗಲೆಯ ಒಳಗೆ ಹೆಜ್ಜೆ ಇಟ್ಟನು. ತಕ್ಷಣ "ಅಹಹಹ". . ಎಂಬ ನಗುವಿನ ಶಬ್ದ.



ಅಯ್ಯೋ! ಅಜ್ಜಿ ನಿಂತಿದ್ದ ಜಾಗದಲ್ಲಿ ಭಯಂಕರವಾದ ಒಬ್ಬ ಮಾಂತ್ರಿಕ ನಿಂತಿದ್ದನು. ಮಾಂತ್ರಿಕ "ನಿನಗಾ ವಿಶೇಷ ಊಟ? ಈ ದಿನ ನೀನೇ ನನಗೆ ವಿಶೇಷ ಊಟ" ಎಂದನು. ಶಿಷ್ಯ ನಡುಗಿದನು. ತಪ್ಪಿಸಿಕೊಳ್ಳಲು ದಾರಿ ಯೋಚಿಸಿದನು.



"ಇಷ್ಟೊಂದು ಗಲೀಜಾಗಿರುವ ನನ್ನನ್ನು ನೀನು ತಿನ್ನುವೆಯಾ? ಸ್ವಲ್ಪ ಇರು. ನಾನು ಸ್ನಾನ ಮಾಡಿ ಶುದ್ಧವಾಗಿ ಬರುತ್ತೇನೆ" ಎಂದನು.

ಶಿಷ್ಯ ಸ್ನಾನ ಮಾಡಲು ಬಚ್ಚಲು ಮನೆಗೆ ಹೋದನು. ಒಂದು ಗರಿ ಕೆಳಗಿಟ್ಟು "ಮಾಂತ್ರಿಕ ಕರೆದಾಗ ನನ್ನಂತೆ ಮಾತನಾಡು" ಎಂದು ಹೇಳಿ ಕಿಟಕಿಯಿಂದ ಹೊರಗೆ ಹಾರಿ ಓಡಿ ಹೋದನು. ಮಾಂತ್ರಿಕ ಶಿಷ್ಯನನ್ನು ಕರೆದಾಗಲೆಲ್ಲಾ "ಇದೋ! ಬಂದುಬಿಟ್ಟೆನು. ಇದೋ! ಬಂದುಬಿಟ್ಟೆನು" ಎಂಬ ಉತ್ತರ ಬರುತ್ತಿತ್ತು.

ಅನುಮಾನ ಬಂದ ಮಾಂತ್ರಿಕ ಬಚ್ಚಲು ಮನೆ ಒಳಗೆ ಹೋದನು. ಅಲ್ಲಿ ಶಿಷ್ಯ ಇಲ್ಲದಿರುವುದನ್ನು ನೋಡಿ ಕೋಪ ಉಕ್ಕಿತು.

"ನನಗೆ ನೀನು ಮೋಸ ಮಾಡುವೆಯಾ? ನಿನ್ನನ್ನು ಬಿಡುವುದಿಲ್ಲ. ಹಿಡಿಯಲು ಬರುವೆನು" ಎಂದು ಹೇಳಿ ಶಿಷ್ಯನನ್ನು ಅಟ್ಟಿಸಿಕೊಂಡು ಹೊರಟನು. ಶಿಷ್ಯನ ಹತ್ತಿರ ಬಂದು ಬಿಟ್ಟನು.

ಹೆದರಿದ ಶಿಷ್ಯ ತಕ್ಷಣ ಎರಡನೆಯ ಗರಿ ತೆಗೆದುಕೊಂಡು "ನನ್ನ ಹಿಂದೆ ಒಂದು ದೊಡ್ಡ ನದಿ ಹರಿಯುವಂತೆ ಮಾಡು" ಎಂದು ಅಪ್ಪಣೆ ಮಾಡಿದನು. ತಕ್ಷಣ ಒಂದು ದೊಡ್ಡ ನದಿ ಹರಿಯತೊಡಗಿತು. ಅದು ಮಾಂತ್ರಿಕನನ್ನು ಕೊಚ್ಚಿಕೊಂಡು ಹೋಯಿತು.

'ಅಬ್ಬ! ತಪ್ಪಿಸಿಕೊಂಡೆ' ಎಂದು ಶಿಷ್ಯ ನಿಟ್ಟುಸಿರು ಬಿಟ್ಟನು. "ಗುಳುಕ್.. ಗುಳುಕ್. ." ಎಂಬ ಶಬ್ದ ಕೇಳಿ ಶಿಷ್ಯ ಹಿಂತಿರುಗಿ ನೋಡಿದನು. 'ಅಯ್ಯೋ! ಇದೇನಿದು ನದಿ ನೀರನ್ನೆಲ್ಲಾ ಪೂರ್ತಿ ಕುಡಿದು ಬಿಟ್ಟನಲ್ಲಾ!'



ಶಿಷ್ಯ ಮೂರನೆಯ ಗರಿ ತೆಗೆದುಕೊಂಡು "ನನ್ನ ಹಿಂದೆ ಒಂದು ದೊಡ್ಡ ಕಾಡಿನ ಬೆಂಕಿ ಮಾಡು" ಎಂದು ಹೇಳಿದನು. ತಕ್ಷಣ ಬೆಂಕಿ ಹೊತ್ತಿಕೊಂಡಿತು. ಆದರೆ ಮಾಂತ್ರಿಕ ತಾನು ಕುಡಿದಿದ್ದ ನದಿ ನೀರನ್ನೆಲ್ಲಾ ಬೆಂಕಿಯ ಮೇಲೆ ಉಗುಳಿ ಅದನ್ನು ಆರಿಸಿದನು. ಶಿಷ್ಯ ಗುರುಗಳ ಬಳಿಗೆ ಒಂದೇ ವೇಗದಲ್ಲಿ ಓಡಿ ಹೋದನು. ಮಾಂತ್ರಿಕನು ಅವನನ್ನು ಹಿಂಬಾಲಿಸಿ ಅಲ್ಲಿಗೆ ಬಂದನು.



“ನಿನ್ನ ಶಿಷ್ಯನನ್ನು ನನಗೆ ಕೊಡು. ಇಲ್ಲವಾದರೆ ನಿನ್ನನ್ನೇ ತಿಂದು ಬಿಡುವೆನು” ಎಂದು ಹೆದರಿಸಿದನು. ಗುರುಗಳು “ನಿನಗೆ ಗೊತ್ತಿರುವ ಎಲ್ಲಾ ಉಪಾಯಗಳು ನನಗು ಗೊತ್ತು. ನಾವಿಬ್ಬರು ಒಂದು ಪಂದ್ಯವನ್ನು ಇಡೋಣ. ಅದರಲ್ಲಿ ನೀನು ಗೆದ್ದರೆ ಶಿಷ್ಯನನ್ನು ಕರೆದುಕೊಂಡು ಹೋಗು” ಎಂದರು.

“ಸರಿ! ಪಂದ್ಯ ಪ್ರಾರಂಭವಾಗಲಿ” ಎಂದನು ಮಾಂತ್ರಿಕ. “ನಿನ್ನ ಬಂಗಲೆಯಷ್ಟು ಉದ್ದ ಆಗಲು ನಿನ್ನಿಂದ ಆಗುವುದೇ?” ಎಂದರು ಗುರುಗಳು. ತಕ್ಷಣ ಮಾಂತ್ರಿಕ ತನ್ನ ದೇಹವನ್ನು ಬಂಗಲೆಯಷ್ಟು ಉದ್ದ ಮಾಡಿ ತೋರಿಸಿದನು.

“ಉದ್ದ ಆಗುವುದು ಸುಲಭದ ಕೆಲಸ. ನೀನು ಬಟಾಣಿಯಷ್ಟು ಚಿಕ್ಕದಾಗು ನೋಡೋಣ” ಎಂದರು ಗುರುಗಳು. “ಇದೇನು ಮಹಾ ದೊಡ್ಡ ಕೆಲಸ?” ಎಂದು ಮಾಂತ್ರಿಕ ಒಂದು ಕ್ಷಣದಲ್ಲಿ ಬಟಾಣಿ ಕಾಳಿನ ಗಾತ್ರಕ್ಕೆ ಬದಲಾದನು.

ತಕ್ಷಣ ಗುರುಗಳು ಆ ಬಟಾಣಿಯನ್ನು ಬಾಯಿಯಲ್ಲಿ ಹಾಕಿಕೊಂಡು ಅಗಿದು ನುಂಗಿದರು. ಆ ದಿನದಿಂದ ಮಾಂತ್ರಿಕ ಯಾರ ಕಣ್ಣಿಗೂ ಬಿದ್ದಿಲ್ಲ.

ಮೂಲ: ಜಪಾನ್ ಜನಪದ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಹಕ್ಕಿಗಳ ಗೂಡುಗಳು

71



ನಾವು ಓಡಾಡುವಾಗ, ನಡೆದಾಡುವಾಗ ನಮ್ಮ ಸುತ್ತಮುತ್ತ ಹಲವು ರೀತಿಯ ಹಕ್ಕಿಗಳನ್ನು ನೋಡುತ್ತೇವೆ. ಅವುಗಳ ಗೂಡುಗಳಲ್ಲಿ ಎಷ್ಟೊಂದು ವೈವಿಧ್ಯತೆ ಇರುತ್ತದೆ.


ಹಕ್ಕಿಗಳು ನಿದ್ರೆ ಮಾಡಲು, ವಿಶ್ರಾಂತಿ ಪಡೆಯಲು ಮಾತ್ರ ಗೂಡುಗಳನ್ನು ಕಟ್ಟುವುದಿಲ್ಲ. ಅವು ಗೂಡಿನೊಳಗೆ ಮೊಟ್ಟೆ ಇಡುತ್ತವೆ. ಕಾವು ಕೊಟ್ಟು ಮರಿ ಮಾಡುತ್ತವೆ. ಮರಿಗಳನ್ನು ಜೋಪಾನವಾಗಿ ಸಾಕಿ ಬೆಳೆಸುತ್ತವೆ. ಇದೆಲ್ಲ ನಡೆಯುವುದು ಹಕ್ಕಿಗಳ ಗೂಡುಗಳಲ್ಲಿಯೇ!



ದರ್ಜಿ ಹಕ್ಕಿ ಒಂದು ಅಸಮಾನ್ಯ ಹಕ್ಕಿ. ನಾರನ್ನು ಕೊಕ್ಕಿನಲ್ಲಿ ತಂದು, ಎರಡು ಎಲೆಗಳನ್ನು ಸೇರಿಸಿ, ಎಲೆಯ ಅಂಚನ್ನು ನಾರಿನಿಂದ ದಾರದಂತೆ ಹೊಲಿದು ಚೀಲ ಮಾಡುತ್ತದೆ. ಕೆಲವೊಮ್ಮೆ ಹತ್ತು ಹೊಲಿಗೆಗಳನ್ನು ಹಾಕುವುದಿದೆ. ತೊಟ್ಟಿಲಿನಂತಹ ಹಸಿರು ಎಲೆಗಳ ಚೀಲದಲ್ಲಿ ತನ್ನ ಮರಿಗಳನ್ನು ಬೆಳೆಸುತ್ತದೆ. ಬೇರೆ ಯಾವ ಪ್ರಾಣಿ ಪಕ್ಷಿಗಳಿಗೂ ಈ ಗೂಡನ್ನು ಸುಲಭವಾಗಿ ಕಂಡು ಹಿಡಿಯಲು ಆಗುವುದಿಲ್ಲ.



ದರ್ಜಿ ಹಕ್ಕಿಯಂತೆಯೇ ಗೀಜಗದ ಹಕ್ಕಿಯು ಹುಲ್ಲು ಮತ್ತು ನಾರಿನಿಂದ ಗಟ್ಟಿಯಾದ ಗೂಡನ್ನು ಕಟ್ಟುತ್ತದೆ. ಮರಗಳ ಕೊಂಬೆಯ ತುದಿಗಳಲ್ಲಿ ಚೆಂಡಿನಂತೆ ನೇತಾಡಲು ಬಿಡುತ್ತದೆ. ಗೂಡಿನೊಳಗೆ ಮೊಟ್ಟೆ ಇಡಲು ಒಂದು ರೂಮನ್ನು ಮಾಡಿರುತ್ತದೆ. ಗೂಡಿನ ಬಾಗಿಲು ಕೆಳ ಮುಖವಾಗಿ ಇರುವುದರಿಂದ ಶತ್ರುಗಳು ಬೇಗನೆ ಒಳಗೆ ನುಗ್ಗಲು ಆಗುವುದಿಲ್ಲ. ಗೀಜಗನ ಗೂಡು ನೋಡಲು ಮಣ್ಣಿನ ಹೂಜಿಯಂತೆ ಕಾಣುತ್ತದೆ.





ಮರಕುಟಿಕ, ಗೂಬೆ, ಗೆಂಡೆ ಹಕ್ಕಿ (Hornbill) ಇತ್ಯಾದಿಗಳು ಮರಗಳ ಪೊಟರೆಗಳಲ್ಲಿ ವಾಸ ಮಾಡುತ್ತವೆ. ಗೆಂಡೆ ಹಕ್ಕಿಗಳಲ್ಲಿ ಒಂದು ವಿಚಿತ್ರ ಅಭ್ಯಾಸ ಇದೆ. ಹೆಣ್ಣು ಹಕ್ಕಿ ಪೊಟರೆಯಲ್ಲಿ ಮೊಟ್ಟೆ ಇಟ್ಟು, ಕಾವು ಕೊಟ್ಟು, ಮರಿಗಳು ಹೊರಗೆ ಬರುವವರೆಗು ಗಂಡು ಹಕ್ಕಿ ಪೊಟರೆಯನ್ನು ಮಣ್ಣಿನಿಂದ ಪೂರ್ತಿ ಮುಚ್ಚುವುದು. ಹೆಣ್ಣು ಹಕ್ಕಿಯ ಕೊಕ್ಕು ಮಾತ್ರ ಹೊರಗೆ ಬರುವಷ್ಟು ಒಂದು ಸಣ್ಣ ತೂತು ಬಿಡುವುದು.

ಗಂಡು ಹಕ್ಕಿ ಊಟ ಹುಡುಕಿ ತಂದು ಆ ಸಣ್ಣ ತೂತದಿಂದ ಹೆಣ್ಣು ಹಕ್ಕಿಗೆ ಕೊಡುವುದು. ಮರಿಗಳು ಸ್ವಲ್ಪ ದೊಡ್ಡದಾದ ನಂತರ ಗಂಡು ಹೆಣ್ಣು ಎರಡೂ ಸೇರಿ ಊಟ ಹುಡುಕಲು ಹೋಗುವವು.



ಕೆಲವು ಹಕ್ಕಿಗಳು ಗೂಡುಗಳನ್ನೇ ಕಟ್ಟುವುದಿಲ್ಲ. ಮಧುರವಾಗಿ ಹಾಡುವ ಕೋಗಿಲೆಗಳು ಈ ಗುಂಪಿಗೆ ಸೇರುತ್ತವೆ. ಕೋಗಿಲೆಗಳು ಬೇರೆ ಬೇರೆ ಹಕ್ಕಿಗಳ ಗೂಡಿನಲ್ಲಿ ಅಥವ ಕೆಲವೊಮ್ಮೆ ನೆಲದ ಮೇಲೆ ಮೊಟ್ಟೆಗಳನ್ನು ಇಡುತ್ತವೆ. ಸಾಮಾನ್ಯವಾಗಿ ಇವು ಕಾಗೆ ಗೂಡಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಕಾಗೆಗಳು ಆ ಮೊಟ್ಟೆಗಳನ್ನು ತಮ್ಮ ಮೊಟ್ಟೆ ಎಂದು ತಿಳಿದು ಕಾವು ಕೊಟ್ಟು ಕಾಪಾಡುತ್ತವೆ. ಕೋಗಿಲೆ ಮರಿಗಳು ದೊಡ್ಡದಾದ ನಂತರ ಹಾರಿ ಹೋಗಿ ಕೋಗಿಲೆಗಳ ಗುಂಪನ್ನು ಸೇರಿಕೊಳ್ಳುತ್ತವೆ.







ಮಿಂಚುಳ್ಳಿ ಎಂಬ ಹಕ್ಕಿ ಮೀನು ಹಿಡಿಯುವುದರಲ್ಲಿ ಅತಿ ಚಾಣಾಕ್ಷ ಹಕ್ಕಿ. ಕೆರೆ ಕಟ್ಟೆಯಂತಹ ಜಾಗಗಳಲ್ಲಿ ಮರದ ಕೊಂಬೆಗಳು ಕೆಳಗೆ ಬಾಗಿರುವ ಕಡೆ ಕುಳಿತು ನೀರನ್ನು ನೋಡುತ್ತಾ ಇರುತ್ತದೆ. 'ದಿಢೀರ್' ಎಂದು ನೀರಿಗೆ ನುಗ್ಗಿ ತನ್ನ ಉದ್ದ ಕೊಕ್ಕಿನಿಂದ ಮೀನನ್ನು ಹಿಡಿದು ಹಾರಿ ಹೋಗುತ್ತದೆ. ಈ ಹಕ್ಕಿಗಳು ನೀರಿನ ದಡದಲ್ಲಿ ಸುರಂಗಗಳನ್ನು ಮಾಡಿ ಮೊಟ್ಟೆ ಇಡುತ್ತವೆ. ಒಣಗಿರುವ ಹುಲ್ಲನ್ನು ತಂದು ಗೂಡಿನ ಬಾಗಿಲನ್ನು ಮುಚ್ಚುತ್ತವೆ.

ಈ ರೀತಿ ನೋಡಿದರೆ ಹಕ್ಕಿಗಳ ಬಗ್ಗೆ ಇನ್ನೂ ಹಲವು ಕುತೂಹಲಕಾರಿ ವಿಷಯಗಳನ್ನು ತಿಳಿಯಬಹುದು. ಆದರೆ ಎಚ್ಚರಿಕೆಯಿಂದ ಗಮನಿಸಬೇಕು. ಆಗ ಮಾತ್ರ ನಮಗೆ ವಿಷಯಗಳು ಗೊತ್ತಾಗುತ್ತದೆ.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಕಂಡು ಹಿಡಿಯೋಣ ಬಾ!




ನೋಡಲು ಅಂದವಾಗಿರುವ ಗೋಲಿ
ಗೊಂಚಲು ಗೊಂಚಲಾಗಿರುವ ಗೋಲಿ
ಚಪ್ಪರದಲ್ಲಿ ತೂಗಾಡುವ ಗೋಲಿ – **ಅದು ಏನು?**

ಕಾಗೆಯಂತ ಕಪ್ಪು ಬಣ್ಣ
ಕೈಯಲ್ಲಿ ಹಿಡಿದರೆ ನೇರಳೆ ಬಣ್ಣ
ಬಾಯಲ್ಲಿ ಇಟ್ಟರೆ, ಬಾಯೆಲ್ಲಾ ಬಣ್ಣ
ಅದು ಏನು?



ಹೊರಗೆ ಸಾವಿರ ಮುಳ್ಳು
ಕತ್ತರಿಸಿದರೆ ಕೈ ತುಂಬ ಅಂಟು
ಬಣ್ಣವದು ಒಣಗಿದ ಹುಲ್ಲಿನಂತೆ
ಜಗಿದು ತಿಂದರೆ ಹಲ್ವದಂತೆ – **ಅದು ಏನು?**

ಹಸಿರು ಹೊದಿಕೆಯಲ್ಲಿ ಕಪ್ಪು ಮಣಿಗಳ
ಬಚ್ಚಿಟ್ಟುಕೊಂಡ ಬಿಳಿಯ – **ಯಾರು?**





ಹೊಡೆ ಹೊಡೆ ಎಂದು ಹೊಡೆವರು
ಬಿಡಿಸು ಬಿಡಿಸು ಎಂದು ಬಿಡಿಸುವರು
ಒಳಗೆ ಇರುವುದನ್ನು ತೆಗೆದುಕೊಳ್ಳುವರು
ಹೊರಗೆ ಇರುವುದನ್ನು ಎಸೆಯುವರು
ಅದು ಏನು?

ನೆತ್ತಿ ಮೇಲೆ ಹಸಿರು ಕಿರೀಟ, ಮೈ ತುಂಬ ಕಣ್ಣುಗಳಿರುವ
ಅದು ಏನು?

ಹಸಿರು ಚರ್ಮದ ಒಳಗೆ ಕೆಂಪು ರಕ್ತ ಇರುವ
ಅದು ಏನು?

ಹಸಿರು ಮರದ ತುಂಬ ಹೊಳೆವ ಹಳದಿ ಚೆಂಡು
ಘಮಘಮ ವಾಸನೆ ತಿನ್ನಲು ಬಲು ಹುಳಿ – **ಅದು ಏನು?**



ಹಸಿರು ಕೆಂಪು ಹಳದಿ ಬಣ್ಣ
ಸಿಪ್ಪೆ ತೆಗೆದರೆ ಬಿಳಿ ಬಣ್ಣ
ಎಲ್ಲರು ಬಯಸಿ ತಿನ್ನುವರಣ್ಣ
ಗೊನೆಯಲ್ಲಿರುವ ಹಣ್ಣು ಅಣ್ಣ
ಅದು ಏನು?




ದ್ರಾಕ್ಷಿ, ಕಿತ್ತಳೆ, ಸೀತಾಫಲ
ಜಾಮೂನ್‌ನೇರಳೆ, ಕಲ್ಲಂಗಡಿ, ಹಲಸಿನಹಣ್ಣು
ಹುಣಸೆಹಣ್ಣು, ಅನಾನಸ್, ಬಾಳೆಹಣ್ಣು



ಬಟ್ಟಲಂತ ಹೂ ಬೂದು ಬಣ್ಣದ ಕಾಯಿ
ಬಳ್ಳಿಯಲ್ಲಿ ಬೆಳೆಯುವುದು
ಅಡುಗೆಗೆ ಬರುವುದು – **ಅದು ಏನು?**

ಗಿಡ ಒಂದಕ್ಕೆ ಹತ್ತು ಕಾಯಿಗಳು
ಎಲೆ ಒಂದಕ್ಕೆ ಹತ್ತು ಮುಳ್ಳುಗಳು
ಉಂಡೆಯಂತೆ ಆಕಾರ
ಛತ್ರಿಯಂತೆ ತೊಟ್ಟಿರುವ – **ಅದು ಏನು?**



ಬಳ್ಳಿಯಲ್ಲಿ ಬಿಟ್ಟು ಹಾವಿನಂತೆ ನೇತಾಡುವುದು – **ಅದು ಏನು?**


ನಿಮ್ಮ ಮನೆಯ ತೋಟದ
ಮೂಲೆಯಲ್ಲಿ ಬಿಡುವುದು
ಕತ್ತರಿಸಿ ಕೈಯಲ್ಲಿ ಹಿಡಿದರೆ
ಎಂಟು ಕಲ್ಲಿನ ಒಲೆ ಆಗುವುದು – **ಅದು ಏನು?**

ಎಲೆಗಳಿಂದ ಮುಚ್ಚಿದ ಚೆಂಡನ್ನು
ಹೆಚ್ಚು ಜನ ಬಯಸುವರು
ಬೆಲೆ ಎಷ್ಟಾದರು ಕೊಳ್ಳುವರು
ವಿಧವಿಧ ಅಡುಗೆ ಮಾಡುವರು – **ಅದು ಏನು?**



ಆನೆ ಕಿವಿಯಂತ ಎಲೆಗಳು
ನೋಡುಗರನ್ನು ಆಕರ್ಶಿಸುವವು
ಮಡಕೆಯಂತೆ ಕಾಣುವುದು


ಯೋಚಿಸಿ ಉತ್ತರಿಸು!



ಅಣ್ಣನ ಮನೆಯ ತೋಟದಲ್ಲಿ
ಹಸಿರು ಚಾಪೆಯಂತೆ ಹರಡಿದೆ – **ಅದು ಏನು?**

ನನ್ನ ನೀವು ಕತ್ತರಿಸಿದರೆ
ನಿಮ್ಮ ನಾ ಅಳುವಂತೆ ಮಾಡುವೆ – **ನಾನು ಯಾರು?**

ಕಾಯನ್ನು ಬೇಯಿಸಿದರು
ಕಹಿಯ ಬಿಡುವುದಿಲ್ಲ
ಉತ್ತಮ ಆರೋಗ್ಯ ನೀಡುವ
ಅದು ಏನು?



ಕಿತ್ತಳೆ ಬಣ್ಣದಲ್ಲಿರುವುದು
ತುದಿ ಚೂಪಾಗಿರುವುದು
ಹಸಿರು ಎಲೆಗಳಿರುವುವು
ಕಣ್ಣುಗಳಿಗೆ ತುಂಬ ಒಳ್ಳೆಯದು
ಅದು ಏನು?

ಪಡುವಲಕಾಯಿ, ಬೆಂಡೆಕಾಯಿ, ಎಲೆಕೋಸು
ಹೂಕೋಸು, ಈರುಳ್ಳಿ, ಬೂದುಗುಂಬಳಕಾಯಿ
ಸೊಪ್ಪು, ಬದನೆಕಾಯಿ, ಕ್ಯಾರೆಟ್, ಹಾಗಲಕಾಯಿ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

73 ಹಕ್ಕಿ ಮತ್ತು ಲಾಲಿ

ಒಂದು ದಿನ ಮರವೊಂದು ಆನಂದದಿಂದ ಎರಡು ಹೂವುಗಳನ್ನು ಹಕ್ಕಿಯೊಂದಕ್ಕೆ ಕೊಟ್ಟಿತು. ಆ ಹೂವುಗಳು ತುಂಬಾ ಸುಂದರವಾಗಿದ್ದವು. ಹಕ್ಕಿ ಹೂವುಗಳನ್ನು ನೋಡಿ 'ಇವೆರಡರಲ್ಲಿ ಒಂದನ್ನು ಯಾರಿಗಾದರು ಕೊಡಬೇಕು. ಯಾರಿಗೆ ಕೊಡಲಿ?' ಎಂದು ಯೋಚಿಸಿತು. ತನ್ನ ಕೊಕ್ಕಿನಲ್ಲಿ ಸುಂದರವಾದ ಹೂವನ್ನು ಹಿಡಿದು ಯಾರಿಗೆ ಕೊಡುವುದೆಂದು ಹುಡುಕಾಟದಲ್ಲಿ ತೊಡಗಿತು.

ಹಾರುತ್ತಾ ಹಾರುತ್ತಾ ಸಾಗುತ್ತಿರುವಾಗ ಒಂದು ಸುಂದರವಾದ ಹೂವಿನ ತೋಟ ಕಾಣಿಸಿತು. ಆ ತೋಟದಲ್ಲಿ ಬಗೆ ಬಗೆಯ ಹೂವುಗಳಿದ್ದವು. ಅವುಗಳ ಪರಿಮಳ ಗಾಳಿಯಲ್ಲಿ ತುಂಬಿತ್ತು.

ಇಂತಹ ಹೂವಿನ ತೋಟವನ್ನು ಆ ಹಕ್ಕಿ ಹಿಂದೆ ಎಂದು ನೋಡಿರಲಿಲ್ಲ. ದೂರದಲ್ಲಿ ತೋಟದ ಮಾಲಿ ಕಣ್ಣಿಗೆ ಬಿದ್ದನು. ಹಕ್ಕಿ ಮಾಲಿಯನ್ನು ನೋಡಿ 'ಈತನಿಗೆ ಹೂಗಳೆಂದರೆ ಬಹಳ ಇಷ್ಟ ಎನಿಸುತ್ತದೆ.




ಈ ಸುಂದರ ಹೂವನ್ನು ಈತನಿಗೆ ಏಕೆ ಕೊಡಬಾರದು?' ಎಂದು ಯೋಚಿಸಿತು.



ಹಕ್ಕಿ ಕೆಳಗೆ ಬರುವಾಗ ಮಾಲಿಯು ಅದನ್ನು ನೋಡಿದನು. ಆಶ್ಚರ್ಯದಿಂದ ಆತ "ಆಹಾ! ನಿನ್ನ ಹತ್ತಿರ ಇರುವ ಹೂವು ಸುಂದರವಾಗಿದೆ. ಅದನ್ನು ನನಗೆ ಕೊಡು. ಈ ರೀತಿಯ ಹೂವು ನನ್ನ ತೋಟದಲ್ಲಿ ಇಲ್ಲ. ಈ ಹೂವಿನಿಂದ ನನ್ನ ತೋಟ ಜಗತ್ತಿನಲ್ಲೇ ಅತಿ ಸುಂದರ ಹೂವಿನ ತೋಟವಾಗುತ್ತದೆ. ಇದರಿಂದ ನನಗೆ ಬಹುಮಾನ ಸಿಗುತ್ತದೆ" ಎಂದು ಹೇಳಿದನು.

ಹಕ್ಕಿ ಬೇಸರದಿಂದ ಮುಂದಕ್ಕೆ ಹಾರಿತು. ಹಾರುತ್ತಾ ಹಾರುತ್ತಾ ಸಾಗುತ್ತಿರುವಾಗ ಅಲ್ಲೊಂದು ಕಡೆ ಬಣ್ಣಗಳನ್ನೆಲ್ಲಾ ಹಾಸಿ ಹರಡಿರುವಂತೆ ಕಂಡು ಬಂದಿತು. ಅಲ್ಲಿ ಒಬ್ಬ ವ್ಯಕ್ತಿ ಬಟ್ಟೆಯ ಮೇಲೆ ಕಸೂತಿ ಮಾಡುತ್ತಿದ್ದನು. ಹಕ್ಕಿ ಆತನನ್ನು ನೋಡಿ 'ಈತನಿಗೆ ಸುಂದರ ಕಸೂತಿ ಎಂದರೆ ಬಹಳ ಇಷ್ಟ ಎನಿಸುತ್ತದೆ. ಈ ಸುಂದರ ಹೂವನ್ನು ಈತನಿಗೆ ಕೊಡುವೆನು' ಎಂದು ಯೋಚಿಸಿತು.




ಹಕ್ಕಿ ಕೆಳಗೆ ಬರುವಾಗ ವ್ಯಕ್ತಿಯು ಅದನ್ನು ನೋಡಿ "ನಿನ್ನ ಹತ್ತಿರ ಸುಂದರವಾದ ಹೂವಿದೆ. ಆ ಹೂವು ನನಗೆ ಕೊಡು. ಈ ರೀತಿ ಹೂವು ನನ್ನ ಕಸೂತಿಯಲ್ಲಿ ಇಲ್ಲ. ಈ ಹೂವಿನ ಕಸೂತಿ ಜಗತ್ತಿನಲ್ಲೇ ಅತಿ ಸುಂದರ ಕಸೂತಿ ಆಗುತ್ತದೆ. ಇದನ್ನು ನಾನು ರಾಜನಿಗೆ ಉಡುಗೊರೆ ಕೊಡುತ್ತೇನೆ" ಎಂದು ಹೇಳಿದನು.

ಹಕ್ಕಿ ಬೇಸರದಿಂದ ಮುಂದಕ್ಕೆ ಹಾರಿತು. ಹಾರುತ್ತಾ ಹಾರುತ್ತಾ ಸಾಗುತ್ತಿರುವಾಗ ಒಂದು ಜಾಗದಲ್ಲಿ ಪಾರಿವಾಳಗಳ ಗುಂಪು ಕಾಣಿಸಿತು. ಅಲ್ಲಿ ಹೆಂಗಸೊಬ್ಬಳು ಪಾರಿವಾಳಗಳಿಗೆ ಕಾಳು ಹಾಕುತ್ತಿದ್ದಳು. ಇದನ್ನು ನೋಡಿದ ಹಕ್ಕಿಗೆ ಬಹಳ ಸಂತೋಷವಾಯಿತು. ಅದು 'ಈಕೆಗೆ ಪ್ರಾಣಿ ಪಕ್ಷಿಗಳೆಂದರೆ ತುಂಬಾ ಪ್ರೀತಿ ಎನಿಸುತ್ತದೆ. ಈ ಹೂವನ್ನು ನಾನು ಈಕೆಗೆ ಕೊಡುವೆನು' ಎಂದು ಯೋಚಿಸಿತು.



ಹಕ್ಕಿ ಕೆಳಗೆ ಬರುವಾಗ ಆ ಹೆಂಗಸು ಅದನ್ನು ನೋಡಿ "ನಿನ್ನ ಹತ್ತಿರ ತುಂಬ ಸುಂದರವಾದ ಹೂವಿದೆ. ಆ ಹೂವು ನನಗೆ ಕೊಡು, ಅದರಿಂದ ದೇವರನ್ನು ಪೂಜಿಸಿದರೆ ನನ್ನ ಎಲ್ಲಾ ಆಸೆಗಳು ಈಡೇರುತ್ತವೆ" ಎಂದು ಹೇಳಿದಳು.



ಹಕ್ಕಿ ಮತ್ತೆ ಬೇಸರದಿಂದ ಮುಂದಕ್ಕೆ ಹಾರಿತು. ಹಾರುತ್ತಾ ಹಾರುತ್ತಾ ಮುಂದೆ ಸಾಗುತ್ತಿರುವಾಗ ಸ್ವಲ್ಪ ದೂರದಲ್ಲಿ ಪುಟ್ಟ ಲಾಲಿ ಕಣ್ಣಿಗೆ ಬಿದ್ದಳು. ಅವಳ ತಲೆ ಮೇಲೆ ನೀರಿನ ಕೊಡ ಇತ್ತು. ಹಕ್ಕಿ ಏನನ್ನು ಯೋಚಿಸದೆ ಬಂದು ಹುಡುಗಿಯ ತಲೆಗೆ ಹೂವನ್ನು ಇಟ್ಟಿತು.



ಹುಡುಗಿ ಆಶ್ಚರ್ಯದಿಂದ "ಹೂವು! ನನಗಾ?" ಎಂದು ಕೇಳಿದಳು. ಅದಕ್ಕೆ ಉತ್ತರವಾಗಿ ಹಕ್ಕಿ "ಹೌದು. ನಿನಗೆ! ನಿನ್ನ ಪರಿಶ್ರಮಕ್ಕೆ! ನಿನ್ನ ಪರಿಶ್ರಮ ಈ ಹೂವಿನಷ್ಟೇ ಸುಂದರವಾಗಿದೆ" ಎಂದು ಹೇಳಿತು.

– ಸುಷ್ಮಿತಾ ಬ್ಯಾನರ್ಜಿ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಸಾವಿರ ಬಕೇಟ್ ನೀರು

ಯುಕಿಯೋ ಸಮುದ್ರ ತೀರದಲ್ಲಿ ಅಲೆಗಳನ್ನು ನೋಡುತ್ತಾ ನಿಂತು ಕೊಂಡಿದ್ದನು. ಅಲೆಗಳು ಬಂದು ಅವನ ಪಾದವನ್ನು ಮುಟ್ಟಿ ಮುಟ್ಟಿ ಹಿಂದೆ ಹೋಗುತ್ತಿದ್ದವು.

ಆಗ ಅವನು ಬಂಡೆಗಳ ಮಧ್ಯೆ ಸಿಕ್ಕಿಕೊಂಡಿರುವ ತಿಮಿಂಗಿಲವನ್ನು ನೋಡಿದನು. ಅದು ತನ್ನ ದಪ್ಪ ಬಾಲವನ್ನು 'ಧೊಪ್! ಧೊಪ್!' ಎಂದು ನೀರಿಗೆ ಹೊಡೆಯುತ್ತಾ ಇತ್ತು. ಭಯದಿಂದ ಕಣ್ಣುಗಳನ್ನು ಆಕಡೆ ಈಕಡೆ ಹೊರಳಿಸಿ ನೋಡುತ್ತಿತ್ತು.





ಅದನ್ನು ನೋಡಿದ ಯುಕಿಯೋ "ಅಯ್ಯೋ! ನೀನು ಈ ರೀತಿ ಇರಲು ಆಗುವುದಿಲ್ಲ ಅಲ್ಲವೇ? ಇರು, ನಾನು ನಿನಗೆ ಸಹಾಯ ಮಾಡುತ್ತೇನೆ" ಎಂದು ಸಮುದ್ರದ ಕಡೆಗೆ ಓಡಿದನು. ಸಮುದ್ರದ ನೀರನ್ನು ಬಕೇಟಿನಲ್ಲಿ ತುಂಬಿ ತಂದು ತಿಮಿಂಗಿಲದ ತಲೆಯ ಮೇಲೆ ಸುರಿದನು.

ಬಿಸಿಲು ಜಾಸ್ತಿ ಆಗುತ್ತಿತ್ತು. "ನೀನು ಎಷ್ಟು ದೊಡ್ಡದಾಗಿರುವೆ. ಬೇಜಾರು ಮಾಡಿಕೊಳ್ಳಬೇಡ. ನಾನು ಒಂದು ಸಾವಿರ ಬಕೇಟ್ ನೀರು ಹಾಕಿದ ಮೇಲೆಯೇ ಕೆಲಸ ನಿಲ್ಲಿಸುವುದು" ಎಂದನು ಯುಕಿಯೋ.

ಪ್ರತಿ ಬಾರಿ ನೀರು ಹಾಕುವಾಗಲು ಮೂರು. . ನಾಲ್ಕು. . ಎಂದು ಲೆಕ್ಕ ಇಡುತ್ತಿದ್ದನು. "ನಾಲ್ಕು ಬಕೇಟ್ ನೀರು ತಲೆಯ ಮೇಲೆ, ಮೂರು ಬಕೇಟ್ ನೀರು ಬೆನ್ನ ಮೇಲೆ, ನಾಲ್ಕು ಬಕೇಟ್ ನೀರು ಬಾಲದ ಮೇಲೆ" ಎಂದು ತಿಮಿಂಗಿಲದ ಮೈ ತುಂಬಾ ನೀರು ಹಾಕುತ್ತಾ ಇದ್ದನು.

ಹೀಗೆ ಹಾಕುತ್ತಾ ಹಾಕುತ್ತಾ ಯುಕಿಯೋಗೆ ಸುಸ್ತಾಗಿ ಬಿಟ್ಟಿತು. ಏದುಸಿರು ಬಿಡುತ್ತಾ ಒಂದು ಕ್ಷಣ ನಿಂತನು. ತಿಮಿಂಗಿಲದ ಕಣ್ಣುಗಳನ್ನು ನೋಡಿದನು. ತಕ್ಷಣ ಆತನಿಗೆ ತಾನು ಕೊಟ್ಟ ಮಾತು ನೆನಪಿಗೆ ಬಂತು.





ಬಕೇಟ್ ತೆಗೆದುಕೊಂಡು ಮತ್ತೆ ಓಡಿದನು. ಎಷ್ಟು ಬಕೇಟ್ ಹಾಕಿದೆ ಎನ್ನುವುದು ಆತನಿಗೆ ಮರೆತು ಹೋಗಿತ್ತು. ನೀರನ್ನು ತಂದು ತಿಮಿಂಗಿಲದ ಮೇಲೆ ಹಾಕುತ್ತಲೇ ಇದ್ದನು. ಅವನಿಗೆ ನಡೆಯಲು ಆಗುತ್ತಿರಲಿಲ್ಲ. ತಟ್ಟಾಡುತ್ತಿದ್ದನು.

ಅಷ್ಟರಲ್ಲಿ ಯುಕಿಯೋ ತಾತ ಊರಿನ ಜನರನ್ನು ಕರೆದುಕೊಂಡು ಅಲ್ಲಿಗೆ ಬಂದರು. ಅವನನ್ನು ಎತ್ತಿಕೊಂಡರು. “ಸಾಕು! ನೀನು ತುಂಬಾ ಕೆಲಸ ಮಾಡಿದೆ. ಇನ್ನು ನಾವು ಮಾಡುತ್ತೇವೆ” ಎಂದು ಅವನನ್ನು ಒಂದು ಬಂಡೆಯ ನೆರಳಿನಲ್ಲಿ ಮಲಗಿಸಿದರು.



ಜನರೆಲ್ಲರು ಕೈಗೆ ಸಿಕ್ಕಿದ ಪಾತ್ರೆಗಳಲ್ಲಿ ನೀರನ್ನು ತುಂಬಿ ತಂದು ತಿಮಿಂಗಿಲದ ಮೇಲೆ ಸುರಿಯುತ್ತಿದ್ದರು. ಕೆಲವರು ತಮ್ಮ ಬಟ್ಟೆಗಳನ್ನೇ ಒದ್ದೆ ಮಾಡಿ ಅದರ ಮೇಲೆ ಹಾಕುತ್ತಿದ್ದರು.

ಸಮಯ ಸರಿದಂತೆ ದೊಡ್ಡ ದೊಡ್ಡ ಅಲೆಗಳು ಬರತೊಡಗಿದವು. ತಿಮಿಂಗಿಲದ ಬಾಲವನ್ನು ಅಲೆಗಳಲ್ಲಿ ಮುಳುಗಿಸಿದರು. ಒಂದೊಂದು ಅಲೆ ಬಂದು ಬಡಿದಾಗಲು ತಿಮಿಂಗಿಲ ಸ್ವಲ್ಪ ಸ್ವಲ್ಪ ಅಲುಗಾಡುತ್ತಿತ್ತು. ಆಗ ಒಂದು ದೊಡ್ಡ ಅಲೆ ಬಂದು ಅದನ್ನು ಬಂಡೆಗಳ ಮಧ್ಯದಿಂದ ಬಿಡಿಸಿತು.

ಒಂದು ಕ್ಷಣ ಅದು ಅಲುಗಾಡದಂತೆ ಇತ್ತು. ನಂತರ ಬಾಲವನ್ನು ಒಂದು ಬಾರಿ ಬಡಿಯಿತು. ಈಜುತ್ತಾ ಸಮುದ್ರದ ಒಳಗೆ ಹೋಯಿತು.

ತಿಮಿಂಗಿಲ ದೂರ ಹೋಗಿ ನೀರಿನಲ್ಲಿ ಮರೆಯಾಗುವುದನ್ನು ಎಲ್ಲರು ನೋಡುತ್ತಾ ನಿಂತಿದ್ದರು. ಆಗ ಯುಕಿಯೋ ಬಂಡೆಯ ನೆರಳಿನಲ್ಲಿ ನಿದ್ರಿಸುತ್ತಿದ್ದನು.

ಮೂಲ: ಜಪಾನಿನ ಕಥೆ



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಒಂದು ಅಕ್ಕಿ ಕಾಳು

ಒಂದಾನೊಂದು ಕಾಲದಲ್ಲಿ ಒಂದು ನಾಡಿನಲ್ಲಿ ಇದ್ದ ಜನರೆಲ್ಲ ತಾವು ಬೆಳೆದ ಭತ್ತದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ರಾಜನಿಗೆ ಕೊಡುತ್ತಾ ಇದ್ದರು. ಇದೇ ರೀತಿ ಹಲವು ವರ್ಷಗಳು ಕಳೆದವು.

ಒಮ್ಮೆ ತುಂಬಾ ಬರಗಾಲ ಬಂದಿತು. ಜನರಿಗೆ ತಿನ್ನಲು ಅಕ್ಕಿ ಇರಲಿಲ್ಲ. ಮಂತ್ರಿಗಳು "ರಾಜರೇ! ಗೋದಾಮನ್ನು ತೆರೆದು ಅದರಲ್ಲಿ ಇರುವ ಅಕ್ಕಿಯನ್ನು ಜನರಿಗೆ ಕೊಡೋಣವೇ?" ಎಂದು ಕೇಳಿದನು.

ಅದಕ್ಕೆ ರಾಜನು "ಈ ಬರಗಾಲ ಎಷ್ಟು ಕಾಲ ಇರುವುದೋ ಗೊತ್ತಿಲ್ಲ. ಅರಮನೆಯಲ್ಲಿ ಆಗಾಗ್ಗೆ ಹಬ್ಬದೂಟ ಮಾಡ ಬೇಕಾಗುವುದು. ಆದ್ದರಿಂದ ಗೋದಾಮಿನಲ್ಲಿ ಅಕ್ಕಿ ಇರಲಿ" ಎಂದು ಹೇಳಿದನು.

ಒಂದು ದಿನ ಅರಮನೆಯಲ್ಲಿ ವಿಶೇಷ ಅಡುಗೆ ಮಾಡಲು ಗೋದಾಮಿನಿಂದ ಅಕ್ಕಿ ಚೀಲಗಳನ್ನು ಆನೆಗಳ ಮೇಲೆ ತೆಗೆದುಕೊಂಡು ಹೋಗುತ್ತಿದ್ದರು.




ದಾರಿಯಲ್ಲಿ ರಾಣಿ ಎನ್ನುವ ಚಿಕ್ಕ ಹುಡುಗಿ ಒಂದು ಚೀಲದಿಂದ ಅಕ್ಕಿ ಕೆಳಗೆ ಬೀಳುತ್ತಿರುವುದನ್ನು ಗಮನಿಸಿದಳು. ಬೀಳುವ ಅಕ್ಕಿಗೆ ತನ್ನ ಲಂಗವನ್ನು ಹರಡಿ ಹಿಡಿದುಕೊಂಡು ಆನೆಯ ಜೊತೆ ಹೆಜ್ಜೆ ಹಾಕಿದಳು.

ಅರಮನೆ ಬಾಗಿಲಿಗೆ ಬಂದ ತಕ್ಷಣ ಕಾವಲುಗಾರರು ರಾಣಿಯನ್ನು ವಿಚಾರಿಸಿದರು. "ಚೀಲದಿಂದ ಅಕ್ಕಿ ಬೀಳುತ್ತಾ ಇತ್ತು. ಅದನ್ನು ನಾನು ರಾಜನಿಗೆ ಕೊಡಲು ಬಂದಿರುವೆನು" ಎಂದಳು.

ರಾಣಿಯ ಪ್ರಾಮಾಣಿಕತೆ ಬಗ್ಗೆ ಕೇಳಿ ರಾಜನು ಅವಳನ್ನು ಒಳಗೆ ಕರೆದನು. "ನಾನು ನಿನಗೆ ಉಡುಗೊರೆ ಕೊಡಲು ಇಷ್ಟ ಪಡುವೆನು. ನಿನಗೆ ಏನು ಬೇಕು ಕೇಳು" ಎಂದನು.

ರಾಣಿ "ನನಗೆ ಉಡುಗೊರೆ ಏನೂ ಬೇಡ. ನೀವು ಇಷ್ಟಪಟ್ಟು ಕೊಡುವುದಾದರೆ ಒಂದೇ ಒಂದು ಅಕ್ಕಿ ಕಾಳು ಸಾಕು" ಎಂದಳು.

ರಾಜ ಆಶ್ಚರ್ಯದಿಂದ ಅವಳನ್ನು ನೋಡುತ್ತಾ "ನಾನೊಬ್ಬ ರಾಜ. ನನ್ನ ಘನತೆಗೆ ತಕ್ಕಂತೆ ನಿನಗೆ ಏನಾದರು ಉಡುಗೊರೆ ಕೊಡಲು ಬಯಸುವೆನು. ಏನಾದರು ಕೇಳು" ಎಂದನು.




ರಾಣಿ "ಸರಿ! ನನಗೆ ಈ ದಿನ ಒಂದು ಅಕ್ಕಿ ಕಾಳು ಕೊಡಿ. ನಾಳೆ ಎರಡು ಅಕ್ಕಿ ಕಾಳು ಕೊಡಿ. ನಾಡಿದ್ದು ನಾಲ್ಕು ಅಕ್ಕಿ ಕಾಳು, ಈ ರೀತಿ ಮುವತ್ತು ದಿನ ಪ್ರತಿದಿನ ಹಿಂದಿನ ದಿನದ ಎರಡರಷ್ಟು ಅಕ್ಕಿ ಕಾಳು ಕೊಡಿ" ಎಂದಳು.

ರಾಜನಿಗೆ ಇದೊಂದು ದೊಡ್ಡ ವಿಷಯ ಎನಿಸಲಿಲ್ಲ. ತಕ್ಷಣ ಒಪ್ಪಿಕೊಂಡನು. ಚಿಕ್ಕ ಹುಡುಗಿಗೆ ಆ ದಿನ ಒಂದು ಅಕ್ಕಿ ಕಾಳು ಕೊಡಲ್ಪಟ್ಟಿತು. ಮಾರನೆಯ ದಿನ ಎರಡು, ಅದರ ಮಾರನೆಯ ದಿನ ನಾಲ್ಕು, ಹತ್ತನೆಯ ದಿನ 512 ಅಕ್ಕಿಕಾಳುಗಳು ಕೊಡಲ್ಪಟ್ಟವು. ಇವು ಒಂದು ಕೈ ಅಳತೆಯಷ್ಟು ಇದ್ದವು.


ಹದಿನಾರನೆಯ ದಿನ ಅವಳಿಗೆ ಎರಡು ಬುಟ್ಟಿ ಅಕ್ಕಿ ಕೊಡಲ್ಪಟ್ಟಿತು. ಅದರಲ್ಲಿ 32,768 ಅಕ್ಕಿಕಾಳುಗಳು ಇದ್ದವು. 'ಈ ರೀತಿ ಎರಡರಷ್ಟು ಅಳತೆಯಲ್ಲಿ ಕೊಡುವ ವಿಧಾನದಿಂದ ನಾನು ಕೊಡುವುದಕ್ಕಿಂತ ಹೆಚ್ಚು ಕೊಡಬೇಕಾಗುತ್ತದೆ. ಆದರು ಪರವಾಗಿಲ್ಲ' ಎಂದು ರಾಜನು ಯೋಚಿಸಿದನು.

ಇಪ್ಪತ್ನಾಲ್ಕನೆಯ ದಿನ ಎಂಟು ಬುಟ್ಟಿಗಳಲ್ಲಿ 83,88,608 ಅಕ್ಕಿ ಕಾಳುಗಳು ಕೊಡಲ್ಪಟ್ಟವು. ಇಪ್ಪತ್ತೇಳನೆಯ ದಿನ ಅರವತ್ನಾಲ್ಕು ಬುಟ್ಟಿಗಳಲ್ಲಿ ಅಕ್ಕಿ ಕಾಳುಗಳನ್ನು ಮೂವತ್ತೆರಡು ಎತ್ತುಗಳ ಮೇಲೆ ರಾಣಿಯ ಮನೆಗೆ ಕಳುಹಿಸಲಾಯಿತು. ಅದರಲ್ಲಿ 6,71,08,804 ಅಕ್ಕಿ ಕಾಳುಗಳಿದ್ದವು.

'ಒಂದು ಅಕ್ಕಿ ಕಾಳಿನಿಂದ ಆರಂಭವಾಗಿ ಎರಡರಷ್ಟು ಅಳತೆಯಲ್ಲಿ ಆಯಿತಲ್ಲ' ಎಂದು ರಾಜನಿಗೆ ಆತಂಕ ಆರಂಭವಾಯಿತು.



ಮುವತ್ತನೆಯ ದಿನ ರಾಜನ ಗೋದಾಮು ಖಾಲಿ ಆಯಿತು. ಆ ದಿನ 256 ಆನೆಗಳ ಮೇಲೆ 53,68,70,912 ಅಕ್ಕಿಕಾಳುಗಳನ್ನು ರಾಣಿ ಮನೆಗೆ ಕಳುಹಿಸಲಾಯಿತು.



"ಇಷ್ಟೊಂದು ಅಕ್ಕಿಯನ್ನು ಏನು ಮಾಡುವೆ?" ಎಂದು ರಾಜನು ರಾಣಿಯನ್ನು ಕೇಳಿದನು.

"ಹಸಿದಿರುವ ಜನರಿಗೆ ಕೊಡುವೆನು. ನಿಮಗು ಒಂದು ಬುಟ್ಟಿ ಅಕ್ಕಿ ಕೊಡುವೆನು. ನಿಮಗೆ ಬೇಕಾದಷ್ಟು ಅಕ್ಕಿ ಕಾಳುಗಳನ್ನು ಮಾತ್ರ ಇಟ್ಟಕೊಳ್ಳುವೆ ಎಂದು ಮಾತು ಕೊಡುವಿರಾ?" ಎಂದಳು.

"ಸರಿ! ಹಾಗೆ ಮಾಡುವೆ" ಎಂದನು ರಾಜ.

ಮೂಲ: ಭಾರತದ ಜನಪದ ಕಥೆ

ಒಟ್ಟು ಮೂವತ್ತು ದಿನಗಳನ್ನು ಸೇರಿಸಿ ರಾಣಿಗೆ ಸಿಕ್ಕಿದ ಅಕ್ಕಿ ಕಾಳುಗಳನ್ನು ಎಣಿಸಿದರೆ 107,37,41,823 ಆಗುವುದು.

ಒಂದು ಕ್ಯಾಲೆಂಡರ್ ತೆಗೆದುಕೊಂಡು ರಾಣಿಗೆ ಪ್ರತಿದಿನ ಸಿಕ್ಕಿದ ಅಕ್ಕಿಯನ್ನು ಲೆಕ್ಕಹಾಕಿ, ಪ್ರತಿ ದಿನಾಂಕದ ಕೆಳಗೆ ಬರೆಯಿರಿ.

ಪ್ರತಿ ದಿನಾಂಕದ ಕೆಳಗೆ ಬರೆದ ಅಂಕಿಗಳನ್ನು ಸೇರಿಸಿದರೆ ರಾಣಿಗೆ ಸಿಕ್ಕಿದ ಒಟ್ಟು ಅಕ್ಕಿ ಕಾಳುಗಳ ಅಂಕೆಗೆ ಸಮ ಆಗಿರುವುದು.

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು



ನುಣ್ಣನೆಯ ಕಲ್ಲು

ಒಂದು ಪುಟ್ಟದಾದ ಕರಡಿಮರಿ ಪ್ರತಿದಿನ ನದಿಯ ಹತ್ತಿರ ನಡೆದಾಡಲು ಹೋಗುತ್ತಿತ್ತು. ದಾರಿಯಲ್ಲಿ ಸಿಗುವ ಕಲ್ಲುಗಳನ್ನು ತಂದು ಮನೆ ಪೂರ್ತಿ ಕಲ್ಲುಗಳ ರಾಶಿ ಮಾಡಿತ್ತು.

ಒಂದು ದಿನ ಅದಕ್ಕೆ ಒಂದು ನುಣ್ಣನೆಯ ಕಲ್ಲು ಸಿಕ್ಕಿತು. ಕರಡಿಮರಿ ಆ ಕಲ್ಲಿನ ಅಂದ ನೋಡುತ್ತಾ ಹೋಗುತ್ತಿತ್ತು. ಇದ್ದಕ್ಕಿದ್ದಂತೆ ಮಳೆ ಸುರಿಯಲು ಪ್ರಾರಂಭಿಸಿತು.

'ಈ ಮಳೆ ನಿಂತು ಹೋದರೆ ಚೆಂದ' ಎಂದು ಕರಡಿಮರಿ ಯೋಚಿಸಿತು. ಏನಾಶ್ಚರ್ಯ! ಮಳೆ ನಿಂತು ಹೋಯಿತು.




“ಓ! ಇದು ಒಂದು ಅತಿಶಯ ಕಲ್ಲು. ಈ ಕಲ್ಲು ನಮ್ಮ ಕೈಯಲ್ಲಿ ಇದ್ದರೆ ನಾವು ಅಂದುಕೊಂಡಿದ್ದು ನಿಜ ಆಗುವುದು. ಇದನ್ನು ಅಪ್ಪ ಅಮ್ಮನಿಗೆ ತೋರಿಸಿದರೆ ಅವರು ಆಶ್ಚರ್ಯಪಡುವರು” ಹೀಗೆ ಹೇಳಿಕೊಳ್ಳುತ್ತಾ ಕರಡಿಮರಿ ಮನೆಯ ಕಡೆಗೆ ಹೊರಟಿತು.

'ಅಯ್ಯೋ! ಎದುರಿಗೆ ಒಂದು ಸಿಂಹ!’ ಕರಡಿಮರಿ ನಡುಗಿತು. ತಟ್ಟನೆ ಕೈಯಲ್ಲಿದ್ದ ಕಲ್ಲು ನೆನಪಿಗೆ ಬಂದಿತು.

'ಈಗ ನಾನು ಬಂಡೆ ಆಗಿ ಬಿಟ್ಟರೆ. . .' ಎಂದು ಅಂದುಕೊಂಡಿದ್ದೇ ತಡ ಕರಡಿಮರಿ ಬಂಡೆ ಆಯಿತು. ಕಲ್ಲು ಪಕ್ಕದಲ್ಲೇ ಕೆಳಗೆ ಬಿದ್ದಿತು.





ಒಳ್ಳೆ ಉಪಾಯ! ಸಿಂಹದ ಕೈಯಿಂದ ತಪ್ಪಿಸಿಕೊಂಡಿತು. ಆದರೆ ಪುನಃ ಅದು ಕರಡಿಮರಿ ಆಗುವುದು ಹೇಗೆ?

ಕಲ್ಲು ಕೆಳಗೆ ಬಿದ್ದಿದೆ. ಅದನ್ನು ಕೈಯಲ್ಲಿ ಹಿಡಿದುಕೊಂಡು ಮನದಲ್ಲಿ ನೆನೆದರೆ ತಾನೇ ಕರಡಿಮರಿ ಆಗುವುದು.

ಕರಡಿಮರಿಯ ಅಪ್ಪ ಅಮ್ಮ 'ಕತ್ತಲಾಯಿತು. ಮರಿ ಇನ್ನು ಏಕೆ ಮನೆಗೆ ಬಂದಿಲ್ಲ?' ಎಂದು ದುಃಖದಿಂದ ಅಕ್ಕಪಕ್ಕ ವಿಚಾರಿಸಿದರು. ಯಾರು ಕರಡಿಮರಿ ನೋಡಿರಲಿಲ್ಲ.

ಹೀಗೆಯೆ ಹಲವು ದಿನಗಳು ಕಳೆದು ಹೋದವು. ಕರಡಿಮರಿ ಅಪ್ಪ ಅಮ್ಮ ನಿತ್ಯದಂತೆ ಅದನ್ನು ಹುಡುಕುತ್ತಾ ಹೊರಟಿದ್ದವು. ಸುತ್ತಿ ಸುತ್ತಿ ಸುಸ್ತಾಯಿತು. ಒಂದು ಬಂಡೆಯ ಪಕ್ಕ ಕುಳಿತವು.

ಆಗ ಬಂಡೆಯಾಗಿ ಬದಲಾಗಿದ್ದ ಕರಡಿಮರಿಗೆ ಖುಷಿ ಆಯಿತು. ಆದರೆ ಅಪ್ಪ ಅಮ್ಮನಿಗೆ ಅದರ ಗುರುತು ಸಿಗಲೇ ಇಲ್ಲ.

ಅಮ್ಮ ಕರಡಿ ಪಕ್ಕದಲ್ಲಿದ್ದ ಮಂತ್ರದ ಕಲ್ಲನ್ನು ತೆಗೆದುಕೊಂಡಿತು. 'ಆಹಾ! ನನ್ನ ಮರಿಗೆ ಕಲ್ಲುಗಳೆಂದರೆ ತುಂಬಾ ಇಷ್ಟ' ಎಂದು ಹೇಳಿಕೊಂಡಿತು. ಅದನ್ನು ಬಂಡೆಯ ಮೇಲೆ ಇಟ್ಟಿತು.

ಬಂಡೆಯಾಗಿ ಬದಲಾಗಿದ್ದ ಕರಡಿಮರಿಗೆ 'ಪುನಃ ತಾನು ಕರಡಿಮರಿ ಆದರೆ ಎಷ್ಟು ಚೆನ್ನಾಗಿರುವುದು' ಎನಿಸಿತು.

ಅಮ್ಮ ಕರಡಿ ಆ ಮಂತ್ರದ ಕಲ್ಲನ್ನು ಬಂಡೆ ಮೇಲೆ ಇಟ್ಟಿತ್ತು ಅಲ್ಲವೇ? ತಕ್ಷಣ ಬಂಡೆ ಕರಡಿಮರಿ ಆಯಿತು. ಅದನ್ನು ನೋಡಿ ಅಪ್ಪ ಅಮ್ಮನಿಗೆ ಖುಷಿಯೋ ಖುಷಿ.

ಅವು ಮರಿಯನ್ನು ಮೇಲೆತ್ತಿ
ಆಟ ಆಡಿಸಿದವು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


ಬೆಸ್ತ ಮತ್ತು ಭೂತ

ಕಡಲ ತೀರದ ಒಂದು ಗ್ರಾಮ. ಆ ಗ್ರಾಮದಲ್ಲಿ ಒಬ್ಬ ಬೆಸ್ತ ಇದ್ದನು. ಅವನು ದಿನಕ್ಕೆ ಮೂರು ಬಾರಿ ಮಾತ್ರ ಬಲೆ ಬೀಸುತ್ತಿದ್ದನು. ಆಗ ಬಲೆಯಲ್ಲಿ ಸಿಗುವ ಮೀನುಗಳನ್ನು ಮಾರಿ ಜೀವನ ನಡೆಸುತ್ತಿದ್ದನು.

ನಿತ್ಯದಂತೆ ಒಂದು ದಿನ ಆತ ಮೀನು ಹಿಡಿಯಲು ಹೋದನು. ಬಲೆಯನ್ನು ಬೀಸಿದನು. ನೀರಿನಿಂದ ಹೊರಗೆ ಎಳೆಯುವಾಗ ಬಲೆ ಸುಲಭವಾಗಿ ಬರಲಿಲ್ಲ. ತುಂಬಾ ಕಷ್ಟದಿಂದ ಎಳೆದಾಗ ಅದರಲ್ಲಿ ಸತ್ತ ಪ್ರಾಣಿ ಇರುವುದನ್ನು ನೋಡಿದನು. ಅದನ್ನು ಹೊರ ತೆಗೆದು ಎಸೆದನು.

ಬೆಸ್ತ ಎರಡನೆಯ ಬಾರಿ ಬಲೆ ಬೀಸಿದನು. "ಈ ಬಾರಿಯಾದರು ಒಳ್ಳೆಯ ಮೀನು ಸಿಗಲಿ" ಎಂದು ದೇವರನ್ನು ಪ್ರಾರ್ಥಿಸಿದನು.

ಎರಡನೆಯ ಬಾರಿಯೂ ಕಷ್ಟಪಟ್ಟು ಬಲೆ ಹೊರಗೆ ಎಳೆದನು. ಆಗ ಬಲೆಯಲ್ಲಿ ದೊಡ್ಡ ಮಡಕೆ ಇತ್ತು. ಆ ಮಡಕೆ ಪೂರ್ತಿ ಕಲ್ಲು, ಮಣ್ಣು, ಕನ್ನಡಿ ಚೂರುಗಳು ಇದ್ದವು.




'ಅಯ್ಯೋ ದೇವರೆ! ಇದೆಂತಹ ಪರೀಕ್ಷೆ. ಒಂದು ಮೀನು ಸಿಗಲಿಲ್ಲ' ಎಂದು ಚಿಂತಿಸುತ್ತಾ ಮೂರನೆಯ ಬಾರಿ ಬಲೆ ಹಾಕಿ ಎಳೆದನು. ಆಗಲು ಬಲೆ ಎಳೆಯುವಾಗ ಭಾರವಾಗಿತ್ತು. ಹೊರಗೆ ತೆಗೆದು ನೋಡಿದನು.

"ಅರೆ! ಇದೇನು! ಬಲೆಯಲ್ಲಿ ಚಿಕ್ಕ ಹಿತ್ತಾಳೆ ಜಾಡಿ ಇದೆ. ಇದನ್ನು ಮಾರಿಯಾದರು ಇಂದಿನ ಊಟಕ್ಕೆ ದಾರಿ ಮಾಡಿಕೊಳ್ಳಬೇಕು" ಎಂದು ಹೇಳುತ್ತಾ ಬೇಸರದಿಂದ ಜಾಡಿ ಮುಚ್ಚಳ ತೆರೆದನು. ಒಳಗೇನು ಇರಲಿಲ್ಲ.

ಆದರೆ ಇದ್ದಕ್ಕಿದ್ದಂತೆ ಅದರಿಂದ ದಟ್ಟವಾದ ಕಪ್ಪು ಹೊಗೆ ಹೊರಟಿತು. ಮೆಲ್ಲಮೆಲ್ಲಗೆ ಹೊರಟ ಹೊಗೆ ಮೇಲಕ್ಕೆ ಹೋಗಿ ಆಕಾಶವನ್ನು ಮುಟ್ಟಿತು. ನಂತರ ಅದು ಭೂತದ ಆಕಾರ ಆಯಿತು. ಆ ಭೂತದ ತಲೆ ಮೋಡವನ್ನು ಮುಟ್ಟುತ್ತಿತ್ತು. ಅದರ ಕಣ್ಣುಗಳು ವಜ್ರದಂತೆ ಹೊಳೆಯುತ್ತಿದ್ದವು. ಬಾಯಿ ತೆರೆದರೆ ಗುಹೆಯಂತೆ ಕಾಣುತ್ತಿತ್ತು. ನೋಡಿದರೆ ಭಯವಾಗುವಂತೆ ಇತ್ತು.

ಭಯಂಕರ ಭೂತ ನೋಡಿದ ಬೆಸ್ತನ ಕಾಲುಗಳು ನಡುಗ ತೊಡಗಿದವು. ಏನು ಮಾಡಬೇಕೆಂದು ತೋಚದೆ ಆತ ಶಿಲೆಯಂತೆ ನಿಂತನು.

ಬೆಸ್ತನನ್ನು ನೋಡಿದ ಭೂತ ಮಾತನಾಡ ತೊಡಗಿತು. "ಈಗ ನಾನು ನಿನ್ನನ್ನು ಸಾಯಿಸುವೆ" ಎಂದು ಹೇಳಿತು.





“ನನ್ನನ್ನು ಏಕೆ ಸಾಯಿಸುವೆ? ನಾನು ತಾನೆ ನಿನ್ನನ್ನು ಈ ಕಡಲಿನಿಂದ ಹೊರಗೆ ತೆಗೆದದ್ದು” ಎಂದನು ಬೆಸ್ತ.

“ನಾನು ನೂರಾರು ವರ್ಷಗಳಿಂದ ಇದೇ ಜಾಡಿಯೊಳಗೆ ಬಂಧಿಯಾಗಿ ಇರುವೆ. ನನ್ನನ್ನು ಯಾರು ಬಿಡುಗಡೆ ಮಾಡುವರೋ ಅವರಿಗೆ ಬೇಕಾದಷ್ಟು ಆಸ್ತಿ ಸಂಪತ್ತು ಕೊಡೋಣ ಎಂದು ಕೊಂಡಿದ್ದೆ. ಯಾರು ಬರಲಿಲ್ಲ. ಈ ರೀತಿ ನಾನ್ನೂರು ವರ್ಷಗಳು ಕಳೆದು ಹೋದವು. ನಂತರ 'ನನ್ನನ್ನು ಈ ಜಾಡಿಯಿಂದ ಬಿಡಿಸಿದವರಿಗೆ ಮೂರು ವರಗಳನ್ನು ಕೊಡೋಣ' ಎಂದುಕೊಂಡೆನು. ಆಗ ಸಹ ಯಾರು ಬರಲಿಲ್ಲ. 'ಇನ್ನು ಮುಂದೆ ಯಾರು ನನ್ನನ್ನು ಬಿಡಿಸುತ್ತಾರೋ ಅವರನ್ನು ಕೊಲ್ಲಬೇಕು' ಎಂದು ತೀರ್ಮಾನಿಸಿದೆ. ನೀನು ಬಿಡಿಸಿದ್ದರಿಂದ ನಿನ್ನನ್ನು ಸಾಯಿಸುವೆನು” ಎಂದಿತು ಭೂತ.

“ಇಂದೆಂತಹ ನ್ಯಾಯ? ಒಳ್ಳೆಯದನ್ನು ಮಾಡಿದವರಿಗೆ ಇಂತಹ ಶಿಕ್ಷೆ!” ಎಂದನು ಬೆಸ್ತ.

“ಹೌದು! ನನ್ನ ಸಮಯ ವ್ಯರ್ಥ ಮಾಡಬೇಡ” ಎನ್ನುತ್ತಾ ಭೂತ ಬೆಸ್ತನನ್ನು ಕೊಲ್ಲಲು ಮುಂದೆ ಬಂದಿತು.

'ಇದರಿಂದ ಹೇಗೆ ತಪ್ಪಿಸಿಕೊಳ್ಳುವುದು' ಎಂದು ಯೋಚಿಸಿದ ಬೆಸ್ತ "ನನಗೊಂದು ಸಂದೇಹ" ಎಂದನು.

"ಏನದು?" ಎಂದಿತು ಭೂತ. "ನೀನು ಆಕಾಶದೆತ್ತರ ಬೆಳೆದಿರುವೆ. ನಿನ್ನ ಕಾಲಿನ ಉಗುರು ಸಹ ಈ ಜಾಡಿಯೊಳಗೆ ಹೋಗುವುದಿಲ್ಲ. ಅಂದ ಮೇಲೆ ನೀನು ಹೇಗೆ ಇಷ್ಟು ವರ್ಷ ಈ ಜಾಡಿಯೊಳಗೆ ಇದ್ದೆ? ನೀನು ಸುಳ್ಳು ಹೇಳುತ್ತಿರುವೆ" ಎಂದನು.

ತಕ್ಷಣ ಭೂತ "ನೋಡು! ನಾನು ಹೋಗಿ ತೋರಿಸುತ್ತೇನೆ" ಎಂದು ಹೇಳಿ ತನ್ನ ಆಕಾರವನ್ನು ಚಿಕ್ಕದಾಗಿಸಿಕೊಂಡು ಜಾಡಿಯೊಳಗೆ ಹೋಯಿತು. ಕ್ಷಣದಲ್ಲಿ ಬೆಸ್ತ ಜಾಡಿಯನ್ನು ಬಿಗಿಯಾಗಿ ಮುಚ್ಚಿದನು.

"ಇನ್ನು ಸಾವಿರ ವರ್ಷಗಳಾದರೂ ನೀನು ಹೀಗೆ ಜಾಡಿಯಲ್ಲಿಯೇ ಇರು" ಎಂದು ಹೇಳುತ್ತಾ ಆ ಜಾಡಿಯನ್ನು ಎತ್ತಿ ಕಡಲಿನ ಒಳಗೆ ಎಸೆದನು.

ಮೂಲ: ಸಾವಿರದೊಂದು ಅರಬಿಯನ್ ಕಥೆಗಳು



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಜ್ಞಾನವೇ ಸಂಪತ್ತು

ಒಂದು ಊರಿನಲ್ಲಿ ಮೂವರು ಸಹೋದರರು ಇದ್ದರು. ಅವರು ತುಂಬಾ ಬುದ್ಧಿವಂತರಾಗಿದ್ದರು. ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಅವರು ಹಲವಾರು ನಾಡುಗಳನ್ನು ಸುತ್ತುತ್ತಾ ದೀರ್ಘ ಪ್ರಯಾಣ ಮಾಡುತ್ತಿದ್ದರು.

ಒಂದು ದಿನ ಅವರು ಒಂದು ಊರಿನ ಸಮೀಪಕ್ಕೆ ಬಂದಾಗ ಎದುರಿಗೆ ಒಬ್ಬ ಸಿಪಾಯಿ ಏನನ್ನೋ ಹುಡುಕುತ್ತಾ ಬರುವುದು ಕಾಣಿಸಿತು.

ಸಹೋದರ 1: ಅಯ್ಯಾ! ತಾವು ಒಂಟೆ ಹುಡುಕುತ್ತಿರುವಿರಾ?
ಸಹೋದರ 2: ಅದಕ್ಕೆ ಎಡಗಡೆ ಕಣ್ಣು ಕಾಣುವುದಿಲ್ಲವೆ?
ಸಹೋದರ 3: ಅದರ ಮೇಲೆ ಮಗು ಒಂದು ಸವಾರಿ ಮಾಡುತ್ತಿದೆಯೇ?



ಸಿಪಾಯಿ : ನನ್ನ ಒಂಟೆಯ ಬಗ್ಗೆ ಎಲ್ಲ ವಿವರವು ನಿಮಗೆ ಗೊತ್ತಿದೆಯಲ್ಲ! ಆ ಒಂಟೆ ನಿಮ್ಮ ಬಳಿಯೇ ಇರಬೇಕು.

ಸಹೋದರ 1 : ಇಲ್ಲ! ನಾವು ನಿಮ್ಮ ಒಂಟೆಯನ್ನು ನೋಡೇ ಇಲ್ಲ.

ಸಿಪಾಯಿ : ಹಾಗಾದರೆ ನನ್ನ ಒಂಟೆಯ ವಿವರ ನಿಮಗೆ ಹೇಗೆ ಗೊತ್ತಾಯಿತು? ಬನ್ನಿ, ನಮ್ಮ ನಾಯಕನ ಬಳಿಗೆ ಹೋಗೋಣ.

[ನಾಲ್ವರು ನಾಯಕನ ಬಳಿಗೆ ಹೋದರು. ಸಿಪಾಯಿ ನಡೆದ ಎಲ್ಲವನ್ನು ಹೇಳಿದನು.]

ನಾಯಕ : ನಮ್ಮ ಸಿಪಾಯಿ ನಿಮ್ಮ ಬಳಿ ಏನನ್ನು ಕೇಳಲಿಲ್ಲ. ಆದರು ನೀವೇ ಎಲ್ಲ ವಿವರಗಳನ್ನು ಹೇಳಿರುವಿರಿ ಅದು ಹೇಗೆ ಸಾಧ್ಯ?

ಮೂವರು : ನಮ್ಮ ಜ್ಞಾನದಿಂದ ಊಹೆ ಮಾಡಿ ಹೇಳಿದೆವು. [ಎಲ್ಲರು ಗೇಲಿ ಮಾಡಿ ನಕ್ಕರು]

ನಾಯಕ : ಹೌದಾ! ಹಾಗಾದರೆ ನಿಮ್ಮ ಜ್ಞಾನವನ್ನು ಪರೀಕ್ಷಿಸಲೇ?

[ನಾಯಕ ತನ್ನ ಜನರನ್ನು ಕರೆದು, ಅವರ ಕಿವಿಯಲ್ಲಿ ಗುಟ್ಟಾಗಿ ಏನೋ ಹೇಳಿದನು. ಆತನ ಜನರು ಹೊರಗೆ ಹೋಗಿ ಒಂದು ಪೆಟ್ಟಿಗೆಯನ್ನು ತಂದರು. ಮೂವರು ಸಹೋದರರು ಆ ಜನರ ಓಡಾಟವನ್ನು ಎಚ್ಚರಿಕೆಯಿಂದ ಗಮನಿಸಿದರು.]

ನಾಯಕ : ಈ ಪೆಟ್ಟಿಗೆ ಒಳಗೆ ಏನು ಇದೆ ಎಂದು ಹೇಳಿ ನೋಡೋಣ?

ಸಹೋದರ 1 : ಪೆಟ್ಟಿಗೆ ಒಳಗೆ ಭಾರವಿಲ್ಲದ ಹಗುರವಾದ ಒಂದು ವಸ್ತು ಇದೆ.

ಸಹೋದರ 2 : ಆ ವಸ್ತು ದುಂಡಗೆ ಇದೆ.

ಸಹೋದರ 3 : ಅದು ಒಂದು ದಾಳಿಂಬೆ ಹಣ್ಣು.

ನಾಯಕ : ಶಹಭಾಸ್! ಈ ಪೆಟ್ಟಿಗೆ ಒಳಗೆ ಇರುವುದು ಇದೇ ಹಣ್ಣು ಎಂದು ಹೇಗೆ ಕಂಡು ಹಿಡಿದಿರಿ?

ಸಹೋದರ 1 : ನಿಮ್ಮ ಜನರು ಪೆಟ್ಟಿಗೆ ತರುವ ರೀತಿಯನ್ನು ಗಮನಿಸಿದೆನು. ಪೆಟ್ಟಿಗೆ ಒಳಗೆ ಭಾರವಾದುದು ಏನೂ ಇಲ್ಲ. ನಮ್ಮನ್ನು ಪರೀಕ್ಷಿಸಲು ಏನೋ ಇದೆ ಎಂದು ನಾನು ಯೋಚಿಸಿದೆನು.

ಸಹೋದರ 2 : ಪೆಟ್ಟಿಗೆ ಒಳಗೆ ಉರುಳಾಡುವ ಶಬ್ದ ಕೇಳಿದೆನು. ಆಗ ಅದು ದುಂಡನೆಯ ವಸ್ತು ಎಂದು ನನಗೆ ಅನಿಸಿತು.



ಸಹೋದರ 3 : ನಿಮ್ಮ ತೋಟದ ಗಿಡಗಳಲ್ಲಿ ದಾಳಿಂಬೆ ಹಣ್ಣು ತೂಗಾಡುತ್ತಾ ಇರುವುದನ್ನು ನಾನು ನೋಡಿದೆನು. ನಿಮ್ಮ ಜನರು ಪೆಟ್ಟಿಗೆ ಒಳಗೆ ಅದನ್ನೇ ಹಾಕಿರಬೇಕೆಂದು ನಾನು ಊಹೆ ಮಾಡಿದೆನು.

ನಾಯಕ : ನಿಜವಾಗಿಯು ನೀವು ತುಂಬ ಬುದ್ಧಿವಂತರು. ಈಗ ಹೇಳಿ ಒಂಟೆಯ ಬಗ್ಗೆ ನಿಮಗೆ ಹೇಗೆ ಗೊತ್ತಾಯಿತು?

ಸಹೋದರ 1 : ಹೆಜ್ಜೆ ಗುರುತುಗಳನ್ನು ನೋಡಿ, ಈ ದಾರಿಯಲ್ಲಿ ಒಂಟೆ ಹೋಗಿದೆ ಎಂದು ನಾನು ತಿಳಿದೆನು.

ಸಹೋದರ 2 : ದಾರಿ ಬಲಗಡೆಯ ಗಿಡ, ಹುಲ್ಲನ್ನು ಮೇಯಲಾಗಿತ್ತು. ಎಡಗಡೆಯ ಗಿಡಗಳು ಹಾಗೆಯೇ ಇದ್ದವು. ಅದಕ್ಕೆ ಆ ಒಂಟೆಗೆ ಎಡಗಣ್ಣು ಕಾಣುವುದಿಲ್ಲ ಎಂದು ನಾನು ಕಂಡು ಹಿಡಿದೆನು.

ಸಹೋದರ 3 : ಒಂದು ಜಾಗದಲ್ಲಿ ಒಂಟೆ ಕಾಲನ್ನು ಮಡಿಸಿಕೊಂಡ ಗುರುತು ಇತ್ತು. ಅಲ್ಲಿ ಒಂದು ಮಗುವಿನ ಹೆಜ್ಜೆ ಗುರುತು ಇತ್ತು.

ನಾಯಕ : ಆಹಾ! ನಿಮ್ಮ ಜ್ಞಾನ ನನ್ನನ್ನು ಆಶ್ಚರ್ಯಗೊಳಿಸಿದೆ. ನೀವು ಒಂಟೆಯನ್ನು ಕದ್ದಿಲ್ಲ. ಇನ್ನು ಮುಂದೆ ನೀವೇ ನನ್ನ ಸಲಹೆಗಾರರು.

ಮೂಲ: ಉಸ್‌ಬೆಕ್ ಜನಪದ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನಿನ್ನ ಭಾಗ! ನನ್ನ ಭಾಗ!

ರಾಮು ಮತ್ತು ಸೋಮು ಇಬ್ಬರು ಸಹೋದರರು. ಒಂದು ದಿನ ಸೋಮು "ನಮ್ಮ ಹತ್ತಿರ ಇರುವ ಹಸು, ಮಾವಿನ ಮರ ಮತ್ತು ಕಂಬಳಿ ಎಲ್ಲವನ್ನು ಸಮವಾಗಿ ಹಂಚಿಕೊಳ್ಳೋಣ" ಎಂದನು. ರಾಮು ಒಪ್ಪಿದನು. ಸೋಮು "ಹಸುವಿನ ಮುಂದಿನ ಭಾಗ ನಿನಗೆ, ಹಿಂದಿನ ಭಾಗ ನನಗೆ. ಮಾವಿನ ಮರದ ಕೆಳಗಿನ ಭಾಗ ನಿನಗೆ, ಅದರ ಮೇಲಿನ ಭಾಗ ನನಗೆ, ಕಂಬಳಿ ಹಗಲು ನಿನ್ನದು, ರಾತ್ರಿ ನನ್ನದು" ಕಪಟ ಬುದ್ಧಿಯಿಂದ ಹೇಳಿದನು.





ಅಯ್ಯೋ ಪಾಪದ ರಾಮು "ಸರಿ! ಹಾಗೆ ಆಗಲಿ"ಎಂದು ಒಪ್ಪಿದನು. ರಾಮು ಪ್ರತಿದಿನ ಹಸುವಿಗೆ ಹುಲ್ಲನ್ನು ಹಾಕುತ್ತಿದ್ದನು. ಸೋಮು ಹಾಲನ್ನು ಕರೆದು ಮಾರುತ್ತಿದ್ದನು. ರಾಮು ಪ್ರತಿದಿನ ಮಾವಿನ ಮರಕ್ಕೆ ನೀರನ್ನು ಹಾಕುತ್ತಿದ್ದನು. ಸೋಮು ಹಣ್ಣುಗಳನ್ನು ಕಿತ್ತು ಮಾರುತ್ತಿದ್ದನು. ಹಗಲು ರಾಮುವಿಗೆ ಕಂಬಳಿ ಬೇಕಾಗುತ್ತಿರಲಿಲ್ಲ. ಆದರೆ ರಾತ್ರಿ ಹೊತ್ತು ಸೋಮು ಕಂಬಳಿ ಹೊದ್ದು ಸುಖವಾಗಿ ನಿದ್ರಿಸುತ್ತಿದ್ದನು.

ಇದನ್ನೆಲ್ಲಾ ನೋಡುತ್ತಿದ್ದ ಒಬ್ಬ ವಯಸ್ಸಾದ ವ್ಯಕ್ತಿ ರಾಮುವನ್ನು ಕರೆದು ಅವನ ಕಿವಿಯಲ್ಲಿ ಏನೋ ಹೇಳಿದರು. ರಾಮು ನಗುತ್ತಾ ಮನೆಗೆ ಬಂದನು.

ಮಾರನೆಯ ದಿನ ರಾಮು ಕಂಬಳಿಯನ್ನು ನೀರಿನಲ್ಲಿ ಒದ್ದೆ ಮಾಡಿ ಇಟ್ಟನು. ಒದ್ದೆಯಾದ ಕಂಬಳಿಯನ್ನು ಸೋಮು ಹೊದ್ದುಕೊಳ್ಳಲು ಆಗಲಿಲ್ಲ. ರಾತ್ರಿಯಲ್ಲಾ ಚಳಿಯಲ್ಲಿ ನಡುಗಿದನು.

"ಯಾಕೆ ಹೀಗೆ ಮಾಡಿದೆ?" ಎಂದು ಕೋಪದಿಂದ ಕೇಳಿದನು. "ಕಂಬಳಿ ಹಗಲು ನನ್ನದು. ಅದನ್ನು ನಾನು ಏನು ಬೇಕಾದರು ಮಾಡುವೆ?" ಎಂದನು.

ಸೋಮುವಿನ ಬಳಿ ಹೇಳಲು ಉತ್ತರ ಇರಲಿಲ್ಲ. ಮರುದಿನ ಬೆಳಕು ಆಯಿತು. ಸೋಮು ಹಾಲು ಕರೆಯಲು ಕುಳಿತನು. ಆಗ ರಾಮು ಹಸುವಿನ ಹಗ್ಗವನ್ನು ಜಗ್ಗಿದನು. ಕೋಪಗೊಂಡ ಹಸು ಹಾಲು ಕರೆಯುತ್ತಿದ್ದ ಸೋಮುವನ್ನು ಜೋರಾಗಿ ಒದೆಯಿತು. ಸೋಮು ಹಾಲಿನ ಪಾತ್ರೆ ಜೊತೆ ಉರುಳಿ ಬಿದ್ದನು.

"ನಿನಗೇನಾದರು ಬುದ್ಧಿ ಇದೆಯಾ?" ಕೋಪದಿಂದ ಕೂಗಿದನು. "ಹಸುವಿನ ಮುಂದಿನ ಭಾಗ ನನ್ನದು. ಅದನ್ನು ಎಳೆದರೆ ನಿನಗೇಕೆ ಕೋಪ?" ಎಂದು ಕೇಳಿದನು ರಾಮು.



ಒಂದು ಮಾತನಾಡದಂತೆ ಸೋಮು ಸುಮ್ಮನೆ ಹೋಗಿ ಮಾವಿನ ಮರದ ಕೆಳಗೆ ಮಲಗಿದನು. ಸ್ವಲ್ಪ ಹೊತ್ತಿಗೆ ಹಾಗೆಯೇ ನಿದ್ರೆ ಬಂದಿತು. "ಕಟ್..ಕಟ್.." ಎಂದು ಮರ ಕಡಿಯುವ ಸದ್ದಿಗೆ ಎಚ್ಚರವಾಯಿತು.

ರಾಮು ಮಾವಿನ ಮರದ ಬುಡವನ್ನು ಕತ್ತರಿಸುತ್ತಿದ್ದನು. "ಏಯ್! ಏನು ಮಾಡುತ್ತಿರುವೆ?" ಕೂಗಿದನು ಸೋಮು. "ಮರದ ಕೆಳಭಾಗ ನನ್ನದು ತಾನೇ?" ಎಂದನು ರಾಮು.

ಇನ್ನು ಮುಂದಕ್ಕೆ ರಾಮುವನ್ನು ಮೋಸಗೊಳಿಸಲು ಸಾಧ್ಯವಿಲ್ಲ ಎಂದು ಸೋಮುವಿಗೆ ಗೊತ್ತಾಯಿತು. ಅಂದಿನಿಂದ ಹಾಲು ಮತ್ತು ಮಾವಿನ ಹಣ್ಣುಗಳನ್ನು ಮಾರಿದ ಹಣವನ್ನು ಇಬ್ಬರು ಸಮನಾಗಿ ಹಂಚಿಕೊಳ್ಳುತ್ತಿದ್ದರು. ಕಂಬಳಿಯನ್ನು ಒಂದು ದಿನ ರಾಮು, ಮತ್ತೊಂದು ದಿನ ಸೋಮು ಹೊದ್ದುಕೊಳ್ಳುತ್ತಿದ್ದರು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಅಳಿಲಿನ ಬೆನ್ನ ಮೇಲಿನ ಗೆರೆಗಳು

ಬಹಳ ಬಹಳ ಹಿಂದೆ ಲಂಕೆಯನ್ನು ರಾವಣ ಎನ್ನುವ ರಾಕ್ಷಸ ರಾಜನು ಆಳುತ್ತಿದ್ದನು. ಅವನಿಗೆ ಹತ್ತು ತಲೆಗಳಿದ್ದವು. ಅವನು ರಾಮನ ಹೆಂಡತಿ ಸೀತೆಯನ್ನು ವನವಾಸದಲ್ಲಿ ಇದ್ದಾಗ ಕಾಡಿನಿಂದ ಕದ್ದುಕೊಂಡು ಬಂದನು.

ರಾಮ ಸೀತೆಯನ್ನು ಬಿಡಿಸಲು ರಾವಣನ ಜೊತೆ ಯುದ್ಧಕ್ಕೆ ಸಿದ್ಧನಾದನು. ಕಪಿ ಸೈನ್ಯದ ಜೊತೆ ತುಂಬಾ ದೂರ ಪ್ರಯಾಣ ಮಾಡಿ ಕಡಲ ತೀರಕ್ಕೆ ಬಂದನು. ರಾವಣನ ನಾಡನ್ನು ಸೇರಬೇಕಾದರೆ ಆ ಕಡಲನ್ನು ದಾಟ ಬೇಕಿತ್ತು.

ಭೋರ್ಗರೆಯುತ್ತಿದ್ದ ಕಡಲನ್ನು ನಿಯಂತ್ರಿಸಲು ರಾಮನು ಮಂತ್ರಿಸಿದ ಬಾಣ ಒಂದನ್ನು ಬಿಟ್ಟನು. ತಕ್ಷಣ ಕಡಲ ರಾಜನು ಪ್ರತ್ಯಕ್ಷನಾಗಿ "ಕಡಲಿನಲ್ಲಿ ಹಲವು ರೀತಿ ಜೀವರಾಶಿಗಳಿವೆ. ಈ ಎಲ್ಲಾ ಜೀವಿಗಳನ್ನು ಕಾಪಾಡುವುದು ರಾಜನಾದ ನನ್ನ ಕರ್ತವ್ಯ. ಪ್ರಕೃತಿಯ ವಿರುದ್ಧ ಯುದ್ಧ ಮಾಡಿ ಗೆಲ್ಲಲು ಸಾಧ್ಯವಿಲ್ಲ. ಅದಕ್ಕೆ ಗಟ್ಟಿಯಾದ ಸೇತುವೆ ಕಟ್ಟಿ ಕಡಲನ್ನು ದಾಟಿ ಹೋಗಿ" ಎಂದನು.

ರಾಮನು ಕಪಿ ಸೈನ್ಯಕ್ಕೆ ದೊಡ್ಡ ದೊಡ್ಡ ಬಂಡೆಗಳಿಂದ ಒಂದು ಸೇತುವೆ ಕಟ್ಟಲು ಅಪ್ಪಣೆ ಮಾಡಿದನು. ಸಾವಿರಾರು ಕಪಿಗಳು ಕೆಲಸದಲ್ಲಿ ತೊಡಗಿದವು.




ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ಹೊತ್ತು ತರುತ್ತಿದ್ದವು. ಒಂದು ನಿಮಿಷವು ವಿಶ್ರಾಂತಿ ಪಡೆಯದೆ ಕೆಲಸದಲ್ಲಿ ತೊಡಗಿದ್ದವು.



ಈ ಮಧ್ಯೆ ಒಂದು ಅಳಿಲು ತನ್ನ ಬಾಯಲ್ಲಿ ಚಿಕ್ಕ ಚಿಕ್ಕ ಕಲ್ಲಿನ ಹರಳುಗಳನ್ನು ಕಚ್ಚಿಕೊಂಡು ಬರುತ್ತಿತ್ತು. ಬಂಡೆಗಳ ಮಧ್ಯೆ ಇಡುತ್ತಿತ್ತು. ಸರಸರನೆ ಮೇಲೆ ಕೆಳಗೆ ಓಡಾಡುತ್ತ ಕೆಲಸ ಮಾಡುತ್ತಿತ್ತು. ಇದನ್ನು ನೋಡಿದ ರಾಮನು 'ಈ ಚಿಕ್ಕ ಅಳಿಲು ಇಲ್ಲಿ ಏನು ಮಾಡುತ್ತಿದೆ?' ಎಂದು ಆಶ್ಚರ್ಯಪಟ್ಟನು.

ಅಳಿಲು ಸರಸರನೆ ಅಲ್ಲಿ ಇಲ್ಲಿ ಓಡಾಡುತ್ತಾ ಇರುವುದನ್ನು ನೋಡಿದ ಕಪಿಗಳಿಗೆ ಕೋಪ ಬಂದಿತು. "ನೀನು ಒಂದು ಪುಟ್ಟ ಪ್ರಾಣಿ. ಇಲ್ಲಿ ನಿನ್ನ ಅಗತ್ಯ ಇಲ್ಲ" ಎಂದು ಕೂಗಿದವು.

ಅಳಿಲು ಕತ್ತೆತ್ತಿ ನೋಡಿತು. "ನಾನು ಸೇತುವೆ ಕಟ್ಟಲು ನನ್ನ ಕೈಲಾದ ಸಹಾಯ ಮಾಡುತ್ತಿದ್ದೇನೆ" ಎಂದಿತು. ಕಪಿಗಳೆಲ್ಲ ಚಪ್ಪಾಳೆ ತಟ್ಟಿ ಗೇಲಿ ಮಾಡಿ ನಕ್ಕವು.



"ಇಂತಹ ಪೆದ್ದ ಪ್ರಾಣಿಯ ಮಾತನ್ನು ಇಲ್ಲಿಯವರೆಗೆ ಕೇಳೇ ಇರಲಿಲ್ಲ" ಎಂದವು. ಅಳಿಲು "ನನಗೆ ದೊಡ್ಡ ದೊಡ್ಡ ಕಲ್ಲು ಬಂಡೆಗಳನ್ನು ತರಲು ಆಗುವುದಿಲ್ಲ. ಚಿಕ್ಕ ಚಿಕ್ಕ ಕಲ್ಲು ಹರಳುಗಳನ್ನು ತರಲು ಆಗುವುದು. ಸೀತೆಯನ್ನು ಕಾಪಾಡಲು ನಾನು ಸಹಾಯ ಮಾಡಲು ಬಯಸುವೆ" ಎಂದು ಹೇಳಿತು.

ಕಪಿಗಳು ಅಳಿಲನ್ನು ಪಕ್ಕ ತಳ್ಳಿ ಕೆಲಸ ಮಾಡತೊಡಗಿದವು. ಆದರು ಅಳಿಲು ಚಿಕ್ಕ ಚಿಕ್ಕ ಕಲ್ಲು ಹರಳುಗಳನ್ನು ಕಚ್ಚಿ ತಂದು ತಂದು ಮೂಲೆಯಲ್ಲಿ ಗುಡ್ಡೆ ಮಾಡ ತೊಡಗಿತು. ಇದನ್ನು ನೋಡಿದ ಒಂದು ಕಪಿಗೆ ಸುಮ್ಮನಿರಲು ಆಗಲಿಲ್ಲ. ಕಿರಿಕಿರಿ ಮಾಡುವ ಅಳಿಲನ್ನು ಎತ್ತಿ ಮೇಲಕ್ಕೆ ಎಸೆಯಿತು.

ಅಳಿಲು "ರಾಮಾ!" ಎಂದು ಕೂಗಿತು. ಕೆಳಗೆ ಬೀಳುತ್ತಿದ್ದ ಅಳಿಲನ್ನು ರಾಮ ತನ್ನ ಕೈಗಳಲ್ಲಿ ಹಿಡಿದುಕೊಂಡನು.



ರಾಮ ಕಪಿಗಳನ್ನು ನೋಡಿ "ನೀವೆಲ್ಲ ಶಕ್ತಿವಂತರು. ಆದರೆ ನಿಮ್ಮಂತೆ ಶಕ್ತಿ ಇಲ್ಲದವರನ್ನು ಗೇಲಿ ಮಾಡಬೇಡಿ. ಪ್ರತಿಯೊಬ್ಬರಿಗು ಅವರದೆ ಆದ ಶಕ್ತಿ ಇರುತ್ತದೆ. ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಾರೆ. ಶರೀರದಲ್ಲಿನ ಶಕ್ತಿಗಿಂತ ಮನದಲ್ಲಿ ಇರುವ ಪ್ರೀತಿ ವಿಶ್ವಾಸ ಮುಖ್ಯ. ನಮಗೆ ಎಲ್ಲರ ಸಹಾಯವು ಬೇಕು" ಎಂದು ಹೇಳಿದನು.

"ದೊಡ್ಡ ದೊಡ್ಡ ಕಲ್ಲು ಬಂಡೆಗಳ ನಡುವೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಇಟ್ಟಾಗ ಸೇತುವೆ ಗಟ್ಟಿಯಾಗಿ ಇರುವುದು" ಎಂದಾಗ ಕಪಿಗಳು ತಮ್ಮ ತಪ್ಪನ್ನು ತಿಳಿದುಕೊಂಡವು.

ರಾಮನು ತನ್ನ ಬೆರಳುಗಳಿಂದ ಅಳಿಲಿನ ಬೆನ್ನನ್ನು ತಡವಿದನು. ಅದು ಮೂರು ಗೆರೆಗಳಾಯಿತು. ಆ ಮೂರು ಗೆರೆಗಳು ತಾನೇ ಇಂದಿಗು ಆಳಿಲುಗಳ ಬೆನ್ನ ಮೇಲೆ ಕಾಣುವುದು.



ಪಿ.ಸರಸ್ವತಿ ವಿ.ವಿಜಯಕಾಂತಿ Rajalakshmi Srinivasan ಅನುವಾದ : ಸುಗಂಧಿನಿ ಪುಷ್ಪ.ಎಂ


ಡಂ ಡಂ ನಗಾರಿ

ಡಂ ಡಂ, ಡಮ ಡಮ, ಡಂ ಡಂ, ಡಮ ಡಮ. . . ಜಗಲಿಯ ಮೇಲೆ ಕುಳಿತಿದ್ದ ರಾಜು ತಕ್ಷಣ ಎದ್ದು ನಿಂತನು. ಶಬ್ದ ಬಂದ ದಿಕ್ಕಿನತ್ತ ಓಡಿದನು. ಮುಂದಿನ ರಸ್ತೆಯಲ್ಲಿ ಒಂದು ಮೆರವಣಿಗೆ ಹೋಗುತ್ತಿತ್ತು.

ಸ್ವಲ್ಪ ಹೊತ್ತಿನ ನಂತರ ಅವನು ಕುಣಿಯುತ್ತಾ ಮನೆಗೆ ಬಂದನು. ಆಗ ಅವನ ಅಮ್ಮ ಸಂತೆಗೆ ಹೋಗಲು ಸಿದ್ಧರಾಗುತ್ತಿದ್ದರು. ರಾಜು "ಅಮ್ಮಾ! ಸಂತೆಯಿಂದ ನನಗೊಂದು ಚಿಕ್ಕ ನಗಾರಿ ತೆಗೆದುಕೊಂಡು ಬಾ" ಎಂದು ಹೇಳಿ ಕಳುಹಿಸಿದನು.


ಸಂತೆಯಲ್ಲಿ ಅಮ್ಮ ಎಂದಿನಂತೆ ಧಾನ್ಯಗಳನ್ನು ಮಾರಿದರು. ಮೊದಲಿಗೆ ರೊಟ್ಟಿ ಮಾಡಲು ಸ್ವಲ್ಪ ಹಿಟ್ಟು, ಉಪ್ಪು ಕೊಂಡುಕೊಂಡರು. ನಗಾರಿ ಕೊಳ್ಳಲು ಅವರ ಬಳಿ ಹಣವಿರಲಿಲ್ಲ. ಆದರೆ ನಗಾರಿ ಇಲ್ಲದೆ ಬರಿಗ್ಯೆಯಲ್ಲಿ ಮನೆಗೆ ಹೋಗಲು ಅವರಿಗೆ ಬಹಳ ದುಃಖವಾಯಿತು.

ಸಂತೆ ಮುಗಿಸಿ ಮನೆಗೆ ಬರುವಾಗ ದಾರಿಯಲ್ಲಿ ಮರದ ತುಂಡೊಂದು ಅವರ ಕಣ್ಣಿಗೆ ಬಿದ್ದಿತು. ಅದನ್ನು ತೆಗೆದುಕೊಂಡರು. ಮನೆಗೆ ಹೋದಾಗ ಮಗನಿಗೆ ಕೊಟ್ಟರು. ರಾಜು ಸ್ವಲ್ಪ ಹೊತ್ತು ಅದನ್ನು ತಿರುಗಿಸಿ ತಿರುಗಿಸಿ ನೋಡಿದನು. ನಂತರ ಮರದ ತುಂಡನ್ನು ತೆಗೆದುಕೊಂಡು ಆಟವಾಡಲು ಓಡಿದನು. ಓಡುವ ದಾರಿಯಲ್ಲಿ ಅಜ್ಜಿಯೊಂದು ಬೆರಣಿಯಿಂದ ಒಲೆ ಹೊತ್ತಿಸುತ್ತಿರುವುದನ್ನು ನೋಡಿದನು. ಆದರೆ ಬೆಂಕಿ ಹೊತ್ತಿಕೊಳ್ಳುತ್ತಿರಲಿಲ್ಲ.



ಬರಿ ಹೊಗೆ ತುಂಬಿಕೊಂಡಿತ್ತು. ಅಜ್ಜಿಯ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು. "ಅಜ್ಜಿ, ಏಕೆ ಅಳುತ್ತಿರುವೆ?" ಎಂದು ರಾಜು ಕೇಳಿದನು. ಅದಕ್ಕೆ ಅಜ್ಜಿ "ಅಳುತ್ತಿಲ್ಲಪ್ಪ. ಈ ಹಸಿ ಬೆರಣಿಯಿಂದ ಅಡುಗೆ ಮಾಡಲು ಆಗುತ್ತಿಲ್ಲ" ಎಂದರು.

"ಹೌದಾ! ನನ್ನ ಹತ್ತಿರ ಒಣಗಿದ ಮರದ ತುಂಡು ಇದೆ. ಇದರಿಂದ ಒಲೆ ಹೊತ್ತಿಸಿ" ಎಂದು ಹೇಳಿದನು ರಾಜು. ಅಜ್ಜಿ ಖುಷಿಯಿಂದ ಅವನಿಗೆ ಒಂದು ರೊಟ್ಟಿ ಕೊಟ್ಟರು. ರೊಟ್ಟಿ ತೆಗೆದುಕೊಂಡು ರಾಜು ಆನಂದದಿಂದ ನಡೆಯುತ್ತಾ ಹೊರಟನು. ದಾರಿಯಲ್ಲಿ ಕುಂಬಾರನ ಮಗು ಅಳುತ್ತಿರುವುದನ್ನು ನೋಡಿದನು.




"ಪಾಪು ಏಕೆ ಅಳುತ್ತಿದೆ?" ಎಂದು ಅದರ ಅಮ್ಮನನ್ನು ಕೇಳಿದನು. ಅಮ್ಮ "ಹಸಿವಿನಿಂದ ಅಳುತ್ತಿದೆ" ಎಂದರು. ತಕ್ಷಣ ರಾಜು "ನನ್ನ ಹತ್ತಿರ ರೊಟ್ಟಿ ಇದೆ ತಗೊ. ಇದನ್ನು ತಿನ್ನು" ಎಂದು ಮಗುವಿಗೆ ರೊಟ್ಟಿ ಕೊಟ್ಟನು. ಮಗು ಅಳುವುದನ್ನು ನಿಲ್ಲಿಸಿತು.

ಮಗುವಿನ ಅಮ್ಮ "ನೀನು ಚೆನ್ನಾಗಿರು, ತಗೋ ಈ ಮಡಕೆ ಇಟ್ಟುಕೊ" ಎಂದು ಹೇಳಿ ಆಶೀರ್ವದಿಸಿದರು. ಮಡಕೆ ಹಿಡಿದು ಹೊರಟ ರಾಜು ನದಿಯ ದಡಕ್ಕೆ ಬಂದನು.

ಅಲ್ಲಿ ಅಗಸನೊಬ್ಬ ತನ್ನ ಹೆಂಡತಿಯ ಬಳಿ "ಇದ್ದ ಒಂದು ಮಡಕೆಯು ಒಡೆದು ಹೋಯಿತಲ್ಲ. ಬಟ್ಟೆ ಒಗೆಯಲು ಬಿಸಿ ನೀರು ಕಾಯಿಸುವುದಕ್ಕೆ ಮಡಕೆ ಇಲ್ಲದಂತೆ ಆಯಿತು. ಬಟ್ಟೆ ಒಗೆಯುವುದು ಹೇಗೆ?" ಎಂದು ಮುಖ ಸಿಂಡರಿಸಿಕೊಂಡು ಹೇಳುತ್ತಿದ್ದನು.

ತಕ್ಷಣ ರಾಜು "ಈ ಮಡಕೆ ತೆಗೆದುಕೊಳ್ಳಿ" ಎಂದು ಹೇಳಿ ತನ್ನ ಬಳಿ ಇದ್ದ ಮಡಕೆಯನ್ನು ಕೊಟ್ಟನು. ಅಗಸ "ಧನ್ಯವಾದದ ಜೊತೆಗೆ ಉಲ್ಲನ್ ಅಂಗಿ ತೆಗೆದುಕೊ" ಎಂದು ರಾಜುಗೆ ಒಂದು ಉಲ್ಲನ್ ಅಂಗಿ ಕೊಟ್ಟನು. ಅಂಗಿ ಹಾಕಿಕೊಂಡ ರಾಜು ಅದರ ಅಂದವನ್ನು ನೋಡುತ್ತಾ ಸೇತುವೆ ದಾಟಿ ನಡೆದನು.



ಅಲ್ಲಿ ಸೇತುವೆಯ ತುದಿಯಲ್ಲಿ ಒಬ್ಬ ವ್ಯಕ್ತಿ ಮೈ ತುಂಬ ಬಟ್ಟೆ ಇಲ್ಲದೆ ನಡುಗುತ್ತಾ ಕುಳಿತಿದ್ದರು. ರಾಜು ಒಂದೆರಡು ನಿಮಿಷ ಯೋಚಿಸಿ, ನಂತರ ತನ್ನ ಬಳಿ ಇದ್ದ ಉಲ್ಲನ್ ಅಂಗಿಯನ್ನು ಆ ವ್ಯಕ್ತಿಗೆ ಕೊಟ್ಟನು.

"ನೀನು ತುಂಬ ಕರುಣಾಮಯಿ ಆಗಿರುವೆ ತಮ್ಮ! ನಿನಗೇನಾದರು ಕೊಡಬೇಕಲ್ಲ? ತಗೋ ನನ್ನ ಕುದುರೆಯನ್ನು ನೀನೇ ಇಟ್ಟುಕೋ" ಎಂದು ಹೇಳಿ ಅವರ ಬಳಿ ಇದ್ದ ಕುದುರೆಯನ್ನು ರಾಜುಗೆ ಕೊಟ್ಟರು.

ಕುದುರೆ ಜೊತೆ ಹೋಗುತ್ತಿದ್ದ ರಾಜು ಒಂದು ಮರದ ಕೆಳಗೆ ಮದುವೆ ಜನರ ಗುಂಪನ್ನು ನೋಡಿದನು. ಅವರೆಲ್ಲ ತುಂಬ ಚಿಂತೆಯಿಂದ "ಮುಹೂರ್ತದ ಸಮಯ ಮೀರುತ್ತಿದೆ. ಗಂಡಿನ ಮೆರವಣಿಗೆಗೆ ಕುದುರೆಯೇ ಇಲ್ಲ" ಎಂದು ಮಾತನಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿದ ರಾಜು "ಇದೋ, ಈ ಕುದುರೆಯನ್ನು ತೆಗೆದುಕೊಳ್ಳಿ" ಎಂದು ತನ್ನ ಕುದುರೆಯನ್ನು ತೋರಿಸಿದನು.

ಅಬ್ಬಬ್ಬ! ಅವರ ಮುಖಗಳಲ್ಲಿ ಅದೆಷ್ಟು ಆನಂದ! ರಾಜುವನ್ನು ನೋಡಿದ ಮದುವೆಯ ಗಂಡು "ನೀನು ಏನು ಬೇಕಾದರು ಕೇಳು. ಈಗಲೇ ಕೊಡುವೆ" ಎಂದನು.



"ನಿಮ್ಮ ಹಾಡುವ ಗುಂಪಿನವರ ಬಳಿ ಇರುವ ನಗಾರಿಯನ್ನು ಕೊಡಿಸಲು ಸಾಧ್ಯವೇ?" ಎಂದು ಕೇಳಿದರು.

"ಓ! ಧಾರಾಳವಾಗಿ" ಎಂದು ಹೇಳಿದ ಗಂಡು ಹಾಡುವ ಗುಂಪಿನ ಕಡೆ ನೋಡಿದ ತಕ್ಷಣ ನಗಾರಿ ರಾಜು ಕೈಯಲ್ಲಿತ್ತು. ಆಮೇಲೆ ಇನ್ನೇನು! ಮನೆಗೆ ಬರುವ ದಾರಿ ಉದ್ದಕ್ಕೂ ಡಂ ಡಂ, ಡಮ ಡಮ!


ಭಾರತದ ಜನಪದ ಕಥೆ (ಹಿಂದಿ)

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ






82 ರಗು ಮತ್ತು ತತಿಯಾ ಜಗಳ

ಗುಲಾಬಿ ಬಣ್ಣದ ಗುಲಾಬಿ ಹೂಗಳ ನಡುವೆ ರಗು ಎಂಬ ಮೊಲ ಏನನ್ನೋ ಕೆತ್ತುತ್ತಿತ್ತು. ಅದರ ಉದ್ದ ಉದ್ದ ಕಿವಿಗಳು ಹೊರಗಿನಿಂದ ಬೆಳ್ಳಗೆ ಇದ್ದು, ಒಳಗೆ ಗುಲಾಬಿ ಬಣ್ಣದಲ್ಲಿ ಇದ್ದುದರಿಂದ, ನೋಡಲು ಹೂಗಳ ದಳಗಳಂತೆ ಕಾಣುತ್ತಿದ್ದವು.



ಅದೇ ಸಮಯಕ್ಕೆ ತತಿಯಾ ಎಂಬ ಚಿಟ್ಟೆ ಹಾರಾಡುತ್ತಾ ಅಲ್ಲಿಗೆ ಬಂದಿತು. ರಗು ಕಿವಿಗಳು ಅದಕ್ಕೆ ಮುದ್ದು ಮುದ್ದಾದ ಹೂವಿನ ದಳಗಳಂತೆ ಕಂಡವು. ಅದು ಗುಲಾಬಿ ಬಣ್ಣದ ಮೇಲೆ ಹೋಗಿ ಕುಳಿತಿತು. ಕುಳಿತ ನಂತರ 'ಇದು ಹೂವಿನ ತರಹ ಇಲ್ಲ' ಎಂದು ಎನಿಸಿತು. ಅದರಲ್ಲಿ ಗುಲಾಬಿ ಹೂವಿನ ಪರಿಮಳ ಸಹ ಇರಲಿಲ್ಲ.

ತತಿಯಾಗೆ ಅಲ್ಲಿಂದ ಹಾರಿ ಹೋಗಬೇಕೆನಿಸಿತು. ಆದರೆ ಅದಕ್ಕೆ ಹಾರಲು ಆಗಲಿಲ್ಲ. ರಗುವಿನ ತೆಳ್ಳಗಿನ ಕಿವಿಯಲ್ಲಿ ತತಿಯಾ ರೆಕ್ಕೆಗಳು ಸಿಕ್ಕಿಕೊಂಡಿದ್ದವು. ಇದರಿಂದ ರಗುವಿಗೆ ಕಿವಿಯಲ್ಲಿ ನವೆ ಉಂಟಾಗಿ ಕಿರಿಕಿರಿ ಆಗತೊಡಗಿತು.





"ನನ್ನ ಕಿವಿಯೊಳಗೆ ಹೋಗಿರುವುದು ಯಾರು?" ರಗು ಕೇಳಿತು.

"ನಾನು ತತಿಯಾ" ಚಿಟ್ಟೆ ಹೇಳಿತು.

"ತತಿಯಾ, ನೀನು ನನ್ನ ಕಿವಿಯಿಂದ ಹೊರಗೆ ಬಾ" ರಗು ಹೇಳಿತು.

"ನೀನು ನನ್ನ ರೆಕ್ಕೆಗಳನ್ನು ಬಿಡು" ಚಿಟ್ಟೆ ಉತ್ತರಿಸಿತು.

"ತತಿಯಾ, ನೀನು ಹೋಗು."

"ನೀನು ನನ್ನ ರೆಕ್ಕೆಗಳನ್ನು ಬಿಡು."

"ನಾನು ಹೇಳುತ್ತಿದ್ದೇನೆ, ಹೋಗು"

"ಹೇಳುತ್ತಾ ಇದ್ದೇನೆ ರೆಕ್ಕೆ ಬಿಡು."

"ಹೋಗು."

"ರೆಕ್ಕೆ ಬಿಡು."

"ಏಕೆ ಕೇಳುತ್ತಾ ಇಲ್ಲ?"

"ಏಕೆ ಒಪ್ಪುತ್ತಾ ಇಲ್ಲ?"

"ಏಕೆ ಇಲ್ಲ?"

"ನೀನು ಏಕೆ ಇಲ್ಲ?"

"ನೀನು!"

"ನೀನು!"

ಇಬ್ಬರು ಜಗಳದಲ್ಲಿ ತೊಡಗಿದರು. ಸುತ್ತಮುತ್ತ ಇದ್ದ ಹಕ್ಕಿ ಮತ್ತು ಕೋತಿ ಬಂದವು. ನೋಡು ನೋಡುತ್ತಾ ಇದ್ದಂತೆ ಮುರ್ರಾ ಕೋಳಿ ಮತ್ತು ಬಾತುಕೋಳಿ ಸಹ ಬಂದವು.

“ಏನಾಯಿತು? ಏನಾಯಿತು?” ಎಲ್ಲವು ಕೇಳುತ್ತಿದ್ದವು.

“ತತಿಯಾ ಹೋಗುತ್ತಿಲ್ಲ” ರಗು ದೂರು ಹೇಳಿತು.

“ಅದು ನನ್ನ ರೆಕ್ಕೆಗಳನ್ನು ಬಿಡುತ್ತಿಲ್ಲ” ತತಿಯಾ ಹೇಳಿತು.


“ನೀನು ಹೊರಗೆ ಬರಬೇಕಾ?” ಮುರ್‍ರಾ ಕೇಳಿತು.


“ಹೌದು” ತತಿಯಾ ಹೇಳಿತು.

“ನಿನಗೂ ಅದೇ ಬೇಕಾಗಿರುವುದಾ?” ಮುರ್‍ರಾ ರಗುವನ್ನು ಕೇಳಿತು. ಅದು ತಲೆ ಅಲ್ಲಾಡಿಸಿತು.

ಮುರ್‍ರಾ ಯೋಚಿಸಿತು, 'ಇಬ್ಬರಿಗು ಒಂದೇ ಬೇಕಾಗಿರುವುದು. ಆದರೆ ಅದು ಹೇಗೆ ಸಾಧ್ಯ?' ಅದು ರಗುವಿನ ಇನ್ನೊಂದು ಕಿವಿಯ ಹತ್ತಿರ ಹೋಗಿ ಜೋರಾಗಿ ಕೂಗಿತು. “ಕುಕ್ಕುರೆ ಕೂ, ಕುಕ್ಕುರೆ ಕೂS S”

ಆ ಶಬ್ದಕ್ಕೆ ರಗುವಿನ ಎರಡು ಕಿವಿಗಳು ಕಂಪಿಸತೊಡಗಿದವು. ಕಂಪಿಸುತ್ತಾ ಅಲುಗಾಡುತ್ತಿದ್ದಂತೆ ಅಂಟಿಕೊಂಡಿದ್ದ ತತಿಯಾ ರೆಕ್ಕೆ ಬಿಡಿಸಿಕೊಂಡು ಹೊರಗೆ ಬಂದಿತು. ಬಂದ ತಕ್ಷಣ ಅದು ಹತ್ತಿರದಲ್ಲಿದ್ದ ಗುಲಾಬಿ ಹೂವಿನ ಬಳಿಗೆ ಹಾರಿತು.





“ನೋಡು, ಹೋಯಿತೋ? ಇಲ್ಲವೋ?” ರಗು ಕೇಳಿತು.


“ಇದು ಬಿಟ್ಟಿತೋ? ಇಲ್ಲವೋ?” ತತಿಯಾ ಕೇಳಿತು.

“ನಿಮ್ಮಿಬ್ಬರ ಮಾತು ಮುಗಿಯಿತೋ? ಇಲ್ಲವೋ?” ಮುರ್ರಾ ಹೇಳಿತು.

ಎರಡು ತಲೆ ಅಲ್ಲಾಡಿಸಿದಾಗ ಅದು ಪುನಃ ಹೇಳಿತು, “ಕುಕ್ಕುರೆ ಕೂ...”

ಇದಾದ ನಂತರ ಎಲ್ಲವು ನಗುತ್ತಾ ಖುಷಿ ಖುಷಿಯಾಗಿ ತಮ್ಮ ತಮ್ಮ ಕೆಲಸಗಳಿಗೆ ಹೋದವು.

ತ್ರಿಪುರಾರಿ ಶರ್ಮ



ಚಿನ್ನದ ಮುಂಗುಸಿ

ಮಹಾಭಾರತ ಯುದ್ಧದ ನಂತರ ಪಾಂಡವರು ತಮ್ಮ ನಾಡಿಗೆ ಬಂದು ವಿಜಯೋತ್ಸವ ಆಚರಿಸುತ್ತಿದ್ದರು. ಅದಕ್ಕೆ ನಾಡಿನ ಎಲ್ಲಾ ರಾಜರನ್ನು ಆಮಂತ್ರಿಸಿದ್ದರು. ಅಂದು ನಾಡಿನ ಎಲ್ಲಾ ಜನರಿಗು ಅನ್ನದಾನ ಮಾಡಲಾಗುತ್ತಿತ್ತು.

ಆಗ 'ದಿಢೀರ್' ಎಂದು ಒಂದು ಮುಂಗುಸಿ ಕಾಣಿಸಿತು. ಅದು ನೆಲದ ಮೇಲೆ ಬಿದ್ದು ಉರುಳಾಡಿತು. ಮಾನವರ ಧ್ವನಿಯಲ್ಲಿ ಜೋರಾಗಿ ನಕ್ಕಿತು. ಅಲ್ಲಿದ್ದವರೆಲ್ಲ ಆಶ್ಚರ್ಯದಿಂದ ಆ ಮುಂಗುಸಿಯನ್ನು ನೋಡಿದರು. ಅದರ ದೇಹದ ಅರ್ಧಭಾಗ ಚಿನ್ನದ ಬಣ್ಣದಿಂದ ಮಿನುಗುತ್ತಿತ್ತು.





ಮುಂಗುಸಿಯು "ರಾಜನೇ! ಈ ವಿಜಯೋತ್ಸವ ತುಂಬಾ ಅದ್ಭುತವಾಗಿದೆ. ನಿನ್ನ ಭಂಡಾರವನ್ನೆಲ್ಲಾ ಖರ್ಚು ಮಾಡಿ ಇದನ್ನು ಆಚರಿಸುತ್ತಿರುವೆ. ಆದರು ನಾನು ನೋಡಿದ ಬಡವನೊಬ್ಬ ಮಾಡಿದ ದಾನಕ್ಕೆ ಇದು ಸಮನಾಗುವುದಿಲ್ಲ" ಎಂದು ಹೇಳಿತು.

"ನಾನು ಮಾಡಿದುದರಲ್ಲಿ ಏನು ತಪ್ಪನ್ನು ಕಂಡು ಹಿಡಿದೆ?" ಎಂದು ಧರ್ಮರಾಯ ಕೇಳಿದರು.

"ಮೊದಲು ನನ್ನ ದೇಹದ ಅರ್ಧ ಭಾಗ ಚಿನ್ನದ ಬಣ್ಣವಾದ ಬಗ್ಗೆ ಕಥೆಯನ್ನು ಕೇಳು" ಎಂದು ಮುಂಗುಸಿ ಕಥೆ ಹೇಳಲು ಆರಂಭಿಸಿತು.

"ಒಂದು ಹಳ್ಳಿಯಲ್ಲಿ ಒಬ್ಬ ಬಡವನಿದ್ದನು. ಅವನು ಪ್ರತಿದಿನ ಜಮೀನಿನಲ್ಲಿ ಕೆಲಸ ಮಾಡಿ ಸಿಗುವ ಸ್ವಲ್ಪ ಧಾನ್ಯವನ್ನು ತೆಗೆದುಕೊಂಡು ಹೋಗಿ, ಅದನ್ನು ತನ್ನ ಕುಟುಂಬದವರೊಡನೆ ಹಂಚಿ ತಿನ್ನುತ್ತಿದ್ದನು. ಒಂದು ಬಾರಿ ತುಂಬ ಬರಗಾಲ ಬಂದಿತು. ತಿನ್ನಲು ಏನೂ ಸಿಗದಂತೆ ಆಯಿತು. ಮೂರು ದಿನಗಳ ಉಪವಾಸದ ನಂತರ ಆ ಬಡವನಿಗೆ ಸ್ವಲ್ಪ ಧಾನ್ಯ ಸಿಕ್ಕಿತು. ಅದನ್ನು ಹಿಟ್ಟು ಮಾಡಿಸಿ ಅವನು, ಅವನ ಹೆಂಡತಿ, ಅವನ ಮಗ ಸೊಸೆ ನಾಲ್ವರು ಹಂಚಿಕೊಂಡರು. ಆಗ ಅಲ್ಲಿಗೆ ವಯಸ್ಸಾದ ಒಬ್ಬ ವ್ಯಕ್ತಿ ಬಂದು 'ಹಸಿವಾಗಿದೆ. ತಿನ್ನಲು ಏನಾದರು ಕೊಡಿ' ಎಂದು ಕೇಳಿದರು.

ತಕ್ಷಣ ಆ ಬಡವ ತನ್ನ ಪಾಲನ್ನು ಅವರಿಗೆ ಕೊಟ್ಟನು. ಹಸಿವು ಇನ್ನು ಇದ್ದುದರಿಂದ ಆ ವ್ಯಕ್ತಿ ಇನ್ನಷ್ಟು ಆಹಾರ ಕೇಳಿದರು. ತಕ್ಷಣ ಬಡವನ ಹೆಂಡತಿ ತನ್ನ ಪಾಲನ್ನು ಕೊಟ್ಟಳು. ಆದರು ಹಸಿವು ದೂರ ಆಗಲಿಲ್ಲ. ಅದನ್ನು ನೋಡಿದ ಮಗ ತನ್ನ ಪಾಲನ್ನು ಆನಂದದಿಂದ ಕೊಟ್ಟನು. ಆ ವಯಸ್ಸಾದ ವ್ಯಕ್ತಿ ಅದನ್ನು ತಿಂದು ಮತ್ತಷ್ಟು ಕೇಳಿದಾಗ ಸೊಸೆಯು ತನ್ನ ಪಾಲನ್ನು ಕೊಟ್ಟಳು.

ಆಗ ವಯಸ್ಸಾದ ವ್ಯಕ್ತಿಯ ಹೊಟ್ಟೆ ತುಂಬಿ 'ನೀವೆಲ್ಲರು ಹಸಿವಿನಿಂದ ಇದ್ದರು, ನಿಮ್ಮ ಆಹಾರವನ್ನು ಆನಂದದಿಂದ ನನಗೆ ಕೊಟ್ಟಿರಿ. ರಾಜ ಮಹಾರಾಜರು ಮಾಡುವ ಯಜ್ಞಗಳು, ದಾನಗಳು ಸಹ ಈ ದಾನಕ್ಕೆ ಸಮ ಆಗುವುದಿಲ್ಲ' ಎಂದು ಅವರನ್ನು ಆಶೀರ್ವದಿಸಿ ಮಾಯವಾದರು.


ಇದನ್ನೆಲ್ಲಾ ನಾನು ಬಚ್ಚಿಟ್ಟುಕೊಂಡು ಮರೆಯಿಂದ ನೋಡುತ್ತಿದ್ದೆ. ಮೆಲ್ಲಗೆ ಹೊರಗೆ ಬಂದೆ. ಅಲ್ಲಿ ಧಾನ್ಯದ ಹಿಟ್ಟು ಕೆಳಗೆ ಬಿದ್ದಿತ್ತು. ಅದು ನನ್ನ ಅರ್ಧ ದೇಹಕ್ಕೆ ಅಂಟಿಕೊಂಡಿತು. ಆ ಹಿಟ್ಟು ಅಂಟಿಕೊಂಡ ದೇಹದ ಭಾಗ ಚಿನ್ನದ ಬಣ್ಣ ಆಯಿತು. ಉಳಿದ ಅರ್ಧ ಭಾಗ ಚಿನ್ನದ ಬಣ್ಣ ಆಗಲಿಲ್ಲ.



ಆ ದಿನದಿಂದ ನಾನು ಹಲವಾರು ಜಾಗಗಳನ್ನು ನೋಡಿದೆ. ಅಲ್ಲಿ 'ನನ್ನ ದೇಹದ ಅರ್ಧ ಭಾಗ ಚಿನ್ನ ಆಗುವುದಾ?' ಎಂದು ಉರುಳಿ ನೋಡುವೆ. ಇಲ್ಲಿಯವರೆಗೂ ಅದು ಬದಲಾಗಿಲ್ಲ.

ಈ ದಿನ ತಾವು ಮಾಡುವ ವಿಜಯೋತ್ಸವಕ್ಕೆ ಬಂದೆನು. ಇಲ್ಲಿ ಉರುಳಾಡಿ ನೋಡಿದೆನು. ನನ್ನ ಇನ್ನರ್ಧ ಭಾಗ ಚಿನ್ನ ಆಗಲಿಲ್ಲ. ಅದಕ್ಕಾಗಿ ನಾನು ಇದು ದೊಡ್ಡ ಆಚರಣೆಯಾದರು ಬಡವನ ದಾನಕ್ಕೆ ಸಮ ಇಲ್ಲ ಎಂದು ಹೇಳಿದ್ದು" ಎಂದು ಹೇಳಿದ ಮುಂಗುಸಿ ಮಾಯವಾಯಿತು.

ಎಲ್ಲರು ಪ್ರತಿಮೆಗಳಂತೆ ನಿಂತರು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ


(84) ಕಂಡು ಹಿಡಿಯೋಣ ಬಾ!



ಎಸೆಯಲಾರದ ಮೆತ್ತಗಿನ ಚೆಂಡು
ನೋಡಲು ಅಂದವಾದ ಚೆಂಡು
ಜೇನಿನಂತೆ ಸವಿಯಾದ ಚೆಂಡು – **ಅದು ಏನು?**

ಅಕ್ಕಿ ಏಲಕ್ಕಿ ಬೆಲ್ಲ ಹದವಾಗಿ ಸೇರುವುದು
ತುಪ್ಪದ ಪರಿಮಳ ಬಾಯಲ್ಲಿ ನೀರು ತರುವುದು
ತಿನ್ನಲು ಆನಂದವಾಗುವುದು – **ಅದು ಏನು?**

ಬೆಂಕಿ ಜ್ವಾಲೆಯ ಮೇಲೆ ಕಪ್ಪು ಕುದುರೆಯ ಹತ್ತಿ
ಬಿಸಿಯಾಗುತ್ತಿರುವ ಬಿಳಿಯ – ಅದು **ಯಾರು?**




ಗುಂಡ ಗುಂಡಗಿನ ಪಡ್ಡು
ಬಿಳಿ ತುಂಬೆಯ ಬಣ್ಣದ ಪಡ್ಡು
ಸಿಹಿ ಕಾರ ಇಲ್ಲದ ಪಡ್ಡು – **ಅದು ಏನು?**

ಗೋಧಿ ಹಿಟ್ಟಲ್ಲಿ ಮಾಡುವುದು
ಕಾದ ಎಣ್ಣೆಯಲ್ಲಿ ಉಬ್ಬುವುದು – **ಅದು ಏನು?**

ಭತ್ತದ ಹೊಟ್ಟಿನಂತ ಹಳದಿ ಬಣ್ಣ
ಸೇರಿ ಆಗಿರುವುದು ಹೊನ್ನ ಬಣ್ಣ
ಮಧ್ಯದಲ್ಲಿ ತೂತು ಇಹುದಣ್ಣ
ಉದ್ದಿನ ಬೇಳೆಯಿಂದ ಮಾಡುವರಣ್ಣ
ಅದು ಏನು?

ಅಜ್ಜಿ ತಾತ ತಿನ್ನಲಾಗದು
ನೋಡಲು ಅಂದವಾಗಿಹುದು
ಹಲ್ಲಿಗೆ ಸವಾಲಾಗಿಹುದು – **ಅದು ಏನು?**




ಹಳ್ಳದಲ್ಲಿ ಅರಳುವುದು
ಕಡ್ಡಿಯಲ್ಲಿ ತೆಗೆಯುವುದು
ಸಿಹಿ ಕಾರ ಎರಡೂ ರುಚಿ ಇರುವುದು – **ಅದು ಏನು?**

ಮೂರು ಮೂಲೆ ಗುಡಿಸಲು
ಒಳಗೆ ಇರುವುದು ಆಲೂ
ತಿನ್ನಲು ರುಚಿಯಾಗಿರುವುದು– ಅದು ಏನು?

ಗುಂಡು ಗುಂಡುಗಿನ ತಟ್ಟೆಯಲ್ಲಿ
ಇಟ್ಟಿದ್ದೆಲ್ಲಾ ಹಾವಾಗುವುದು
ತಿನ್ನಲು ಖುಷಿ ಕೊಡುವುದು – **ಅದು ಏನು?**

ಕಚ್ಚಿದರು ಕಾರ ಆಗದ
ಸವಿಸವಿ ಬಿಸಿಬಿಸಿಯಾದ
ಮನಕೆ ಮುದ ಕೊಡುವ ತಿಂಡಿ
ಅದು ಯಾವುದು?




ಕಾಯಿ ಬೆಲ್ಲ ಹಾಕುವರು
ಬಿಳಿ ಹಿಟ್ಟಿನೊಳಗೆ ಇಟ್ಟು
ಆವಿಯಲ್ಲಿ ಬೇಯಿಸುವರು
ದೇವರಿಗೆ ನೈವೇದ್ಯ ಮಾಡುವರು – **ಅದು ಏನು?**

ದೋಸೆ, ಪಾಯಸ, ಲಾಡು, ಶ್ಯಾವಿಗೆ, ಪಡ್ಡು, ಉದ್ದಿನವಡೆ
ಚಕ್ಕುಲಿ, ಪೂರಿ, ಇಡ್ಲಿ, ಕಡುಬು, ಕಜ್ಜಾಯ, ಸಮೋಸ



ಒಂದೇ ಕಾಲಲ್ಲಿ ಆಡುವುದು
ಆಯಾಸವಾದಾಗ ಮಲಗುವುದು – **ಅದು ಏನು?**




ಬಣ್ಣ ಬಣ್ಣದ ಕಾಗದದಲ್ಲಿರುವುದು
ಪಟಪಟ ಬಾನಿನಲ್ಲಿ ಹಾರುವುದು – **ಅದು ಏನು?**


ಮೇಲೆ ಎಸೆದರೆ ಕೆಳಗೆ ಬರುವುದು
ನೆಲಕ್ಕೆ ಎಸೆದರೆ ಮೇಲೆ ಹೋಗುವುದು – **ಅದು ಏನು?**


ಗಾಳಿ ಕುಡಿದು ಉಬ್ಬುವುದು
ಬೀಸುವ ಗಾಳಿಯಲಿ ಹಾರುವುದು – **ಅದು ಏನು?**

ಬಿದ್ದರೆ ಮಲಗಲ್ಲ ಎದ್ದರೆ ನಿಲ್ಲಲ್ಲ – **ಅದು ಏನು?**

ಕಾಲಿದೆ ನಡೆಯಲ್ಲ ಕೈಯಿದೆ ತಿನ್ನಲ್ಲ
ಬಾಯಿದೆ ಮಾತಾಡಲ್ಲ ದೇಹ ಇದೆ ಉಸಿರಾಡಲ್ಲ
ಅದು ಏನು?








ಹಿಂದಕ್ಕೆ ಮುಂದಕ್ಕೆ ತೂಗಾಡುವುದು
ಕುಳಿತವರಿಗೆ ಉತ್ಸಾಹ ತುಂಬುವುದು – **ಅದು ಏನು?**

ಸುತ್ತಿ ಸುತ್ತಿ ಓಡುತ್ತೆ
ಆನೆ ಕುದುರೆ ಇರುತ್ತೆ
ಎಷ್ಟು ಸುತ್ತಿದ್ರು ನಿಂತಲ್ಲೇ ಇರುತ್ತೆ – **ಅದು ಏನು?**



ಸಾಲುಗಳು ಎರಡು ಮನೆಗಳು ಹದಿನಾಲ್ಕು
ಆಡುವ ಮಕ್ಕಳು ಎಪ್ಪತ್ತು ಜನ
ಆಡಿಸುವವರು ಇಬ್ಬರು – **ಅದು ಏನು?**

ಚಿಕ್ಕದನ್ನು ದೊಡ್ಡದಾಗಿ ತೋರುವುದು
ಅದು ಏನು?



ಚೆಂಡು, ಗಾಳಿಪಟ, ಬುಗುರಿ, ಬಲೂನ್
ತಿರುಗುವ ರಾಟೆ, ಚಂದನದ ಗೊಂಬೆ, ತಂಜಾವೂರು ಗೊಂಬೆ
ಭೂತಗನ್ನಡಿ, ಉಯ್ಯಾಲೆ, ಅಳಗುಣಿ ಮನೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

85 ಟಮೊಟೊ ಎಲ್ಲಿ?



ರಂಗಯ್ಯ ತನ್ನ ಹೊಲದಲ್ಲಿ ಟಮೊಟೊ ಬೆಳೆದಿದ್ದನು. ಟಮೊಟೊಗಳು ಬಲಿತು ಕೆಂಪು ಕೆಂಪಾಗಿ ಗಿಡದಲ್ಲಿ ತೂಗಾಡುತ್ತಿದ್ದವು. ಅವನು ಅದನ್ನು ಹೆಮ್ಮೆಯಿಂದ ನೋಡುತ್ತಿದ್ದನು.

ಆಗ ಒಂದು ಜಿಂಕೆ ತೋಟದ ಒಳಗೆ ನುಗ್ಗಿತು. ಅದನ್ನು ಓಡಿಸಲು ರಂಗಯ್ಯ ಕಲ್ಲನ್ನು ತೆಗೆದುಕೊಂಡನು. ಆಗ ಆತನ ಹೆಂಡತಿ "ಜಿಂಕೆಯನ್ನು ಹೊಡೆಯಬೇಡಿ. ಅದು ಸ್ವಲ್ಪ ಟಮೊಟೊ ತಿಂದು ಹೋಗಲಿ" ಎಂದು ಹೇಳಿದಳು.





ರಂಗಯ್ಯನ ಮನಸ್ಸು ಒಪ್ಪಲಿಲ್ಲ. ಮರುದಿನ ತನ್ನ ಹೊಲದ ಸುತ್ತಲು ಬೇಲಿ ಹಾಕಿದನು. ನಂತರ ನೆಮ್ಮದಿಯಿಂದ ಮನೆಗೆ ಹೋದನು. ಆದರೆ ಅವನ ನೆಮ್ಮದಿ ಹೆಚ್ಚು ದಿನ ಉಳಿಯಲಿಲ್ಲ. ಹಕ್ಕಿಗಳು ಹಾರಾಡುತ್ತಾ ಬಂದು ಟವೊಟೊ ತಿನ್ನ ತೊಡಗಿದವು. ರಂಗಯ್ಯನಿಗೆ ತುಂಬ ಬೇಸರವಾಯಿತು. ಟವೊಟೊಗಳನ್ನು ಇನ್ನು ಹೀಗೆ ಬಿಡಬಾರದೆಂದು ತೀರ್ಮಾನಿಸಿದನು.

ಮಾರನೆಯ ದಿನ ಸೂರ್ಯ ಹುಟ್ಟುವ ಸಮಯಕ್ಕೆ ರಂಗಯ್ಯ ಮಾಡಿದ ಮೊದಲ ಕೆಲಸ ಎಂದರೆ, ಎಲ್ಲ ಟವೊಟೊಗಳನ್ನು ಕಿತ್ತನು. ಗಾಡಿಯಲ್ಲಿ ತುಂಬಿದನು. ಗಾಡಿಗೆ ಕಟ್ಟಿದ್ದ ಎತ್ತನ್ನು ವೇಗವಾಗಿ ಓಡಿಸಿದನು. ಸಂತೆಯಲ್ಲಿ ಗಾಡಿಯನ್ನು ನಿಲ್ಲಿಸಿದನು. ಹಿಂದೆ ತಿರುಗಿ ನೋಡಿದ ರಂಗಯ್ಯನಿಗೆ ಆಘಾತವಾಯಿತು.

"ಅಯ್ಯೋ! ಇದೇನು? ಗಾಡಿ ಖಾಲಿ ಆಗಿದೆ. ನನ್ನ ಟಮೊಟೊಗಳು ಎಲ್ಲಿ?" ಎಂದು ಕೂಗಿದನು. ಆಗ ಗಾಡಿಯ ಹಿಂಭಾಗದಲ್ಲಿ ಒಂದು ತೂತು ಇರುವುದನ್ನು ಗಮನಿಸಿದನು.

'ಆ ತೂತದಿಂದಲೇ ಟಮೊಟೊಗಳು ದಾರಿ ಉದ್ದಕ್ಕೂ ಬಿದ್ದಿರಬೇಕು. ಇದೇ ದಾರಿಯಲ್ಲಿ ಹೋಗಿ ಬಿದ್ದಿರುವ ಟಮೊಟೊಗಳನ್ನು ತರುವೆನು' ಎಂದು ರಂಗಯ್ಯ ಬಂದ ದಾರಿಯಲ್ಲಿಯೇ ನಡೆದುಕೊಂಡು ಹೊರಟನು.

ಆದರೆ ಏನಾಶ್ಚರ್ಯ! ದಾರಿಯಲ್ಲಿ ಒಂದೇ ಒಂದು ಟಮೊಟೊ ಸಹ ಸಿಗಲಿಲ್ಲ. ದೂರದಲ್ಲಿ ಎರಡು ಜಿಂಕೆಮರಿಗಳು ಆನಂದದಿಂದ ಟಮೊಟೊ ತಿನ್ನುತ್ತಿದ್ದವು. ಇನ್ನೂ ಸ್ವಲ್ಪ ದೂರ ನಡೆದನು. ಅಲ್ಲಿ ಕೆಲವು ಅಳಿಲುಗಳು ಟಮೊಟೊ ಹಣ್ಣುಗಳನ್ನು ಕಚ್ಚುತ್ತಿದ್ದವು.



ರಂಗಯ್ಯನಿಗೆ ಆಯಾಸವಾಗಿ ಒಂದು ಮರದ ಕೆಳಗೆ ಕುಳಿತನು. ಹಕ್ಕಿ ಮರಿಗಳ 'ಕಿಚ್. . ಕಿಚ್. .' ದನಿ ಕೇಳಿಸಿತು. ಅಮ್ಮ ಹಕ್ಕಿ ತನ್ನ ಮರಿಗಳಿಗೆ ಟಮೊಟೊ ಹಣ್ಣನ್ನು ತಿನ್ನಿಸುತ್ತಿತ್ತು.

ರಂಗಯ್ಯನಿಗೆ ಆ ದೃಶ್ಯ ನೋಡಿ ಆನಂದವಾಯಿತು. "ಆಹಾ! ಎಷ್ಟು ಸುಂದರ ದೃಶ್ಯ!" ಎಂದು ಹೇಳುತ್ತಾ ಮುಂದೆ ನಡೆದನು.

ದಾರಿಯಲ್ಲಿ ಒಂದು ಮನೆಯಿಂದ ಮಕ್ಕಳ ಗಲಾಟೆ ಕೇಳುತ್ತಿತ್ತು. ಹತ್ತಿರ ಹೋಗಿ ಕಿಟಕಿಯಿಂದ ನೋಡಿದನು. ಅಲ್ಲಿ ಮಕ್ಕಳ ಕೈಯಲ್ಲಿ ಟಮೊಟೊ! ಅವರ ಮುಖದಲ್ಲಿ ನಗು. 'ಅರೆ! ನನ್ನ ಟಮೊಟೊ ಹಣ್ಣುಗಳಿಂದ ಇವರಿಗೆಲ್ಲಾ ಎಷ್ಟು ಖುಷಿಯಾಗಿದೆ' ಎಂದುಕೊಂಡನು.

ರಂಗಯ್ಯನ ಮನಸ್ಸು ಹಗುರವಾಯಿತು. ಟಮೊಟೊ ಹಣ್ಣುಗಳನ್ನು ನಾನು ಕಳೆದುಕೊಂಡೆ ಎನ್ನುವ ಭಾವನೆ ಈಗ ಅವನಿಗೆ ಇರಲಿಲ್ಲ. 'ಮೊದಲೆ ಎಲ್ಲರ ಜೊತೆ ಹಂಚಿಕೊಂಡು ತಿನ್ನಬಹುದಿತ್ತಲ್ಲ!' ಎಂದು ಯೋಚಿಸುತ್ತಾ ಮನೆಗೆ ಹೋದನು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮೂರು ಗೊಂಬೆಗಳು



ಒಮ್ಮೆ ವಿಜಯನಗರಲ್ಲಿ ಎಲ್ಲಿ ನೋಡಿದರು ಜನರು ಆತಂಕ ಕುತೂಹಲದಿಂದ ಇದ್ದರು. ಇದಕ್ಕೆ ಕಾರಣ ಪಕ್ಕದ ಊರಿನಿಂದ ಬಂದಿದ್ದ ಪಂಡಿತ ತಂದಿದ್ದ ಮೂರು ಗೊಂಬೆಗಳು. ನೋಡಲು ಮೂರು ಗೊಂಬೆಗಳು ಒಂದೇ ರೀತಿ ಇದ್ದವು. ಚಿಕ್ಕ ವ್ಯತ್ಯಾಸವು ಅವುಗಳಲ್ಲಿ ಕಾಣುತ್ತಿರಲಿಲ್ಲ.

ಆದರೆ ಪಂಡಿತನು "ಈ ಮೂರು ಗೊಂಬೆಗಳಲ್ಲಿ ವ್ಯತ್ಯಾಸ ಇದೆ. ಇದನ್ನು ಕಂಡು ಹಿಡಿದು ಹೇಳಿದವರಿಗೆ ಹತ್ತು ಸಾವಿರ ಚಿನ್ನದ ನಾಣ್ಯಗಳ ಜೊತೆಗೆ ಈ ಮೂರು ಗೊಂಬೆಗಳನ್ನು ಉಡುಗೊರೆಯಾಗಿ ಕೊಡುವೆನು. ಹತ್ತು ದಿನಗಳ ಒಳಗೆ ವ್ಯತ್ಯಾಸವನ್ನು ಯಾರೂ ಕಂಡು ಹಿಡಿಯದಿದ್ದರೆ ಹತ್ತು ಸಾವಿರ ಚಿನ್ನದ ನಾಣ್ಯಗಳನ್ನು ನನಗೆ ಕೊಡಬೇಕಾಗುವುದು" ಎಂದು ಅರಮನೆಯಲ್ಲಿ ಸವಾಲು ಹಾಕಿದನು.

ಗೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಒಂಬತ್ತು ದಿನಗಳು ಕಳೆದುಹೋದವು. ಆ ಮೂರು ಗೊಂಬೆಗಳಲ್ಲಿನ ವ್ಯತ್ಯಾಸವನ್ನು ಯಾರು ಕಂಡು ಹಿಡಿಯಲು ಆಗಲಿಲ್ಲ.

'ಪಂಡಿತನಿಗೆ ಹತ್ತು ಸಾವಿರ ಚಿನ್ನದ ನಾಣ್ಯಗಳನ್ನು ಕೊಡುವುದಲ್ಲದೆ, ಸೋಲನ್ನು ಒಪ್ಪಿಕೊಳ್ಳಬೇಕೆ?' ಎಂದು ರಾಜನು ಚಿಂತಿಸತೊಡಗಿದನು. ತೆನಾಲಿರಾಮನು "ಚಿಂತಸಬೇಡಿ ರಾಜರೇ! ಇನ್ನು ಒಂದು ದಿನ ಪೂರ್ತಿ ಇದೆ. ಹೇಗಾದರು ವ್ಯತ್ಯಾಸ ಕಂಡು ಹಿಡಿಯೋಣ" ಎಂದು ಹೇಳಿದನು.


ಹತ್ತನೆಯ ದಿನ ಬಂದಿತು. ಅರಮನೆಯಲ್ಲಿ ಎಲ್ಲರು ಚಿಂತೆಯಲ್ಲಿದ್ದರು. ತೆನಾಲಿರಾನು ಪ್ರದರ್ಶನಕ್ಕೆ ಇಟ್ಟಿದ್ದ ಗೊಂಬೆಗಳನ್ನು ಮತ್ತೆ ಮತ್ತೆ ಎಚ್ಚರಿಕೆಯಿಂದ ನೋಡಿದನು. ನಂತರ ಒಂದು ತೆಳುವಾದ ಕಡ್ಡಿಯನ್ನು ತೆಗೆದುಕೊಂಡು ಮೊದಲ ಗೊಂಬೆಯ ಕಿವಿಯ ಒಳಗೆ ಇಟ್ಟನು. ಆ ಕಡ್ಡಿ ಮತ್ತೊಂದು ಕಿವಿಯಿಂದ ಹೊರಗೆ ಬಂದಿತು.



ನಂತರ ಅದೇ ಕಡ್ಡಿಯನ್ನು ಎರಡನೆಯ ಗೊಂಬೆಯ ಕಿವಿಯ ಒಳಗೆ ಇಟ್ಟನು. ಆಗ ಕಡ್ಡಿ ಆ ಗೊಂಬೆಯ ಬಾಯಿಂದ ಹೊರಗೆ ಬಂದಿತು.

ಕೊನೆಯಲ್ಲಿ ಮೂರನೆಯ ಗೊಂಬೆಯ ಕಿವಿಯ ಒಳಗೆ ಕಡ್ಡಿ ಇಟ್ಟಾಗ ಅದು ಅಲ್ಲೇ ನಿಂತು ಬಿಟ್ಟಿತು. ಇದನ್ನು ನೋಡಿ ಎಲ್ಲರಿಗು ಆಶ್ಚರ್ಯವಾಯಿತು.

ತೆನಾಲಿರಾಮ “ಮೂರು ಗೊಂಬೆಗಳಲ್ಲೂ ವ್ಯತ್ಯಾಸ ಇದೆ. ಮೊದಲನೆಯ ಗೊಂಬೆ ಮೂರ್ಖರಂತೆ ತಾನು ಕೇಳಿದ್ದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ಎಲ್ಲವನ್ನು ಹೊರಗೆ ಬಿಡುವುದು. ಎರಡನೆಯ ಗೊಂಬೆ ಸಾಮಾನ್ಯ ಮಾನವರಂತೆ ತಾನು ಕೇಳಿದ್ದನ್ನು ಬಾಯಲ್ಲಿ ಇತರರಿಗೆ ಹೇಳುವುದು.



ಮೂರನೆಯ ಗೊಂಬೆ ಉತ್ತಮ ಜನರಂತೆ ತಾನು ಕೇಳಿದ್ದನ್ನು ತಕ್ಷಣ ಹೇಳದೆ ಒಳಗೆ ಇಟ್ಟುಕೊಂಡು ಆಲೋಚಿಸುವುದು" ಎಂದನು.

ಇದನ್ನು ಕೇಳಿದ ಎಲ್ಲರು ತೆನಾಲಿರಾಮನನ್ನು ಹೊಗಳಿದರು. ಪಂಡಿತನು ಹತ್ತು ಸಾವಿರ ಚಿನ್ನದ ನಾಣ್ಯಗಳೊಂದಿಗೆ ಆ ಮೂರು ಗೊಂಬೆಗಳನ್ನು ತೆನಾಲಿರಾಮನಿಗೆ ಕೊಟ್ಟನು.

ತೆನಾಲಿರಾಮನು ಮೂರು ಗೊಂಬೆಗಳನ್ನು ರಾಜರಿಗೆ ಕೊಟ್ಟು, ಹತ್ತು ಸಾವಿರ ಚಿನ್ನದ ನಾಣ್ಯಗಳನ್ನು ತಾನು ಇಟ್ಟುಕೊಂಡನು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ


Rajalakshmi Srinivasan Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ನಮ್ಮ ತೋಟ

ನೀಲ ಆಕಾಶ, ತಂಪಾಗಿ ಬೀಸುವ ಗಾಳಿ, ಹಿತವಾದ ಸೂರ್ಯನ ಶಾಖ, ಈ ಮೂರನ್ನು ಆನಂದದಿಂದ ಅನುಭವಿಸುತ್ತಾ ಬಣ್ಣ ಬಣ್ಣದ ಹೂವುಗಳು ತೂಗಾಡುತ್ತಿದ್ದವು. ಗುಲಾಬಿ, ಮಲ್ಲಿಗೆ, ಸುಗಂಧರಾಜ, ತಾವರೆ, ಸೇವಂತಿಗೆ, ದಾಸವಾಳ ಎಂದು ಹಲವು ವಿಧದ ಹೂವುಗಳು ಆ ತೋಟದಲ್ಲಿ ಇದ್ದವು. ಮಧ್ಯೆ ಮಧ್ಯೆ ಹಚ್ಚ ಹಸುರಾದ ಹುಲ್ಲು, ಗಿಡಗಳು, ಬಳ್ಳಿಗಳು ಇವೆಲ್ಲ ಆ ಹೂವುಗಳ ಅಂದವನ್ನು ಹೆಚ್ಚಿಸಿದ್ದವು. ತೋಟದ ಬಗ್ಗೆ ಹೂವುಗಳಿಗೆ ಹೆಮ್ಮೆಯೋ ಹೆಮ್ಮೆ!

ಒಂದು ದಿನ ತೋಟಗಾರ ಒಂದು ಹೊಸ ಗಿಡವನ್ನು ತಂದು ತೋಟದ ಮಧ್ಯೆ ಹಾಕಿದನು. ಆ ಗಿಡದಲ್ಲಿ ವಿಚಿತ್ರವಾದ ಒಂದು ಕೆಂಪು ಹೂವು ಇತ್ತು. ಇದನ್ನು ನೋಡಿದ ಉಳಿದ ಹೂವುಗಳಿಗೆ ಕಸಿವಿಸಿ ಆಯಿತು. ಅವುಗಳಿಗೆ ಕೆಂಪು ಹೂವು ಇಷ್ಟ ಆಗಲಿಲ್ಲ. ಎಲ್ಲವು ಅದನ್ನು ಬಿಟ್ಟು ದೂರ ಇದ್ದವು. ಕೆಂಪು ಹೂವಿಗೆ ತಾನು ಒಂಟಿ ಎನಿಸಿತು.



ಒಂದು ದಿನ ಚಿಕ್ಕ ಬಿಳಿ ಗುಲಾಬಿ ಹೂವೊಂದು ಕೆಂಪು ಹೂವನ್ನು ನೋಡಿ ನಿಧಾನವಾಗಿ ನಕ್ಕಿತು. “ಗೆಳೆಯ! ನೀನು ಎಲ್ಲಿಂದ ಬಂದೆ?” ಎಂದು ಕೇಳಿತು.

ಕೆಂಪು ಹೂವಿಗೆ ತುಂಬ ಆನಂದವಾಯಿತು. ಆದು “ನಾನು ತುಂಬಾ ದೂರದಿಂದ ಬಂದಿರುವೆ” ಎಂದು ತಾನು ಬಂದ ಜಾಗದ ವರ್ಣನೆ ಮಾಡಿತು. ಬಿಳಿ ಗುಲಾಬಿ ಅದರ ಮಾತನ್ನು ಗಮನವಿಟ್ಟು ಕೇಳಿತು. ಸ್ವಲ್ಪ ಹೊತ್ತಿನಲ್ಲೇ ಅವೆರಡು ಆತ್ಮೀಯ ಸ್ನೇಹಿತರಾದರು. ಬಿಳಿ ಗುಲಾಬಿ ಕೆಂಪು ಹೂವಿಗೆ ತನ್ನ ಜಾಗದ ವಾತಾವರಣದ ಬದಲಾವಣೆ, ಅಲ್ಲಿರುವ ಗಿಡಗಳ ಬಗ್ಗೆ ಹೇಳಿತು. ದಿನ ಪೂರ್ತಿ ಅವರಿಬ್ಬರು ಮಾತನಾಡುತ್ತಲೇ ಇದ್ದರು. ಹೀಗೆ ಇಬ್ಬರ ಗೆಳೆತನ ಬೆಳೆಯುತ್ತಾ ಹೋಯಿತು.

ಕೆಲವು ದಿನಗಳ ನಂತರ ತೋಟಗಾರ ಇನ್ನು ಹಲವು ಹೊಸ ಗಿಡಗಳನ್ನು ತಂದನು. ಇದನ್ನು ನೋಡಿ ಇತರ ಹೂವುಗಳಿಗೆ ಚಿಂತೆ ಆಯಿತು. 'ತೋಟ ಹೊಸ ಹೊಸ ಹೂವುಗಳಿಂದ ತುಂಬಿ ಹೋಗುವುದು' ಎಂದು ಭಯ ಆಯಿತು.

ಬಿಳಿ ಗುಲಾಬಿ “ನೀವೇಕೆ ಅನಗತ್ಯವಾಗಿ ಚಿಂತಿಸುವಿರಿ? ಈ ಹೊಸ ಹೂವುಗಳು ಕೂಡ ನಮ್ಮ ಸ್ನೇಹಿತರು” ಎಂದು ಹೇಳಿತು. ಇದನ್ನು ಕೇಳಿದ ಕೆಲವು ಹೂವುಗಳು ಸಮಾಧಾನದಿಂದ ಸುಮ್ಮನಾದವು.

ಇನ್ನೂ ಕೆಲವು ಹೂವುಗಳು ಚಿಟ್ಟೆ, ಜೇನುಹುಳು ತಮ್ಮ ಬಳಿಗೆ ಬಂದಾಗ "ನೀವು ಹೊಸ ಹೂವುಗಳ ಬಳಿಗೆ ಹೋಗಬೇಡಿ. ಅವುಗಳೆಲ್ಲ ಬೇರೆಯವು. ನಮ್ಮ ಗೆಳೆಯರಲ್ಲ" ಎಂದು ಹೇಳಿದವು.

ಇದನ್ನು ಕೇಳಿದ ಜೇನುಹುಳುಗಳು "ಇಲ್ಲಿ ಎಲ್ಲರಿಗು ಸಾಕಾಗುವಷ್ಟು ಮಣ್ಣು ಇದೆ. ಜೊತೆಗೆ ಗಾಳಿ, ನೀರು, ಸೂರ್ಯನ ಬೆಳಕು ಎಲ್ಲಾ ಇದೆ. ಕ್ರಿಮಿಕೀಟಗಳು ಬೇಕಾದಷ್ಟು ಇದೆ. ಅನಗತ್ಯವಾಗಿ ನೀವು ಏಕೆ ಚಿಂತಿಸುವಿರಿ?" ಎಂದವು.

ಕೆಲವು ದಿನಗಳಲ್ಲೇ ಆ ತೋಟ ಅಂದವಾಗಿ ಬೆಳೆಯಿತು. ಅದನ್ನು ನೋಡಲು ಜನ ಗುಂಪು ಗುಂಪಾಗಿ ಬರತೊಡಗಿದರು. ಸೂರ್ಯನ ಕಿರಣಗಳು ಪ್ರತಿ ಹೂವಿನ ಮೇಲೂ ಬೀಳುತ್ತಿದ್ದವು. ಮಳೆ ಹನಿಗಳು ಪ್ರತಿ ಹೂವಿನ ಮೇಲೂ ಬೀಳುತ್ತಿದ್ದವು. ಬೀಸುವ ತಂಗಾಳಿ ಪ್ರತಿ ಹೂವನ್ನು ಸವರಿ ಹೋಗುತ್ತಿತ್ತು.

'ಬಿಳಿ ಗುಲಾಬಿ ಮತ್ತು ಜೇನುಹುಳುಗಳು ಹೇಳಿದ್ದು ನಿಜ. ಹೊಸದಾಗಿ ಬಂದ ಹೂವುಗಳು ನಮಗೆ ಯಾವ ತೊಂದರೆಯನ್ನು ಮಾಡಿಲ್ಲ ಅವು ನಮ್ಮ ಜಾಗವನ್ನು ಕಿತ್ತುಕೊಳ್ಳಲಿಲ್ಲ' ಹೀಗೆ ಯೋಚಿಸುತ್ತಾ ಎಲ್ಲಾ ಹೂವುಗಳು ನೆಮ್ಮದಿಯಿಂದ ಇದ್ದವು. ತೋಟದ ತುಂಬಾ ಗೆಳೆತನವೇ ತುಂಬಿತ್ತು.

"ಎಷ್ಟು ರೀತಿಯ ಹೂವುಗಳು! ಬಣ್ಣಗಳು ಎಷ್ಟೊಂದು! ಇಂತಹ ತೋಟವನ್ನು ನಾವು ಎಲ್ಲಿಯೂ ನೋಡಿಲ್ಲ" ಎಂದು ನೋಡಲು ಬಂದ ಜನರು ಆಶ್ಚರ್ಯಪಟ್ಟರು. ಹೂವುಗಳು ಆ ರೀತಿ ಇರುವುದರಿಂದಲೇ ಆ ತೋಟಕ್ಕೆ 'ಚೆಂದದ ತೋಟ' ಎಂಬ ಹೆಸರು ಬಂದಿತು. ಜೊತೆಗೆ ತೋಟ ಜನರನ್ನು ತನ್ನತ್ತ ಬರುವಂತೆ ಮಾಡಿತು.



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಮೂರ್ಖರನ್ನು ಹುಡುಕುತ್ತಾ. . . 88

ಅಕ್ಬರ್ ಮತ್ತು ಬೀರಬಲ್ ಒಮ್ಮೆ ಚರ್ಚೆ ಮಾಡುತ್ತಿದ್ದಾಗ "ಬುದ್ಧಿವಂತರನ್ನು ಬೇಗನೆ ಗುರ್ತಿಸಬಹುದು. ಆದರೆ ಮೂರ್ಖರನ್ನು ಕಂಡು ಹಿಡಿಯುವುದು ಕಷ್ಟ" ಎಂದು ಅಕ್ಬರ್ ವಾದ ಮಾಡಿದರು.

ಅದಕ್ಕೆ ಬೀರಬಲ್ "ಮೂರ್ಖರನ್ನು ಕಂಡು ಹಿಡಿಯುವುದು ಬಹಳ ಸುಲಭ" ಎಂದು ಹೇಳಿದರು.

"ಹೌದಾ! ಹಾಗಾದರೆ ನಾಳೆ ಮಧ್ಯಾಹ್ನದ ಒಳಗೆ ನೀವು ಎಂಟು ಜನ ಮೂರ್ಖರನ್ನು ಕರೆದುಕೊಂಡು ಬರಬೇಕು. ಆ ರೀತಿ ಕರೆ ತಂದರೆ ಅವರಿಗೆಲ್ಲ ಉಡುಗೊರೆ ಕೊಡುವೆನು. ಜೊತೆಗೆ ನಿಮಗು ಉಡುಗೊರೆ ಕೊಡುವೆನು" ಎಂದರು ಅಕ್ಬರ್.



ಮಾರನೆಯ ದಿನ ಬೆಳಗ್ಗೆ ಬೀರಬಲ್ ಮೂರ್ಖರನ್ನು ಹುಡುಕುತ್ತಾ ಹೊರಟರು. ದಾರಿಯಲ್ಲಿ ಕತ್ತೆ ಮೇಲೆ ಕುಳಿತ ಒಬ್ಬನು ತಲೆಯ ಮೇಲೆ ದೊಡ್ಡ ಬಟ್ಟೆಯ ಮೂಟೆ ಹೊತ್ತು ಕೊಂಡಿದ್ದನ್ನು ನೋಡಿದರು.

ಬೀರಬಲ್ "ನೀನೇಕೆ ಮೂಟೆಯನ್ನು ಹೊತ್ತು ಕೊಂಡಿರುವೆ? ಕತ್ತೆಯ ಮೇಲೆ ಇಡಬಹುದಲ್ಲ?" ಎಂದರು.

ಅದಕ್ಕೆ ಆ ವ್ಯಕ್ತಿ "ನನ್ನ ಕತ್ತೆಗೆ ವಯಸ್ಸಾಗಿದೆ. ಅದಕ್ಕೆ ಹೆಚ್ಚು ಶಕ್ತಿ ಇಲ್ಲ. ಅದರ ಭಾರ ಕಡಿಮೆ ಮಾಡಲು ನಾನು ಮೂಟೆಯನ್ನು ಹೊತ್ತು ಕೊಂಡಿರುವೆ" ಎಂದು ಹೇಳಿದನು.

ಬೀರಬಲ್ ನಸುನಗುತ್ತಾ "ಮಧ್ಯಾಹ್ನ ಅರಮನೆಗೆ ಬಾ, ರಾಜರು ನಿನಗೆ ಉಡುಗೊರೆ ಕೊಡುತ್ತಾರೆ " ಎಂದು ಹೇಳಿ ಮುಂದೆ ನಡೆದರು.

ಸ್ವಲ್ಪ ದೂರ ಹೋದಾಗ ಅಲ್ಲಿ ಒಬ್ಬ ರೈತ ಮತ್ತು ಆತನ ಮಗ ಜಮೀನಿನಲ್ಲಿ ಏನನ್ನೋ ಹುಡುಕುತ್ತಿರುವುದು ಕಾಣಿಸಿತು. ಬೀರಬಲ್ "ಏನನ್ನು ಹುಡುಕುತ್ತಿರುವಿರಿ?" ಎಂದು ವಿಚಾರಿಸಿದರು.

"ನಾವು ಉಳಿಸಿದ್ದ ಹಣವನ್ನು ಎಲ್ಲಿ ಬಚ್ಚಿಟ್ಟೆವು ಎಂದು ಹುಡುಕುತ್ತಿದ್ದೇವೆ" ಎಂದನು ರೈತ. "ಬಚ್ಚಿಟ್ಟಿದ್ದ ಜಾಗದಲ್ಲಿ ಏನು ಗುರುತು ಇರಲಿಲ್ಲವೇ?" ಎಂದರು ಬೀರಬಲ್. "ಓ! ಗುರುತು ಇತ್ತು. ಆ ದಿನ ಅಲ್ಲಿ ಒಂದು ನವಿಲು ನರ್ತನ ಮಾಡುತ್ತಾ ಇತ್ತು. ಅದರ ಹತ್ತಿರವೇ ಬಚ್ಚಿಟ್ಟೆವು" ಎಂದನು ರೈತನ ಮಗ. ಬೀರಬಲ್ಲರು ನಗುತ್ತಾ ಅವರನ್ನು ಮಧ್ಯಾಹ್ನ ಅರಮನೆಗೆ ಬರಲು ಹೇಳಿ, ಇನ್ನು ಸ್ವಲ್ಪ ದೂರ ನಡೆದರು. ಅಲ್ಲಿ ದಾರಿಯಲ್ಲಿ ಇಬ್ಬರು ಜಗಳ ಆಡುತ್ತಿದ್ದರು.

ಬೀರಬಲ್ ಅವರ ಹತ್ತಿರ ಹೋಗಿ "ಏನು ಸಮಸ್ಯೆ?" ಎಂದು ಕೇಳಿದರು. ಅದಕ್ಕೆ ಒಬ್ಬ "ಹಾಲು ಕುಡಿಯಲು ಒಂದು ಎತ್ತು ಇದ್ದರೆ ಚೆಂದ ಎಂದೆನು.

ಅದಕ್ಕೆ ಇವನು ಅದಕ್ಕಿಂತ ಒಂದು ಹುಲಿ ಇದ್ದರೆ ಚೆಂದ ಎನ್ನುತ್ತಿದ್ದಾನೆ. ಹುಲಿ ಬಂದರೆ ಎತ್ತನ್ನು ಕೊಲ್ಲುವುದಿಲ್ಲವೇ?" ಎಂದು ಕೋಪದಿಂದ ಹೇಳಿದನು.

"ಎತ್ತು ಎಲ್ಲಿಯಾದರೂ ಹಾಲು ಕೊಡುವುದೇ?" ಎಂದು ಬೀರಬಲ್‌ರು ನಗುತ್ತಾ ಕೇಳಿದರು. ಅವರ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಇನ್ನೊಬ್ಬ "ಎತ್ತು ಇದ್ದರೆ ಅದರಿಂದ ಹಾಲು ಕರೆದು ಕುಡಿಯಲು ಸಮಯ ವ್ಯರ್ಥ ಆಗುವುದು. ಅದಕ್ಕೆ ಹುಲಿ ಇರಲಿ" ಎಂದನು.

ಬೀರಬಲ್ ಅವರಿಬ್ಬರನ್ನು ಮಧ್ಯಾಹ್ನ ಅರಮನೆಗೆ ಬರಲು ಹೇಳಿದರು. ಪ್ರಯಾಣ ಮುಂದುವರೆಸಿದಾಗ ದಾರಿಯಲ್ಲಿ ಒಂದು ಕೊಚ್ಚೆ ಗುಂಡಿಯಲ್ಲಿ ವ್ಯಕ್ತಿಯೊಬ್ಬ, ತನ್ನ ಎರಡೂ ಕೈಗಳನ್ನು ಮೇಲಕ್ಕೆ ಅಗಲವಾಗಿ ಎತ್ತಿ ಹಿಡಿದುಕೊಂಡು ಆ ಕೊಚ್ಚೆಯಿಂದ ಮೇಲೆ ಬರಲು ಪ್ರಯತ್ನ ಪಡುತ್ತಿದ್ದನು.

ಬೀರಬಲ್ಲರು ಅವನಿಗೆ ತಮ್ಮ ಕೈ ಕೊಟ್ಟ ಮೇಲೆ ಬರಲು ಸಹಾಯ ಮಾಡ ಬೇಕೆನ್ನುವಾಗ ಆ ವ್ಯಕ್ತಿ "ನನ್ನ ಕೈ ಮುಟ್ಟಬೇಡಿ. ಇದು ನಾನು ಮಾಡಲು ಹಾಕುತ್ತಿರುವ ಕಪಾಟಿನ ಅಳತೆ. ನೀವು ನನ್ನ ಕೈ ಹಿಡಿದರೆ ಸರಿಯಾದ ಅಳತೆ ಮರೆತು ಹೋಗುವುದು" ಎಂದನು.



ಬೀರಬಲ್ಲರು ಅವನನ್ನು ಅರಮನೆಗೆ ಬರುವಂತೆ ಹೇಳಿದರು. ಬೀರಬಲ್ಲರು ಭೇಟಿಯಾದ ಆರು ಜನರು ಅರಮನೆಗೆ ಬಂದರು. ಅಲ್ಲಿ ಏನು ನಡೆಯುತ್ತದೆ ಎಂದು ನೋಡಲು ಕುತೂಹಲದಿಂದ ಸೇರಿದ್ದ ಜನ ಇವರ ಮಾತುಗಳನ್ನು ಕೇಳಿ ನಗುತ್ತಾ ಆನಂದಿಸಿದರು. ಬಂದಿದ್ದ ಆರು ಜನರಿಗೆ ಏನೂ ಅರ್ಥವಾಗಲಿಲ್ಲ.

ಅಕ್ಬರ್ ಅವರಿಗೆಲ್ಲಾ ಉಡುಗೊರೆಗಳನ್ನು ಕೊಟ್ಟರು. ಅವರೆಲ್ಲ ಉಡುಗೊರೆಗಳನ್ನು ತೆಗೆದುಕೊಂಡು ಹೋದರು.

ಅಕ್ಬರ್ ಬೀರಬಲ್ಲರನ್ನು ನೋಡಿ "ನಿಮಗೆ ಉಡುಗೊರೆ ಇಲ್ಲ. ಏಕೆಂದರೆ ನೀವು ಎಂಟು ಜನ ಮೂರ್ಖರ ಬದಲಾಗಿ ಆರು ಜನರನ್ನು ಮಾತ್ರ ಕರೆ ತಂದಿರುವಿರಿ" ಎಂದು ಹೇಳಿದರು.

ಒಡನೆಯ ಬೀರಬಲ್ "ದಿನಪೂರ್ತಿ ಹುಡುಕಿದ ನಾನು ಏಳನೆಯ ಮೂರ್ಖ, ಎಂಟನೆಯ ಮೂರ್ಖ....!" ಎಂದು ಹೇಳಿ ಅರ್ಥಕ್ಕೆ ನಿಲ್ಲಿಸಿದರು.

ಅಕ್ಬರ್‌ಗೆ ಅರ್ಥವಾಯಿತು. "ನಿಮ್ಮನ್ನು ಈ ಕೆಲಸಕ್ಕೆ ಕಳುಹಿಸಿದ ನಾನು ಎಂಟನೇ ಮೂರ್ಖ ಅಲ್ಲವೇ?" ಎಂದು ನಕ್ಕರು. ಇಡೀ ಸಭೆ ನಗೆಗಡಲಲ್ಲಿ ಮುಳುಗಿತು.



ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ
Rajalakshmi Srinivasan
Memorial Foundation
ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಆಡಿನಮರಿ ಅನುಭವ

ಆಡಿನಮರಿಗೆ ಕಾಡಿನಲ್ಲಿ ಸುತ್ತಾಡುವುದು ಎಂದರೆ ತುಂಬಾ ಇಷ್ಟ. ಆದರೆ ಅದರ ಅಪ್ಪ ಅಮ್ಮ "ಬೇಡ! ಬೇಡ! ಈ ಕಾಡಿನಲ್ಲಿ ಹುಲಿ, ಸಿಂಹ, ತೋಳ ಎಲ್ಲಾ ಓಡಾಡುತ್ತವೆ. ನೀನು ಒಂಟಿಯಾಗಿ ಹೊರಗೆ ಎಲ್ಲೂ ಹೋಗಬೇಡ. ಗುಹೆಯ ಒಳಗೆ ಇರು" ಎಂದು ಹೇಳಿ ಅವುಗಳು ಊಟ ಹುಡುಕಲು ಹೋದವು.

'ಎಷ್ಟು ದಿನ ಎಂದು ನಾನು ಈ ಗುಹೆಯಲ್ಲೇ ಇರಲಿ? ಹೊರಗೆ ಸ್ವಲ್ಪ ನೋಡೋಣವೇ?' ಆಡಿನಮರಿ ಮೆಲ್ಲಗೆ ಇಣುಕಿ ನೋಡಿತು.

'ಆಹಾ! ಹೊರಗೆ ಎಷ್ಟು ಸುಂದರವಾಗಿದೆ' ಎಂದು ಮೆಲ್ಲಗೆ ನಡೆಯಲು ಆರಂಭಿಸಿತು. ತನ್ನ ಆಸೆ ತೀರುವಷ್ಟು ದೂರದವರೆಗೆ ಅದು ತಿರುಗಾಡಿಕೊಂಡು ಹೋಯಿತು.

ಕತ್ತಲು ಎಲ್ಲಾ ಕಡೆ ಆವರಿಸ ತೊಡಗಿತು. ಅದು ತನ್ನ ಗುಹೆಗೆ ಹೋಗಲು ಇಷ್ಟಪಟ್ಟಿತು. ಆದರೆ ಗುಹೆ ಎಲ್ಲಿದೆ ಎಂದು ಅದಕ್ಕೆ ಗೊತ್ತಾಗಲಿಲ್ಲ.





ನಡೆಯುತ್ತ ಬರುವಾಗ ಹತ್ತಿರದಲ್ಲೇ ಕಂಡ ಒಂದು ಗುಹೆ ಒಳಗೆ ಹೋಯಿತು. ಅದು ನರಿಯ ಗುಹೆ. ಆದರೆ ನರಿ ಗುಹೆಯಲ್ಲಿ ಇರಲಿಲ್ಲ. ಅದು ಊಟ ಹುಡುಕಲು ಹೊರಗೆ ಹೋಗಿತ್ತು. ಆಡಿನಮರಿ ಅಪ್ಪ ಅಮ್ಮ ಬರುವವರೆಗೆ ಅಲ್ಲಿಯೇ ಕಾಯಲು ನಿರ್ಧರಿಸಿತು. ಬೆಳಕು ಆಯಿತು. ನರಿ ಊಟ ತಿಂದು ತನ್ನ ಗುಹೆಗೆ ವಾಪಸ್ಸು ಬಂದಿತು. ಅದಕ್ಕೆ ಗುಹೆ ಒಳಗೆ ಒಂದು ಪ್ರಾಣಿ ಇರುವುದು ಗೊತ್ತಾಯಿತು. ಅದಕ್ಕೆ ಬಾಗಿಲಲ್ಲೇ ನಿಂತುಕೊಂಡಿತು.

"ಯಾರು ಒಳಗೆ ಇರುವುದು? ತಕ್ಷಣ ಹೊರಗೆ ಬನ್ನಿ" ಎಂದು ಹೆದರಿಸಿತು. ನಮ್ಮ ಆಡಿನಮರಿಗೆ ತಪ್ಪಿಸಿಕೊಳ್ಳುವ ದಾರಿ ಗೊತ್ತಿಲ್ಲವೇ? ಅದು ತನ್ನ ಧ್ವನಿಯನ್ನು ಒಂದು ದೊಡ್ಡ ಪ್ರಾಣಿಯ ಧ್ವನಿಯಂತೆ ಬದಲಾಯಿಸಿಕೊಂಡಿತು.

"ಅಹಹಹ! ನಾನು ಸಿಂಹ ರಾಜನ ದೊಡ್ಡಪ್ಪ. ಒಂದು ಬಾರಿಗೆ ಐವತ್ತು ಹುಲಿ ತಿನ್ನುವೆನು. ಬೇಗ ಹೋಗಿ ಹುಲಿ ತೆಗೆದುಕೊಂಡು ಬಾ" ಎಂದಿತು.

ನರಿಗೆ ಭಯ ಆಯಿತು. ಅದು ತಲೆ ಎತ್ತದಂತೆ ಒಂದೇ ಸಮನೆ ಓಡಿತು. ಹುಲಿಗಳ ರಾಜನ ಹತ್ತಿರ ಹೋಯಿತು.



“ಹುಲಿಮಾಮ! ಹುಲಿಮಾಮ! ಒಂದು ಭಯಂಕರವಾದ ಪ್ರಾಣಿ ನನ್ನ ಮನೆಗೆ ಬಂದು ಬಿಟ್ಟಿದೆ. ಅದಕ್ಕೆ ತಿನ್ನಲು ಒಂದು ಬಾರಿಗೆ ಐವತ್ತು ಹುಲಿಗಳು ಬೇಕಂತೆ” ಎಂದಿತು.





ಹುಲಿ ನಗುತ್ತಾ “ಛೇ! ಯಾವ ಪ್ರಾಣಿ ತಾನೇ ಐವತ್ತು ಹುಲಿಗಳನ್ನು ತಿನ್ನಲು ಸಾಧ್ಯ? ಎಲ್ಲಿ ನನಗೆ ಅದನ್ನು ತೋರಿಸು. ನಾನು ಅದನ್ನು ಓಡಿಸುತ್ತೇನೆ” ಎಂದಿತು.

ಆ ವೇಳೆಗಾಗಲೇ ಆಡಿನಮರಿಯ ಅಪ್ಪ ಅಮ್ಮ ಮರಿಯ ಹೆಜ್ಜೆ ಗುರುತನ್ನು ನೋಡುತ್ತಾ ಅಲ್ಲಿಗೆ ಬಂದು ಬಿಟ್ಟಿದ್ದವು. ಮರಿ ಅಪ್ಪ ಅಮ್ಮನ ಬಳಿ ನಡೆದ ಎಲ್ಲವನ್ನು ಹೇಳಿತು.

ಅಷ್ಟರಲ್ಲಿ ನರಿ ಹುಲಿಯ ಜೊತೆ ಬರುತ್ತಿರುವುದು ಕಾಣಿಸಿತು. ಮೂರು ಗುಹೆಯ ಒಳಗೆ ಬಚ್ಚಿಟ್ಟುಕೊಂಡವು. ಉಪಾಯ ಒಂದನ್ನು ಯೋಚಿಸಿದವು.



ನರಿ ಹುಲಿಯ ಜೊತೆ ಗುಹೆ ಹತ್ತಿರ ಬಂದಾಗ ಅಮ್ಮ ಮರಿಯ ಕಿವಿ ಹಿಂಡಿತು. ಮರಿ ನೋವಿನಿಂದ ಕಿರುಚಿತು. ಅಪ್ಪ ಅದರ ಧ್ವನಿ ಬದಲಾಯಿಸಿಕೊಂಡು "ಮರಿ ಏಕೆ ಕೂಗುತ್ತಿದೆ?" ಎಂದು ಕೇಳಿತು.


"ನಮ್ಮ ಮರಿ ಇಲ್ಲಿಗೆ ಬಂದ ದಿನದಿಂದ ಆನೆ, ಕರಡಿ, ಎಮ್ಮೆ ಮಾತ್ರ ತಿಂದಿದೆ. ಅದಕ್ಕೆ ತಿನ್ನಲು ಹುಲಿ ಬೇಕಂತೆ" ಎಂದಿತು ಅಮ್ಮ.

"ಸರಿಸರಿ! ಹುಲಿಗಳನ್ನು ತರಲು ನರಿಯನ್ನು ಕಳುಹಿಸಿರುವೆ. ನರಿ ಹುಲಿಗಳ ಜೊತೆ ಬರಬಹುದು" ಎಂದಿತು ಅಪ್ಪ.

ಇದನ್ನು ಕೇಳಿದ ಹುಲಿ ಭಯದಿಂದ ನಡುಗಿತು. 'ಅಯ್ಯೋ! ಒಳಗೆ ಇರುವ ಪ್ರಾಣಿ ಆನೆ, ಕರಡಿ, ಎಮ್ಮೆ ಎಲ್ಲಾ ತಿನ್ನುತ್ತದೆ. ನಾನೇನಾದರು ಸಿಕ್ಕಿದರೆ ನನ್ನ ಗತಿ ಏನಾಗುತ್ತದೆ?'

ಹುಲಿ ಒಂದು ಕ್ಷಣವು ಅಲ್ಲಿ ನಿಲ್ಲದಂತೆ ಓಡತೊಡಗಿತು. ನರಿ ಒಂದೇ ಅಲ್ಲಿರುವುದೇ?

ಭಾರತದ ಜನಪದ ಕಥೆ



Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಶ್ರವಣ

ಶ್ರವಣ ತನ್ನ ತಂದೆ ತಾಯಿಯನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಅವರಿಬ್ಬರು ಕುರುಡರು. ಜೊತೆಗೆ ವಯಸ್ಸಾಗಿತ್ತು. ಅವರಿಬ್ಬರಿಗು ತೀರ್ಥಯಾತ್ರೆ ಹೋಗಬೇಕೆಂದು ತುಂಬ ಆಸೆ ಇತ್ತು. ಆದರೆ ಹೋಗಲು ಆಗುತ್ತಿರಲಿಲ್ಲ. ಶ್ರವಣ ಅವರ ಆಸೆಯನ್ನು ಪೂರ್ಣಗೊಳಿಸಲು ಬಯಸಿದನು.

ಒಂದು ದಪ್ಪ ಕೋಲಿನ ಎರಡು ತುದಿಗೆ ಎರಡು ಬುಟ್ಟಿ ಕಟ್ಟಿದನು. ತಂದೆ ತಾಯಿಯನ್ನು ಅದರ ಒಳಗೆ ಕುಳ್ಳಿರಿಸಿದನು. ನಂತರ ಆ ಕೋಲನ್ನು ಭುಜದ ಮೇಲೆ ಹೊತ್ತು ತೀರ್ಥಯಾತ್ರೆ ಮಾಡಿಸಲು ಹೊರಟನು. ಊರ ಜನರು ಅವನು ಹೋಗುವುದನ್ನು ನೋಡಿ ಆತನಿಗೆ "ಒಳ್ಳೆಯದಾಗಲಿ" ಎಂದು ಹರಸಿದರು.





ಶ್ರವಣ ಹಲವಾರು ನಗರಗಳನ್ನು, ನದಿಗಳನ್ನು, ಬೆಟ್ಟಗುಡ್ಡಗಳನ್ನು ದಾಟಿದನು. ಮಾರ್ಗದ ಉದ್ದಕ್ಕೂ ಜನರು ಆಶ್ಚರ್ಯದಿಂದ ಇದನ್ನು ನೋಡುತ್ತಿದ್ದರು. ಪ್ರೀತಿಯಿಂದ ವಿಚಾರಿಸುತ್ತಿದ್ದರು. "ಎಂತಹ ಪುಣ್ಯ ಕಾರ್ಯ" ಎಂದು ಕಣ್ಣೀರು ಸುರಿಸುತ್ತಿದ್ದರು.

ಹೀಗೆ ಕೆಲವು ತಿಂಗಳುಗಳು ಕಳೆದವು. ಒಮ್ಮೆ ಅವರು ದಟ್ಟ ಕಾಡಿನ ಒಳಗೆ ಹೋಗುತ್ತಿದ್ದರು. ಎಲ್ಲಾ ಕಡೆ ಹಕ್ಕಿಗಳ ಕಲರವ ತುಂಬಿತ್ತು. ಇವರನ್ನು ನೋಡಿದ ಜಿಂಕೆಗಳು ಭಯದಿಂದ ಓಡಿದವು. ಮೊಲಗಳು ಬಿಲಗಳನ್ನು ಸೇರಿದವು. ಧೈರ್ಯವಂತನಾದ ಶ್ರವಣನಿಗು ಆ ಕಾಡು ಭಯವನ್ನುಂಟು ಮಾಡಿತು. ಕತ್ತಲಾಗತೊಡಗಿತು. ಅವರೆಲ್ಲರು ಮರ ಒಂದರ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದರು.

ಶ್ರವಣನ ತಂದೆ ತಾಯಿ ಕುಡಿಯಲು ನೀರು ಕೇಳಿದರು. ದಪ್ಪ ಕೋಲಿಗೆ ಕಟ್ಟಿದ್ದ ಮಡಕೆಯಲ್ಲಿದ್ದ ನೀರು ಖಾಲಿ ಆಗಿತ್ತು.

ಶ್ರವಣನು "ನಾನು ಹೋಗಿ ನೀರು ತರುವೆನು" ಎಂದು ಹೇಳಿ ಸ್ವಲ್ಪ ದೂರ ನಡೆದನು. ಅಲ್ಲಿ ಜುಳುಜುಳು ಹರಿಯುವ ನೀರನ್ನು ನೋಡಿದನು. ತನ್ನ ಮಡಕೆಯನ್ನು ನೀರಿನಲ್ಲಿ ಮುಳುಗಿಸಿದನು. ಮಡಕೆ ನೀರಿನಲ್ಲಿ ಮುಳುಗುವಾಗ ಗುಳುಗುಳು ಶಬ್ದ ಬಂದಿತು.



ಕಾಡಿಗೆ ಬೇಟೆಯಾಡಲು ಬಂದಿದ್ದ ದಶರಥ ಮಹಾರಾಜನು ಈ ಶಬ್ದ ಕೇಳಿ 'ಆನೆ ನೀರು ಕುಡಿಯುತ್ತಿದೆ' ಎಂದು ಯೋಚಿಸಿ ಆ ಕಡೆಗೆ ಬಾಣ ಬಿಟ್ಟನು. ಆಗ ಬಾಲಕನ ಚೀರುವ ದನಿ ಕೇಳಿ ರಾಜನಿಗೆ ಆಘಾತ ಆಯಿತು. ದಶರಥನು ಶಬ್ದ ಬಂದ ಕಡೆಗೆ ಓಡಿದನು. ಅಲ್ಲಿ ನೋವಿನಿಂದ ಒದ್ದಾಡುತ್ತಿರುವ ಶ್ರವಣನನ್ನು ಕಂಡನು.

"ಗೆಳೆಯ! ಕ್ಷಮಿಸಿಬಿಡು. ಆನೆ ನೀರು ಕುಡಿಯುತ್ತಿದೆ ಎಂದು ನಾನು ತಪ್ಪಾಗಿ ತಿಳಿದು ಬಾಣ ಬಿಟ್ಟೆನು" ಎಂದನು. ಶ್ರವಣನು ಮಾತನಾಡಲು ಕಷ್ಟಪಡುತ್ತಾ "ನನ್ನ ಬಗ್ಗೆ ಚಿಂತಿಸಬೇಡಿ. ಅಲ್ಲಿ ನನ್ನ ಅಪ್ಪ ಅಮ್ಮ ಬಾಯಾರಿಕೆಯಿಂದ ಬಳಲುತ್ತಿದ್ದಾರೆ. ಅವರಿಗೆ ಕುಡಿಯಲು ನೀರು ಕೊಟ್ಟು ಬಿಡಿ" ಎಂದು ಹೇಳಿದನು.

ಶ್ರವಣನ ಮಾತುಗಳನ್ನು ಕೇಳಿದ ದಶರಥ 'ಅಯ್ಯೋ! ತನ್ನ ತಂದೆ ತಾಯಿಗಳ ಸೇವೆಯನ್ನು ಎಷ್ಟು ಪ್ರೀತಿಯಿಂದ ಮಾಡುತ್ತಿದ್ದಾನೆ. ಇಂತಹ ವ್ಯಕ್ತಿಗೆ ನಾನು ಬಾಣ ಬಿಟ್ಟೆನಲ್ಲ!' ಎಂದು ವೇದನೆ ಪಟ್ಟನು. "ಬೇಗ ನೀರನ್ನು ತೆಗೆದುಕೊಂಡು ಹೋಗಿ" ಎಂದು ಹೇಳುತ್ತಿರುವಾಗಲೇ ಶ್ರವಣನ ಪ್ರಾಣ ಪಕ್ಷಿ ಹಾರಿ ಹೋಯಿತು.

ದಶರಥ ಅವನ ದೇಹವನ್ನು ಹೆಗಲ ಮೇಲೆ ಹಾಕಿಕೊಂಡು, ಮತ್ತೊಂದು ಕೈಯಲ್ಲಿ ನೀರಿನ ಮಡಕೆ ಹಿಡಿದುಕೊಂಡು ಹೊರಟನು. ನಡಿಗೆಯ ಶಬ್ದ ಕೇಳಿದ ಶ್ರವಣನ ತಂದೆ ತಾಯಿಗಳು "ಮಗನೇ! ಬಂದೆಯಾ! ಏಕಿಷ್ಟು ತಡ ಮಾಡಿದೆ? ನಿನಗೆ ಏನೋ ಅಪಾಯ ಆಗಿದೆ ಎಂದು ನಾವು ಭಯಪಟ್ಟೆವು. ಬೇಗ ನೀರನ್ನು ಕೊಡು" ಎಂದರು.

ದಶರಥ ಅವಮಾನದಿಂದ ಕುಗ್ಗಿ ಹೋದನು. ಅವನ ಕೈ ನಡುಗಿತು. ಮಡಕೆಯನ್ನು ಅವರಿಗೆ ಕೊಟ್ಟನು. ನಂತರ ಶ್ರವಣನ ಮರಣದ ಬಗ್ಗೆ ಅವರಿಗೆ ಹೇಳಿದನು. ಶ್ರವಣನ ತಂದೆ ತಾಯಿಗಳು ಬಿಕ್ಕಿಬಿಕ್ಕಿ ಅತ್ತರು. ಅವರ ರೋಧನಕ್ಕೆ ಇಡೀ ಕಾಡೇ ನಡುಗಿತು. ಅವರನ್ನು ಹೇಗೆ ಸಮಾಧಾನ ಮಾಡಬೇಕೆಂದು ದಶರಥನಿಗೆ ತಿಳಿಯಲಿಲ್ಲ.

"ಈ ದಿನದಿಂದ ನನ್ನನ್ನು ನಿಮ್ಮ ಮಗನಾಗಿ ಸ್ವೀಕರಿಸಿ ನನ್ನ ಜೊತೆ ಬನ್ನಿ" ಎಂದನು. ವಯಸ್ಸಾದ ಆ ಹಿರಿಯ ಜೀವಗಳು "ಶ್ರವಣ ಇಲ್ಲ ಎಂದ ಮೇಲೆ ನಾವು ಬದುಕಲು ಸಾಧ್ಯವಿಲ್ಲ. ನಿನ್ನ ಮಗನನ್ನು ನೀನು ಇದೇ ವಯಸ್ಸಿಗೆ ಕಳೆದುಕೊಳ್ಳುವೆ. ಆಗ ನಮ್ಮ ನೋವು ನಿನಗೆ ಅರ್ಥವಾಗುವುದು" ಎಂದು ಹೇಳಿ ದು:ಖವನ್ನು ತಾಳಲಾರದೆ ಇಬ್ಬರು ಪ್ರಾಣ ಬಿಟ್ಟರು.

ಹಲವು ವರ್ಷಗಳು ಕಳೆದ ನಂತರ ದಶರಥನು ವಯಸ್ಸಾದಾಗ ತನ್ನ ಮಗ ರಾಮನನ್ನು ಅಗಲ ಬೇಕಾಯಿತು. ಆ ದುಃಖವನ್ನು ತಾಳಲಾರದೆ ಆತ ಅತ್ತನು. ಆಗ ಅವನಿಗೆ ಶ್ರವಣನ ತಂದೆ ತಾಯಿಗಳು ಹೇಳಿದ ಮಾತು ಕಿವಿಯಲ್ಲಿ ರಿಂಗುಣಿಸಿದಂತಾಯಿತು.

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಕೊಳಲ ದನಿ

ಬಹಳ ಹಿಂದೆ ಚೀನಾ ದೇಶದಲ್ಲಿ ಬಿಂಗ್ ಎಂಬ ಒಬ್ಬ ಶ್ರೀಮಂತ ಇದ್ದನು. ಅವನು ಯಾವಾಗಲು ಹಣ ಎಣಿಸುತ್ತಾ ಇರುವನು. ಮಕ್ಕಳು ಆಟ ಆಡಲು ಕರೆದರೆ "ನನಗೆ ಸಮಯವಿಲ್ಲ, ನಾನು ಹಣ ಎಣಿಸಬೇಕು" ಎಂದು ಹೇಳುವನು.

ಬಿಂಗ್ ಮನೆಯ ಹತ್ತಿರ ಲೀ ಎಂಬ ಬಡವನಿದ್ದನು. ಅವನು ತನ್ನ ಜಮೀನಿನಲ್ಲಿ ಕಷ್ಟಪಟ್ಟು ಕೆಲಸ ಮಾಡಿ ಸಂಪಾದಿಸುತ್ತಿದ್ದನು. ಸಮಯ ಸಿಕ್ಕಾಗ ಕೊಳಲನ್ನು ಊದುತ್ತಿದ್ದನು. ಆ ಕೊಳಲ ದನಿಗೆ ಆತನ ಹೆಂಡತಿ ಮಕ್ಕಳು ಮೈ ಮರೆತು ಹಾಡಿ ಆಡುವರು. ಪ್ರಾಣಿ ಪಕ್ಷಿಗಳು, ಗಿಡಮರಗಳು ಮೈ ಮರೆತು ಕೊಳಲ ದನಿ ಕೇಳುತ್ತಿದ್ದವು.

ಈ ಸಂಗೀತ ಗಾಳಿಯಲ್ಲಿ ತೇಲಿ ಬಿಂಗ್ ಕಿವಿಗು ಬಿದ್ದಿತು. ಇದು ಅವನ ಹಣ ಎಣಿಕೆಗೆ ತೊಂದರೆಯಾಗುತ್ತಿತ್ತು. ಅವನ ಲೆಕ್ಕ ತಪ್ಪುತ್ತಿತ್ತು. 'ಅಯ್ಯೋ! ಇಲ್ಲಿಯವರೆಗೆ ಎಷ್ಟು ಎಣಿಸಿದೆ ಎಂದು ಮರೆತೇ ಹೋಯಿತು' ಎಂದು ಮತ್ತೆ ಮತ್ತೆ ಎಣಿಸಬೇಕಾಗುತ್ತಿತ್ತು.

'ಏನಾದರು ಮಾಡಿ ಇದನ್ನು ನಿಲ್ಲಿಸಬೇಕು' ಎಂದು ತೀರ್ಮಾನಿಸಿದ ಬಿಂಗ್ ಒಂದು ನಿರ್ಧಾರಕ್ಕೆ ಬಂದನು. ಹಣದ ಚೀಲದೊಂದಿಗೆ ಲೀ ಮನೆಗೆ ಹೋದನು. ಅದನ್ನು ಲೀಗೆ ಉಡುಗೊರೆಯಾಗಿ ಕೊಟ್ಟನು.






'ಹಣ ಇದ್ದರೆ ಅವನು ಹೇಗೆ ಕೊಳಲನ್ನು ಊದುವನು?' ಎಂದು ತನ್ನಲ್ಲೇ ನಗುತ್ತಾ ಮನೆಗೆ ಬಂದನು.

ಲೀಗೆ ಏನೂ ಅರ್ಥವಾಗಲಿಲ್ಲ. ಅಷ್ಟೊಂದು ಚಿನ್ನದ ನಾಣ್ಯಗಳನ್ನು ಅವನು ನೋಡಿರಲೇ ಇಲ್ಲ. ಎಣಿಸಲು ಆರಂಭಿಸಿದನು. ಅರ್ಧ ಎಣಿಸಿ ಆದ ಮೇಲೆ 'ಸರಿಯಾಗಿ ಎಣಿಸಿರುವೆನೋ? ಇಲ್ಲವೋ?' ಎಂದು ಸಂದೇಹ ಬಂದು ಮತ್ತೆ ಮತ್ತೆ ಎಣಿಸಲು ಆರಂಭಿಸಿದನು. ಹೀಗೆಯೇ ಮಾಡುತ್ತಾ ಇರುವಾಗ ಆ ದಿನ ಕಳೆದು ಹೋಯಿತು. ಲೀ ಒಮ್ಮೆಯೂ ಕೊಳಲನ್ನು ಊದಲಿಲ್ಲ.

ಮಾರನೆಯ ದಿನ ಬೆಳಗ್ಗೆ ಲೀ 'ಹಣದ ಚೀಲವನ್ನು ಎಲ್ಲಿ ಇಡುವುದು?' ಎಂದು ಚಿಂತಿಸಲು ಆರಂಭಿಸಿದನು. ಮಡಕೆ ಒಳಗೆ, ಪೆಟ್ಟಿಗೆಯಲ್ಲಿ, ಅಟ್ಟದ ಮೇಲೆ ಹೀಗೆ ಒಂದೊಂದು ಜಾಗವನ್ನು ಬದಲಾಯಿಸುತ್ತಾ ಇದ್ದನು. ಕೊನೆಗೆ ಬಾವಿ ಒಳಗೆ ಹಾಕಿದನು. ಆ ದಿನವೂ ಆತ ಒಮ್ಮೆಯೂ ಕೊಳಲನ್ನು ಊದಲು ಆಗಲಿಲ್ಲ.


ಅದರ ಮಾರನೆಯ ದಿನ ಲೀ 'ಈ ಹಣವನ್ನು ಹೇಗೆ ಖರ್ಚು ಮಾಡುವುದು?' ಎಂದು ಚಿಂತಿಸತೊಡಗಿದನು. 'ಎತ್ತು ನೇಗಿಲು ತೆಗೆದುಕೊಳ್ಳೋಣವೇ ಅಥವ ಕೋಳಿ ತೆಗೆದುಕೊಂಡು ಸಾಕೋಣವೇ?' ಎಂದು ಯೋಚಿಸಿದನು. ಆ ದಿನವು ಅವನಿಗೆ ಕೊಳಲನ್ನು ಊದಲು ಆಗಲಿಲ್ಲ.



ಮಾರನೆಯ ದಿನ ಲೀಗೆ ಒಂದು ಸಂದೇಹ ಬಂದಿತು. 'ನಾನು ಬಯಸಿದ್ದನ್ನೆಲ್ಲಾ ತೆಗೆದುಕೊಳ್ಳಲು ಆ ಚೀಲದಲ್ಲಿ ಇರುವ ಹಣ ಸಾಕಾಗುವುದೇ?' ಎಂದು ಯೋಚಿಸಿ ಬಾವಿಯಲ್ಲಿ ಬಚ್ಚಿಟ್ಟಿದ ಹಣದ ಚೀಲವನ್ನು ಹೊರಗೆ ತೆಗೆದನು. ಹಣವನ್ನು ಮತ್ತೆ ಎಣಿಸತೊಡಗಿದನು.

ಆಗ ಅವನ ಮಕ್ಕಳು "ಅಪ್ಪಾ! ನೀವು ಕೊಳಲು ಊದುವುದಿಲ್ಲವೇ?" ಎಂದು ಕೇಳಿದರು.

ತಕ್ಷಣ ಲೀ "ನನಗೆ ಸಮಯವಿಲ್ಲ, ನಾನು ಹಣ ಎಣಿಸಬೇಕು" ಎಂದು ಸಿಟ್ಟಿನಿಂದ ಹೇಳಿದನು. ಇದನ್ನು ನೋಡಿದ ಅವನ ಹೆಂಡತಿಗೆ ಮರುಕ ಉಂಟಾಯಿತು.



ಲೀಯನ್ನು ನೋಡಿ "ಪ್ರೀತಿ ಹಣಕ್ಕಿಂತ ಮುಖ್ಯವಾದ ಸಂಪತ್ತು. ಯಾರ ಬಳಿ ಪ್ರೀತಿ ಇರುವುದೋ ಅವರು ಎಂದೂ ಬಡವರಲ್ಲ" ಎಂದು ಹೇಳಿದಳು.

ಲೀ ಹಣ ಎಣಿಸುವುದನ್ನು ನಿಲ್ಲಿಸಿದನು. ಕತ್ತೆತ್ತಿ ಆಕಾಶ ನೋಡಿದನು. ಮಿನುಗುವ ನಕ್ಷತ್ರಗಳಿಂದ ತುಂಬಿದ ಆಕಾಶ ಹೂವಿನ ತೋಟದಂತೆ ಕಾಣುತ್ತಿತ್ತು. ಅವನು ಆ ಆಕಾಶವನ್ನೇ ಬಹಳ ಹೊತ್ತು ನೋಡುತ್ತಿದ್ದನು. ಈಗ ಅವನಿಗೆ ಹಣವನ್ನು ಏನು ಮಾಡಬೇಕೆಂದು ಗೊತ್ತಾಯಿತು. ರಾತ್ರಿ ಎಲ್ಲಾ ನಿದ್ರೆ ಮಾಡದಂತೆ ಒಂದು ಕಟ್ಟಿನಷ್ಟು ಕೊಳಲುಗಳನ್ನು ಮಾಡಿದನು. ಬೆಳಗ್ಗೆ ಎದ್ದ ತಕ್ಷಣ ಬಿಂಗ್ ಮನೆಗೆ ಹೋದನು. ಹಣದ ಚೀಲವನ್ನು ವಾಪಸ್ಸು ಕೊಟ್ಟನು.

"ಈ ಹಣ ನನ್ನ ನೆಮ್ಮದಿಯನ್ನು ಹಾಳು ಮಾಡುತ್ತಿತ್ತು. ನನಗಿದು ಬೇಡ. ಇದೋ! ನನ್ನ ಹತ್ತಿರ ಇರುವ ಸಂಪತ್ತನ್ನು ಹಂಚಿಕೊಳ್ಳೋಣ" ಎಂದು ಕೊಳಲುಗಳ ಕಟ್ಟನ್ನು ಉಡುಗೊರೆಯಾಗಿ ಕೊಟ್ಟನು. ಒಡನೆ ಬಿಂಗ್ ಮಕ್ಕಳು ಆ ಕೊಳಲುಗಳಲ್ಲಿ ಒಂದೊಂದು ಕೊಳಲು ತೆಗೆದುಕೊಂಡರು. ಊದಿ ಹಾಡಿ ಆನಂದಿಸಿದರು.

"ನೋಡಿದೆಯಾ! ಚಿನ್ನ ಮತ್ತು ಬೆಳ್ಳಿಗೆ ಬೆಲೆ ಕಟ್ಟಬಹುದು. ಆದರೆ ನೆಮ್ಮದಿ ಸಂತೋಷಕ್ಕೆ ಬೆಲೆ ಕಟ್ಟಲಾಗದು" ಎಂದನು ಲೀ. ಬಿಂಗ್ ಸ್ವಲ್ಪ ಹೊತ್ತು ಯೋಚಿಸಿದನು. ನಂತರ ತಾನು ಒಂದು ಕೊಳಲನ್ನು ತೆಗೆದುಕೊಂಡು ಊದಲು ಆರಂಭಿಸಿದನು.

ಮೂಲ: ಚೀನಾ ಜನಪದ ಕಥೆ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು


ಅಳಿಲು ಮತ್ತು ಅರಸ

ಬಹಳ ಕಾಲದ ಹಿಂದೆ ಒಬ್ಬ ಅರಸ ಇದ್ದನು. ಅವನು ಬಹಳ ಬುದ್ಧಿವಂತ. ಧೈರ್ಯಶಾಲಿ. ಜೊತೆಗೆ ಹೇರಳವಾದ ಸಂಪತ್ತಿಗೆ ಒಡೆಯನಾಗಿದ್ದನು.

ಒಂದು ದಿನ ಅವನು ತನ್ನ ಮಂತ್ರಿಯ ಜೊತೆ ತೋಟದಲ್ಲಿ ತಿರುಗಾಡುತ್ತಿದ್ದನು. ಹಾಗೆಯೇ ಮಾತನಾಡುತ್ತಿರುವಾಗ ಅರಸನು "ನನ್ನ ಬಳಿ ಯಾರು ತಮ್ಮ ಬಗ್ಗೆ ಹೆಮ್ಮೆಯಿಂದ ಮಾತನಾಡಲಾರರು. ಏಕೆಂದರೆ ಎಲ್ಲದರಲ್ಲು ಎಲ್ಲರಿಗಿಂತಲೂ ನಾನೇ ಉತ್ತಮನಾಗಿರುವೆನು" ಎಂದನು.



ಆ ಮಾತಿಗೆ ಮಂತ್ರಿಯು "ಕ್ಷಮಿಸಬೇಕು ಮಹಾಪ್ರಭು! ಪ್ರತಿಯೊಬ್ಬರು ತಮ್ಮ ಬಗ್ಗೆ ಹೆಮ್ಮೆ ಪಡುತ್ತಾರೆ. ನಿಮ್ಮ ಬಗ್ಗೆ ಗೊತ್ತಿಲ್ಲದವರು ಅವರ ಬಗ್ಗೆ ಹೆಮ್ಮೆ ಪಡುತ್ತಾ ಮಾತನಾಡಬಹುದು. ಅಂತಹ ಮಾತುಗಳನ್ನು ನೀವು ಕೇಳದಂತೆ ಇರುವುದೇ ಉತ್ತಮ" ಎಂದನು. ಈ ರೀತಿ ಅವರು ಮಾತನಾಡುತ್ತಿರುವಾಗಲೇ ಅಲ್ಲಿಗೆ ಒಂದು ಅಳಿಲು ಬಂದಿತು. ಅರಸ ಆ ಆಳಿಲನ್ನು ಗಮನವಿಟ್ಟು ನೋಡಿದನು.



ಆಗ ಅಳಿಲು, "ಸಿರಿ ಸಂಪತ್ತಿನಲ್ಲಿ ನಾನೇ ದೊಡ್ಡವ
ಅರಸರಿಗೆ ನನ್ನ ಮೇಲೆ ಮತ್ಸರ"
ಎಂದು ಹಾಡು ಹಾಡಿತು.

ಇದನ್ನು ಕೇಳಿದ ಅರಸ ಕೋಪದಿಂದ ಅಳಿಲನ್ನು ಹಿಡಿಯಲು ಹೋದನು. ಅಳಿಲು ನಾಣ್ಯವನ್ನು ಬಿಟ್ಟು ಓಡಿ ಹೋಯಿತು. ಅರಸ ಆ ನಾಣ್ಯವನ್ನು ತೆಗೆದುಕೊಂಡು ನಗುತ್ತಾ ಅರಮನೆಗೆ ಬಂದನು.

ಸಂಜೆಯ ಸಮಯ. ಅರಸನ ಸಭೆ ಸೇರಿತ್ತು. ಆಗ ಅಲ್ಲಿಗೆ ಬಂದ ಅಳಿಲು ಎತ್ತರದ ದನಿಯಲ್ಲಿ....

“ಅರಸರು ಹೆಮ್ಮೆಯಿಂದಿರುವುದು ನನ್ನ ಸಂಪತ್ತಿನಿಂದ
ಇದನ್ನು ಊರಿಗೆಲ್ಲಾ ನಾನು ಗಟ್ಟಿಯಾಗಿ ಹೇಳುವೆನು” ಎಂದು ಹಾಡಿತು.

ಅರಸನಿಗೆ ತಡೆಯಲಾರದಷ್ಟು ಸಿಟ್ಟು ಬಂದಿತು. ಆದರೆ ಎಲ್ಲರ ಮುಂದೆ ಏನೂ ಮಾಡಲಾಗಲಿಲ್ಲ.

ಮಾರನೆಯ ದಿನ ಬೆಳಗ್ಗೆ ಅರಸ ಬಡವರಿಗೆ ದಾನ ಮಾಡುತ್ತಿದ್ದನು. ಆಗ ಆಲ್ಲಿಗೆ ಬಂದ ಆಳಿಲು...

“ಅದೋ ಅರಸರು ದಾನ ಮಾಡುತ್ತಿದ್ದಾರೆ ಅದು ನನ್ನ
ಸಂಪತ್ತಿನಿಂದ ಎಂದು ಹೇಳುವೆನು” ಎಂದು ಹಾಡಿತು.

ಅರಸನು “ಆ ಅಳಿಲನ್ನು ಹಿಡಿದು ತನ್ನಿ” ಎಂದನು. ಅಷ್ಟರಲ್ಲಿ ಅಳಿಲು ಓಡಿ ಹೋಗಿತ್ತು. ಮಧ್ಯಾಹ್ನ ಅರಸ ಊಟಕ್ಕೆ ಕುಳಿತನು. ಆಗ ಅಲ್ಲಿಗೆ ಬಂದ ಅಳಿಲು...

“ಅರಸರ ಊಟ ಹಲವು ವಿಧ
ಅವರು ನನ್ನ ಸಂಪತ್ತಿನಿಂದ ತಿನ್ನುತ್ತಾರೆ ಪ್ರತಿದಿನ” ಎಂದು ಹಾಡಿತು.







ಅರಸನಿಗೆ ತಡೆಯಲಾರದಷ್ಟು ಸಿಟ್ಟು ಬಂದಿತು. ಊಟ ತಿನ್ನಲು ಆಗಲಿಲ್ಲ. ರಾತ್ರಿ ಊಟ ಮಾಡುವಾಗಲು ಅಳಿಲು ಬಂದು ಮಧ್ಯಾಹ್ನ ಹಾಡಿದ ಹಾಡನ್ನೇ ರಾತ್ರಿಯು ಹಾಡಿತು.

ಅರಸ ಕೋಪದಿಂದ ನಾಣ್ಯವನ್ನು ಅಳಿಲಿಗೆ ಎಸೆದನು. ತಕ್ಷಣ ಅಳಿಲು,

"ಕೊಟ್ಟು ಬಿಟ್ಟರು ಕೊಟ್ಟು ಬಿಟ್ಟರು
ಭಯದಿಂದ ಅರಸ
ನನ್ನ ಸಂಪತ್ತನ್ನು ಕೊಟ್ಟು ಬಿಟ್ಟರು" ಎಂದು ಹಾಡಿತು.

ಅರಸನಿಗೆ ರಾತ್ರಿ ಪೂರ್ತಿ ನಿದ್ರೆ ಬರಲಿಲ್ಲ. ಬೆಳಗ್ಗೆ ಮಂತ್ರಿಯ ಬಳಿ "ನಮ್ಮ ಸೈನಿಕರನ್ನು ಕಳುಹಿಸಿ ನಾಡಿನಲ್ಲಿ ಇರುವ ಎಲ್ಲಾ ಅಳಿಲುಗಳನ್ನು ಕೊಲ್ಲಿಸುವೆ" ಎಂದು ಹೇಳಿದನು.



ಅದಕ್ಕೆ ಮಂತ್ರಿ "ಎತ್ತರದ ಬೆಟ್ಟಗಳು, ದಟ್ಟವಾದ ಕಾಡುಗಳು, ಹೊಲ ಗದ್ದೆಗಳು ಇಲ್ಲೆಲ್ಲಾ ಇರುವ ಕೋಟ್ಯಾಂತರ ಅಳಿಲುಗಳನ್ನು ಹಿಡಿಯುವುದು ಸುಲಭದ ಕೆಲಸ ಅಲ್ಲ. ಒಂದು ವೇಳೆ ಹಿಡಿದರು ಬೇರೆ ನಾಡುಗಳಿಂದ ಅಳಿಲುಗಳು ಇಲ್ಲಿಗೆ ಬರಬಹುದಲ್ಲವೇ? ಜೊತೆಗೆ ನಮ್ಮ ಸೈನಿಕರು ಆ ಅಳಿಲುಗಳ ಜೊತೆ ಯುದ್ಧ ಮಾಡಲು ಇಷ್ಟ ಪಡುವರೆ? ಆಗಲು ನೀವು ಹುಡುಕುತ್ತಿರುವ ಆ ಅಳಿಲು ತಪ್ಪಿಸಿಕೊಂಡರೆ ಮಾಡಿದ ಪ್ರಯತ್ನ ಎಲ್ಲ ವ್ಯರ್ಥ ಆಗುವುದು. ಇದೆಲ್ಲಕ್ಕಿಂತ ಹೆಚ್ಚಾಗಿ ಭವಿಷ್ಯದ ಇತಿಹಾಸದಲ್ಲಿ ಅಳಿಲುಗಳ ಜೊತೆ ಕಾದಾಡಿದ ಅರಸ ಎಂದು ನೀವು ಹಾಸ್ಯಕ್ಕೆ ಕಾರಣರಾಗುವಿರಿ" ಎಂದು ಹೇಳಿದನು.

"ಈಗ ನಾನೇನು ಮಾಡಲಿ?" ಎಂದನು ಅರಸ

"ಆ ಅಳಿಲಿನ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಮೊದಲು ಅಳಿಲು ಹೆಮ್ಮೆಯಿಂದ ಮಾತನಾಡಿದಾಗಲೇ ನೀವು ಕೋಪಿಸಿಕೊಳ್ಳಬಾರದಿತ್ತು. ಹಾಗೆ ಮಾಡಿದ್ದರೆ ನೀವು ನಿಮ್ಮ ನೆಮ್ಮದಿ ಕಳೆದುಕೊಳ್ಳುತ್ತಿರಲಿಲ್ಲ" ಎಂದನು ಮಂತ್ರಿ.





ಮಾರನೆಯ ದಿನ ಅಳಿಲು ಬಂದಿತು.
ಹಾಡಲು ಆರಂಭಿಸಿತು. ಅದಕ್ಕೆ ಅರಸನು,

"ಯಾರಿಗೆ ತಾನೆ ಗೊತ್ತಿಲ್ಲ
ಬುದ್ಧಿಯಲ್ಲೂ ಸಂಪತ್ತಿನಲ್ಲೂ ಅಳಿಲೇ ದೊಡ್ಡದು
ಎಂದು ಯಾರಿಗೆ ತಾನೇ ಗೊತ್ತಿಲ್ಲ" ಎಂದು ಹಾಡಿದನು.

ಅಳಿಲಿಗೆ ಆಘಾತವಾಯಿತು. ಆಶ್ಚರ್ಯದಿಂದ ಅರಸನನ್ನು ನೋಡಿದ ಅದು ಒಂದೂ ಮಾತನಾಡದೆ ಅಲ್ಲಿಂದ ಮಾಯವಾಯಿತು.

ಮೂಲ: ಮನೋಜ್‌ದಾಸ್ ಕಥೆ

ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಕೊಡುವ ಮರ



ಒಂದು ದೊಡ್ಡ ಮರ. ಎಲೆಗಳಿಂದ ತುಂಬಿ ಹಸಿರಾಗಿತ್ತು. ಪ್ರತಿದಿನ ಆ ಮರದ ಹತ್ತಿರ ಒಬ್ಬ ಹುಡುಗ ಬರುತ್ತಿದ್ದನು. ಅವನು ಆ ಮರದ ಎಲೆಗಳನ್ನೆಲ್ಲಾ ಶೇಖರಿಸುತ್ತಿದ್ದನು.

ಅವುಗಳಿಂದ ಕಿರೀಟ ಮಾಡಿ ತಲೆ ಮೇಲೆ ಇಟ್ಟುಕೊಳ್ಳುತ್ತಿದ್ದನು. ನಂತರ ಕಾಡಿನ ರಾಜನ ತರಹ ನಟಿಸಿ ಆಟ ಆಡುತ್ತಿದ್ದನು. ಹುಡುಗನು ಮರವನ್ನು ಹತ್ತುತ್ತಿದ್ದನು. ಕೊಂಬೆಗಳಲ್ಲಿ ಜೋಕಾಲಿ ಆಡುತ್ತಿದ್ದನು. ಅಲ್ಲಿದ್ದ ಹಣ್ಣುಗಳನ್ನು ಕಿತ್ತು ತಿನ್ನುತ್ತಿದ್ದನು. ಆ ಮರದ ಜೊತೆಯಲ್ಲೇ ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದನು. ಆಯಾಸ ಆದಾಗ ಅದರ ನೆರಳಲ್ಲೇ ನಿದ್ರಿಸುತ್ತಿದ್ದನು.

ಹುಡುಗನು ಮರವನ್ನು ತುಂಬಾ ಪ್ರೀತಿಸುತ್ತಿದ್ದನು. ಮರವು ಹುಡುಗನ ಜೊತೆ ಆನಂದದಿಂದ ಇತ್ತು. ಇದೇ ರೀತಿ ಹಲವು ವರ್ಷಗಳು ಕಳೆದವು. ಹುಡುಗ ಬೆಳೆದು ಯುವಕನಾದನು. ಮರ ಈಗ ಒಂಟಿ ಆಗಿತ್ತು. ಬೇಸರದಿಂದ ಅದು ದುಃಖದಲ್ಲಿತ್ತು.

ಒಂದು ದಿನ ಯುವಕನು ಮರದ ಹತ್ತಿರ ಬಂದನು. ಅವನನ್ನು ನೋಡಿದ ಮರ “ಬಾ ಮಗು! ನನ್ನ ಕೊಂಬೆಗಳನ್ನು ಹತ್ತಿ ಉಯ್ಯಾಲೆ ಆಡು. ಹಣ್ಣುಗಳನ್ನು ತಿನ್ನು. ಆಟ ಆಡಿ ಆನಂದಿಸು” ಎಂದು ಹೇಳಿತು.



CK



ಯುವಕನು "ನಾನು ದೊಡ್ಡವನಾಗಿದ್ದೇನೆ. ಈಗ ನನ್ನದು ಮರ ಹತ್ತಿ ಆಡುವ ವಯಸ್ಸಲ್ಲ. ಈಗ ನಾನು ಸಂಸಾರಕ್ಕೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡು ಸಂತೋಷವಾಗಿ ಇರಬೇಕು. ಅದಕ್ಕೆ ನಿನ್ನಿಂದ ಹಣ ಕೊಡಲು ಆಗುತ್ತದೆಯೇ?" ಎಂದು ಕೇಳಿದನು.

ಮರ "ನನ್ನ ಹತ್ತಿರ ಹಣ ಇಲ್ಲ. ಎಲೆಗಳು, ಹಣ್ಣುಗಳು ಮಾತ್ರ ಇರುವುದು. ನನ್ನಲ್ಲಿರುವ ಹಣ್ಣುಗಳನ್ನು ಕಿತ್ತು ಮಾರಿ ಹಣ ಸಂಪಾದಿಸಿ ಆನಂದದಿಂದ ಇರು" ಎಂದು ಹೇಳಿತು.

ಯುವಕನು ಸರಸರನೆ ಮರವನ್ನು ಹತ್ತಿದನು. ಹಣ್ಣುಗಳನ್ನು ಕಿತ್ತು ಅಂಗಡಿಗೆ ತೆಗೆದುಕೊಂಡು ಹೋದನು. ಮರಕ್ಕೆ ಬಹಳ ಖುಷಿ ಆಯಿತು. ಕೆಲವು ದಿನಗಳು ಕಳೆದವು. ಯುವಕ ಮತ್ತೆ ಬರಲೇ ಇಲ್ಲ. ಮರಕ್ಕೆ ಬಹಳ ದುಃಖವಾಯಿತು.

ಒಂದು ದಿನ ಯುವಕ ತನ್ನತ್ತ ಬರುತ್ತಿರುವುದನ್ನು ನೋಡಿದ ಮರ "ಬಾ ಮಗುವೇ! ನನ್ನ ಕೊಂಬೆಗಳನ್ನು ಹತ್ತಿ ಉಯ್ಯಾಲೆ ಆಡು. ಆನಂದದಿಂದ ಇರು" ಎಂದು ಹೇಳಿತು.

ಅದಕ್ಕೆ ಯುವಕ "ನನಗೆ ಈಗ ಮರ ಹತ್ತಲು ಸಮಯವಿಲ್ಲ. ನನಗೊಂದು ಮನೆ ಬೇಕು. ನನ್ನ ಹೆಂಡತಿ ಮಕ್ಕಳು ಅಲ್ಲಿ ಸುರಕ್ಷಿತವಾಗಿ ಇರಬೇಕು. ನಿನ್ನಿಂದ ನನಗೆ ಒಂದು ಮನೆ ಕೊಡಲು ಆಗುತ್ತದೆಯೇ?" ಎಂದು ಕೇಳಿದನು.



ಮರ "ನನಗೆ ಅಂತ ಒಂದು ಮನೆ ಇಲ್ಲ. ಈ ಕಾಡೇ ನನ್ನ ಮನೆ. ನೀನು ನನ್ನ ಕೊಂಬೆಗಳನ್ನು ತೆಗೆದುಕೊಂಡು ಹೋಗಿ ಮನೆಯನ್ನು ಕಟ್ಟಿಕೊಂಡು



ಆನಂದದಿಂದ ಇರು” ಎಂದು ಹೇಳಿತು. ಯುವಕ ಮರದ ಕೊಂಬೆಗಳನ್ನು ಕತ್ತರಿಸಿ ತೆಗೆದುಕೊಂಡು ಹೋದನು. ಮರಕ್ಕೆ ಬಹಳ ಖುಷಿಯಾಯಿತು. ವರ್ಷಗಳು ಉರುಳಿದವು.

ಒಂದು ದಿನ ಆ ಯುವಕ ಮತ್ತೆ ಮರದ ಬಳಿಗೆ ಬಂದನು. ಆತನನ್ನು ನೋಡಿ ಮರಕ್ಕೆ ಬಹಳ ಸಂತೋಷ ಆಯಿತು. ಆ ಸಂತೋಷದಿಂದ ಮಾತನಾಡಲು ಶಕ್ತಿ ಇಲ್ಲದಂತಾದ ಮರ ಸಣ್ಣ ದನಿಯಲ್ಲಿ “ಬಾ ಮಗನೇ! ಆಟ ಆಡು” ಎಂದು ಹೇಳಿತು.



ಅದಕ್ಕೆ ಯುವಕನು “ನನ್ನದು ಆಟ ಆಡುವ ವಯಸ್ಸಲ್ಲ. ನಾನು ತುಂಬಾ ಬೇಜಾರಿನಲ್ಲಿ ಇದ್ದೇನೆ. ನಾನು ಸಮುದ್ರ ದಾಟಿ ಹೋಗಬೇಕು. ಅದಕ್ಕೆ ನನಗೆ ಒಂದು ದೋಣಿ ಬೇಕು. ನೀನು ನನಗೊಂದು ದೋಣಿ ಕೊಡುವೆಯಾ?” ಎಂದು ಕೇಳಿದನು.

ಉತ್ತರವಾಗಿ ಮರವು “ನಿನಗೆ ಕೊಡಲು ನನ್ನ ಬಳಿ ಇರುವುದು ಈ ದಪ್ಪ ಕಾಂಡ ಒಂದೇ. ಇದನ್ನೇ ಕತ್ತರಿಸಿ ದೋಣಿ ಮಾಡಿಕೋ” ಎಂದು ಹೇಳಿತು.

ಯುವಕನು ಮರದ ದಪ್ಪ ಕಾಂಡ ಕತ್ತರಿಸಿ ದೋಣಿ ಮಾಡಿದನು. ಅದರಲ್ಲಿ ಕುಳಿತು ಸಮುದ್ರ ದಾಟಿದನು. ಆಗ ಮರಕ್ಕೆ ಬಹಳ ಆನಂದವಾಯಿತು. ಆದರೆ ಅದು ನಿಜವಾದ ಆನಂದವಾಗಿರಲಿಲ್ಲ.



ಹಲವು ವರ್ಷಗಳು ಸರಿದವು. ಯುವಕನು ಮುದುಕನಾಗಿ ಬಂದನು. ಆತನನ್ನು ನೋಡಿದ ಮರ “ಕ್ಷಮಿಸು ಮಗನೇ! ನಿನಗೆ ಕೊಡಲು ನನ್ನ ಬಳಿ ಏನೂ ಇಲ್ಲ. ಹಣ್ಣುಗಳು ಕೂಡ ಇಲ್ಲ” ಎಂದು ಹೇಳಿತು.



ಅದಕ್ಕೆ ಮುದುಕನು "ಹಣ್ಣು ತಿನ್ನಲು ನನ್ನ ಹಲ್ಲುಗಳು ಗಟ್ಟಿಯಾಗಿಲ್ಲ" ಎಂದನು.

"ನೀನು ಉಯ್ಯಾಲೆ ಆಡಲು ಕೊಂಬೆಗಳೇ ಇಲ್ಲ" ಎಂದು ಮರ ಹೇಳಿದಾಗ "ಈ ವಯಸ್ಸಿನಲ್ಲಿ ಉಯ್ಯಾಲೆ ಆಡಲು ಆಗುವುದಿಲ್ಲ" ಎಂದನು ಮುದುಕ.

"ನೀನು ನನ್ನ ಮೇಲೆ ಹತ್ತಲು ಕಾಂಡವೇ ಇಲ್ಲ" ಎಂದು ಮರ ಹೇಳಿದಾಗ "ಬಲಹೀನನಾದ ನನಗೆ ಮರ ಹತ್ತುವ ಶಕ್ತಿಯೇ ಇಲ್ಲ" ಎಂದನು ಮುದುಕ.

"ನಿನಗೆ ಏನಾದರು ಕೊಡಲೇ ಬೇಕೆಂದು ನಾನು ಇಷ್ಟಪಡುವೆನು. ಆದರೆ ನನ್ನ ಬಳಿ ಏನೂ ಇಲ್ಲ. ಈ ಬುಡ ಮಾತ್ರ ಇರೋದು" ಎಂದಿತು ಮರ.

"ಈಗ ನನಗೆ ಏನೂ ಬೇಡ. ಮೌನವಾಗಿ ಕುಳಿತು ವಿಶ್ರಾಂತಿ ಪಡೆಯಲು ಒಂದು ಜಾಗ ಬೇಕು. ನನಗೆ ತುಂಬಾ ಆಯಾಸವಾಗಿದೆ" ಎಂದನು ಮುದುಕ.

"ಇದೋ! ಈ ನನ್ನ ಬುಡದ ಮೇಲೆ ಕುಳಿತು ಆಯಾಸ ಪರಿಹರಿಸಿಕೋ. ವಿಶ್ರಾಂತಿ ಪಡೆದುಕೋ" ಎಂದು ಹೇಳಿತು ಮರ. ಮುದುಕ ಬುಡದ ಮೇಲೆ ಕುಳಿತನು. ಮರಕ್ಕೆ ಬಹಳ ಖುಷಿ ಆಯಿತು.



ಮೂಲ: ಶೆಲ್ ಸಿಲ್ವರ್‌ಸ್ಟೈನ್‌ರ "ಕೊಡುವ ಮರ"

ಕಥಾಝುರಿ ತಂಡ 2017
ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಶೆಲ್ ಸಿಲ್ವರ್‌ಸ್ಟೈನ್

ಹುಲಿಯ ಮೇಲೆ ಸವಾರಿ ಮಾಡಿದವನು 94

ಕಾಡಿನಲ್ಲಿ ಆ ದಿನ ನಿಲ್ಲದ ಜಡಿಮಳೆ. ಕಪ್ಪು ಮೋಡಗಳು ಆಕಾಶದ ತುಂಬಾ ತುಂಬಿದ್ದವು. ಎಲ್ಲ ಕಡೆ ಕತ್ತಲು ಆವರಿಸಿದಂತಿತ್ತು. ಆಗಾಗ ಮಿಂಚು 'ಫಳ್ ಫಳಾರ್' ಎನ್ನುತ್ತಿತ್ತು. ಗಾಳಿ ಜೋರಾಗಿ ಬೀಸುತ್ತಿತ್ತು. ಗುಡುಗು ಗುಡುಗುತ್ತಿತ್ತು. ಬಿರುಗಾಳಿಗೆ ಕೆಲವು ಮರಗಳು ಬುಡ ಸಮೇತ ಬಿದ್ದವು.



ಈ ಎಲ್ಲಾ ಶಬ್ದಕ್ಕೆ ಕಾಡಿನಲ್ಲಿದ್ದ ಒಂದು ಹುಲಿ ಹೆದರಿ ಓಡಿ ಹೋಗಿ, ಹತ್ತಿರದಲ್ಲಿ ಇದ್ದ ಒಂದು ಹಳ್ಳಿಯನ್ನು ಸೇರಿಕೊಂಡಿತು. ಮಳೆ ಬರುತ್ತಾ ಇದ್ದುದರಿಂದ ಗುಡಿಸಲ ಮನೆಯೊಂದರ ಗೋಡೆಯ ಪಕ್ಕ ನಿಂತುಕೊಂಡಿತು.

ಆ ಗುಡಿಸಲ ಮನೆಯಲ್ಲಿ ಇದ್ದ ಅಜ್ಜಿಯೊಂದು "ಎರಡು ದಿನದಿಂದ ಮಳೆ ಸ್ವಲ್ಪ ಬಿಡುವು ಕೊಟ್ಟಿತ್ತು. ನೆಮ್ಮದಿಯಿಂದ ಇದ್ದೆ. ಮತ್ತೆ ಬಂತು ತಲೆ ನೋವು" ಎಂದು ವಟಗುಡುತ್ತಿದ್ದರು.

ಗುಡಿಸಲ ಮನೆ ಪೂರ್ತಿ ನೀರು ತೊಟ್ಟಿಕ್ಕುತ್ತಿತ್ತು. ಅದಕ್ಕೆ ಅಜ್ಜಿ ಮೇಜು, ಪೆಟ್ಟಿಗೆ ಎಲ್ಲವನ್ನು ಮುಂದಕ್ಕೆ ಜರುಗಿಸಿದರು. ಆಗ ಆದ ಶಬ್ದಕ್ಕೆ ಮನೆಯ ಗೋಡೆಗಳು ಕಂಪಿಸಿದವು. ಶಬ್ದ ಕೇಳಿದ ಹುಲಿ ಹೆದರಿತು. 'ಮತ್ತೆ ಬಂತು ಅಂದರೇನು? ಅದೇನು ದೊಡ್ಡ ಭೂತನಾ?' ಎಂದುಕೊಂಡಿತು ಹುಲಿ.

ಅದೇ ಸಮಯಕ್ಕೆ ಕಾಳಪ್ಪ ತನ್ನ ಕತ್ತೆಯನ್ನು ಹುಡುಕಿಕೊಂಡು ಅಲ್ಲಿಗೆ ಬಂದನು. ಕತ್ತಲಲ್ಲಿ ಅಜ್ಜಿಯ ಗುಡಿಸಲ ಮನೆ ಗೋಡೆಯ ಪಕ್ಕ ಒಂದು ಪ್ರಾಣಿ ನಿಂತಿರುವುದನ್ನು ನೋಡಿದನು. ಅದು ತನ್ನ ಕತ್ತೆ ಎಂದು ತಿಳಿದು, ಕೋಪದಿಂದ ಅದರ ಕಿವಿ ಹಿಂಡಿ "ನಿನಗೆ ಬುದ್ಧಿ ಇದೆಯಾ? ಈ ಜಡಿಮಳೆಯಲ್ಲಿ ಎಲ್ಲೆಲ್ಲಿ ಎಂದು ನಿನ್ನನ್ನು ಹುಡುಕುವುದು" ಎಂದು ಹೇಳುತ್ತಾ ಅದರ ಮೇಲೆ ಹತ್ತಿ ಕುಳಿತು ಓಡಿಸಿಕೊಂಡು ಹೋದನು.

ಹುಲಿಯ ಕಿವಿಯನ್ನು ಇದುವರೆಗು ಯಾರೂ ಈ ರೀತಿ ಹಿಂಡಿರಲಿಲ್ಲ. ಹುಲಿಗೆ ಭಯವಾಯಿತು. ಅವನು ಹೇಳಿದ ದಾರಿಯಲ್ಲೇ ಸಾಗಿತು. ಮನೆ ಸೇರಿದ ತಕ್ಷಣ ಕಾಳಪ್ಪ ಹುಲಿಯನ್ನು ಬಾಗಿಲಲ್ಲಿ ಕಟ್ಟಿ ಹಾಕಿ ಮಲಗಲು ಹೋದನು.

ಮಾರನೆ ದಿನ ಬೆಳಿಗ್ಗೆ ಕಾಳಪ್ಪನ ಹೆಂಡತಿ ಬಾಗಿಲು ತೆರೆದಳು. ಬಾಗಿಲಲ್ಲಿ ಕಟ್ಟಿ ಹಾಕಿದ್ದ ಹುಲಿಯನ್ನು ನೋಡಿ ಕಿರುಚಿಕೊಂಡಳು. ಅವಳ ಕಿರುಚಾಟ ಕೇಳಿ ಹೆದರಿದ ಕಾಳಪ್ಪ ಓಡಿ ಬಂದನು.

ಬಾಗಿಲಲ್ಲಿ ಹುಲಿಯನ್ನು ನೋಡಿದ ತಕ್ಷಣ "ಅಯ್ಯೋ" ಎಂದು ಕೂಗುತ್ತಾ ಒಳಗೆ ಓಡಿದನು. ಹೊರಗೆ ಬರಲಿಲ್ಲ. ಇಬ್ಬರು ಬಾಗಿಲು ಮುಚ್ಚಿ ಒಳಗೆ ಕುಳಿತರು.



ಕಾಳಪ್ಪನ ಮನೆ ಬಾಗಿಲಲ್ಲಿ ಕಟ್ಟಿದ್ದ ಹುಲಿಯನ್ನು ನೋಡಿದ ಊರ ಜನರು ನಾಲ್ಕು ದಿಕ್ಕುಗಳಿಗೂ ಚಲ್ಲಾಪಿಲ್ಲಿಯಾಗಿ ಓಡಿದರು. ಈ ಎಲ್ಲ ಕೂಗಾಟಕ್ಕೆ ಹೆದರಿದ ಹುಲಿ ತನಗೆ ಕಟ್ಟಿದ್ದ ಹಗ್ಗವನ್ನು ಕಚ್ಚಿ ತುಂಡರಿಸಿ ಕಾಡಿನೊಳಕ್ಕೆ ಓಡಿ ಹೋಯಿತು.

ಕಾಳಪ್ಪ ಹುಲಿಯ ಮೇಲೆ ಮಾಡಿದ ಸವಾರಿ ಊರಿನಲ್ಲೆಲ್ಲಾ ಸುದ್ದಿ ಆಯಿತು. ಜನರು ಅವನನ್ನು ನೋಡಲು ಬಂದರು. "ನೀನು ಹುಲಿಯ ಮೇಲೆ ಸವಾರಿ ಮಾಡಿದೆಯಂತೆ!" ಎಂದು ಆಶ್ಚರ್ಯದಿಂದ ಕೇಳುತ್ತಿದ್ದರು.

"ಬರಿ ಸವಾರಿ ಮಾತ್ರ ಮಾಡಲಿಲ್ಲ. ನಾನು ಅದರ ಕಿವಿ ಹಿಂಡಿದೆನು" ಎಂದು ಕಾಳಪ್ಪ ಹೆಮ್ಮೆಯಿಂದ ಹೇಳುತ್ತಿದ್ದನು. ಸುದ್ದಿ ಊರ ರಾಜನ ಕಿವಿಗು ಬಿದ್ದಿತು. ಆತ ಕಾಳಪ್ಪನಿಗೆ ಸಾಕಷ್ಟು ಉಡುಗೊರೆಗಳನ್ನು ಕೊಟ್ಟು ಗೌರವಿಸಿದನು.

ಕೆಲವು ತಿಂಗಳುಗಳು ಕಳೆದವು. ಒಮ್ಮೆ ಶತ್ರು ರಾಜನೊಬ್ಬ ಆ ಊರ ರಾಜನ ಮೇಲೆ ದಂಡೆತ್ತಿ ಬಂದನು. ತಕ್ಷಣ ರಾಜನು ಹುಲಿ ಮೇಲೆ ಸವಾರಿ ಮಾಡಿದ ವೀರನನ್ನು ಕರೆ ತರಲು ಹೇಳಿದನು.

ಆತ ಶತ್ರುಗಳನ್ನು ಧ್ವಂಸ ಮಾಡುತ್ತಾನೆ ಎಂದು ತಿಳಿದ ರಾಜನು "ಅವನಿಗೆ ಒಂದು ಗಟ್ಟಿಮುಟ್ಟಾದ ಕುದುರೆ ಕೊಡಿ" ಎಂದು ಅಪ್ಪಣೆ ಮಾಡಿದನು. ರಾಜನ ಅಪ್ಪಣೆ ಕೇಳಿದ ಕಾಳಪ್ಪ ದಿಗಿಲು ಬಿದ್ದನು. 'ಬೇರೆ ದಾರಿ ಇಲ್ಲ. ಹೋಗಲೇ ಬೇಕು' ಎಂದು ಕಷ್ಟಪಟ್ಟು ಕುದುರೆ ಹತ್ತಿದನು. "ನಾನು ಕೆಳಗೆ ಬೀಳದಂತೆ ನನ್ನನ್ನು ಕುದುರೆಗೆ ಬಿಗಿಯಾಗಿ ಕಟ್ಟು" ಎಂದು ಹೆಂಡತಿಗೆ ಹೇಳಿದನು.



ಆಕೆ ಆತನ ಶರೀರವನ್ನು ಕುದುರೆಯ ಬೆನ್ನಿಗೆ ಬಿಗಿಯಾಗಿ ಕಟ್ಟಿದಳು. ಇದರಿಂದ ಗಲಿಬಿಲಿಗೊಂಡ ಕುದುರೆ ನಾಗಾಲೋಟದಿಂದ ಓಡತೊಡಗಿತು. ಗದ್ದೆ, ಬಯಲು, ನದಿ ಎಲ್ಲವನ್ನು ದಾಟಿ ಶತ್ರು ಪಡೆಯತ್ತಾ ನುಗ್ಗ ತೊಡಗಿತು.

"ಅಯ್ಯೋ! ಆ ಕಡೆ ಹೋಗ ಬೇಡ" ಎಂದು ಕೂಗಿದ ಕಾಳಪ್ಪ ಆದರೆ ಕುದುರೆಯನ್ನು ನಿಲ್ಲಿಸುವುದಾದರು ಹೇಗೆ? ಕಾಳಪ್ಪ ತನ್ನ ಎರಡು ಕೈಗಳನ್ನು ಎತ್ತಿ ಮರದ ಕೊಂಬೆಯೊಂದನ್ನು ಹಿಡಿದುಕೊಂಡನು.



ಆದರೆ ಕುದುರೆ ಓಡುತಿದ್ದ ವೇಗಕ್ಕೆ ಮರ ಬುಡ ಸಮೇತ ಕಿತ್ತು ಬಂದಿತು. ಕೈಯಲ್ಲಿನ ಹಿಡಿದ ಮರವನ್ನು ತಿರುಗಿಸುತ್ತಾ ಕುದುರೆಯ ಮೇಲೆ ವೇಗವಾಗಿ ಬರುತ್ತಿರುವ ಕಾಳಪ್ಪನನ್ನು ಶತ್ರು ಪಡೆಯ ಸೈನಿಕರು ನೋಡಿದರು.

"ಅಯ್ಯೋ! ಆ ಮನುಷ್ಯನನ್ನು ನೋಡಿ ಮರವನ್ನೇ ಕಿತ್ತುಕೊಂಡು ಯುದ್ಧಕ್ಕೆ ಬರುತ್ತಿದ್ದಾನೆ. ಸಂದೇಹವೇ ಇಲ್ಲ. ಆತನೇ ಹುಲಿಯ ಸವಾರಿ ಮಾಡಿದ ವೀರ" ಎಂದು ಹೇಳುತ್ತಾ ಪ್ರಾಣ ಭಯದಿಂದ ಓಡ ತೊಡಗಿದರು. ಓಡುತ್ತಿದ್ದ ಕುದುರೆ ಒಮ್ಮೆ ಮೈ ಕೊಡವಿಕೊಂಡು ನಿಂತಾಗ ಕಟ್ಟಿದ್ದ ಹಗ್ಗ ಸಡಿಲವಾಗಿ ಕಾಳಪ್ಪ ಕುದುರೆಯಿಂದ ಕೆಳಗೆ ಬಿದ್ದನು.

"ಒಳ್ಳೆಯ ಸಮಯ! ಇಲ್ಲಿ ಯಾರು ಇಲ್ಲ. ನಾನು ತಪ್ಪಿಸಿಕೊಂಡೆ" ಎಂದು ಹೇಳುತ್ತಾ ಕುದುರೆಯನ್ನು ಹಿಡಿದುಕೊಂಡು ಮನೆಯ ಕಡೆಗೆ ನಡೆಯತೊಡಗಿದನು. ಇನ್ನು ಮುಂದೆ ಅವನು ಕುದುರೆ ಹತ್ತುವನೇ? ಕುದುರೆ ಹಿಡಿದು ಕಾಳಪ್ಪ ನಡೆದು ಬರುತ್ತಿರುವುದನ್ನು ನೋಡಿದ ಜನರು "ಶತ್ರುಗಳನ್ನೆಲ್ಲ ಓಡಿಸಿ ಹೇಗೆ ನಡೆದುಕೊಂಡು ಬರುತ್ತಿರುವನು!" ಎಂದು ಆಶ್ಚರ್ಯದಿಂದ ಹೇಳಿದರು.

ಮೂಲ: ಭಾರತದ ಜನಪದ ಕಥೆ

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ಧರ್ಮರಾಯನ ಪ್ರಾಮಾಣಿಕತೆ

[ಪಾಂಡವರ ಹನ್ನೆರಡು ವರ್ಷಗಳ ವನವಾಸ ಕೊನೆ ಆಗುವ ಕಾಲ...]



ಒಂದು ದಿನ ಪಾಂಡವರು ಕಾಡಿನಲ್ಲಿ ಒಂದು ಜಿಂಕೆಯನ್ನು ಬೆನ್ನಟ್ಟಿ ಹೋಗುತ್ತಿದ್ದರು. ಅದು ತುಂಬಾ ದೂರ ಓಡಿದ ನಂತರ ಮರೆಯಾಯಿತು. ಆಯಾಸಗೊಂಡಿದ್ದ ಪಾಂಡವರು ಒಂದು ಆಲದ ಮರದ ಕೆಳಗೆ ಕುಳಿತರು.

"ತಮ್ಮಾ! ನನಗೆ ತುಂಬಾ ಬಾಯಾರಿಕೆ ಆಗಿದೆ" ಎಂದರು ಧರ್ಮರಾಯ.

"ನಾನು ಹೋಗಿ ನೀರು ತರುವೆನು" ಎಂದು ನಕುಲ ಹೊರಟನು. ಕೊಳದ ಹತ್ತಿರ ಹೋಗಿ ನೀರಿಗೆ ಕೈ ಇಟ್ಟನು. ಆಗ ಬಾನಿನಿಂದ ಒಂದು ಧ್ವನಿ "ನಿಲ್ಲು! ನನ್ನ ಪ್ರಶ್ನೆಗೆ ಉತ್ತರ ಹೇಳಿ ಆಮೇಲೆ ನೀರನ್ನು ಕುಡಿ" ಎಂದು ಹೇಳಿತು.

ಆದರೆ ನಕುಲ ಆ ಕಡೆ ಗಮನ ಹರಿಸದೆ ನೀರನ್ನು ಕುಡಿದನು. ತಕ್ಷಣ ಕೆಳಗೆ ಬಿದ್ದು ಬಿಟ್ಟನು.






ಎಷ್ಟು ಹೊತ್ತಾದರು ನಕುಲ ಬರಲಿಲ್ಲ. ಧರ್ಮರಾಯನಿಗೆ ಚಿಂತೆ ಆಯಿತು. ಸಹದೇವನನ್ನು ಕಳುಹಿಸಿದರು. ಕೊಳದ ಬಳಿಗೆ ಬಂದು ಸಹದೇವ ನೀರಿಗೆ ಕೈ ಇಟ್ಟನು. ಮತ್ತೆ ಅದೇ ಧ್ವನಿ ಕೇಳಿಸಿತು. ಅವನು ಆ ಕಡೆ ಗಮನ ಹರಿಸದೆ ನೀರನ್ನು ಕುಡಿದು ಕೆಳಗೆ ಬಿದ್ದು ಬಿಟ್ಟನು. ಅವರಿಬ್ಬರನ್ನು ಹುಡುಕುತ್ತಾ ಅರ್ಜುನ ಕೊಳದ ಬಳಿಗೆ ಬಂದನು.

“ನಾನು ಹೇಳಿದ್ದನ್ನು ಕೇಳದೆ ನಿನ್ನ ತಮ್ಮಂದಿರು ಸತ್ತು ಹೋದರು. ನನ್ನ ಪ್ರಶ್ನೆಗೆ ಉತ್ತರ ಹೇಳದೆ ನೀರು ಕುಡಿದರೆ ನಿನಗು ಇದೇ ಗತಿ ಆಗುವುದು” ಎಂದಿತು ಆ ಧ್ವನಿ.

ಅರ್ಜುನ ಕೋಪದಿಂದ “ಮರೆಯಲ್ಲಿ ಮಾತನಾಡುವ ಹೇಡಿ! ನಾನು ನಿನಗೆ ಏನು ಮಾಡುವೆ ನೋಡು” ಎಂದು ಬಾಣ ಒಂದನ್ನು ತೆಗೆದು ಕೊಂಡನು. ನಂತರ 'ನೀರನ್ನು ಕುಡಿದು ಆಮೇಲೆ ಯುದ್ಧ ಮಾಡುವೆ' ಎಂದು ಯೋಚಿಸಿ ನೀರನ್ನು ಕುಡಿದನು. ತಕ್ಷಣ ಕೆಳಗೆ ಬಿದ್ದನು.

ಆನಂತರ ಭೀಮ ಅಲ್ಲಿಗೆ ಬಂದನು. ಆತನು ತನ್ನ ಸಹೋದರರರಂತೆ ನೀರನ್ನು ಕುಡಿದು ಕೆಳಗೆ ಬಿದ್ದನು. ಕೊನೆಯಲ್ಲಿ ಧರ್ಮರಾಯ ಬಂದರು. ತನ್ನ ಸಹೋದರರರ ಸ್ಥಿತಿ ನೋಡಿ ಅವರಿಗೆ ತುಂಬ ದುಃಖವಾಯಿತು.



“ನಿನ್ನ ತಮ್ಮಂದಿರು ನನ್ನ ಮಾತನ್ನು ಕೇಳದೆ ನೀರನ್ನು ಕುಡಿದು ಸತ್ತು ಹೋದರು. ನೀನಾದರು ನನ್ನ ಪ್ರಶ್ನೆಗಳಿಗೆ ಉತ್ತರ ಹೇಳಿ ಬಾಯಾರಿಕೆ ದೂರ ಮಾಡಿಕೊ” ಎಂದಿತು ಆ ದನಿ. ಅದು ಯಕ್ಷನ ಧ್ವನಿ ಎಂದು ಧರ್ಮರಾಯನಿಗೆ ಗೊತ್ತಾಯಿತು. “ನಿನ್ನ ಪ್ರಶ್ನೆಗಳನ್ನು ಕೇಳು” ಎಂದರು.



ಯಕ್ಷನು ಒಂದೇ ಸಮನೆ ಪ್ರಶ್ನೆಗಳನ್ನು ಕೇಳುತ್ತಾ ಹೋದನು. ಧರ್ಮರಾಯ ಒಂದೇ ಸಮನೆ ಉತ್ತರಿಸುತ್ತಾ ಹೋದರು.

“ಯಾವಾಗಲು ಮಾನವರ ಜೊತೆಯಾಗಿ ಇರುವುದು ಏನು?”

“ಧೈರ್ಯ.”

“ಯಶಸ್ಸಿನ ಮೊದಲ ಹೆಜ್ಜೆ ಯಾವುದು?”

“ನಿರಂತರ ಪ್ರಯತ್ನ.”

“ಅತಿ ಸಂತೋಷದಾಯಕವಾದದ್ದು ಏನು?”

“ಆತ್ಮತೃಪ್ತಿ.”

“ಅತಿಯಾದ ದು:ಖಕ್ಕೆ ಕಾರಣ ಏನು?”

“ಆಸೆ–ಕೋಪ.”


“ಯಾರನ್ನು ಎಲ್ಲರು ತುಂಬ ಪ್ರೀತಿಸುವರು?”

“ಅಹಂಕಾರ ಬಿಟ್ಟವರನ್ನು.”

“ನಿಜವಾದ ಗೆಳೆತನ ಯಾವುದು?”

“ಸ್ವಾರ್ಥವಿಲ್ಲದೆ ಸಹಾಯ ಮಾಡುವುದು.”







"ಮಾನವ ಬುದ್ಧಿವಂತನಾಗುವುದು ಹೇಗೆ?"
"ಉತ್ತಮ ಜನರ ಒಡನಾಟದಿಂದ."
"ಪರಸ್ಥಳಗಳಿಗೆ ಹೋಗುವಾಗ ಜೊತೆಯಲ್ಲಿ ಇರುವುದು ಏನು?"
"ಕಲಿತ ವಿದ್ಯೆ."
"ಅತ್ಯುತ್ತಮವಾದ ಲಾಭ ಯಾವುದು?"
"ರೋಗ ರಹಿತ ಜೀವನ."

ಈ ರೀತಿಯ ಹಲವು ಪ್ರಶ್ನೆಗಳಿಗೆ ಧರ್ಮರಾಯ ಯೋಚಿಸದೆ ಒಂದೇ ಸಮನೆ ಉತ್ತರಿಸಿದರು. ಕೊನೆಯಲ್ಲಿ ಯಕ್ಷನು "ನಿನ್ನ ಉತ್ತರದಿಂದ ನನಗೆ ಸಂತೋಷವಾಗಿದೆ. ಸತ್ತಿರುವ ಈ ನಿನ್ನ ತಮ್ಮಂದಿರಲ್ಲಿ ನೀನು ತುಂಬಾ ಪ್ರೀತಿಸುವ ಒಬ್ಬರನ್ನು ಬದುಕಿಸುವೆ. ಯಾರು ಬೇಕು ಹೇಳು?" ಎಂದನು.

"ನಕುಲನನ್ನು ಬದುಕಿಸಿ" ಎಂದರು ಧರ್ಮರಾಯ. ತಕ್ಷಣ ಯಕ್ಷನು ಧರ್ಮರಾಯನ ಎದುರಿಗೆ ಪ್ರತ್ಯಕ್ಷನಾಗಿ "ಹದಿನಾರು ಸಾವಿರ ಆನೆಗಳ ಬಲ ಇರುವ ಭೀಮನನ್ನು ಅಥವ ಬಿಲ್ವಿದ್ಯೆಯಲ್ಲಿ ಶ್ರೇಷ್ಠನಾದ ಅರ್ಜುನನನ್ನು ಬಿಟ್ಟು ನಕುಲನನ್ನು ಬದುಕಿಸು ಎಂದು ಏಕೆ ಕೇಳಿದೆ?" ಎಂದನು.

"ನನ್ನ ಅಪ್ಪನಿಗೆ ಕುಂತಿ ಮತ್ತು ಮಾದ್ರಿ ಎಂದು ಇಬ್ಬರು ಹೆಂಡತಿಯರು. ನಾನು ಕುಂತಿಯ ಮಗ. ನಕುಲ ಮಾದ್ರಿಯ ಮಗ. ಅದಕ್ಕೆ ಅವನನ್ನು ಬದುಕಿಸು ಎಂದು ಕೇಳಿದೆ" ಎಂದರು.

"ಧರ್ಮರಾಯ! ನಿನ್ನ ಪ್ರಾಮಾಣಿಕತೆಯನ್ನು ನೋಡಿ ನನಗೆ ಹೆಮ್ಮೆ ಆಗುತ್ತಿದೆ. ಅದಕ್ಕಾಗಿ ನಿನ್ನ ಎಲ್ಲಾ ಸಹೋದರರನ್ನು ಬದುಕಿಸುವೆನು" ಎಂದನು ಯಕ್ಷ.

Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಉಮ ಕೃಷ್ಣಸ್ವಾಮಿ

ಕಂಡು ಹಿಡಿಯೋಣ ಬಾ!



ನೆಲದಲ್ಲಿ ಎಳೆದ ಗೆರೆಗಳು
ಆರಂಭ ಮುಕ್ತಾಯ ಕಾಣದವು – ಅವು ಏನು?

ಎರಡು ಚಕ್ರಗಳಿರುವವು
ಎಂಟು ಕಾಲುಗಳು ಎಳೆಯುವವು
ಅಂಗಡಿ ಬೀದಿಯಲಿ ಸಾಗುವುದು – **ಅದು ಏನು?**



ಎತ್ತರಕ್ಕೆ ಹಾರುವುದು ಹಕ್ಕಿಯಲ್ಲ
ಅಂದದ ಬಾಲ ಇರುವುದು ಕೋತಿಯಲ್ಲ
ಮೋಡಗಳ ನಡುವೆ ಬಚ್ಚಿಟ್ಟುಕೊಳ್ಳುವುದು
ಚಂದ್ರನಲ್ಲ – **ಅದು ಏನು?**

ವೇಗವಾಗಿ ಓಡುವುದು
ಶಬ್ದ ಮಾಡುತ್ತಾ ಸಾಗುವುದು
ಎರಡು ಕಂಬಿಗಳ ಮೇಲಿರುವುದು
ಕಾಡು ಬೆಟ್ಟದಲ್ಲು ಹೋಗುವುದು
ನಾವು ಹತ್ತಿದರೆ ನಮ್ಮನ್ನು ಎತ್ತಿಕೊಂಡು
ಹೋಗುವುದು – **ಅದು ಏನು?**





ಭಾರ ಹೊರುವುದು
ತುಳಿದರೆ ಮುಂದೆ ಸಾಗುವುದು
ಅದು ಏನು?

ಜೊತೆಯಾಗೆ ಇರುವರು ಗೆಳೆಯರಲ್ಲ
ಒಂದಾಗಿ ಸೇರರು ಶತ್ರುಗಳಲ್ಲ – **ಅವರು ಯಾರು?**





ಕೈಗಳಿಲ್ಲ ಈಜುವುದು
ಕಾಲುಗಳಿಲ್ಲ ಓಡುವುದು – **ಅದು ಏನು?**



ಒಬ್ಬರ ಸಹಾಯದಿಂದ
ಐವತ್ತು ಜನರ ಹೊತ್ತು ಸಾಗುವುದು
ಅದು ಏನು?



ಒದ್ದಾದ ಮೇಲೆ ಉಗುಳೋದು
ಘರ್ಜಿಸುತ್ತಾ ಉರುಳೋದು – **ಅದು ಏನು?**

ಇದ್ದ ಜಾಗದಲ್ಲೇ
ವಿಷಯ ಹರಡುವುದು – **ಅದು ಏನು?**

ಮನೆ ಹುಡುಕಿ ಬರುವುದು
ಇರುವ ವಿಷಯ ತಿಳಿಸುವುದು – **ಅದು ಏನು?**

ಶಬ್ದ ಮಾಡಿ ಕರೆಯುವುದು
ಕಿವಿಯಲಿ ವಿಷಯ ಹೇಳುವುದು – **ಅದು ಏನು?**

ಕೇಳುವ ವಿಷಯ ಕಣ್ಣೊಳಗೆ ತುಂಬುವ
ಅದು ಏನು?






ಬೆಳಗಿನ ಜಾವವೇ ಹೊರಡುವುದು
ಸಾವಿರಾರು ವಿಷಯ ಹೊತ್ತಿರುವುದು
ಅದು ಏನು?



ಹೇಳಿದ್ದನ್ನು ತೆಗೆದುಕೊಳ್ಳುವ
ಬೇಕೆಂದಾಗ ಅದನ್ನೇ ಕೊಡುವ
ಅದು ಏನು?

ರೇಡಿಯೋ, ದಿನಪತ್ರಿಕೆ, ಬಸ್ಸು, ಟೇಪ್‌ರೆಕಾರ್ಡರ್
ದೂರವಾಣಿ, ದೂರದರ್ಶನ, ಸ್ಕೂಟರ್
ಅಂಚೆಪತ್ರ, ದೋಣಿ, ರೈಲುಹಳಿ, ವಿಮಾನ,
ಸೈಕಲ್, ರೈಲು, ಎತ್ತಿನ ಗಾಡಿ, ರಸ್ತೆ



பி.சரஸ்வதி வி.விஜயகாந்தி
எல்.எஸ்.சரஸ்வதி எஸ்.ராஜலக்ஷ்மி

Rajalakshmi Srinivasan
Memorial Foundation

அனுவாத : ஸுகந்தினி புஷ்பா.எம்
சித்ர ரசனெ : உம க்ருஷ்ணஸ்வாமி

ಧೈರ್ಯದ ಪರೀಕ್ಷೆ



ಜಪಾನ್ ನಾಡಿನಲ್ಲಿ ಒಂದು ವಿಶಿಷ್ಟವಾದ ಶಾಲೆ ಇತ್ತು. ಹಳೆಯ ರೈಲು ಬೋಗಿಗಳೇ ಆ ಶಾಲೆಯಲ್ಲಿ ತರಗತಿಗಳಾಗಿದ್ದವು. ಆ ಶಾಲೆಯಲ್ಲಿ ಟೊಟೊಚಾನ್ ಎಂಬ ಒಬ್ಬ ಚಿಕ್ಕ ಹುಡುಗಿ ಓದುತ್ತಿದ್ದಳು.

ಮಕ್ಕಳು ತರಗತಿಯ ಎಲ್ಲಾ ಚಟುವಟಿಕೆಗಳಲ್ಲೂ ಆನಂದದಿಂದ ಪಾಲ್ಗೊಳ್ಳುತ್ತಿದ್ದರು. ತಮಗೆ ಇಷ್ಟವಾದ ಚಟುವಟಿಕೆಗಳನ್ನು ತಾವೇ ಆರಿಸಿಕೊಳ್ಳುತ್ತಿದ್ದರು. ದಿನಪೂರ್ತಿ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಸುತ್ತ ಮುತ್ತಲಿನ ಹತ್ತಿರದ ಜಾಗಗಳಿಗೆ ಮಕ್ಕಳನ್ನು ಆಗಾಗ್ಗೆ ಕರೆದುಕೊಂಡು ಹೋಗಲಾಗುತ್ತಿತ್ತು. ಮಕ್ಕಳು ಅಲ್ಲಿನ ವಿಷಯಗಳನ್ನು ಸಂಗ್ರಹಿಸಿ, ನಂತರ ತರಗತಿಯಲ್ಲಿ ಅದನ್ನು ಹಂಚಿಕೊಳ್ಳುತ್ತಿದ್ದರು. ಕೆಲವು ವೇಳೆ ಗುಡಾರಗಳನ್ನು ಹಾಕಿಕೊಂಡು ಶಾಲೆಯಲ್ಲೇ ಇರುತ್ತಿದ್ದರು.

ಒಮ್ಮೆ ಮಕ್ಕಳೆಲ್ಲ ಗುಡಾರಗಳನ್ನು ಹಾಕಿಕೊಂಡು ಶಾಲೆಯಲ್ಲಿಯೇ ಇದ್ದರು. ಆಗ ಮುಖ್ಯೋಪಾಧ್ಯಾಯರು “ನಿಮಗೆಲ್ಲರಿಗೂ ಧೈರ್ಯದ ಪರೀಕ್ಷೆಯನ್ನು ಮಾಡುವೆವು. ದೇವಸ್ಥಾನದ ಮೈದಾನದಲ್ಲಿ ಪರೀಕ್ಷೆ ನಡೆಯುವುದು. ಇದಕ್ಕೆ ದೆವ್ವದಂತೆ ಬಚ್ಚಿಟ್ಟುಕೊಳ್ಳಲು ಯಾರು ಯಾರು ಬಯಸುವಿರಿ?” ಎಂದು ಕೇಳಿದರು.

ಏಳು ಜನ ಮಕ್ಕಳು ಕೈ ಮೇಲೆತ್ತಿದರು. ಧೈರ್ಯ ಪ್ರದರ್ಶನದ ದಿನ ನಿಶ್ಚಯಿಸಲ್ಪಟ್ಟಿತು. ಆ ದಿನವು ಬಂದಿತು. ಟೊಟೊಚಾನ್ ಅಮ್ಮ “ಭಯದಿಂದ ಸೋಲಬೇಡ” ಎಂದು ಹೇಳಿ ಶಾಲೆಗೆ ಕಳುಹಿಸಿದರು.

ಸಂಜೆ ಆಯಿತು. ದೆವ್ವದ ವೇಷ ಹಾಕುವ ಮಕ್ಕಳು ತಮ್ಮ ತಮ್ಮ ಉಡುಪುಗಳನ್ನು ಧರಿಸಿಕೊಂಡರು. ದೇವಸ್ಥಾನದ ಬಳಿಯ ಮೈದಾನದಲ್ಲಿ ಅಡಗಿಕೊಳ್ಳಲು ಹೋದರು. ಹೋಗುವ ಮುಂಚೆ ಅವರು ಉಳಿದ ಮಕ್ಕಳನ್ನು ನೋಡಿ "ನಿಮ್ಮನ್ನೆಲ್ಲಾ ಹೇಗೆ ಭಯಪಡಿಸುತ್ತೇವೆ ನೋಡಿ" ಎಂದು ಹೆದರಿಸಿ ಹೋದರು.



"ದೆವ್ವಗಳನ್ನು ನೋಡಲು ಹೋಗುವ ಧೈರ್ಯಶಾಲಿಗಳು ಕತ್ತಲಾಗಿರುವ ದಾರಿಯನ್ನು ದಾಟಿ ಹೋಗಬೇಕು. ಅಲ್ಲಿ ದೆವ್ವಗಳನ್ನು ನೋಡಬೇಕು. ನಂತರ ಶಾಲೆಗೆ ಹಿಂತಿರುಗಿ ಬರಬೇಕು. ಯಾರಾದರು ಅದನ್ನು ಪೂರ್ತಿ ಮಾಡದೆ ಅರ್ಧಕ್ಕೆ ಹಿಂದಿರುಗಿ ಬಂದರು ಪರವಾಗಿಲ್ಲ" ಎಂದು ಮುಖ್ಯೋಪಾಧ್ಯಾಯರು ಹೇಳಿದರು.

ಕತ್ತಲಾಯಿತು. ಮುಖ್ಯೋಪಾಧ್ಯಾಯರು ಮಕ್ಕಳನ್ನು ಚಿಕ್ಕ ಚಿಕ್ಕ ಗುಂಪುಗಳಾಗಿ ವಿಂಗಡಿಸಿದರು. ಸ್ವಲ್ಪ ಸ್ವಲ್ಪ ಸಮಯದ ಅಂತರದಲ್ಲಿ ಮಕ್ಕಳು ಹೊರಟರು.

"ದಾರಿಯಲ್ಲಿ ಯಾವ ದೆವ್ವವು ಬರುವುದಿಲ್ಲ. ದೇವಸ್ಥಾನದ ಬಳಿ ಹೋದಾಗ ಮಾತ್ರ ದೆವ್ವಗಳನ್ನು ನೋಡಬಹುದು" ಎಂದು ಮುಖ್ಯೋಪಾಧ್ಯಾಯರು ಮೊದಲೇ ಹೇಳಿದ್ದರು. ಆದರು ಮಕ್ಕಳಿಗೆ ನಂಬಿಕೆ ಇರಲಿಲ್ಲ.



ಆ ದಿನ ಚಂದ್ರ ಇರಲಿಲ್ಲ. ಎಲ್ಲಿ ನೋಡಿದರು ಕಪ್ಪು ಕತ್ತಲು. ಮರಗಳ ಎಲೆಗಳು ಗಾಳಿಗೆ ಅಲುಗಾಡಿದರು ಗುಂಪಿನಲ್ಲಿದ್ದ ಕೆಲವರು "ಉಯ್!" ಎಂದು ಊಳಿಡುತ್ತಿದ್ದರು.

ಕಾಲಿನಿಂದ ಏನನ್ನು ಎಡವಿದರು "ಓಯ್!" ಎಂದು ಭಯ ಪಡುತ್ತಿದ್ದರು. ಸ್ನೇಹಿತರ ಕೈ ಹಿಡಿದಿದ್ದರು ದೆವ್ವದ ಕೈ ಹಿಡಿದಿರುವಂತೆ ಅವರಿಗೆ ಅನಿಸುತ್ತಿತ್ತು. ಪಾಳು ಬಿದ್ದಿರುವ ಚಿಕ್ಕ ಚಿಕ್ಕ ಕಟ್ಟಡಗಳು ಆ ಕತ್ತಲೆಯಲ್ಲಿ ಭಯಂಕರವಾಗಿ ಕಾಣಿಸುತ್ತಿದ್ದವು.

ಟೊಟೊಚಾನ್ 'ನನಗೆ ಧೈರ್ಯದ ಪರೀಕ್ಷೆ ಎಂದರೇನು ಎಂದು ಗೊತ್ತಾಯಿತು. ವಾಪಸ್ ಹೋಗಿ ಬಿಡೋಣವೇ?' ಎಂದು ಯೋಚಿಸಿದಳು. ಆ ಗುಂಪಿನಲ್ಲಿ ಉಳಿದವರು ಅದೇ ರೀತಿ ಯೋಚಿಸುತ್ತಿದ್ದರು. ಎಲ್ಲರು ಸೇರಿ ಒಂದು ತೀರ್ಮಾನಕ್ಕೆ ಬಂದರು. ಅವರೆಲ್ಲ ಎಷ್ಟು ವೇಗವಾಗಿ ಓಡಲು ಸಾಧ್ಯವೋ ಅಷ್ಟು ವೇಗವಾಗಿ ಓಡಿ ಶಾಲೆಯನ್ನು ಸೇರಿದರು.

ಉಳಿದ ಗುಂಪಿನ ಮಕ್ಕಳು ಅವರಿಗಿಂತ ಮೊದಲೇ ಶಾಲೆಗೆ ಬಂದಿದ್ದರು. ಯಾರು ದೆವ್ವಗಳನ್ನು ನೋಡಲು ಹೋಗಿರಲಿಲ್ಲ.

ಸ್ವಲ್ಪ ಸಮಯದ ನಂತರ ದೆವ್ವದ ವೇಷ ಹಾಕಿ ಬಚ್ಚಿಟ್ಟುಕೊಂಡಿದ್ದ ಒಬ್ಬ ಚಿಕ್ಕ ಹುಡುಗನು ಅಳುತ್ತಾ ಬಂದನು. 'ಯಾರು ನನ್ನನ್ನು ನೋಡಲು ಬರಲಿಲ್ಲ' ಎಂದು ಅವನು ಭಯಗೊಂಡಿದ್ದನು. ಅಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಇದ್ದ ಉಪಾಧ್ಯಾಯರು ಅವನನ್ನು ಕರೆತಂದಿದ್ದರು.




ಇನ್ನು ಸ್ವಲ್ಪ ಹೊತ್ತಿನ ನಂತರ ಕೆಲವು ದೆವ್ವಗಳು ಅಳುತ್ತಾ ಬಂದವು. ಒಂದು ದೆವ್ವ ಇನ್ನೊಂದು ದೆವ್ವವನ್ನು ಬೇರೆ ಯಾರೋ ಎಂದು ತಿಳಿದು ಭಯ ಪಡಿಸಲು ಹೋಗಿ ಇಬ್ಬರು ಒಬ್ಬರಿಗೊಬ್ಬರು ಡಿಕ್ಕಿ ಹೊಡೆದುಕೊಂಡು ಅಳುತ್ತಿದ್ದರು.

ಇದನ್ನು ಕೇಳಿ ಎಲ್ಲಾ ಮಕ್ಕಳು ನಕ್ಕರು. ದೆವ್ವಗಳು ಅಳುತ್ತಾ ನಕ್ಕವು. ಕೊನೆಯಲ್ಲಿ ಪತ್ರಿಕೆಯ ಹಾಳೆಗಳ ದೆವ್ವದ ವೇಷ ಹಾಕಿಕೊಂಡಿದ್ದ ಒಂದು ದೆವ್ವ ಬಂದಿತು. "ನನ್ನನ್ನು ನೋಡಲು ಯಾರು ಬರಲಿಲ್ಲ ಏಕೆ?" ಎಂದು ಕೋಪದಿಂದ ಕೇಳಿತು.

ಅದನ್ನು ನೋಡಿದ ಎಲ್ಲರು "ಸೊಳ್ಳೆ ಕಡಿದ ದೆವ್ವ" ಎಂದು ಹೇಳಿ ನಕ್ಕರು.

ಆ ದಿನದಿಂದ ಟೊಟೊಚಾನ್ ಶಾಲೆಯ ಮಕ್ಕಳು ದೆವ್ವಗಳನ್ನು ನೋಡಲು ಹೆದರುವುದಿಲ್ಲ. ಏಕೆಂದರೆ ದೆವ್ವಗಳು ಹೆದರುತ್ತವೆ ಅಲ್ಲವೆ?

ಮೂಲ: ಟೊಟೊಚಾನ್ ಟೆಡ್‌ಸುಕೋ ಕ್ರೊಯನಾಗಿ



Rajalakshmi Srinivasan
Memorial Foundation

ಅನುವಾದ : ಸುಗಂಧಿನಿ ಪುಷ್ಪ.ಎಂ

ನೆನಪುಗಳು

ನನ್ನ ಚಿಕ್ಕ ವಯಸ್ಸಿನಲ್ಲಿ ನಾನು ನನ್ನ ತಂದೆಯ ಮೇಜಿನ ಮೇಲೆ ಒಂದು ಪುಸ್ತಕ ನೋಡಿದೆನು. ಅದರಲ್ಲಿ ಶ್ರವಣನು ಕುರುಡರಾದ ತನ್ನ ತಂದೆ ತಾಯಿಗಳಿಗೆ ಮಾಡಿದ ಸೇವೆಯ ಬಗ್ಗೆ ಇತ್ತು. ಅದನ್ನು ಆಸಕ್ತಿಯಿಂದ ಓದಿದೆನು. ಅಲ್ಲಿ ಶ್ರವಣನು ತನ್ನ ಕುರುಡು ತಂದೆ ತಾಯಿಗಳನ್ನು ಬುಟ್ಟಿಗಳಲ್ಲಿ ಹೊತ್ತುಕೊಂಡು ಹೋಗುವ ಚಿತ್ರವನ್ನು ಒಬ್ಬ ಕಲಾಕಾರ ಬರೆದಿದ್ದನು. ಆ ಪುಸ್ತಕ ಮತ್ತು ಆ ಚಿತ್ರ ಎರಡು ಮನವನ್ನು ತಟ್ಟಿದವು.

ಶ್ರವಣನು ಸತ್ತಾಗ ಆತನ ತಂದೆ ತಾಯಿಗಳು ದುಃಖದಿಂದ ರೋಧಿಸುತ್ತಿದ್ದ ಚಿತ್ರ ನನ್ನ ಮನದಲ್ಲಿ ಇನ್ನೂ ಹಸಿರಾಗಿದೆ. ಶ್ರವಣನ ಕತೆ ಓದಿದ ನಂತರ ನಾನು ನನ್ನ ತಂದೆ ತಾಯಿಗಳಿಗೆ ಪ್ರೀತಿ ಗೌರವ ತೋರಿಸ ಬೇಕೆಂದು ತೀರ್ಮಾನಿಸಿದೆ.



ಇದೇ ರೀತಿ ಹರಿಶ್ಚಂದ್ರ ನಾಟಕವು ನನ್ನ ಮನಸ್ಸಿನ ಮೇಲೆ ತುಂಬ ಪ್ರಭಾವ ಬೀರಿತು. ಅಪ್ಪ ಅಮ್ಮನ ಅನುಮತಿ ಪಡೆದು ನಾನು ಈ ನಾಟಕವನ್ನು ನೋಡಿದೆನು. ಎಷ್ಟು ಬಾರಿ ನೋಡಿದರು ಬೇಸರವೇ ಆಗದಂತಹ ನಾಟಕ.


ಹರಿಶ್ಚಂದ್ರ ಕಷ್ಟಗಳನ್ನು ಅನುಭವಿಸುವಾಗಲು ಸತ್ಯವನ್ನೇ ಹೇಳುತ್ತಿದ್ದ ದೃಶ್ಯಗಳು ಮತ್ತೆ ಮತ್ತೆ ನನ್ನ ಮನದಂಗಳದಲ್ಲಿ ಮೂಡುತ್ತಿದ್ದವು. ಎಷ್ಟು ಕಷ್ಟಗಳು ಎದುರಾದರು ಆತ ಸತ್ಯವನ್ನು ಬಿಡಲಿಲ್ಲ. ಎಷ್ಟೋ ಬಾರಿ ನನ್ನನ್ನೇ ಹರಿಶ್ಚಂದ್ರ ಎಂದುಕೊಳ್ಳುತ್ತಿದ್ದೆ. 'ಎಲ್ಲರು ಏಕೆ ಹರಿಶ್ಚಂದ್ರನಂತೆ ಸತ್ಯವಂತರಾಗಿ ನಡೆಯಬಾರದು?' ಎಂದು ಪ್ರಶ್ನಿಸಿಕೊಳ್ಳುತ್ತಿದ್ದೆ. ಈ ಪ್ರಶ್ನೆ ಹಗಲು ರಾತ್ರಿ ನನ್ನನ್ನು ಕಾಡುತ್ತಿತ್ತು.

ನನ್ನ ಜೀವನದಲ್ಲಿ ನಡೆದ ಇನ್ನೊಂದು ಘಟನೆಯನ್ನು ನನ್ನಿಂದ ಮರೆಯಲು ಸಾಧ್ಯವೇ ಇಲ್ಲ. ಈಗಲು ಅದನ್ನು ನೆನೆದು ನನ್ನಿಂದ ಎಂತಹ ತಪ್ಪಾಯಿತೆಂದು ಬೇಸರದಿಂದ ಚಿಂತಿಸಿದ್ದೇನೆ.

ನಾನು ಹೈಸ್ಕೂಲಿನಲ್ಲಿ ಇದ್ದಾಗ ನನಗೆ ಒಬ್ಬ ಗೆಳೆಯ ಇದ್ದನು. “ಅವನ ನಡತೆ ಸರಿ ಇಲ್ಲ. ಅವನ ಜೊತೆ ಸೇರಬೇಡ” ಎಂದು ಎಲ್ಲರು ಹೇಳಿದರು ನಾನು ಕೇಳಲಿಲ್ಲ.

ಕೆಲವು ದಿನಗಳು ಕಳೆದವು. ಆ ಸ್ನೇಹಿತ ನನ್ನ ಮನಸ್ಸನ್ನು ನಿಧಾನವಾಗಿ ಬದಲಾಯಿಸಿದನು. ನಾನು ಅವನ ಜೊತೆ ಸೇರಿ ಯಾರಿಗು ಗೊತ್ತಾಗದಂತೆ ರಹಸ್ಯವಾಗಿ ಧೂಮಪಾನ ಮಾಡಿದೆನು. ಕೆಲವು ಕೆಟ್ಟ ಅಭ್ಯಾಸಗಳಲ್ಲಿ ಅವನ ಜೊತೆ ಸೇರಿದೆನು.

ಆದರೆ ಬಹಳ ಬೇಗನೆ ನನ್ನ ಮನಸ್ಸಾಕ್ಷಿ ನನ್ನನ್ನು ಎಚ್ಚರಿಸಿತು. ನಾನು ಮಾಡಿದ ತಪ್ಪುಗಳ ಬಗ್ಗೆ ಅಪರಾಧಿ ಭಾವ ಕಾಡತೊಡಗಿತು. ತಂದೆಯ ಬಳಿ ನಾನು ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳಲು ನಿರ್ಧರಿಸಿದೆ.



ಆದರೆ ಏನೋ ಒಂದು ರೀತಿಯ ಹಿಂಜರಿಕೆ. ಅದಕ್ಕಾಗಿ ನಡೆದುದೆಲ್ಲವನ್ನು ಪತ್ರದಲ್ಲಿ ಬರೆದು, ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ಬರಹದಲ್ಲಿ ಪ್ರಮಾಣವನ್ನು ಮಾಡಿದೆನು. ಬರೆದ ಪತ್ರವನ್ನು ತಂದೆಗೆ ಕೊಟ್ಟು ಅವರ ಎದುರಿಗೆ ಕುಳಿತೆನು.

ಅವರು ಪೂರ್ತಿಯಾಗಿ ಪತ್ರವನ್ನು ಓದಿದರು. ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಸುರಿಯುವ ಅವರ ಕಣ್ಣೀರಿನಿಂದ ಪತ್ರ ಒದ್ದೆ ಆಯಿತು. ಒಂದು ಕ್ಷಣ ಅವರು ಕಣ್ಮುಚ್ಚಿ ಕುಳಿತರು.

ನಂತರ ಪತ್ರವನ್ನು ಹರಿದು ಹಾಕಿದರು. ನಾನೂ ಅತ್ತೆನು. ಅವರ ನೋವು ದುಃಖ ಅರ್ಥ ಮಾಡಿಕೊಂಡೆನು. ಕಣ್ಣೀರ ಹನಿಗಳು ನನ್ನ ತಪ್ಪುಗಳನ್ನು ತೊಳೆದು ಹಾಕಿದವು.

ತಂದೆಯ ಪ್ರೀತಿ ನನ್ನನ್ನು ಹೊಸ ಮನುಷ್ಯನನ್ನಾಗಿ ಮಾಡಿತು. ಅಹಿಂಸೆ
ಬಗ್ಗೆ ಮೊಟ್ಟ ಮೊದಲ ಬಾರಿಗೆ ನನ್ನ ತಂದೆಯಿಂದ ಕಲಿತೆ.
ಶಿಕ್ಷೆಗಿಂತ ಪ್ರೀತಿಯಿಂದ ಹೃದಯವನ್ನು ಗೆಲ್ಲಬಹುದು
ಎಂದು ತಿಳಿದೆನು.

ಮೂಲ: ಸತ್ಯ ಶೋಧನೆ; ಗಾಂಧೀಜಿ

ಕಥಾಝರಿ ತಂಡ 2017
ಪಿ.ಸರಸ್ವತಿ ವಿ.ವಿಜಯಕಾಂತಿ
ಎಲ್.ಎಸ್.ಸರಸ್ವತಿ ಎಸ್.ರಾಜಲಕ್ಷ್ಮಿ

Rajalakshmi Srinivasan
Memorial Foundation


ಅನುವಾದ : ಸುಗಂಧಿನಿ ಪುಷ್ಪ.ಎಂ
ಚಿತ್ರ ರಚನೆ : ಎಸ್.ಪಿ.ರಾಜು

ವಿಕ್ರಮಾದಿತ್ಯನ ಸಿಂಹಾಸನ

ಒಂದಾನೊಂದು ಕಾಲದಲ್ಲಿ ಭಾರತ ದೇಶದಲ್ಲಿ ಉಜ್ಜಯಿನಿ ಎಂಬುದು ಒಂದು ಪ್ರಸಿದ್ಧ ನಗರವಾಗಿತ್ತು. ಅಲ್ಲಿ ಕಾಳಿದಾಸನಂತಹ ಕವಿಗಳು, ಪ್ರಸಿದ್ಧರಾದ ಪಂಡಿತರು ಇದ್ದರು. ಚಕ್ರವರ್ತಿ ವಿಕ್ರಮಾದಿತ್ಯನು ಉಜ್ಜಯಿನಿ ನಗರವನ್ನು ಆಳ್ವಿಕೆ ಮಾಡುತ್ತಿದ್ದನು. ಅವನು ಉತ್ತಮ ನ್ಯಾಯಾಧೀಶನೆಂಬ ಹೆಸರು ಪಡೆದಿದ್ದನು. ಪ್ರಜೆಗಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾ ಸಮರ್ಥ ರಾಜನೆನಿಸಿದ್ದನು. ಜನರು ರಾಜನನ್ನು ತುಂಬ ಪ್ರೀತಿಸುತ್ತಿದ್ದರು. ಅವನನ್ನು ದೇವರಿಗೆ ಸಮಾನವಾಗಿ ನೋಡುತ್ತಿದ್ದರು.

ಹೀಗೆ ಹಲವು ವರ್ಷಗಳು ಕಳೆದವು. ನಗರಗಳು ಬದಲಾದವು. ಗೋಪುರಗಳು, ಮಾಳಿಗೆಗಳು ಮಣ್ಣಿನಲ್ಲಿ ಹೂತು ಹೋದವು. ಜನರು ವಿಕ್ರಮಾದಿತ್ಯನನ್ನು ಮರೆತುಬಿಟ್ಟರು.

ಒಂದು ದಿನ ದನ ಕಾಯುವ ಹುಡುಗರೆಲ್ಲ ದನಗಳನ್ನು ಮೇಯಲು ಬಿಟ್ಟು ಆಟ ಆಡುತ್ತಿದ್ದರು. ಅವರು ಆಡುತ್ತಿದ್ದ ಜಾಗದಲ್ಲಿ ಶಿಲ್ಪಿಗಳು ಕೆತ್ತಿದ ಕಂಬಗಳು, ಮೂರ್ತಿಗಳು ಅಲ್ಲಲ್ಲಿ ಬಿದ್ದಿದ್ದವು. ಎಲ್ಲ ಕಡೆ ಮಣ್ಣಿನ ಗುಡ್ಡೆಗಳಿದ್ದವು. ಆ ಮಣ್ಣಿನ ಗುಡ್ಡೆಗಳಲ್ಲಿ ಒಂದು ಮಣ್ಣು ಗುಡ್ಡೆ ಹಸಿರಿನಿಂದ ಕೂಡಿದ್ದು ಸ್ವಲ್ಪ ಎತ್ತರವಾಗಿತ್ತು. ಒಬ್ಬ ಹುಡುಗ ಓಡಿ ಹೋಗಿ ಆ ಗುಡ್ಡೆಯ ಮೇಲೆ ಕುಳಿತನು.



ಆಟ ಆಡುತ್ತಾ ಆ ಗುಡ್ಡೆಯ ಮೇಲೆ ಕುಳಿತ ಹುಡುಗನು "ನಾನು ನ್ಯಾಯಾಧೀಶ. ಬನ್ನಿ ನಿಮ್ಮ ಜಗಳ ಏನೆಂದು ಹೇಳಿ. ನ್ಯಾಯ ತೀರ್ಮಾನ ಮಾಡುವೆ" ಎಂದನು.

ಹುಡುಗರಿಗೆಲ್ಲ ಈ ಆಟ ತುಂಬ ಇಷ್ಟವಾಯಿತು. ತಕ್ಷಣ ಅವರು ತಮ್ಮ ತಮ್ಮಲ್ಲೇ ಜಗಳ ಒಂದನ್ನು ಸೃಷ್ಟಿ ಮಾಡಿಕೊಂಡರು. ಅವರಲ್ಲಿ ಇಬ್ಬರು ಹುಡುಗರು ಮುಂದೆ ಬಂದರು.

"ಸನ್ಮಾನ್ಯ ನ್ಯಾಯಾಧೀಶರಲ್ಲಿ ನಮ್ಮದೊಂದು ವಿನಂತಿ. ನಮ್ಮಿಬ್ಬರ ಮನೆಯ ಮಧ್ಯೆ ಇರುವ ಜಮೀನಿನ ವಿವಾದವನ್ನು ದಯವಿಟ್ಟು ಬಗೆಹರಿಸಬೇಕು" ಎಂದು ಕೇಳಿಕೊಂಡರು.

ನ್ಯಾಯಾಲಯದಲ್ಲಿ ಇಬ್ಬರು ವಾದವನ್ನು ಮಾಡಿದರು. ಆಗ ಆ ಹುಡುಗರು ಅಲ್ಲೊಂದು ಚಮತ್ಕಾರ ಕಂಡರು. ಅಲ್ಲಿಯವರೆಗು ಹುಡುಗಾಟಿಕೆಯಿಂದ ಮಾತನಾಡುತ್ತಿದ್ದ ನ್ಯಾಯಾಧೀಶ ಪಾತ್ರಧಾರಿ ಹುಡುಗನ ಮುಖಭಾವದಲ್ಲಿ ಬದಲಾವಣೆ ಆಯಿತು. ನಿಜವಾದ ನ್ಯಾಯಾಧೀಶನಂತೆ ಆತ ಉತ್ತಮ ತೀರ್ಪು ನೀಡಿದ.

ಅವನ ಮಾತುಗಳನ್ನು ಕೇಳಿದ ಹುಡುಗರು ಹೆದರಿದರು. ಆದರು ಅದೇ ಆಟವನ್ನು ಮುಂದುವರೆಸಿದರು. ಇನ್ನೊಂದು ಹೊಸ ಸಮಸ್ಯೆಯನ್ನು ನ್ಯಾಯಾಧೀಶರ ಮುಂದೆ ತಂದರು. ಈ ಬಾರಿಯು ತುಂಬ ಅನುಭವ ಇರುವವನಂತೆ ಹುಡುಗ ತೀರ್ಪು ನೀಡಿದನು.

ಇದೇ ರೀತಿ ಗಂಟೆಗಟ್ಟಲೇ ಮಕ್ಕಳು ಆಟ ಆಡಿದರು. ಮನೆಗೆ ಹೋಗುವ ಸಮಯ ಆಯಿತು. ಮಣ್ಣುಗುಡ್ಡೆಯಿಂದ ಕೆಳಗೆ ಇಳಿದ ಆ ಹುಡುಗನು ಮಾಮೂಲಿನಂತೆ ಗೆಳೆಯರ ಜೊತೆ ನಗುತ್ತಾ ಮಾತನಾಡಲು ಆರಂಭಿಸಿದನು. ಆ ದಿನವನ್ನು ಮಕ್ಕಳಿಂದ ಮರೆಯಲು ಸಾಧ್ಯವಾಗಲಿಲ್ಲ.

ಆನಂತರದ ದಿನಗಳಲ್ಲಿ ನಿಜವಾದ ಸಮಸ್ಯೆ ಬಂದಾಗಲೆಲ್ಲಾ ಮಕ್ಕಳು ಆ ಹುಡುಗನನ್ನು ಆ ಮಣ್ಣಿನ ಗುಡ್ಡೆಯ ಮೇಲೆ ಕುಳಿತುಕೊಳ್ಳುವಂತೆ ಮಾಡುತ್ತಿದ್ದರು. ಚಿಕ್ಕ ಹುಡುಗನಾದರು ಜಗಳ ಬಗೆಹರಿಸಿ ಸರಿಯಾದ ತೀರ್ಮಾನ ಕೊಡುತ್ತಿದ್ದನು.

ಈ ವಿಷಯ ಸುತ್ತಮುತ್ತಲಿನ ಊರುಗಳಿಗೆಲ್ಲಾ ಹರಡಿತ್ತು. ಸುತ್ತಲಿನ ಹಳ್ಳಿಗಳ ಜನರು ತಮ್ಮ ತಮ್ಮ ಜಗಳಗಳನ್ನು ಈ ಹುಡುಗನ ಬಳಿಗೆ ತರುತ್ತಿದ್ದರು. ಹುಡುಗ ಮಣ್ಣಿನ ಗುಡ್ಡೆಯ ಮೇಲೆ ಕುಳಿತು ಕೊಡುತ್ತಿದ್ದ ತೀರ್ಮಾನ ಸರಿಯಾಗಿಯೇ ಇರುತ್ತಿತ್ತು.


ಈ ಸುದ್ದಿ ಆ ಊರಿನ ರಾಜನ ಕಿವಿ ಮುಟ್ಟಿತು. 'ಆ ಹುಡುಗ ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಕುಳಿತಿರಬೇಕು' ಎಂದು ರಾಜನು ಊಹಿಸಿದನು.

ತನ್ನ ಆಳುಗಳನ್ನು ಕಳುಹಿಸಿ ಮಣ್ಣು ಗುಡ್ಡೆಯನ್ನು ಅಗೆಸಿದನು. ರಾಜ ಊಹಿಸಿದಂತೆ ಅಲ್ಲಿ ಒಂದು ಸಿಂಹಾಸನ ಇತ್ತು. ಅದರಲ್ಲಿ ಹಾರಾಡಲು ಸಿದ್ಧವಾದಂತಹ ಇಪ್ಪತ್ತೈದು ದೇವತಾ ಗೊಂಬೆಗಳು ಇದ್ದವು.

ವಿಷಯ ತಿಳಿದು ಊರಲ್ಲೆಲ್ಲಾ ಕೋಲಾಹಲ ಆಯಿತು. ಎಲ್ಲೆಲ್ಲೂ ಆನಂದ ತುಂಬಿತು. ಜನರೆಲ್ಲಾ ಸಂಭ್ರಮಿಸಿದರು. ಸಿಂಹಾಸನವನ್ನು ಭವ್ಯ ಮೆರವಣಿಗೆಯಲ್ಲಿ ಅರಮನೆಗೆ ತರಲಾಯಿತು.

ರಾಜನು "ನಾನು ಈ ಸಿಂಹಾಸನದ ಮೇಲೆ ಕುಳಿತು ಪ್ರಜೆಗಳ ವ್ಯಾಜ್ಯಗಳನ್ನು ಕೇಳುವೆನು. ಆಗ ವಿಕ್ರಮಾದಿತ್ಯನ ಶಕ್ತಿ ನನಗೂ ಬಂದು ನಾನು ನ್ಯಾಯವಾದ ತೀರ್ಮಾನ ಹೇಳಬಹುದು" ಎಂದನು.

ರಾಜನು ಸಿಂಹಾಸನವನ್ನು ಏರಲು ಒಂದು ಶುಭ ದಿನವನ್ನು ಗೊತ್ತು ಪಡಿಸಲಾಯಿತು.





ಮಂಗಳ ವಾದ್ಯಗಳು ಮೊಳಗಿದವು. ರಾಜ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಹೋದನು. ಆಗ ಸಿಂಹಾಸನದಲ್ಲಿದ್ದ ಒಂದು ದೇವತಾ ಗೊಂಬೆ "ನಿಲ್ಲು ಮಹಾರಾಜ! ಈ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಅರ್ಹತೆ ನಿನಗಿದೆಯೇ ಎಂದು ಯೋಚಿಸು. ನೀನು ಬೇರೆ ರಾಜ್ಯಗಳನ್ನು ಆಳಬೇಕೆಂದು ಇಷ್ಟಪಟ್ಟಿರಲಿಲ್ಲವೇ?" ಎಂದು ಕೇಳಿತು.

"ಹೌದು. ಈ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಅರ್ಹತೆ ನನಗಿಲ್ಲ" ಎಂದನು ರಾಜ. "ಮೂರು ದಿನಗಳ ಕಾಲ ವ್ರತ ಮಾಡಿ, ಧ್ಯಾನ ಮಾಡಿ ಬಾ" ಎಂದು ಹೇಳಿದ ದೇವತೆ ತನ್ನ ರೆಕ್ಕೆಗಳನ್ನು ತೆರೆದು ಹಾರುತ್ತಾ ಹೋಯಿತು. ಅದು ಇದ್ದ ಜಾಗ ಖಾಲಿ ಆಯಿತು.

ರಾಜ ಮೂರು ದಿನ ವ್ರತ ಮಾಡಿ, ಧ್ಯಾನ ಮಾಡಿ, ಮತ್ತೆ ಸಿಂಹಾಸನ ಹತ್ತಲು ಹೋದನು. ಆಗ ಇನ್ನೊಂದು ದೇವತೆ "ನಿಲ್ಲು! ನೀನು ಪರರ ಆಸ್ತಿಗೆ ಆಸೆ ಪಟ್ಟವನಲ್ಲವೇ?" ಎಂದು ಕೇಳಿತು.

"ಹೌದು. ಆಸೆಪಟ್ಟಿದ್ದು ಉಂಟು" ಎಂದು ರಾಜ ಹೇಳಿದಾಗ, ಅವನಿಗೆ ಧ್ಯಾನ ಮಾಡುವಂತೆ ಹೇಳಿ ಆ ದೇವತೆಯು ಹಾರಿ ಹೋಯಿತು. ಇದೇ ರೀತಿ ನೂರು ದಿನಗಳು ಕಳೆದವು. ಕೊನೆ ದಿನ ಆ ಸಿಂಹಾಸನದಲ್ಲಿ ಒಂದೇ ಒಂದು ದೇವತೆ ಇತ್ತು. ಅದು ರಾಜನ ಬಳಿ "ಒಂದು ಮಗುವಿನ ಮನಸ್ಸಿನಂತೆ ನಿನ್ನ ಮನಸ್ಸು ಪರಿಶುಭ್ರವಾಗಿದೆಯೇ?" ಎಂದು ಕೇಳಿತು.

ರಾಜ "ಇಲ್ಲ" ಎಂದು ಹೇಳಿದನು. ಉತ್ತರ ಕೇಳಿದ ದೇವತೆ ಆ ಸಿಂಹಾಸನವನ್ನು ಎತ್ತಿಕೊಂಡು ಬಾನಿನಲ್ಲಿ ಹಾರಿ ಹೋಯಿತು. ಆನಂತರ ಯಾರು ಆ ಸಿಂಹಾಸನವನ್ನು ಎಲ್ಲಿಯು ನೋಡಿಲ್ಲ. ಒಂದು ದಿನ ರಾಜ ಏಕಾಂತವಾಗಿ ಕುಳಿತು ಯೋಚಿಸುತ್ತಿದ್ದಾಗ ಅವನಿಗೆ ಆ ಸಿಂಹಾಸನದ ರಹಸ್ಯ ಗೊತ್ತಾಯಿತು.

ಯಾರ ಬಳಿ ಮಗುವಿನಂತಹ ನಿಷ್ಕಲ್ಮಶ ಪರಿಶುದ್ಧ ಮನಸ್ಸು ಇರುವುದೋ, ಅವರು ಮಾತ್ರ ನೇರ ನಡೆ ನುಡಿಯಿಂದ ಇರಲು ಸಾಧ್ಯವಾಗುತ್ತದೆ. ಆದುದರಿಂದಲೇ ರಾಜನು ಏರಲಾರದಂತಹ ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಒಬ್ಬ ದನಕಾಯುವ ಹುಡುಗ ಕೂರಲು ಸಾಧ್ಯವಾಯಿತು. ಸರಿಯಾದ ನ್ಯಾಯ ತೀರ್ಮಾನ ಮಾಡಲು ಸಾಧ್ಯವಾಯಿತು.

ಸೋದರಿ ನಿವೇದಿತಾಳ ಮಕ್ಕಳ ಕಥೆ ಆಧಾರಿತ

ಪಿ.ಸರಸ್ವತಿ ವಿ.ವಿಜಯಕಾಂತಿ Rajalakshmi Srinivasan ಅನುವಾದ : ಸುಗಂಧಿನಿ ಪುಷ್ಪ.ಎಂ